# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಗುರುವಾರ, ೧೧, ನವೆಂಬರ್, ೨೦೨೧(ಕಾರ್ತಿಕ, ೨೦, ಶಕವರ್ಷ, ೧೯೪೩)<br>BENGALURU, THURSDAY, 11, NOVEMBER, 2021(KARTHIKA, 20, SHAKAVARSHA, 1943) | ನಂ. ೮೫೮<br>No. 858 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

## ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 42 ಕೇಶಾಪ್ರ 2021 ಬೆಂಗಳೂರು, ದಿನಾಂಕ: 11.11.2021.

ಭಾರತ ಸರ್ಕಾರದ Official Language Wing, Ministry of Law and Justice, Government of India ರವರ ಪತ್ರ ಸಂಖ್ಯೆ: F.No.(iii)(IX)/Autho./Kannada/79-OL/80, ದಿನಾಂಕ: 06.10.2021ರ ಪತ್ರದಲ್ಲಿ ಸೂಚಿಸಿದಂತೆ the Authoritative Text (Central Laws) Act, 1973 (Central Act 50 of 1973) ರ ಪ್ರಕರಣ 2(a)ರಡಿಯಲ್ಲಿ ಮಾನ್ಯ ರಾಷ್ಟ್ರಾಧ್ಯಕ್ಷರ ಅನುಮೋದನೆಗೊಂಡು ಕನ್ನಡಕ್ಕೆ ಭಾಷಾಂತರಗೊಂಡ ಈ ಕೆಳಕಂಡ ಕೇಂದ್ರ ಅಧಿನಿಯಮಗಳಾದ,-

1. ಪಾಸ್‌ಪೋರ್ಟ್ ಅಧಿನಿಯಮ, 1967 (1967ರ ಅಧಿನಿಯಮ ಸಂಖ್ಯೆ: 15)
2. ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956 (1956ರ ಅಧಿನಿಯಮ ಸಂಖ್ಯೆ; 96)
3. ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 (1990ರ ಅಧಿನಿಯಮ ಸಂಖ್ಯೆ: 25)
4. ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ: 47)
5. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಅಧಿನಿಯಮ ಸಂಖ್ಯೆ: 49)
6. ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 (1986ರ ಅಧಿನಿಯಮ ಸಂಖ್ಯೆ: 2)
7. ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ: 61)

- ಗಳನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಲು ಆದೇಶಿಸಲಾಗಿದೆ,-

**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | |
|---|---|---|
| सं 1, नई दिल्ली, गुरूवार, नवंबर 11, 2021 | कार्तिका 07, 1943 (शक) | खंड. 51 |
| No.1 New Delhi, Thursday, November 11, 2021 | Kartika 07, 1943 (Saka) | Vol. 51 |
| ಸಂ.1 ನವ ದೆಹಲಿ, ಗುರುವಾರ, ನವೆಂಬರ್ ೧೧, ೨೦೨೧ | ಕಾರ್ತಿಕ ೦೭, ೧೯೪೩ (ಶಕ) | ಸಂಪುಟ. 51 |


**Ministry of Law and Justice**
(Legislative Department)
New Delhi, 11th November, 2021

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 11ನೇ ನವೆಂಬರ್, 2021**

The Translation in Kannada of the following Act, namely:- (1) The Passports Act, 1967 (Act No. 15 of 1967) (2) The Slum Areas (Improvement and clearance) Act, 1956 (Act No. 96 of 1956) (3) The Prasar Bharati (Broadcasting Corporation of India) Act, 1990 (Act No. 25 of 1990) (4) The National Security Guard Act, 1986 (Act No. 47 of 1986) (5) The Rights of Persons with Disabilities Act, 2016 (Act No. 49 of 2016) (6) The Agricultural and Processed Food Products Export Development Authority Act, 1985 (Act No. 2 of 1986) (7) The Child And Adolescent Labour (Prohibition And Regulation) Act, 1986 (Act No. 61 Of 1986) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಪಾಸ್‍ಪೋರ್ಟ್ ಅಧಿನಿಯಮ, 1967 (1967ರ ಅಧಿನಿಯಮ ಸಂಖ್ಯೆ 15) (2) ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956 (1956ರ ಅಧಿನಿಯಮ ಸಂಖ್ಯೆ 96) (3) ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 (1990ರ ಅಧಿನಿಯಮ ಸಂಖ್ಯೆ 25) (4) ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 47) (5) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಅಧಿನಿಯಮ ಸಂಖ್ಯೆ 49) (6) ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ((1986ರ ಅಧಿನಿಯಮ ಸಂಖ್ಯೆ 2) (7) ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 61)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಪಾಸ್‍ಪೋರ್ಟ್ ಅಧಿನಿಯಮ, 1967

## (1967ರ ಅಧಿನಿಯಮ ಸಂಖ್ಯೆ 15)

**[ಜೂನ್ 24, 1967.]**

ಭಾರತದ ನಾಗರಿಕರು ಮತ್ತು ಇತರ ವ್ಯಕ್ತಿಗಳು ಭಾರತದಿಂದ ಹೊರಡುವುದನ್ನು ವಿನಿಯಮಿಸುವುದಕ್ಕೆ ಪಾಸ್‍ಪೋರ್ಟ್‍ಗಳನ್ನು ಮತ್ತು ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಮತ್ತು ಅದಕ್ಕೆ ಪ್ರಾಸಂಗಿಕವಾದ ಅಥವಾ ಸುಸಂಗತವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಹದಿನೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.**– (1) ಈ ಅಧಿನಿಯಮವನ್ನು ಪಾಸ್‍ಪೋರ್ಟ್ ಅಧಿನಿಯಮ, 1967 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಭಾರತದ ನಾಗರಿಕರಿಗೆ ಸಹ ಅನ್ವಯವಾಗುತ್ತದೆ.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ತನ್ನ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ “ಹೊರಡುವುದು” ಎಂದರೆ ಜಲಮಾರ್ಗದ, ಭೂಮಾರ್ಗದ ಅಥವಾ ವಾಯುಮಾರ್ಗದ ಮೂಲಕ ಭಾರತದಿಂದ ಹೊರಡುವುದು;

(ಬಿ) “ಪಾಸ್‍ಪೋರ್ಟ್” ಎಂದರೆ, ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆಯೆಂದು ಭಾವಿಸಲಾದ ಪಾಸ್‍ಪೋರ್ಟ್;

(ಸಿ) “ಪಾಸ್‍ಪೋರ್ಟ್ ಪ್ರಾಧಿಕಾರ” ಎಂದರೆ, ಪಾಸ್‍ಪೋರ್ಟ್‍ಗಳನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ನೀಡುವುದಕ್ಕೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿ ಅಥವಾ ಪ್ರಾಧಿಕಾರಿ ಮತ್ತು ಇದರಲ್ಲಿ ಕೇಂದ್ರ ಸರ್ಕಾರವು ಒಳಗೊಳ್ಳುತ್ತದೆ;

(ಡಿ) “ನಿಯಮಿಸಲಾದ” ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) “ಪ್ರಯಾಣದ ದಸ್ತಾವೇಜು” ಎಂದರೆ, ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆಯೆಂದು ಭಾವಿಸಲಾದ ಪ್ರಯಾಣದ ದಸ್ತಾವೇಜು;

3. **ಭಾರತದಿಂದ ಹೊರಡುವುದಕ್ಕೆ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು.–** ಯಾರೇ ವ್ಯಕ್ತಿಯು ಈ ಬಗ್ಗೆ ಸಿಂಧುವಾದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಹೊಂದಿದ್ದ ಹೊರತು ಭಾರತದಿಂದ ಹೊರಡತಕ್ಕದ್ದಲ್ಲ ಅಥವಾ ಹೊರಡುವ ಪ್ರಯತ್ನವನ್ನು ಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಪಾಸ್‌ಪೋರ್ಟ್"ನಲ್ಲಿ, ಪಾಸ್‌ಪೋರ್ಟ್ ಯಾವ ಪಾಸ್‌ಪೋರ್ಟ್‌ಗಳ ವರ್ಗಕ್ಕೆ ಸೇರಿದೆಯೋ ಆ ವರ್ಗಕ್ಕೆ ಸಂಬಂಧಿಸಿದಂತೆ, ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34)ರ ಮೇರೆಗೆ ನಿಯಮಿಸಲಾದ ಷರತ್ತುಗಳನ್ನು ಈಡೇರಿಸುವ ವಿದೇಶದ ಸರ್ಕಾರವು ಅಥವಾ ಅದರ ಅಧಿಕಾರದ ಮೇರೆಗೆ ನೀಡುವಂತಹ ಪಾಸ್‌ಪೋರ್ಟ್ ಒಳಗೊಳ್ಳುತ್ತದೆ;

(ಬಿ) "ಪ್ರಯಾಣದ ದಸ್ತಾವೇಜು" ನಿಯಮಿಸಲಾದ ಷರತ್ತುಗಳನ್ನು ಈಡೇರಿಸುವ ವಿದೇಶದ ಸರ್ಕಾರವು ಅಥವಾ ಅದರ ಅಧಿಕಾರದ ಮೇರೆಗೆ ನೀಡುವಂಥ ಪ್ರಯಾಣದ ದಸ್ತಾವೇಜನ್ನು ಒಳಗೊಳ್ಳುತ್ತದೆ.

**4. ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ವರ್ಗಗಳು.–** (1) ಈ ಅಧಿನಿಯಮದ ಮೇರೆಗೆ ಈ ಮುಂದಿನ ವರ್ಗಗಳ ಪಾಸ್‌ಪೋರ್ಟ್‌ಗಳನ್ನು ನೀಡಬಹುದು, ಎಂದರೆ:–

(ಎ) ಸಾಮಾನ್ಯ ಪಾಸ್‌ಪೋರ್ಟ್;

(ಬಿ) ಅಧಿಕೃತ ಪಾಸ್‌ಪೋರ್ಟ್;

(ಸಿ) ರಾಜತಾಂತ್ರಿಕ ಪಾಸ್‌ಪೋರ್ಟ್.

(2) ಈ ಅಧಿನಿಯಮದ ಮೇರೆಗೆ ಈ ಮುಂದಿನ ವರ್ಗಗಳ ಪ್ರಯಾಣದ ದಸ್ತಾವೇಜುಗಳನ್ನು ನೀಡಬಹುದು, ಎಂದರೆ:–

(ಎ) ಭಾರತದೊಳಗೆ ಪ್ರವೇಶಿಸಲು ವ್ಯಕ್ತಿಗೆ ಅಧಿಕಾರ ನೀಡುವ ತುರ್ತು ಪ್ರಮಾಣಪತ್ರ;

(ಬಿ) ವ್ಯಕ್ತಿಯ ಗುರುತನ್ನು ದೃಢಪಡಿಸುವ ಉದ್ದೇಶಕ್ಕಾಗಿ ನೀಡುವ ಗುರುತಿನ ಪ್ರಮಾಣಪತ್ರ;

(ಸಿ) ನಿಯಮಿಸಬಹುದಾದಂತಹ ಇತರ ಪ್ರಮಾಣಪತ್ರ ಅಥವಾ ದಸ್ತಾವೇಜು.

(3) ಕೇಂದ್ರ ಸರ್ಕಾರವು, ಈ ಬಗ್ಗೆ ತಾನು ಅನುಸರಿಸುವ ಆಚರಣೆಗೆ ಮತ್ತು ಪದ್ಧತಿಗೆ ಅನುಗುಣವಾಗಿ, ಯಾವ ವ್ಯಕ್ತಿಗಳ ವರ್ಗಕ್ಕೆ (1)ನೇ ಉಪಪ್ರಕರಣದಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ಅನುಕ್ರಮವಾಗಿ ಉಲ್ಲೇಖಿಸಿದ ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ವರ್ಗಗಳನ್ನು ಈ ಅಧಿನಿಯಮದ ಮೇರೆಗೆ ನೀಡಬಹುದೋ ಆ ವ್ಯಕ್ತಿಗಳ ವರ್ಗಗಳನ್ನು ನಿಯಮಿಸತಕ್ಕದ್ದು.

5. **ಪಾಸ್‌ಪೋರ್ಟ್‌ಗಳಿಗೆ, ಪ್ರಯಾಣದ ದಸ್ತಾವೇಜುಗಳಿಗೆ ಅರ್ಜಿಗಳು, ಇತ್ಯಾದಿ ಮತ್ತು ಅವುಗಳ ಮೇಲೆ ಆದೇಶಗಳು.–** (1) ಅರ್ಜಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿದೇಶಕ್ಕೆ ಅಥವಾ ವಿದೇಶಗಳಿಗೆ (ಹೆಸರಿಸಿದ ವಿದೇಶವಲ್ಲದ) ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟ್‌ನ್ನು ನೀಡುವುದಕ್ಕಾಗಿ ಅರ್ಜಿಯನ್ನು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು ವಿಶೇಷ ಭದ್ರತಾ ಪತ್ರ, ಮುದ್ರಣ, ಲ್ಯಾಮಿನೇಶನ್ ಮತ್ತು ಪಾಸ್‌ಪೋರ್ಟ್‌ಗಳನ್ನು ಮತ್ತು ಇತರ ಪ್ರಯಾಣದ ದಸ್ತಾವೇಜುಗಳನ್ನು ನೀಡುವುದಕ್ಕೆ ಸಂಬಂಧಿಸಿದ ಇತರ ವಿವಿಧ ಸೇವೆಗಳ ಮೇಲಿನ ವೆಚ್ಚಗಳನ್ನು ಭರಿಸುವುದಕ್ಕಾಗಿ ನಿಯಮಿಸಬಹುದಾದಂತಹ ಫೀಜು ಅರ್ಜಿಯ ಜೊತೆಗಿರತಕ್ಕದ್ದು.

**ವಿವರಣೆ:–** ಈ ಪ್ರಕರಣದಲ್ಲಿ, "ಹೆಸರಿಸಿದ ವಿದೇಶ" ಎಂದರೆ ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ವಿದೇಶ.

(1ಎ) ಅರ್ಜಿಯನ್ನು,–

(i) ಹೆಸರಿಸಿದ ವಿದೇಶಕ್ಕೆ ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟನ್ನು ನೀಡುವುದಕ್ಕಾಗಿ; ಅಥವಾ

(ii) ಅರ್ಜಿಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ವಿದೇಶಕ್ಕೆ ಅಥವಾ ವಿದೇಶಗಳಿಗೆ (ಹೆಸರಿಸಿದ ವಿದೇಶವೂ ಒಳಗೊಂಡಂತೆ) ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಅಥವಾ ಈ ಪ್ರಕರಣದಲ್ಲಿ ಉಲ್ಲೇಖಿಸಿದ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹ ಮಾಡುವುದಕ್ಕಾಗಿ ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು ನಿಯಮಿಸಬಹುದಾದಂತೆ ಐವತ್ತು ರೂಪಾಯಿಗಳನ್ನು ಮೀರದಂಥ ಫೀಜು, (ಯಾವುದಾದರೂ ಇದ್ದರೆ) ಅರ್ಜಿಯ ಜೊತೆಗಿರತಕ್ಕದ್ದು.

(1ಬಿ) ಈ ಪ್ರಕರಣದ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂತಹ ನಮೂನೆಯಲ್ಲಿರತಕ್ಕದ್ದು ಮತ್ತು ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪಾಸ್‌ಪೋರ್ಟ್ ಪ್ರಾಧಿಕಾರವು, ತಾನು ಅವಶ್ಯವೆಂದು ಪರಿಗಣಿಸಬಹುದಾದಂತಹ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ನಡೆಸಿದ ನಂತರ, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಲಿಖಿತ ಆದೇಶದ ಮೂಲಕ,–

(ಎ) ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ವಿದೇಶಕ್ಕೆ ಅಥವಾ ವಿದೇಶಗಳಿಗೆ ಸಂಬಂಧಿಸಿದಂತೆ, ಹಿಂಬರಹದೊಂದಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ನೀಡತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟ್ ಮೇಲೆ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹವನ್ನು ಮಾಡತಕ್ಕದ್ದು; ಅಥವಾ

(ಬಿ) ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ವಿದೇಶಗಳಿಗೆ ಸಂಬಂಧಿಸಿದಂತೆ, ಹಿಂಬರಹದೊಂದಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹವನ್ನು ಮಾಡತಕ್ಕದ್ದು ಮತ್ತು ಇತರ ದೇಶಕ್ಕೆ ಅಥವಾ ದೇಶಗಳಿಗೆ ಸಂಬಂಧಿಸಿದಂತೆ ಹಿಂಬರಹ ಮಾಡಲು ನಿರಾಕರಿಸತಕ್ಕದ್ದು; ಅಥವಾ

(ಸಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ನಿರಾಕರಿಸತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟ್ ಮೇಲೆ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಯಾವುದೇ ಹಿಂಬರಹವನ್ನು ಮಾಡಲು ನಿರಾಕರಿಸತಕ್ಕದ್ದು.

(3) ಯಾರೇ ವ್ಯಕ್ತಿಯ ಅರ್ಜಿಯ ಮೇಲೆ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಪಾಸ್‌ಪೋರ್ಟ್ ಪ್ರಾಧಿಕಾರವು ಆದೇಶವನ್ನು ಮಾಡಿದಲ್ಲಿ, ಅಂತಹ ಆದೇಶವನ್ನು ಮಾಡಿದ್ದಕ್ಕೆ ತನ್ನ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಯಾವುದೇ ಪ್ರಕರಣದಲ್ಲಿ, ಅದರ ಪ್ರತಿಯನ್ನು ಒದಗಿಸುವುದರಿಂದ ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ, ಭಾರತದ ಭದ್ರತೆಗೆ, ಯಾವುದೇ ವಿದೇಶದೊಂದಿಗೆ ಭಾರತದ ಸ್ನೇಹ ಸಂಬಂಧಗಳಿಗೆ ಅಥವಾ ಸಾರ್ವಜನಿಕರ ಹಿತಾಸಕ್ತಿಗಳಿಗೆ ಬಾಧಕವುಂಟಾಗುವುದೆಂದು ಪಾಸ್‌ಪೋರ್ಟ್ ಪ್ರಾಧಿಕಾರವು ಅಭಿಪ್ರಾಯಪಟ್ಟ ಹೊರತು, ಆ ಆದೇಶದ ಪ್ರತಿಯನ್ನು ಆ ವ್ಯಕ್ತಿಯು ಕೇಳಿದಾಗ ಆತನಿಗೆ ಒದಗಿಸತಕ್ಕದ್ದು.

**6. ಪಾಸ್‌ಪೋರ್ಟ್‌ಗಳನ್ನು, ಪ್ರಯಾಣದ ದಸ್ತಾವೇಜುಗಳನ್ನು ನೀಡಲು ನಿರಾಕರಿಸುವುದು, ಇತ್ಯಾದಿ.–** (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಪಾಸ್‌ಪೋರ್ಟ್ ಪ್ರಾಧಿಕಾರವು, 5ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಯಾವುದೇ ವಿದೇಶಕ್ಕೆ ಭೇಟಿ ನೀಡಲು ಹಿಂಬರಹವನ್ನು ಮಾಡುವುದಕ್ಕೆ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ, ಎಂದರೆ:–

(ಎ) ಅರ್ಜಿದಾರನು, ಅಂತಹ ದೇಶದಲ್ಲಿ, ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ ಪ್ರತಿಕೂಲಕರವಾದ ಚಟುವಟಿಕೆಗಳಲ್ಲಿ ನಿರತನಾಗಬಹುದು ಅಥವಾ ನಿರತನಾಗುವ ಸಂಭವ ಇದೆ ಎಂಬ;

(ಬಿ) ಅಂತಹ ದೇಶದಲ್ಲಿ ಅರ್ಜಿದಾರನಿರುವುದು ಭಾರತದ ಭದ್ರತೆಗೆ ಬಾಧಕವಾಗಬಹುದು ಅಥವಾ ಬಾಧಕವಾಗುವ ಸಂಭವ ಇದೆ ಎಂಬ;

(ಸಿ) ಅಂತಹ ದೇಶದಲ್ಲಿ ಅರ್ಜಿದಾರನಿರುವುದು, ಆ ದೇಶದೊಂದಿಗಿನ ಅಥವಾ ಯಾವುದೇ ಇತರ ದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡಬಹುದು ಅಥವಾ ಉಂಟು ಮಾಡುವ ಸಂಭವ ಇದೆ ಎಂಬ;

(ಡಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅರ್ಜಿದಾರನು ಅಂತಹ ದೇಶದಲ್ಲಿ ಇರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ ಎಂಬ

– ಕಾರಣದ ಅಥವಾ ಕಾರಣಗಳ ಮೇಲೆ ನಿರಾಕರಿಸತಕ್ಕದ್ದೇ ಹೊರತು, ಯಾವುದೇ ಇತರ ಕಾರಣಗಳ ಮೇಲೆ ಅಲ್ಲ.

(2) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಪಾಸ್‌ಪೋರ್ಟ್ ಪ್ರಾಧಿಕಾರವು, 5ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಯಾವುದೇ ವಿದೇಶಕ್ಕೆ ಭೇಟಿ ನೀಡಲು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ, ಎಂದರೆ:–

(ಎ) ಅರ್ಜಿದಾರನು ಭಾರತದ ನಾಗರಿಕನಲ್ಲ ಎಂಬ;

(ಬಿ) ಅರ್ಜಿದಾರನು ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ ಪ್ರತಿಕೂಲಕರವಾದ ಚಟುವಟಿಕೆಗಳಲ್ಲಿ ಭಾರತದ ಹೊರಗೆ ನಿರತನಾಗಬಹುದು ಅಥವಾ ನಿರತನಾಗುವ ಸಂಭವ ಇದೆ ಎಂಬ;

(ಸಿ) ಅರ್ಜಿದಾರನು ಭಾರತದಿಂದ ಹೊರಡುವುದು ಭಾರತದ ಭದ್ರತೆಗೆ ಬಾಧಕವಾಗಬಹುದು ಅಥವಾ ಬಾಧಕವಾಗುವ ಸಂಭವ ಇದೆ ಎಂಬ;

(ಡಿ) ಅರ್ಜಿದಾರನು ಭಾರತದ ಹೊರಗೆ ಇರುವುದು ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡಬಹುದು ಅಥವಾ ಉಂಟುಮಾಡುವ ಸಂಭವ ಇದೆ ಎಂಬ;

(ಇ) ಅರ್ಜಿದಾರನು, ತನ್ನ ಅರ್ಜಿಯ ದಿನಾಂಕದ ನಿಕಟಪೂರ್ವದ ಐದು ವರ್ಷಗಳ ಅವಧಿಯ ಯಾವುದೇ ಸಮಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕೆ ಭಾರತದ ಒಂದು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದನೆಂಬ ಮತ್ತು ಅದರ ಸಂಬಂಧದಲ್ಲಿ ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಕಾರಾವಾಸದ ಶಿಕ್ಷೆಗೆ ಒಳಗಾಗಿದ್ದನೆಂಬ;

(ಎಫ್) ಅರ್ಜಿದಾರನು ಮಾಡಿರುವನೆಂದು ಆಪಾದಿಸಲಾದ ಅಪರಾಧಕ್ಕೆ ಸಂಬಂಧಿಸಿದ ವ್ಯವಹರಣೆಗಳು ಭಾರತದಲ್ಲಿನ ಒಂದು ಕ್ರಿಮಿನಲ್ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿ ಇದೆ ಎಂಬ;

(ಜಿ) ಅರ್ಜಿದಾರನ ಹಾಜರಾತಿಗೆ ವಾರಂಟನ್ನು ಅಥವಾ ಸಮನುಗಳನ್ನು ಅಥವಾ ಬಂಧನಕ್ಕೆ ವಾರಂಟನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಲಯವು ಹೊರಡಿಸಿದೆ ಎಂಬ ಅಥವಾ ಅರ್ಜಿದಾರನು ಭಾರತದಿಂದ ಹೊರಡುವುದನ್ನು ನಿಷೇಧಿಸುವ ಆದೇಶವನ್ನು ಯಾವುದೇ ಅಂತಹ ನ್ಯಾಯಾಲಯವು ಮಾಡಿದೆ ಎಂಬ;

(ಹೆಚ್) ಅರ್ಜಿದಾರನನ್ನು ಮರಳಿ ಕಳುಹಿಸಲಾಗಿದೆ ಎಂಬ ಮತ್ತು ಹಾಗೆ ಮರಳಿ ಕಳುಹಿಸಿರುವುದಕ್ಕೆ ಸಂಬಂಧಿಸಿದಂತೆ ವಹಿಸಿದ ವೆಚ್ಚವನ್ನು ತುಂಬಿಕೊಟ್ಟಿಲ್ಲ ಎಂಬ;

(ಐ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅರ್ಜಿದಾರನಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ ಎಂಬ

– ಕಾರಣ ಅಥವಾ ಕಾರಣಗಳ ಮೇಲೆ ನಿರಾಕರಿಸತಕ್ಕದ್ದೇ ಹೊರತು, ಯಾವುದೇ ಇತರ ಕಾರಣಗಳ ಮೇಲೆ ಅಲ್ಲ.

7. **ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಅವಧಿ.–** ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು ಮೊದಲೇ ರದ್ದುಗೊಂಡಿದ್ದ ಹೊರತು, ನಿಯಮಿಸಬಹುದಾದಂತಹ ಅವಧಿಯವರೆಗೂ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ವರ್ಗಗಳಿಗೆ ಅಥವಾ ಅಂತಹ ಪ್ರತಿಯೊಂದು ವರ್ಗದಲ್ಲಿನ ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ಪ್ರವರ್ಗಗಳಿಗೆ ಬೇರೆಬೇರೆ ಅವಧಿಗಳನ್ನು ನಿಯಮಿಸಬಹುದು:

ಪರಂತು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು,–

(ಎ) ಯಾವ ವ್ಯಕ್ತಿಗೆ ಅದು ಅವಶ್ಯಕವಾಗಿದೆಯೋ ಆ ವ್ಯಕ್ತಿಯು ಕಡಿಮೆ ಅವಧಿಗೆ ನೀಡಬೇಕೆಂದು ಅಪೇಕ್ಷಿಪಟ್ಟರೆ; ಅಥವಾ

(ಬಿ) ಪಾಸ್‌ಪೋರ್ಟ್ ಪ್ರಾಧಿಕಾರವು ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸಬೇಕಾದ ಕಾರಣಗಳಿಗಾಗಿ, ಯಾವುದೇ ಪ್ರಕರಣದಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಕಡಿಮೆ ಅವಧಿಗೆ ನೀಡತಕ್ಕದ್ದೆಂದು ಪರಿಗಣಿಸಿದರೆ

– ನಿಯಮಿಸಿದ ಅವಧಿಗಿಂತ ಕಡಿಮೆ ಅವಧಿಗೆ ನೀಡಬಹುದು.

8. **ಪಾಸ್‌ಪೋರ್ಟ್ ಅವಧಿಯ ವಿಸ್ತರಣೆ.–** 7ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಅವಧಿಗಿಂತ ಕಡಿಮೆ ಅವಧಿಗೆ ಪಾಸ್‌ಪೋರ್ಟನ್ನು ನೀಡಿರುವಲ್ಲಿ, ಅಂತಹ ಕಡಿಮೆ ಅವಧಿಯನ್ನು ಪಾಸ್‌ಪೋರ್ಟ್ ಪ್ರಾಧಿಕಾರವು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅನ್ಯಥಾ ನಿರ್ಧರಿಸಿದ ಹೊರತು, ಮತ್ತಷ್ಟು ಅವಧಿಗೆ ವಿಸ್ತರಿಸತಕ್ಕದ್ದು (ಇದು ಕಡಿಮೆ ಅವಧಿಯೂ ಸೇರಿದಂತೆ ನಿಯಮಿಸಿದ ಅವಧಿಯನ್ನು ಮೀರತಕ್ಕದ್ದಲ್ಲ) ಮತ್ತು ಈ ಅಧಿನಿಯಮದ ಉಪಬಂಧಗಳು ಪಾಸ್‌ಪೋರ್ಟ್‌ನ ನೀಡಿಕೆಗೆ ಅವು ಅನ್ವಯವಾಗುವಂತೆಯೇ ಅಂತಹ ವಿಸ್ತರಣೆಗೂ ಅನ್ವಯವಾಗತಕ್ಕದ್ದು.

9. **ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಷರತ್ತುಗಳು ಮತ್ತು ನಮೂನೆಗಳು.–** ಯಾವ ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ನಮೂನೆಯಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡತಕ್ಕದ್ದೋ ಅಥವಾ ನವೀಕರಿಸತಕ್ಕದ್ದೋ ಆ ಷರತ್ತುಗಳು ಮತ್ತು ನಮೂನೆಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ವರ್ಗಗಳಿಗೆ ಅಥವಾ ಅಂತಹ ಪ್ರತಿಯೊಂದು ವರ್ಗದಲ್ಲಿನ ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ಪ್ರವರ್ಗಗಳಿಗೆ ಬೇರೆಬೇರೆ ಷರತ್ತುಗಳನ್ನು ಮತ್ತು ಬೇರೆಬೇರೆ ನಮೂನೆಗಳನ್ನು ನಿಯಮಿಸಬಹುದು:

ಮತ್ತೂ ಪರಂತು, ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು, ನಿಯಮಿಸಲಾದ ಷರತ್ತುಗಳ ಜೊತೆಗೆ, ಪಾಸ್‌ಪೊರ್ಟ್ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ವಿಧಿಸಬಹುದಾದಂತಹ ಇತರ ಷರತ್ತುಗಳನ್ನು ಒಳಗೊಂಡಿರತಕ್ಕದ್ದು.

10. **ಪಾಸ್‌ಪೋರ್ಟ್‌ಗಳನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ವ್ಯತ್ಯಸ್ಥಗೊಳಿಸುವುದು, ವಶಪಡಿಸಿಕೊಳ್ಳುವುದು ಮತ್ತು ರದ್ದುಪಡಿಸುವುದು.–** (1) ಪಾಸ್‌ಪೋರ್ಟ್ ಪ್ರಾಧಿಕಾರವು, 6ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಅಥವಾ 19ನೇ ಪ್ರಕರಣದ ಮೇರಗಿನ ಯಾವುದೇ ಅಧಿಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲಿನ ಹಿಂಬರಹಗಳನ್ನು ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಪಡಿಸಬಹುದು ಅಥವಾ ಯಾವ ಷರತ್ತುಗಳಿಗೊಳಪಟ್ಟು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡಲಾಗಿದೆಯೋ ಆ ಷರತ್ತುಗಳನ್ನು (ನಿಯಮಿಸಲಾದ ಷರತ್ತುಗಳನ್ನು ಹೊರತುಪಡಿಸಿ) ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಪಡಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಲಿಖಿತ ನೋಟೀಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಸಮಯದೊಳಗೆ ತನಗೆ ಪಾಸ್‌ಪೋರ್ಟನ್ನು

ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸುವಂತೆ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನನ್ನು ಅಗತ್ಯಪಡಿಸಬಹುದು ಮತ್ತು ಧಾರಕನು ಅಂತಹ ನೋಟೀಸನ್ನು ಪಾಲಿಸತಕ್ಕದ್ದು.

(2) ಪಾಸ್‌ಪೋರ್ಟ್ ಪ್ರಾಧಿಕಾರವು, ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳನ್ನು (ನಿಯಮಿಸಿದ ಷರತ್ತುಗಳನ್ನು ಹೊರತುಪಡಿಸಿ) ಸಹ ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

(3) ಪಾಸ್‌ಪೋರ್ಟ್ ಪ್ರಾಧಿಕಾರವು,–

(ಎ) ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಅದನ್ನು ಅಕ್ರಮವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಮನವರಿಕೆಯಾದರೆ;

(ಬಿ) ಮುಖ್ಯ ಮಾಹಿತಿಯನ್ನು ಮರೆಮಾಚಿ ಅಥವಾ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಅಥವಾ ಅವನ ಪರವಾಗಿ ಯಾರೇ ಇತರ ವ್ಯಕ್ತಿಯು ಒದಗಿಸಿದ ತಪ್ಪು ಮಾಹಿತಿಯ ಆಧಾರದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಪಡೆದುಕೊಂಡಿದ್ದರೆ:

ಪರಂತು, ಅಂತಹ ಪಾಸ್‌ಪೋರ್ಟ್ ಧಾರಕನು ಮತ್ತೊಂದು ಪಾಸ್‌ಪೋರ್ಟನ್ನು ಪಡೆದಿದ್ದರೆ, ಪಾಸ್‌ಪೋರ್ಟ್ ಪ್ರಾಧಿಕಾರವು, ಅಂತಹ ಇತರ ಪಾಸ್‌ಪೋರ್ಟನ್ನು ಸಹ ವಶಪಡಿಸಿಕೊಳ್ಳತಕ್ಕದ್ದು ಅಥವಾ ವಶಪಡಿಸಿಕೊಳ್ಳುವಂತೆ ಮಾಡತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು;

(ಸಿ) ಪಾಸ್‌ಪೋರ್ಟ್ ಪ್ರಾಧಿಕಾರವು ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ, ಭಾರತದ ಭದ್ರತೆಯ, ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಭಾವಿಸಿದರೆ;

(ಡಿ) ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡಿದ ನಂತರ ಯಾವುದೇ ಕಾಲದಲ್ಲಿ ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕಾಗಿ ಭಾರತದ ಒಂದು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಅದರ ಸಂಬಂಧದಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ;

(ಇ) ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಮಾಡಿರುವನೆಂದು ಆಪಾದಿಸಲಾದ ಅಪರಾಧಕ್ಕೆ ಸಂಬಂಧಿಸಿದ ವ್ಯವಹರಣೆಗಳು ಭಾರತದಲ್ಲಿನ ಒಂದು ಕ್ರಿಮಿನಲ್ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದ್ದರೆ;

(ಎಫ್) ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದರೆ;

(ಜಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸುವಂತೆ ಅಗತ್ಯಪಡಿಸುವ, (1)ನೇ ಉಪಪ್ರಕರಣದ ಮೇರೆಗಿನ ನೋಟೀಸನ್ನು ಪಾಲಿಸಲು ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ವಿಫಲನಾದರೆ;

(ಹೆಚ್) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನ ಹಾಜರಾತಿಗೆ ವಾರಂಟನ್ನು ಅಥವಾ ಸಮನುಗಳನ್ನು ಅಥವಾ ಬಂಧನಕ್ಕೆ ವಾರಂಟನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಲಯವು ಹೊರಡಿಸಿರುವುದನ್ನು ಪಾಸ್‌ಪೋರ್ಟ್ ಪ್ರಾಧಿಕಾರದ ಗಮನಕ್ಕೆ ತಂದಿದ್ದರೆ ಅಥವಾ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಭಾರತದಿಂದ ಹೊರಡುವುದನ್ನು ನಿಷೇಧಿಸುವ ಆದೇಶವನ್ನು, ಯಾವುದೇ ಅಂತಹ ನ್ಯಾಯಾಲಯವು ಮಾಡಿದ್ದರೆ ಮತ್ತು ವಾರಂಟನ್ನು ಅಥವಾ ಸಮನುಗಳನ್ನು

ಹಾಗೆ ಹೊರಡಿಸಲಾಗಿದೆ ಅಥವಾ ಆದೇಶವನ್ನು ಹಾಗೆ ಮಾಡಲಾಗಿದೆ ಎಂದು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಮನವರಿಕೆಯಾದರೆ

– ಅಂತಹ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು ಅಥವಾ ವಶಪಡಿಸಿಕೊಳ್ಳುವಂತೆ ಮಾಡಬಹುದು ಅಥವಾ ರದ್ದುಪಡಿಸಬಹುದು.

(4) ಪಾಸ್‌ಪೋರ್ಟ್ ಪ್ರಾಧಿಕಾರವು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು, ಅದರ ಧಾರಕನು ಸಲ್ಲಿಸಿದ ಅರ್ಜಿಯ ಮೇಲೆ ಸಹ ರದ್ದುಪಡಿಸಬಹುದು.

(5) ಪಾಸ್‌ಪೋರ್ಟ್ ಪ್ರಾಧಿಕಾರವು, (1)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲಿನ ಹಿಂಬರಹಗಳನ್ನು ವ್ಯತ್ಯಸ್ಥಗೊಳಿಸುವ ಅಥವಾ ರದ್ದುಪಡಿಸುವ ಅಥವಾ ಪಾಸ್‌ಪೋರ್ಟನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳನ್ನು ವ್ಯತ್ಯಸ್ಥಗೊಳಿಸುವ ಆದೇಶವನ್ನು ಅಥವಾ (3)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವ ಅಥವಾ ರದ್ದುಪಡಿಸುವ ಆದೇಶವನ್ನು ಮಾಡಿದಲ್ಲಿ, ಅದು, ಅಂತಹ ಆದೇಶವನ್ನು ಮಾಡಿದ್ದಕ್ಕೆ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಯಾವುದೇ ಪ್ರಕರಣದಲ್ಲಿ ಅದರ ಪ್ರತಿಯನ್ನು ಒದಗಿಸುವುದರಿಂದ ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ, ಭಾರತದ ಭದ್ರತೆಗೆ, ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗಳಿಗೆ ಬಾಧಕವುಂಟಾಗುವುದೆಂದು ಪಾಸ್‌ಪೋರ್ಟ್ ಪ್ರಾಧಿಕಾರವು ಅಭಿಪ್ರಾಯಪಟ್ಟ ಹೊರತು, ಆ ಆದೇಶದ ಪ್ರತಿಯನ್ನು ಪಾಸ್‌ಪೋರ್ಟನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಕೇಳಿದಾಗ ಅವನಿಗೆ ಒದಗಿಸತಕ್ಕದ್ದು.

(6) ಪಾಸ್‌ಪೋರ್ಟ್ ಪ್ರಾಧಿಕಾರವು ಯಾವ ಪ್ರಾಧಿಕಾರಕ್ಕೆ ಅಧೀನವಾಗಿದೆಯೋ ಆ ಪ್ರಾಧಿಕಾರವು, ಲಿಖಿತ ಆದೇಶದ ಮೂಲಕ, ಪಾಸ್‌ಪೋರ್ಟ್ ಪ್ರಾಧಿಕಾರವು ಯಾವ ಕಾರಣದ ಮೇಲೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದೋ ಅಥವಾ ರದ್ದುಪಡಿಸಬಹುದೋ ಆ ಯಾವುದೇ ಕಾರಣದ ಮೇಲೆ ಅದನ್ನು ವಶಪಡಿಸಿಕೊಳ್ಳಬಹುದು ಅಥವಾ ವಶಪಡಿಸಿಕೊಳ್ಳುವಂತೆ ಮಾಡಬಹುದು ಅಥವಾ ರದ್ದುಪಡಿಸಬಹುದು ಮತ್ತು ಈ ಪ್ರಕರಣದ ಮೇಲೆ ಹೇಳಿದ ಉಪಬಂಧಗಳು, ಅಂತಹ ಪ್ರಾಧಿಕಾರವು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವುದಕ್ಕೆ ಅಥವಾ ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

(7) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನ್ಯಾಯಾಲಯವು, ಪಾಸ್‌ಪೋರ್ಟನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನನ್ನು ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣಯಿಸಿದಾಗಲೂ ಸಹ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ರದ್ದುಪಡಿಸಬಹುದು:

ಪರಂತು, ಅಪರಾಧ ನಿರ್ಣಯವನ್ನು ಅಪೀಲಿನ ಮೇಲೆ ಅಥವಾ ಅನ್ಯಥಾ ತಳ್ಳಿಹಾಕಿದರೆ ರದ್ದಿಯಾತಿಯು ಅನೂರ್ಜಿತವಾಗತಕ್ಕದ್ದು.

(8) 7ನೇ ಉಪಪ್ರಕರಣದ ಮೇರೆಗಿನ ರದ್ದಿಯಾತಿಯ ಆದೇಶವನ್ನು, ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ತನ್ನ ಪುನರೀಕ್ಷಣಾ ಅಧಿಕಾರಗಳನ್ನು ಚಲಾಯಿಸುವಾಗಲೂ ಸಹ ಮಾಡಬಹುದು.

(9) ಈ ಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ರದ್ದುಪಡಿಸಿದ ಮೇಲೆ, ಅದರ ಧಾರಕನು, ಅದನ್ನು ಈಗಾಗಲೇ ವಶಪಡಿಸಿಕೊಂಡಿರದಿದ್ದರೆ, ಯಾವ ಪ್ರಾಧಿಕಾರಿಯು ಅದನ್ನು ರದ್ದುಪಡಿಸಿರುವನೋ ಆ ಪ್ರಾಧಿಕಾರಿಗೆ ಅಥವಾ ರದ್ದಿಯಾತಿಯ ಆದೇಶದಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ಇತರ ಪ್ರಾಧಿಕಾರಿಗೆ ವಿಳಂಬ ಮಾಡದೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸತಕ್ಕದ್ದು.

**10ಎ. ಕೆಲವು ಸಂದರ್ಭಗಳಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ಅಮಾನತುಗೊಳಿಸುವುದು:–** (1) 10ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, 10ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವ ಅಥವಾ ವಶಪಡಿಸಿಕೊಳ್ಳುವಂತೆ ಮಾಡುವ ಅಥವಾ ರದ್ದುಪಡಿಸುವ

ಸಂಭವವಿದೆಯೆಂದು ಮತ್ತು ಹಾಗೇ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಅಥವಾ ಯಾರೇ ಹೆಸರಿಸಿದ ಅಧಿಕಾರಿಗೆ ಮನದಟ್ಟಾದರೆ, ಅದು ಅಥವಾ ಅವನು ನಾಲ್ಕು ವಾರಗಳನ್ನು ಮೀರದಂತಹ ಅವಧಿಗೆ,–

(ಎ) ಆದೇಶದ ಮೂಲಕ, ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಕೂಡಲೇ ಜಾರಿಗೆ ಬರುವಂತೆ ಅಮಾನತುಗೊಳಿಸಬಹುದು;

(ಬಿ) ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಅಸಿಂಧುಗೊಳಿಸುವ ಪರಿಣಾಮವುಳ್ಳ ಇತರ ಸಮುಚಿತ ಆದೇಶವನ್ನು ಹೊರಡಿಸಬಹುದು:

ಪರಂತು, ಕೇಂದ್ರ ಸರ್ಕಾರವು ಅಥವಾ ಹೆಸರಿಸಿದ ಅಧಿಕಾರಿಯು, ತಾನು ಸೂಕ್ತವೆಂದು ಪರಿಗಣಿಸಿದರೆ, 10ನೇ ಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವ್ಯತ್ಯಸ್ಥಗೊಳಿಸುವುದಕ್ಕೆ, ವಶಪಡಿಸಿಕೊಳ್ಳುವುದಕ್ಕೆ ಅಥವಾ ರದ್ದುಪಡಿಸುವುದಕ್ಕೆ ಸಂಬಂಧಿಸಿದ ವ್ಯವಹರಣೆಗಳು ಮುಕ್ತಾಯಗೊಳ್ಳುವವರೆಗೆ ಸದರಿ ನಾಲ್ಕು ವಾರಗಳ ಅವಧಿಯನ್ನು, ಆದೇಶದ ಮೂಲಕ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ವಿಸ್ತರಿಸಬಹುದು:

ಮತ್ತೂ ಪರಂತು, ಯಾವ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನಿಗೆ ಸಂಬಂಧಿಸಿದಂತೆ ಈ ಉಪಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆಯೋ ಆ ಪ್ರತಿಯೊಬ್ಬ ಧಾರಕನಿಗೆ, ಅಂತಹ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಲೆಕ್ಕ ಹಾಕಿದ ಎಂಟು ವಾರಗಳಿಗೆ ಮೀರದಂತಹ ಅವಧಿಯೊಳಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು ಮತ್ತು ಆ ತರುವಾಯ ಕೇಂದ್ರ ಸರ್ಕಾರವು, ಅವಶ್ಯವಿದ್ದರೆ, ಲಿಖಿತ ಆದೇಶದ ಮೂಲಕ, ಈ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಮಾರ್ಪಾಟುಮಾಡಬಹುದು ಅಥವಾ ರದ್ದುಪಡಿಸಬಹುದು.

(2) ಹೆಸರಿಸಿದ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಜಾರಿಗೊಳಿಸಿದ ಆದೇಶಗಳನ್ನು ವಿಮಾನ ನಿಲ್ದಾಣದಲ್ಲಿರುವ ಅಥವಾ ನೌಕಾರೋಹಣದ ಅಥವಾ ವಲಸೆಯ ಯಾವುದೇ ಇತರ ಸ್ಥಳದಲ್ಲಿರುವ ಸಂಬಂಧಪಟ್ಟ ಪ್ರಾಧಿಕಾರಿಗೆ, ಮತ್ತು ಪಾಸ್‌ಪೋರ್ಟ್ ಪ್ರಾಧಿಕಾರಿಗೆ, ಕೂಡಲೇ ಕಳುಹಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಪ್ರಾಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಜಾರಿಗೊಳಿಸಿದ ಆದೇಶವನ್ನು ಸ್ವೀಕರಿಸಿದ ಕೂಡಲೇ ಅಂತಹ ಆದೇಶವನ್ನು ಜಾರಿಗೆ ತರತಕ್ಕದ್ದು.

**10ಬಿ. ಸೂಚನೆಗಳ ಮಾನ್ಯೀಕರಣ.–** 10ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾರೇ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಭಾರತದಿಂದ ಹೊರಡುವುದನ್ನು ನಿರ್ಬಂಧಿಸಿ ಅಥವಾ ಯಾವುದೇ ರೀತಿಯಲ್ಲಿ ಪ್ರತಿಬಂಧಿಸಿ, ಕೇಂದ್ರ ಸರ್ಕಾರವು ಅಥವಾ ಹೆಸರಿಸಿದ ಅಧಿಕಾರಿಯು ಪಾಸ್‌ಪೋರ್ಟ್‌ಗಳ (ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭಕ್ಕೆ ಮುಂಚೆ, ವಿಮಾನ ನಿಲ್ದಾಣದಲ್ಲಿರುವ ಅಥವಾ ನೌಕಾರೋಹಣದ ಅಥವಾ ವಲಸೆಯ ಯಾವುದೇ ಇತರ ಸ್ಥಳದಲ್ಲಿರುವ ಯಾರೇ ವಲಸೆ ಪ್ರಾಧಿಕಾರಿಗೆ ನೀಡಿದ ಪ್ರತಿಯೊಂದು ಸೂಚನೆಯನ್ನು 10ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂತಹ ಆದೇಶವು ಪಾಸ್‌ಪೋರ್ಟ್ (ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳುಗಳ ಅವಧಿ ಅಥವಾ ಅಂತಹ ಸೂಚನೆಯನ್ನು ನೀಡಿದ ದಿನಾಂಕ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ವಿವರಣೆ:–** 10ಎ ಮತ್ತು 10ಬಿ ಪ್ರಕರಣಗಳ ಉದ್ದೇಶಗಳಿಗಾಗಿ, "ಹೆಸರಿಸಿದ ಅಧಿಕಾರಿ" ಎಂದರೆ, ಲಿಖಿತ ಆದೇಶದ ಮೂಲಕ, ಕೇಂದ್ರ ಸರ್ಕಾರವು ಹಾಗೆಂದು ಹೆಸರಿಸಿದಂತಹ ಅಧಿಕಾರಿ ಅಥವಾ ಪ್ರಾಧಿಕಾರಿ.

**11. ಅಪೀಲುಗಳು:–** (1) 5ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಅಥವಾ 7ನೇ ಪ್ರಕರಣದ ಪರಂತುಕದ (ಬಿ) ಖಂಡದ ಅಥವಾ 10ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (3)ನೇ

ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟ್ ಪ್ರಾಧಿಕಾರವು ಹೊರಡಿಸಿದ ಆದೇಶದಿಂದ ಅಥವಾ ಪಾಸ್‌ಪೋರ್ಟ್ ಪ್ರಾಧಿಕಾರಿಯು ಯಾವ ಪ್ರಾಧಿಕಾರಿಗೆ ಅಧೀನನಾಗಿರುವನೋ ಆ ಪ್ರಾಧಿಕಾರಿಯು 10ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶದ ವಿರುದ್ಧ ಅಂತಹ ಪ್ರಾಧಿಕಾರಿಗೆ (ಇದರಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಮತ್ತು ನಿಯಮಿಸಬಹುದಾದಂತಹ ಅವಧಿಯೊಳಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಕೇಂದ್ರ ಸರ್ಕಾರವು ಮಾಡಿದ ಯಾವುದೇ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

(2) ಅಪೀಲನ್ನು, ಹೂಡಲು ನಿಯಮಿಸಲಾದ ಅವಧಿಯು ಮುಕ್ತಾಯದ ನಂತರ ಅಪೀಲನ್ನು ಹೂಡಲಾಗಿದ್ದರೆ ಅದನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಅಪೀಲನ್ನು ಆ ಅವಧಿಯೊಳಗೆ ಹೂಡದಿರಲು ತನಗೆ ಸಾಕಷ್ಟು ಕಾರಣ ಇತ್ತೆಂದು ಅಪೀಲುದಾರನು ಅಪೀಲು ಪ್ರಾಧಿಕಾರಿಗೆ ಮನವರಿಕೆ ಮಾಡಿಕೊಟ್ಟರೆ, ಅಪೀಲನ್ನು ಹೂಡಲು ನಿಯಮಿಸಲಾದ ಅಂಥ ಅವಧಿಯು ಮುಕ್ತಾಯದ ನಂತರವೂ ಅಪೀಲನ್ನು ಅಂಗೀಕರಿಸಬಹುದು.

(3) ಕಾಲಪರಿಮಿತಿ ಅಧಿನಿಯಮ, 1963 (1963ರ 36)ರ ಮೇರೆಗೆ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕಹಾಕುವುದಕ್ಕೆ ಸಂಬಂಧಿಸಿದಂತೆಯೇ ಅಪೀಲಿಗಾಗಿ ನಿಯಮಿಸಲಾದ ಅವಧಿಯನ್ನು ಆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಲೆಕ್ಕಹಾಕತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು ಲಿಖಿತ ಅರ್ಜಿಯ ಮೂಲಕ ಸಲ್ಲಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶದ ಕಾರಣಗಳ ವಿವರಣೆಯ ಪ್ರತಿಯನ್ನು ಅಪೀಲುದಾರನಿಗೆ ಒದಗಿಸಿರುವಲ್ಲಿ ಆ ಪ್ರತಿಯು ಹಾಗೂ ಸುಸಂಬದ್ಧ ದಾಖಲೆಗಳನ್ನು ತರಿಸಿಕೊಳ್ಳುವುದಕ್ಕಾಗಿ ಮತ್ತು ಸಂಬಂಧಿಸಿದ ಸೇವೆಗಳಿಗಾಗಿ ತಗಲಬಹುದಾದ ವೆಚ್ಚಗಳನ್ನು ಭರಿಸುವುದಕ್ಕಾಗಿ ನಿಯಮಿಸಬಹುದಾದಂತಹ ಫೀಜು ಅದರ ಜೊತೆಗೆ ಇರತಕ್ಕದ್ದು.

(5) ಅಪೀಲನ್ನು ವಿಲೆ ಮಾಡುವಾಗ, ಅಪೀಲು ಪ್ರಾಧಿಕಾರಿಯು ನಿಯಮಿಸಬಹುದಾದಂತಹ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

ಪರಂತು, ಅಪೀಲುದಾರನಿಗೆ ತನ್ನ ವಾದವನ್ನು ಮಂಡಿಸಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಪೀಲನ್ನು ವಿಲೆ ಮಾಡತಕ್ಕದ್ದಲ್ಲ.

(6) ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಾಟುಗೊಳಿಸಿ ಅಥವಾ ವಿಪರ್ಯಯಗೊಳಿಸಿ, ಅಪೀಲು ಪ್ರಾಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾದುದಾಗಿರತಕ್ಕದ್ದು.

**12. ಅಪರಾಧಗಳು ಮತ್ತು ದಂಡನೆಗಳು.**– (1) ಯಾರೇ ವ್ಯಕ್ತಿಯು,–

(ಎ) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಪಡೆಯುವ ದೃಷ್ಟಿಯಿಂದ ಗೊತ್ತಿದ್ದೂ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿದರೆ ಅಥವಾ ಯಾವುದೇ ಮುಖ್ಯ ಮಾಹಿತಿಯನ್ನು ಮರೆಮಾಚಿದ್ದರೆ ಅಥವಾ ಪಾಸ್‌ಪೋರ್ಟ್‌ನಲ್ಲಿ ಅಥವಾ ಪ್ರಯಾಣದ ದಸ್ತಾವೇಜಿನಲ್ಲಿ ಮಾಡಿದ ನಮೂದನೆಗಳನ್ನು ಕಾನೂನುಸಮ್ಮತ ಅಧಿಕಾರವಿಲ್ಲದೆ ವ್ಯತ್ಯಾಸಗೊಳಿಸಿದರೆ ಅಥವಾ ವ್ಯತ್ಯಾಸಗೊಳಿಸಲು ಪ್ರಯತ್ನಿದರೆ ಅಥವಾ ವ್ಯತ್ಯಾಸಗೊಳಿಸುವಂತೆ ಮಾಡಿದರೆ; ಅಥವಾ

(ಸಿ) ಅವನ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು (ಈ ಅಧಿನಿಯಮದ ಮೇರೆಗೆ ನೀಡಿರಲಿ ಅಥವಾ ನೀಡಿಲ್ಲದಿರಲಿ) ಪರಿಶೀಲನೆಗಾಗಿ ಹಾಜರುಪಡಿಸುವಂತೆ ನಿಯಮಿಸಿದ ಪ್ರಾಧಿಕಾರಿಯು ಕೇಳಿದಾಗ ಅದನ್ನು ಹಾಜರುಪಡಿಸಲು ವಿಫಲನಾದರೆ; ಅಥವಾ

(ಡಿ) ಮತ್ತೊಬ್ಬ ವ್ಯಕ್ತಿಗೆ ನೀಡಿದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಗೊತ್ತಿದ್ದೂ ಬಳಸಿದರೆ; ಅಥವಾ

(ಇ) ತನಗೆ ನೀಡಿದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಬಳಸಲು ಗೊತ್ತಿದ್ದು ಮತ್ತೊಬ್ಬ ವ್ಯಕ್ತಿಗೆ ಅನುಮತಿಸಿದರೆ

– ಅವನು ಎರಡು ವರ್ಷಗಳವರಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(1ಎ) ಭಾರತದ ನಾಗರಿಕನಲ್ಲದ ಯಾರೇ ವ್ಯಕ್ತಿಯು,–

(ಎ) ಪಾಸ್‌ಪೋರ್ಟಿಗೆ ಅರ್ಜಿಯನ್ನು ಸಲ್ಲಿಸದರೆ ಅಥವಾ ತನ್ನ ರಾಷ್ಟ್ರೀಯತೆಯ ಬಗೆಗಿನ ಮಾಹಿತಿಯನ್ನು ಮರೆಮಾಚಿ ಪಾಸುಪೋರ್ಟನ್ನು ಪಡೆದರೆ; ಅಥವಾ

(ಬಿ) ಸೃಷ್ಟಿಸಿದ ಪಾಸ್‌ಪೋರ್ಟನ್ನು ಅಥವಾ ಯಾವುದೇ ಪ್ರಯಾಣದ ದಸ್ತಾವೇಜನ್ನು ಹೊಂದಿದ್ದರೆ

– ಅವನು ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಉಪಪ್ರಕರಣದ (1)ರ ಅಥವಾ ಉಪಪ್ರಕರಣ (1ಎ)ಯ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ ಮಾಡಲು ದುಷ್ಪ್ರೇರೇಪಿಸುವ ಯಾರೇ ವ್ಯಕ್ತಿಯು, ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರೇಪಿಸಿದ ಕೃತ್ಯವನ್ನು ಮಾಡಿದರೆ, ಆ ಅಪರಾಧಕ್ಕಾಗಿ ಆ ಉಪಪ್ರಕರಣದಲ್ಲಿ ಉಪಬಂಧಿಸಿದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(3) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಯಾವುದೇ ಷರತ್ತನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆ ಉಲ್ಲಂಘನೆಗಾಗಿ ಈ ಅಧಿನಿಯಮದಲ್ಲಿ ಬೇರೆಲ್ಲೂ ಯಾವುದೇ ಶಿಕ್ಷೆಯನ್ನು ಉಪಬಂಧಿಸಿಲ್ಲದಿದ್ದರೆ, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯು ಪುನಃ ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ, ಅವನು ನಂತರದ ಅಪರಾಧಕ್ಕಾಗಿ ಉಪಬಂಧಿಸಿದ ದಂಡನೆಯ ಎರಡುಪಟ್ಟು ದಂಡದಿಂದ ದಂಡಿತನಾಗತಕ್ಕದ್ದು.

**13. ಬಂಧಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಯಾರೇ ಸೀಮಾಸುಂಕ ಅಧಿಕಾರಿಯು ಮತ್ತು ಸಬ್‌ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಅಥವಾ ವಲಸೆ ಅಧಿಕಾರಿಯು, ಯಾರೇ ವ್ಯಕ್ತಿಯು 12ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದ್ದಾನೆಂಬ ಬಗ್ಗೆ ಸಕಾರಣಯುಕ್ತವಾಗಿ ಸಂಶಯಪಟ್ಟರೆ, ಆ ವ್ಯಕ್ತಿಯನ್ನು ವಾರಂಟಿಲ್ಲದೆ ಬಂಧಿಸಬಹುದು ಮತ್ತು, ಸಾಧ್ಯವಾದಷ್ಟು ಬೇಗನೆ, ಅಂತಹ ಬಂಧನಕ್ಕೆ ಕಾರಣಗಳನ್ನು ಅವನಿಗೆ ತಿಳಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಬಂಧಿಸುವ ಪ್ರತಿಯೊಬ್ಬ ಅಧಿಕಾರಿಯು ಅನಗತ್ಯ ವಿಳಂಬವಿಲ್ಲದೆ, ಬಂಧಿತ ವ್ಯಕ್ತಿಯನ್ನು, ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಬಳಿಗೆ ಕರೆದೊಯ್ಯತಕ್ಕದ್ದು ಅಥವಾ ಕಳುಹಿಸತಕ್ಕದ್ದು ಮತ್ತು

ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ಯ 57ನೇ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಯಾವುದೇ ಅಂಥ ಬಂಧನಕ್ಕೆ ಅನ್ವಯವಾಗತಕ್ಕದ್ದು.

14. **ಶೋಧನೆ ಮಾಡಲು ಮತ್ತು ವಶಪಡಿಸಿಕೊಳ್ಳಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರಪಡೆದ ಯಾರೇ ಸೀಮಾ ಸುಂಕ ಅಧಿಕಾರಿಯು ಮತ್ತು ಸಬ್‌ಇನ್ಸ್‌ಸ್ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಅಥವಾ ವಲಸೆ ಅಧಿಕಾರಿಯು ಯಾವುದೇ ಸ್ಥಳವನ್ನು ಶೋಧಿಸಬಹುದು ಮತ್ತು 12ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಯಾರೇ ವ್ಯಕ್ತಿಯ ಬಗ್ಗೆ ಸಕಾರಣಯುಕ್ತ ಗುಮಾನಿಯಿದ್ದಾಗ ಆ ವ್ಯಕ್ತಿಯಿಂದ ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು.

(2) ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಈ ಪ್ರಕರಣದ ಮೇರೆಗಿನ ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವುದಕ್ಕೆ, ಸಾಧ್ಯವಾಗಬಹುದಾದಷ್ಟುಮಟ್ಟಿಗೆ, ಅನ್ವಯವಾಗತಕ್ಕದ್ದು.

15. **ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯು ಅಗತ್ಯ .–** ಕೇಂದ್ರ ಸರ್ಕಾರದ ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ಆ ಸರ್ಕಾರವು ಅಧಿಕೃತಗೊಳಿಸಬಹುದಾದಂತಹ ಅಧಿಕಾರಿಯ ಅಥವಾ ಪ್ರಾಧಿಕಾರದ ಪೂರ್ವಮಂಜೂರಾತಿಯಿಲ್ಲದೆ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

16. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಥವಾ ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

17. **ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೇಂದ್ರ ಸರ್ಕಾರದ ಸ್ವತ್ತಾಗಿರುವುದು.–** ಈ ಅಧಿನಿಯಮದ ಮೇರೆಗೆ ನೀಡಿದ ಪಾಸುಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು ಎಲ್ಲ ಕಾಲದಲ್ಲಿ ಕೇಂದ್ರ ಸರ್ಕಾರದ ಸ್ವತ್ತಾಗಿಯೇ ಇರತಕ್ಕದ್ದು.

18. **[ಬಿಟ್ಟು ಬಿಡಲಾಗಿದೆ]**

19. **ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೆಲವು ದೇಶಗಳಿಗೆ ಪ್ರಯಾಣಿಸುವುದಕ್ಕೆ ಅಮಾನ್ಯವಾಗಿರುವುದು.–** ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದ ಮೇಲೆ ವಿದೇಶವು,–

(ಎ) ಭಾರತದ ವಿರುದ್ಧ ಬಾಹ್ಯ ಆಕ್ರಮಣವನ್ನು ಮಾಡುತ್ತಿರುವ ದೇಶವಾಗಿದ್ದರೆ; ಅಥವಾ

(ಬಿ) ಭಾರತದ ವಿರುದ್ಧ ಬಾಹ್ಯ ಆಕ್ರಮಣವನ್ನು ಮಾಡುತ್ತಿರುವ ದೇಶಕ್ಕೆ ನೆರವು ನೀಡುತ್ತಿರುವ ದೇಶವಾಗಿದ್ದರೆ; ಅಥವಾ

(ಸಿ) ಸಶಸ್ತ್ರ ಸಂಘರ್ಷವು ನಡೆಯುತ್ತಿರುವ ದೇಶವಾಗಿದ್ದರೆ; ಅಥವಾ

(ಡಿ) ಯಾವ ದೇಶಕ್ಕೆ ಪ್ರಯಾಣ ಮಾಡುವುದರಿಂದ ಭಾರತ ಸರ್ಕಾರದ ವಿದೇಶ ವ್ಯವಹಾರಗಳನ್ನು ನಡೆಸುವುದಕ್ಕೆ ತೀವ್ರ ಧಕ್ಕೆಯುಂಟಾಗುವುದೋ ಅಂತಹ ಪ್ರಯಾಣವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಬಂಧಿಸಬೇಕಾಗಿದೆಯೋ ಆ ದೇಶವಾಗಿದ್ದರೆ

– ಅಂತಹ ದೇಶದ ಮೂಲಕ ಪ್ರಯಾಣಿಸುವುದಕ್ಕಾಗಿ ಅಥವಾ ಅಂತಹ ದೇಶಕ್ಕೆ ಭೇಟಿನೀಡುವುದಕ್ಕಾಗಿ ಕೊಟ್ಟ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು, ನಿಯಮಿಸಲಾದ ಪ್ರಾಧಿಕಾರವು ನಿಯಮಿಸಲಾದ ನಮೂನೆಯಲ್ಲಿ ಆ ಬಗ್ಗೆ ವಿಶೇಷ ಹಿಂಬರಹವನ್ನು ಮಾಡಿರುವ ಯಾವುದೇ ಪ್ರಕರಣದಲ್ಲಿ ಹೊರತುಪಡಿಸಿ, ಅಂತಹ ಪ್ರಯಾಣಕ್ಕೆ ಅಥವಾ ಭೇಟಿಗೆ ಮಾನ್ಯವಾಗಿರುವುದು ನಿಂತುಹೋಗತಕ್ಕದ್ದು.

**20. ಭಾರತದ ನಾಗರಿಕರಾಗಿಲ್ಲದ ವ್ಯಕ್ತಿಗಳಿಗೆ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ನೀಡುವುದು.–** ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಿದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಭಾರತದ ನಾಗರಿಕನಾಗಿಲ್ಲದ ವ್ಯಕ್ತಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಅಥವಾ ನೀಡುವಂತೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

**21. ವಹಿಸಿಕೊಡಲು ಅಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 6ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗಿನ ಅಧಿಕಾರವನ್ನು ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ (ಐ) ಖಂಡದ ಮೇರೆಗಿನ ಅಧಿಕಾರವನ್ನು ಅಥವಾ 24ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಅಥವಾ ನೆರವೇರಿಸಬಹುದಾದ ಯಾವುದೇ ಪ್ರಕಾರ್ಯವನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಅಂತಹ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ,–

(ಎ) ಕೇಂದ್ರ ಸರ್ಕಾರಕ್ಕೆ ಅಧೀನನಾಗಿರುವಂತಹ ಅಧಿಕಾರಿಯು ಅಥವಾ ಪ್ರಾಧಿಕಾರಿಯು; ಅಥವಾ

(ಬಿ) ಯಾವುದೇ ರಾಜ್ಯ ಸರ್ಕಾರವು ಅಥವಾ ಅಂತಹ ಸರ್ಕಾರಕ್ಕೆ ಅಧೀನನಾಗಿರುವ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರಿಯು; ಅಥವಾ

(ಸಿ) ಯಾವ ವಿದೇಶದಲ್ಲಿ ಭಾರತದ ರಾಜತಾಂತ್ರಿಕ ದೂತಾವಾಸವಿಲ್ಲವೊ ಆ ಯಾವುದೇ ದೇಶದಲ್ಲಿ, ಕಾನ್ಸುಲರ್ ಅಧಿಕಾರಿಯು

– ಚಲಾಯಿಸತಕ್ಕದ್ದು ಅಥವಾ ನೆರವೇರಿಸತಕ್ಕದ್ದು ಎಂದು ನಿರ್ದೇಶಿಸಬಹುದು.

**22. ವಿನಾಯಿತಿ ನೀಡಲು ಅಧಿಕಾರ.–** ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು,–

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ವಿನಾಯಿತಿ ನೀಡುವುದು; ಮತ್ತು

(ಬಿ) ಹಲವು ಸಂದರ್ಭಗಳಲ್ಲಿ, ಯಾವುದೇ ಅಂತಹ ಅಧಿಸೂಚನೆಯನ್ನು, ರದ್ದುಪಡಿಸುವುದು ಮತ್ತು ಅಂತಹುದೇ ಅಧಿಸೂಚನೆಯ ಮೂಲಕ, ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು ಅಂತಹ ಉಪಬಂಧಗಳ ಪ್ರವರ್ತನೆಗೆ ಪುನಃ ಒಳಪಡಿಸುವುದು

– ಅವಶ್ಯವೆಂದು ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

**23. ಅಧಿನಿಯಮವು ಕೆಲವು ಅಧಿನಿಯಮಿತಿಗಳ ಜೊತೆಗೆ ಇರುವುದು.–** ಈ ಅಧಿನಿಯಮದ ಉಪಬಂಧಗಳು ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34), ವಲಸೆ ಅಧಿನಿಯಮ, 1983 (1983ರ 31), ವಿದೇಶಿಯರ ನೋಂದಣಿ ಅಧಿನಿಯಮ, 1939 (1939ರ 16), ವಿದೇಶಿಯರ ಅಧಿನಿಯಮ, 1946 (1946ರ 31), ಶತ್ರುಗಳೊಂದಿಗೆ ವ್ಯಾಪಾರ (ತುರ್ತು ಉಪಬಂಧಗಳ ಮುಂದುವರಿಕೆ) ಅಧಿನಿಯಮ, 1947 (1947ರ 16), ವಿದೇಶಿಯರ ಕಾನೂನು (ಅನ್ವಯ ಮತ್ತು ತಿದ್ದುಪಡಿ) ಅಧಿನಿಯಮ, 1962 (1962ರ 42), ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ಇವುಗಳ ಮತ್ತು ವಿದೇಶಿಯರಿಗೆ ಮತ್ತು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಇತರ ಅಧಿನಿಯಮಿತಿಗಳ ಉಪಬಂಧಗಳ ಜತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**24. ನಿಯಮಗಳನ್ನು ರಚಿಸಲು ಅಧಿಕಾರ:–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪಾಸ್‌ಪೋರ್ಟ್ ಪ್ರಾಧಿಕಾರಿಗಳ ನೇಮಕ, ಅಧಿಕಾರವ್ಯಾಪ್ತಿ, ನಿಯಂತ್ರಣ ಮತ್ತು ಪ್ರಕಾರ್ಯಗಳು;

(ಬಿ) ಅನುಕ್ರಮವಾಗಿ 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪಾಸ್‌ಪೋರ್ಟನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ಯಾವ ವ್ಯಕ್ತಿಗಳಿಗೆ ನೀಡಬಹುದೋ ಆ ವ್ಯಕ್ತಿಗಳ ವರ್ಗಗಳು;

(ಸಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಅಥವಾ ನವೀಕರಿಸುವುದಕ್ಕಾಗಿ ಅಥವಾ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹ ಮಾಡುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ವಿವರಗಳು ಮತ್ತು ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸುವಲ್ಲಿ ಯಾವ ಅವಧಿಯೊಳಗೆ ಅದನ್ನು ಸಲ್ಲಿಸತಕ್ಕದ್ದೋ ಆ ಅವಧಿ;

(ಡಿ) ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಯಾವ ಅವಧಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೋ ಆ ಅವಧಿ;

(ಇ) ಬೇರೆಬೇರೆ ವರ್ಗಗಳ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬಹುದೋ, ನವೀಕರಿಸಬಹುದೋ ಅಥವಾ ವ್ಯತ್ಯಸ್ಥಗೊಳಿಸಬಹುದೋ ಆ ನಮೂನೆ ಮತ್ತು ಷರತ್ತುಗಳು;

(ಇಇ) 5ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಇರುವ ವಿವರಣೆಯ ಉದ್ದೇಶಗಳಿಗಾಗಿ ವಿದೇಶವನ್ನು ನಿರ್ದಿಷ್ಟಪಡಿಸುವುದು;

(ಎಫ್) 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟ್‌ನ್ನು ನೀಡುವುದಕ್ಕಾಗಿ ಅಥವಾ 5ನೇ ಪ್ರಕರಣದ (1ಎ) ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿದೇಶಕ್ಕೆ ಭೇಟಿ ನೀಡುವುದಕ್ಕಾಗಿ ಪಾಸ್‌ಪೋರ್ಟ್‌ನ್ನು ನೀಡುವುದಕ್ಕೆ ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಅಥವಾ ಪಾಸಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಮಾಡಿರುವ ಯಾವುದೇ ಹಿಂಬರಹವನ್ನು ವ್ಯತ್ಯಸ್ಥಗೊಳಿಸುವುದಕ್ಕೆ ಅಥವಾ ಹೊಸ ಹಿಂಬರಹವನ್ನು ಮಾಡುವುದಕ್ಕೆ ಸಲ್ಲಿಸಿದ ಯಾವುದೇ ಅರ್ಜಿಗೆ ಸಂಬಂಧಿಸಿದಂತೆ ಸಂದಾಯಮಾಡಬೇಕಾದ ಫೀಜು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪೀಲಿನ ಸಂಬಂಧದಲ್ಲಿ ಸಂದಾಯಮಾಡಬೇಕಾದ ಫೀಜು;

(ಜಿ) 11ನೇ ಪ್ರಕರಣದ (1)ನೇ ಉಪಪ್ರಕಣದ ಮೇರೆಗೆ ಅಪೀಲು ಪ್ರಾಧಿಕಾರಿಗಳ ನೇಮಕ, ಅಂತಹ ಅಪೀಲು ಪ್ರಾಧಿಕಾರಿಗಳ ಅಧಿಕಾರ ವ್ಯಾಪ್ತಿ ಮತ್ತು ಅವರು ಯಾವ ಕಾರ್ಯವಿಧಾನವನ್ನು ಅನುಸರಿಸಬೇಕೋ ಆ ಕಾರ್ಯವಿಧಾನ;

(ಹೆಚ್) ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜಿಗೆ ಸಂಬಂಧಿಸಿದಂತೆ ಯಾವ ಸೇವೆಗಳನ್ನು ಸಲ್ಲಿಸಬೇಕಾಗಿದೆಯೋ ಆ ಸೇವೆಗಳು (ಕಳೆದುಹೋದ, ಹಾನಿಗೊಂಡ ಅಥವಾ ನಾಶವಾದ ಪಾಸ್‌ಪೋರ್ಟ್‌ಗೆ ಅಥವಾ ಪ್ರಯಾಣದ ದಸ್ತಾವೇಜಿಗೆ ಬದಲಾಗಿ ದ್ವಿಪ್ರತಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಸೇರಿದಂತೆ) ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜು;

(ಐ) ಯಾವ ವಿಷಯವನ್ನು ನಿಯಮಿಸಬೇಕಾಗಿದೆಯೊ ಅಥವಾ ನಿಯಮಿಸಬಹುದೊ ಅಥವಾ ಈ ಅಧಿನಿಯಮವು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಿಲ್ಲವೊ ಅಥವಾ ಸಾಕಷ್ಟು ಉಪಬಂಧ ಕಲ್ಪಿಸಿಲ್ಲವೊ ಆ ಯಾವುದೇ ಇತರೆ ವಿಷಯ ಮತ್ತು ಈ ಅಧಿನಿಯಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಯಾವ ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರ ಅಭಿಪ್ರಾಯ ಪಡುವುದೊ ಆ ಉಪಬಂಧ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ

ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು, ಮತ್ತು ಅದನ್ನು ಹಾಗೆ ಮಂಡಿಸಿದ ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**25. 1920ರ ಅಧಿನಿಯಮ 34ರ ಚಿಕ್ಕ ಹೆಸರಿನ ಬದಲಾವಣೆ.–** ಭಾರತೀಯ ಪಾಸ್‌ಪೋರ್ಟ್ ಅಧಿನಿಯಮ, 1920ರ 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, "ಭಾರತೀಯ ಪಾಸ್‌ಪೋರ್ಟ್ ಅಧಿನಿಯಮ, 1920" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ, "ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**26. [ಬಿಟ್ಟು ಬಿಡಲಾಗಿದೆ]**

**27. ನಿರಸನ ಮತ್ತು ಉಳಿಸುವಿಕೆ.–** (1) ಪಾಸ್‌ಪೋರ್ಟ್‌ಗಳ ಅಧ್ಯಾದೇಶ, 1967 (1967ರ 04) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಅಥವಾ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು ಅಥವಾ ಯಾವುದೇ ಕ್ರಮವನ್ನು 1967, ಮೇ 5ರಂದು ಈ ಅಧಿನಿಯಮವು ಪ್ರಾರಂಭವಾಗಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

********

## ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956

## (1956ರ ಅಧಿನಿಯಮ ಸಂಖ್ಯೆ 96)

**[29ನೇ ಡಿಸೆಂಬರ್ 1956.]**

ಕೆಲವು ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿನ ಕೊಳೆಗೇರಿಗಳ ಸುಧಾರಣೆಗಾಗಿ ಮತ್ತು ಅವುಗಳನ್ನು ತೆರವುಗೊಳಿಸುವುದಕ್ಕಾಗಿ ಮತ್ತು ಅಂಥ ಪ್ರದೇಶಗಳಲ್ಲಿನ ಬಾಡಿಗೆದಾರರನ್ನು ಹೊರಹಾಕುವುದರಿಂದ ರಕ್ಷಣೆ ನೀಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮತ್ತು ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿಂದಿವಿ ದ್ವೀಪಗಳ ಒಕ್ಕೂಟ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಎಲ್ಲ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು *ಆ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಡಳಿತಗಾರ" ಎಂದರೆ ಒಂದು ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಎಂದು ಅರ್ಥ;

(ಬಿ) 'ಕಟ್ಟಡ' ಎಂಬುದು ಯಾವುದೇ ರಚನೆಯನ್ನು ಅಥವಾ ನಿರ್ಮಿತಿಯನ್ನು ಅಥವಾ ಹಾಗೆ ಪರಿಭಾಷಿಸಲಾದಂತೆ ಕಟ್ಟಡದ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ, ಆದರೆ ಕಟ್ಟಡದಲ್ಲಿ ಇರುವ ಸ್ಥಾವರವನ್ನು ಅಥವಾ ಯಂತ್ರೋಪಕರಣವನ್ನು ಒಳಗೊಳ್ಳುವುದಿಲ್ಲ;

(ಸಿ) "ಸಕ್ಷಮ ಪ್ರಾಧಿಕಾರ" ಎಂದರೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಆಡಳಿತಗಾರನು ಸಕ್ಷಮ ಪ್ರಾಧಿಕಾರವೆಂದು ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಪ್ರಾಧಿಕಾರಿ ಎಂದು ಅರ್ಥ;

(ಡಿ) ಕಟ್ಟಡಕ್ಕೆ ಸಂಬಂಧಿಸಿದಂತೆ "ನಿರ್ಮಿತಿ" ಎಂಬುದು ವಿಸ್ತರಿಸುವುದನ್ನು, ಮಾರ್ಪಾಟು ಮಾಡುವುದನ್ನು ಅಥವಾ ಪುನರ್‌ನಿರ್ಮಿತಿಯನ್ನು ಒಳಗೊಳ್ಳುತ್ತದೆ;

---

* 8ನೇ ಫೆಬ್ರವರಿ 1957ರಿಂದ ಕೇಂದ್ರಾಡಳಿತ ಪ್ರದೇಶ, ದೆಹಲಿಗೆ ಸಂಬಂಧಪಟ್ಟಂತೆ ಜಾರಿಗೆ ಬಂದಿದೆ. ಅಧಿಸೂಚನೆ ಸಂ: ಎಸ್.ಆರ್.ಓ. 421, ದಿನಾಂಕ: 4ನೇ ಫೆಬ್ರವರಿ 1957, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ II ವಿಭಾಗ 3(ii) ನೋಡಿ.

1ನೇ ಏಪ್ರಿಲ್ 1958ರಿಂದ ಕೇಂದ್ರಾಡಳಿತ ಪ್ರದೇಶ, ತ್ರಿಪುರಾಗೆ ಸಂಬಂಧಪಟ್ಟಂತೆ ಜಾರಿಗೆ ಬಂದಿದೆ. ಅಧಿಸೂಚನೆ ಸಂ:ಎಸ್.ಆರ್.ಓ. 414, ದಿನಾಂಕ: 31ನೇ ಮಾರ್ಚ್ 1958, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ II ವಿಭಾಗ 3(ii) ನೋಡಿ.

1968ರ ಅಧಿನಿಯಮ ಸಂಖ್ಯೆ 26ರ ಮೂಲಕ ಪಾಂಡಿಚೆರಿಗೆ ವಿಸ್ತರಿಸಲಾಗಿದೆ.

(ಇ) "ಭೂಮಿ" ಎಂಬುದು ಭೂಮಿಯಿಂದ ದೊರೆಯುವ ಪ್ರಯೋಜನಗಳನ್ನು ಮತ್ತು ನೆಲಕ್ಕೆ ಹೊಂದಿಕೊಂಡಿರುವ ವಸ್ತುಗಳನ್ನು ಅಥವಾ ನೆಲಕ್ಕೆ ಹೊಂದಿಕೊಂಡಿರುವ ಯಾವುದಕ್ಕಾದರೂ ಖಾಯಂ ಆಗಿ ಅಂಟಿಕೊಂಡಿರುವುದನ್ನು ಒಳಗೊಳ್ಳುತ್ತವೆ;

(ಎಫ್) 'ಅಧಿಭೋಗದಾರ' ಎಂಬುದು,-

(ಎ) ಯಾವ ಭೂಮಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಅಂಥ ಬಾಡಿಗೆಯನ್ನು ಸಂದಾಯ ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಆ ಭೂಮಿಗೆ ಅಥವಾ ಕಟ್ಟಡಕ್ಕೆ ಬಾಡಿಗೆಯನ್ನು ಅಥವಾ ಭಾಗವನ್ನು ಮಾಲೀಕನಿಗೆ ತತ್ಕಾಲದಲ್ಲಿ ಸಂದಾಯ ಮಾಡಲು ಹೊಣೆಗಾರನಾಗಿರುವ ಯಾವನೇ ವ್ಯಕ್ತಿಯನ್ನು;

(ಬಿ) ತನ್ನ ಭೂಮಿಯ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಅಥವಾ ಅನ್ಯಥಾ ಉಪಯೋಗಿಸುತ್ತಿರುವ ಮಾಲೀಕನನ್ನು;

(ಸಿ) ಯಾವುದೇ ಭೂಮಿಗೆ ಅಥವಾ ಕಟ್ಟಡಕ್ಕೆ ಬಾಡಿಗೆ ರಹಿತ ಬಾಡಿಗೆದಾರ;

(ಡಿ) ಯಾವುದೇ ಭೂಮಿಯ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಲೈಸನ್ಸ್‌ದಾರನನ್ನು; ಮತ್ತು

(ಇ) ಯಾವುದೇ ಭೂಮಿಯ ಅಥವಾ ಕಟ್ಟಡದ ಉಪಯೋಗದಿಂದಾಗಿ ಮತ್ತು ಅಧಿಭೋಗದಿಂದಾಗಿ ಉಂಟಾದ ಹಾನಿಗಾಗಿ ಮಾಲೀಕನಿಗೆ ಸಂದಾಯ ಮಾಡಲು ಹೊಣೆಗಾರನಾಗಿರುವ ಯಾರೇ ವ್ಯಕ್ತಿಯನ್ನು

– ಒಳಗೊಳ್ಳುತ್ತದೆ.

(ಜಿ) 'ಮಾಲೀಕ' ಎಂಬುದು ತನ್ನ ಸ್ವಂತ ಜವಾಬ್ದಾರಿಯ ಮೇಲೆ ಅಥವಾ ತನ್ನ ಮತ್ತು ಇತರರ ಪರವಾಗಿ ಅಥವಾ ಏಜೆಂಟ್‌ನಾಗಿ ಅಥವಾ ನ್ಯಾಸಧಾರಿಯಾಗಿ, ಯಾವುದೇ ಕಟ್ಟಡದ ಅಥವಾ ಭೂಮಿಯ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸುವುದಕ್ಕೆ ಹಕ್ಕನ್ನು ಹೊಂದಿರುವ ಅಥವಾ ಕಟ್ಟಡವನ್ನು ಅಥವಾ ಭೂಮಿಯನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ ಅಂಥ ಬಾಡಿಗೆಯನ್ನು ಹಾಗೆ ಸ್ವೀಕರಿಸುವ ಅಥವಾ ಅದನ್ನು ಸ್ವೀಕರಿಸಲು ಹಕ್ಕನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಹೆಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ; ಮತ್ತು

(ಐ) "ಕೊಳೆಗೇರಿ ತೆರವು" ಎಂದರೆ ಯಾವುದೇ ಕೊಳೆಗೇರಿಯಲ್ಲಿರುವ ಕಟ್ಟಡಗಳನ್ನು ಕೆಡವಿ ಹಾಕುವುದರ ಮತ್ತು ಅಲ್ಲಿಂದ ಅವುಗಳನ್ನು ತೆಗೆದು ಹಾಕುವುದರ ಮೂಲಕ ಆ ಯಾವುದೇ ಕೊಳೆಗೇರಿಯನ್ನು ತೆರವು ಮಾಡುವುದು ಎಂದು ಅರ್ಥ;

(ಜೆ) "ಸುಧಾರಣಾ ಕಾಮಗಾರಿ" ಎಂಬುದು ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚು ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದನ್ನು ಒಳಗೊಳ್ಳುತ್ತದೆ, ಎಂದರೆ:-

(i) ಅಗತ್ಯವಿರುವ ದುರಸ್ತಿಗಳು;

(ii) ಕಟ್ಟಡದ ರಚನೆಯಲ್ಲಿ ಮಾರ್ಪಾಟುಗಳು;

(iii) ವಿದ್ಯುತ್ ಪಾಯಿಂಟುಗಳಿಗೆ, ನೀರಿನ ಕೊಳಾಯಿಗಳಿಗೆ ಮತ್ತು ಸ್ನಾನದ ಜಾಗಗಳಿಗೆ ಏರ್ಪಾಟು;

(iv) ತೆರೆದ ಅಥವಾ ಮುಚ್ಚಿದ ಒಳ ಚರಂಡಿಗಳ ನಿರ್ಮಾಣ;

(v) ನೀರಿಲ್ಲದ ಶೌಚಾಲಯಗಳನ್ನು ನೀರಿರುವ ಶೌಚಾಲಯಗಳನ್ನಾಗಿ ಪರಿವರ್ತಿಸುವುದೂ ಸೇರಿದಂತೆ ಶೌಚಾಲಯಗಳಿಗೆ ಏರ್ಪಾಟು;

(vi) ಹೆಚ್ಚುವರಿ ಅಥವಾ ಸುಧಾರಿತ ಜೋಡಣೆಗಳಿಗೆ ಅಥವಾ ಅಳವಡಿಕೆಗಳಿಗೆ ಏರ್ಪಾಟು;

(vii) ಅಂಗಳವನ್ನು ಹಾಗೇ ಬಿಡುವುದು ಅಥವಾ ಕಲ್ಲುಹಾಸು ಹಾಕುವುದು;

(viii) ಕಸ ತೆಗೆಯುವುದು; ಮತ್ತು

(ix) ಮೇಲೆ ನಿರ್ದಿಷ್ಟಪಡಿಸಿದ ಯಾವುದೇ ಕಾಮಗಾರಿಗಳನ್ನು ಕಾರ್ಯಗತ ಗೊಳಿಸುವುದು ಅಗತ್ಯವಿದೆಯೆಂದು ಸಕ್ಷಮ ಪ್ರಾಧಿಕಾರವು ಅಭಿಪ್ರಾಯಪಟ್ಟರೆ ಯಾವುದೇ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಕೆಡವಿ ಹಾಕುವುದೂ ಸೇರಿದಂತೆ ಯಾವುದೇ ಇತರ ಕಾಮಗಾರಿ.

## ಅಧ್ಯಾಯ II

### ಕೊಳೆಗೇರಿಗಳು

**3. ಕೊಳೆಗೇರಿಗಳೆಂದು ಘೋಷಣೆ.–** (1) ಸಕ್ಷಮ ಪ್ರಾಧಿಕಾರಕ್ಕೆ, ತನ್ನ ಯಾರೇ ಅಧಿಕಾರಿಗಳಿಂದ ಬಂದ ವರದಿಯ ಅಥವಾ ತನ್ನ ಬಳಿ ಇರುವ ಇತರ ಮಾಹಿತಿಯ ಆಧಾರದ ಮೇಲೆ ಯಾವುದೇ ಪ್ರದೇಶದಲ್ಲಿನ ಕಟ್ಟಡಗಳು,–

(ಎ) ಯಾವುದೇ ರೀತಿಯಲ್ಲೂ ಮಾನವರು ವಾಸಿಸಲು ಯೋಗ್ಯವಲ್ಲವೆಂದು; ಅಥವಾ

(ಬಿ) ಶಿಥಿಲಗೊಂಡ, ಜನದಟ್ಟಣೆಯ ಅಂಥ ಕಟ್ಟಡಗಳ ದೋಷಪೂರಿತ ವ್ಯವಸ್ಥೆಯ ಮತ್ತು ವಿನ್ಯಾಸದ, ಬೀದಿಗಳು ಕಿರಿದಾಗಿರುವುದರ ಅಥವಾ ಬೀದಿಗಳ ದೋಷಪೂರಿತ ವ್ಯವಸ್ಥೆಯ, ಗಾಳಿ–ಬೆಳಕಿನ, ದೀಪದ ಅಥವಾ ನೈರ್ಮಲ್ಯ ಸೌಕರ್ಯಗಳ ಅಥವಾ ಈ ಅಂಶಗಳಲ್ಲಿ ಯಾವುದೇ ಸಂಯೋಜನೆಯ ಕೊರತೆಯ ಕಾರಣದಿಂದಾಗಿ ಸುರಕ್ಷತೆಗೆ, ಆರೋಗ್ಯಕ್ಕೆ ಅಥವಾ ನೈತಿಕತೆಗೆ ಹಾನಿಕಾರಕವಾದವುಗಳಾಗಿವೆಯೆಂದು ಮನದಟ್ಟಾದರೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಪ್ರದೇಶವನ್ನು ಕೊಳೆಗೇರಿಯೆಂಬುದಾಗಿ ಘೋಷಿಸಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಕಟ್ಟಡವು ಮಾನವರ ವಾಸಕ್ಕೆ ಯೋಗ್ಯವೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಲು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಆ ಕಟ್ಟಡದ ಸ್ಥಿತಿಗತಿಯ ಬಗ್ಗೆ ಗಮನ ನೀಡತಕ್ಕದ್ದು, ಎಂದರೆ,–

(ಎ) ದುರಸ್ತಿ;

(ಬಿ) ಸ್ಥಿರತೆ;

(ಸಿ) ತೇವ ಇಲ್ಲದಿರುವುದು;

(ಡಿ) ಸ್ವಾಭಾವಿಕ ಬೆಳಕು ಮತ್ತು ಗಾಳಿ;

(ಇ) ನೀರಿನ ಸರಬರಾಜು;

(ಎಫ್) ಒಳಚರಂಡಿ ಮತ್ತು ನೈರ್ಮಲ್ಯ ಸೌಕರ್ಯಗಳು;

(ಜಿ) ಆಹಾರ ಸಂಗ್ರಹಣೆಗೆ, ತಯಾರಿಸುವುದಕ್ಕೆ ಮತ್ತು ಆಹಾರ ಬೇಯಿಸುವುದಕ್ಕೆ ಮತ್ತು ಮಲಿನ ನೀರು ಹೊರಹೋಗುವುದಕ್ಕೆ ಸೌಕರ್ಯಗಳು

– ಮತ್ತು ಆ ಕಟ್ಟಡವನ್ನು ಅದು ಮೇಲೆ ಹೇಳಲಾದ ಒಂದು ಅಥವಾ ಎರಡು ವಿಷಯದ ದೃಷ್ಟಿಯಿಂದ ಆ ಪರಿಸ್ಥಿತಿಯಲ್ಲಿ ಸಮಂಜಸವಾಗಿ ವಾಸಿಸಲು ಸೂಕ್ತವಾಗದಷ್ಟು ದೋಷಪೂರಿತವಾಗಿದ್ದರೆ ಮತ್ತು ಹಾಗಿದ್ದಾಗ ಮಾತ್ರವೇ ಮೇಲೆ ಹೇಳಿದಂತೆ ವಾಸಯೋಗ್ಯವಲ್ಲ ಎಂದು ಭಾವಿಸತಕ್ಕದ್ದು.

## ಅಧ್ಯಾಯ III

### ಕೊಳೆಗೇರಿಗಳ ಸುಧಾರಣೆ

**4. ಮಾನವ ವಾಸಕ್ಕೆ ಯೋಗ್ಯವಾಗಿಲ್ಲದಿರುವ ಕಟ್ಟಡಗಳ ಸುಧಾರಣೆ ಮಾಡುವಂತೆ ಅಗತ್ಯಪಡಿಸಲು ಸಕ್ಷಮ ಪ್ರಾಧಿಕಾರದ ಅಧಿಕಾರ.–** (1) ಸಕ್ಷಮ ಪ್ರಾಧಿಕಾರಕ್ಕೆ, ತನ್ನ ಯಾರೇ ಅಧಿಕಾರಿಗಳಿಂದ ಬಂದ ವರದಿಯ ಅಥವಾ ತನ್ನ ಬಳಿ ಇರುವ ಇತರೆ ಮಾಹಿತಿಯ ಆಧಾರದ ಮೇಲೆ ಕೊಳೆಗೇರಿಯಲ್ಲಿರುವ ಯಾವುದೇ ಕಟ್ಟಡವು ಯಾವುದೇ ರೀತಿಯಿಂದಲೂ ಮಾನವ ವಾಸಕ್ಕೆ ಯೋಗ್ಯವಲ್ಲವೆಂದು ಮನದಟ್ಟಾದರೆ, ಸೂಕ್ತವಾಗಿ ವೆಚ್ಚ ಮಾಡಿದರೂ ಅದು ಹಾಗೆ ವಾಸಕ್ಕೆ ಯೋಗ್ಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಹೊರತು, ಕಟ್ಟಡದ ಮಾಲೀಕನಿಗೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದಂತಹ ಸುಧಾರಣಾ ಕಾಮಗಾರಿಗಳನ್ನು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೂವತ್ತು ದಿವಸಗಳಿಗಿಂತಲೂ ಕಡಿಮೆ ಇಲ್ಲದ ಅವಧಿಯೊಳಗಾಗಿ ಕೈಗೊಳ್ಳುವಂತೆ ಅಗತ್ಯಪಡಿಸುವ ಮತ್ತು ಪ್ರಾಧಿಕಾರದ ಅಭಿಪ್ರಾಯದಲ್ಲಿ ಆ ಕಾಮಗಾರಿಗಳು ಕಟ್ಟಡವನ್ನು ಮಾನವ ವಾಸಕ್ಕೆ ಯೋಗ್ಯವನ್ನಾಗಿ ಮಾಡುತ್ತವೆಂದು ತಿಳಿಸುವ ನೋಟೀಸನ್ನು ಜಾರಿಮಾಡತಕ್ಕದ್ದು:

ಪರಂತು, ಕಟ್ಟಡದ ಮಾಲೀಕನು ಕಟ್ಟಡವಿರುವ ಭೂಮಿಯ ಮಾಲೀಕನಲ್ಲದಿದ್ದಾಗ ಮತ್ತು ಕೈಗೊಳ್ಳಬೇಕೆಂದು ಅಗತ್ಯಪಡಿಸಿರುವ ಸುಧಾರಣಾ ಕಾಮಗಾರಿಗಳು, ಸಂದರ್ಭಾನುಸಾರ ನೀರಿನ ಕೊಳಾಯಿಗಳಿಗೆ, ಸ್ನಾನದ ಜಾಗಗಳಿಗೆ, ತೆರೆದ ಅಥವಾ ಮುಚ್ಚಿದ ಒಳ ಚರಂಡಿಗಳ ನಿರ್ಮಾಣದ ಏರ್ಪಾಟಿಗೆ, ನೀರಿರುವ ಶೌಚಾಲಯಗಳ ಅಥವಾ ಕಸವನ್ನು ತೆಗೆದುಹಾಕುವ ಮತ್ತು ಕಟ್ಟಡದ ಹೊರಗಡೆ ಕೈಗೊಳ್ಳಬೇಕಾದಂಥ ಕಾಮಗಾರಿಗಳಿಗೆ ಸಂಬಂಧಪಟ್ಟಿದ್ದರೆ ಭೂಮಿಯ ಮಾಲೀಕನಿಗೆ ನೋಟೀಸನ್ನು ಜಾರಿಮಾಡತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಮಾಲೀಕನಿಗೆ ನೋಟೀಸನ್ನು ಕಳುಹಿಸುವುದರ ಜೊತೆಗೆ, ಸಕ್ಷಮ ಪ್ರಾಧಿಕಾರವು, ಕಟ್ಟಡದಲ್ಲಿ ಅಥವಾ ಕಟ್ಟಡವಿರುವ ಭೂಮಿಯಲ್ಲಿ ಬಾಡಿಗೆದಾರನಾಗಿಯಾಗಲಿ, ಅಡಮಾನದಾರನಾಗಿಯಾಗಲಿ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರೆ ವ್ಯಕ್ತಿಗೆ ಆಗಲಿ ನೋಟೀಸಿನ ಒಂದು ಪ್ರತಿಯನ್ನು ಜಾರಿ ಮಾಡಬಹುದು.

(3) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸೂಕ್ತವಾಗಿ ವೆಚ್ಚ ಮಾಡಿ ಕಟ್ಟಡವನ್ನು ಮಾನವ ವಾಸಕ್ಕೆ ಯೋಗ್ಯವಾದುದನ್ನಾಗಿ ಮಾಡಬಹುದೇ ಎಂಬುದನ್ನು ನಿರ್ಧರಿಸುವಾಗ, ಅದನ್ನು ಹಾಗೆ ಯೋಗ್ಯವಾದುದನ್ನಾಗಿ ಮಾಡಲು ಅವಶ್ಯಕ ಕಾಮಗಾರಿಗಳ ಅಂದಾಜು ವೆಚ್ಚಕ್ಕೆ ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಿದಾಗ ಆ ಕಟ್ಟಡವು ಯಾವ ಮೌಲ್ಯದ್ದಾಗುತ್ತದೆಂದು ಅಂದಾಜು ಮಾಡಲಾಗಿರುವುದೋ ಆ ಮೌಲ್ಯಕ್ಕೆ ಗಮನಕೊಡತಕ್ಕದ್ದು.

**5. ಸುಧಾರಣಾ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಂತೆ ಅಗತ್ಯಪಡಿಸುವ ನೋಟೀಸನ್ನು ಜಾರಿಗೊಳಿಸುವುದು.–** (1) ಕಟ್ಟಡದ ಮಾಲೀಕನು ಅಥವಾ ಸಂದರ್ಭಾನುಸಾರ ಕಟ್ಟಡ ಇರುವ ಭೂಮಿಯ ಮಾಲೀಕನು 4ನೇ ಪ್ರಕರಣದ ಮೇರೆಗೆ ಸುಧಾರಣಾ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಂತೆ ಅಗತ್ಯಪಡಿಸಿರುವ ನೋಟೀಸನ್ನು ಪಾಲಿಸದಿದ್ದಲ್ಲಿ, ಆಗ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಗಿದ ನಂತರ ಸಕ್ಷಮ ಪ್ರಾಧಿಕಾರಿಯು, ಆ ನೋಟೀಸಿನಲ್ಲಿ ಮಾಡಲು ಅಗತ್ಯಪಡಿಸಿದ ಕಾಮಗಾರಿಗಳನ್ನು ತಾನೇ ಸ್ವತಃ ಮಾಡಿಸಬಹುದು.

(2) ಈ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಮಾಡಿದ ಎಲ್ಲಾ ವೆಚ್ಚಗಳನ್ನು, ಕೇಂದ್ರ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದ ದರದ ಬಡ್ಡಿಯ ಸಹಿತ ಅವುಗಳನ್ನು ಸಂದಾಯ ಮಾಡುವಂತೆ ತಗಾದೆ ಮಾಡಿದ ದಿನಾಂಕದಿಂದ ಸಂದಾಯ ಮಾಡುವವರೆಗೆ ಸಕ್ಷಮ ಪ್ರಾಧಿಕಾರಿಯು ಕಟ್ಟಡದ ಮಾಲೀಕನಿಂದ ಅಥವಾ ಸಂದರ್ಭಾನುಸಾರ ಕಟ್ಟಡ ಇರುವ ಭೂಮಿಯ ಮಾಲೀಕನಿಂದ ಭೂ–ಕಂದಾಯದ ಬಾಕಿಗಳಂತೆ ವಸೂಲಿ ಮಾಡಬಹುದು:

ಪರಂತು, ಮಾಲೀಕನು,–

(ಎ) ಬೇರೆ ಇತರ ವ್ಯಕ್ತಿಗೆ ಏಜೆಂಟ್‌ನಾಗಿ ಅಥವಾ ನ್ಯಾಸಧಾರಿಯಾಗಿ ಮಾತ್ರವೇ ಬಾಡಿಗೆಯನ್ನು ಪಡೆಯುತ್ತಿದ್ದೇನೆ ಎಂದು; ಮತ್ತು

(ಬಿ) ಆ ಇತರ ವ್ಯಕ್ತಿಯ ಪರವಾಗಿ ಪ್ರಾಧಿಕಾರದ ಸಂಪೂರ್ಣ ತಗಾದೆಯನ್ನು ಈಡೇರಿಸಲು ಸಾಕಷ್ಟು ಹಣ ತನ್ನ ಕೈಯಲ್ಲಿಲ್ಲವೆಂದು

–ರುಜುವಾತುಪಡಿಸಿದ್ದರೆ, ಮೇಲೆ ಹೇಳಲಾದಂತೆ ಆತನ ಕೈಯಲ್ಲಿರುವ ಒಟ್ಟು ಮೊತ್ತದಷ್ಟಕ್ಕೆ ಆತನ ಹೊಣೆಗಾರಿಕೆಯನ್ನು ಮಿತಿಗೊಳಿಸತಕ್ಕದ್ದು.

**6. ಸುಧಾರಣಾ ಕಾಮಗಾರಿಗಳ ನಿರ್ವಹಣಾ ವೆಚ್ಚ, ಇತ್ಯಾದಿಗಳನ್ನು ಕಟ್ಟಡದ ಅಧಿಭೋಗದಾರರಿಂದ ವಸೂಲಿ ಮಾಡುವುದು.–** 4ನೇ ಮತ್ತು 5ನೇ ಪ್ರಕರಣಗಳ ಉಪಬಂಧಗಳ ಅನುಸಾರವಾಗಿ ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಸುಧಾರಣಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವಲ್ಲಿ, ಸಕ್ಷಮ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ಯಾವುದೇ ಸ್ಥಳೀಯ ಪ್ರಾಧಿಕಾರವು, ಅಂಥ ಸುಧಾರಣಾ ಕಾಮಗಾರಿಗಳ ನಿರ್ವಹಣೆಗೆ ಅಥವಾ ಅಂಥ ಕಾಮಗಾರಿಗಳಿಂದ ಒದಗಿದ ಸೌಕರ್ಯಗಳನ್ನು ಮತ್ತು ಅನುಕೂಲಗಳನ್ನು ಅನುಭವಿಸುತ್ತಿರುವುದಕ್ಕೆ ಸಂಬಂಧಿಸಿದಂತೆ ಮಾಡಿದ ವೆಚ್ಚಗಳು ಕಟ್ಟಡದ ಅಧಿಭೋಗದಾರನಿಂದ ಅಥವಾ ಅಧಿಭೋಗದಾರರಿಂದ ಭೂ–ಕಂದಾಯದ ಬಾಕಿಗಳು ಎಂಬಂತೆ ವಸೂಲೀಯವಾಗಿರತಕ್ಕದ್ದು.

**6ಎ. ಕೊಳೆಗೇರಿಗಳಲ್ಲಿನ ಕಟ್ಟಡ, ಇತ್ಯಾದಿಗಳ ಮೇಲೆ ನಿರ್ಬಂಧ.–** (1) ಸಕ್ಷಮ ಪ್ರಾಧಿಕಾರಿಯಿಂದ ಲಿಖಿತದಲ್ಲಿ ಪೂರ್ವಾನುಮತಿಯನ್ನು ಪಡೆಯದ ಹೊರತು, ಕೊಳೆಗೇರಿಯಲ್ಲಿ ಯಾವುದೇ ಕಟ್ಟಡವನ್ನು ಯಾರೇ ವ್ಯಕ್ತಿಯು ನಿರ್ಮಿಸತಕ್ಕದ್ದಲ್ಲ ಎಂದು ಸಕ್ಷಮ ಪ್ರಾಧಿಕಾರಿಯು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು ಅದರ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದಾಗ, ಅಂಥ ಅಧಿಸೂಚನೆಯು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದಕ್ಕೂ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

(3) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುಮತಿಯನ್ನು ಪಡೆಯಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು, ಆ ಅರ್ಜಿಯು ಯಾವ ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದೆಯೋ ಆ ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಮಾಹಿತಿಯನ್ನು ಒಳಗೊಂಡ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಸಲ್ಲಿಸತಕ್ಕದ್ದು.

(4) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರವು ತಾನು ಅಗತ್ಯವೆಂದು ಪರಿಗಣಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, ಲಿಖಿತದಲ್ಲಿ ಆದೇಶದ ಮೂಲಕ,–

(ಎ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ, ನಿಬಂಧನೆಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು ಅನುಮತಿ ನೀಡತಕ್ಕದ್ದು; ಅಥವಾ

(ಬಿ) ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದು:

ಪರಂತು, ಅಂಥ ಅನುಮತಿಯನ್ನು ನೀಡಲು ನಿರಾಕರಿಸುವ ಆದೇಶವನ್ನು ಮಾಡುವುದಕ್ಕೆ ಮುಂಚೆ, ಆ ಅನುಮತಿಯನ್ನು ಏಕೆ ನಿರಾಕರಿಸಬಾರದು ಎಂಬ ಬಗ್ಗೆ ಕಾರಣ ತೋರಿಸಲು ಅರ್ಜಿದಾರನಿಗೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(5) (1)ನೇ ಉಪ–ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ,–

(ಎ) 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಟೀಸಿನ ಮೂಲಕ ಅಥವಾ 7ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನೀಡಲಾದ ಮುಚ್ಚಳಿಕೆಗೆ ಅನುಸಾರವಾಗಿ ಕೈಗೊಳ್ಳಬೇಕೆಂದು ಅಗತ್ಯಪಡಿಸಿದ ಯಾವುದೇ ಸುಧಾರಣಾ ಕಾಮಗಾರಿಗೆ; ಅಥವಾ

(ಬಿ) 10ನೇ ಪ್ರಕರಣದ ಮೇರೆಗೆ ಯಾವ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕೊಳೆಗೇರಿಯ ತೆರವಿಗೆ ಆದೇಶ ಮಾಡಲಾಗಿದೆಯೋ ಆ ಯಾವುದೇ ಪ್ರದೇಶದಲ್ಲಿ ಯಾವುದೇ ಕಟ್ಟಡದ ನಿರ್ಮಾಣಕ್ಕೆ

–ಅನ್ವಯವಾಗತಕ್ಕದ್ದಲ್ಲ.

**7. ಮಾನವ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ನೆಲಸಮಗೊಳಿಸುವ ಆದೇಶವನ್ನು ಮಾಡಲು ಸಕ್ಷಮ ಪ್ರಾಧಿಕಾರದ ಅಧಿಕಾರ.–** (1) ಸಕ್ಷಮ ಪ್ರಾಧಿಕಾರಕ್ಕೆ ತನ್ನ ಯಾರೇ ಅಧಿಕಾರಿಗಳಿಂದ ಬಂದ ವರದಿಯ ಅಥವಾ ತನ್ನ ಬಳಿ ಇರುವ ಇತರೆ ಮಾಹಿತಿಯ ಆಧಾರದ ಮೇಲೆ ಕೊಳೆಗೇರಿಯೊಳಗೆ ಇರುವ ಯಾವುದೇ ಕಟ್ಟಡವು ಮಾನವ ವಾಸಕ್ಕೆ ಯೋಗ್ಯವಾದುದಾಗಿಲ್ಲವೆಂದು ಮತ್ತು ಸೂಕ್ತವಾಗಿ ವೆಚ್ಚ ಮಾಡಿದರೂ ಅದು ಹಾಗೆ ವಾಸಕ್ಕೆ ಯೋಗ್ಯವಾದುದಾಗುವುದಿಲ್ಲವೆಂದು ಮನದಟ್ಟಾದರೆ, ಕಟ್ಟಡದ ಮಾಲೀಕನಿಗೆ ಮತ್ತು ಕಟ್ಟಡದಲ್ಲಿ ಬಾಡಿಗೆದಾರನಾಗಿಯಾಗಲಿ, ಅಡಮಾನದಾರನಾಗಿಯಾಗಲಿ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರ ವ್ಯಕ್ತಿಗೆ ಕಟ್ಟಡವನ್ನು ನೆಲಸಮಗೊಳಿಸಲು ಏಕೆ ಆದೇಶ ಮಾಡಬಾರದೆಂಬುದಕ್ಕೆ ಕಾರಣವನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಸಮಯದೊಳಗೆ ತೋರಿಸಬೇಕೆಂದು ನೋಟೀಸನ್ನು ನೀಡಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಯಾರಿಗೆ ನೋಟೀಸನ್ನು ಜಾರಿಗೊಳಿಸಲಾಗಿದೆಯೋ ಆ ವ್ಯಕ್ತಿಗಳಲ್ಲಿ ಯಾರಾದರೂ ಅದಕ್ಕೆ ಅನುಸಾರವಾಗಿ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾದರೆ, ಮತ್ತು ಪ್ರಾಧಿಕಾರದ ಅಭಿಪ್ರಾಯದಲ್ಲಿ ಆ ಕಟ್ಟಡಕ್ಕೆ ಸಂಬಂಧಿಸಿದಂತೆ ಮಾನವ ವಾಸಕ್ಕಾಗಿ ಆ ಕಟ್ಟಡವನ್ನು ಯೋಗ್ಯವಾದುದನ್ನಾಗಿ ಮಾಡುವ ಅಂಥ ಸುಧಾರಣಾ ಕಾಮಗಾರಿಗಳನ್ನು ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ವ್ಯಕ್ತಿಯು ನಿರ್ವಹಿಸುತ್ತೇನೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟರೆ ಅಥವಾ ಆ ಉದ್ದೇಶಕ್ಕಾಗಿ ಅದು ಯೋಗ್ಯವಾಗಿದೆಯೆಂದು ಪ್ರಾಧಿಕಾರಕ್ಕೆ ಮನದಟ್ಟಾಗಿ ಆ ಮುಚ್ಚಳಿಕೆಯನ್ನು ರದ್ದುಪಡಿಸುವವರೆಗೆ ಅದನ್ನು ಮಾನವ ವಾಸಕ್ಕಾಗಿ ಉಪಯೋಗಿಸುವುದಿಲ್ಲವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟರೆ, ಪ್ರಾಧಿಕಾರವು ಕಟ್ಟಡವನ್ನು ನೆಲಸಮಗೊಳಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(3) (2)ನೇ ಉಪ–ಪ್ರಕರಣದಲ್ಲಿ ನಮೂದಿಸಲಾದ ಮುಚ್ಚಳಿಕೆಯನ್ನು ಬರೆದುಕೊಡದಿದ್ದರೆ, ಅಥವಾ ಅಂಥ ಮುಚ್ಚಳಿಕೆ ಬರೆದುಕೊಟ್ಟು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅದಕ್ಕೆ ಸಂಬಂಧಿಸಿದ ಕಾಮಗಾರಿಯನ್ನು ಕಾರ್ಯಗತಗೊಳಿಸದೇ ಹೋದರೆ, ಅಥವಾ ಮುಚ್ಚಳಿಕೆಯಲ್ಲಿನ ನಿಬಂಧನೆಗಳನ್ನು ಉಲ್ಲಂಘಿಸಿ ಕಟ್ಟಡವನ್ನು ಯಾವುದೇ ಸಮಯದಲ್ಲಿ ಉಪಯೋಗಿಸಿದ್ದರೆ, ಸಕ್ಷಮ ಪ್ರಾಧಿಕಾರಿಯು, ಕಟ್ಟಡವನ್ನು ಕೂಡಲೇ ನೆಲಸಮಗೊಳಿಸುವ ಆದೇಶವನ್ನು ಮಾಡಿ, ಅದರಲ್ಲಿ, ಆದೇಶದ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಕಡಿಮೆ ಇಲ್ಲದಂತೆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಕಟ್ಟಡವನ್ನು ಖಾಲಿ ಮಾಡತಕ್ಕದ್ದು ಮತ್ತು ಅದನ್ನು ಅವಧಿ ಮುಗಿದ ತರುವಾಯ ಆರು ವಾರಗಳೊಳಗಾಗಿ ನೆಲಸಮಗೊಳಿಸತಕ್ಕದ್ದು ಎಂದು ಅಗತ್ಯಪಡಿಸತಕ್ಕದ್ದು.

**8. ನೆಲಸಮಗೊಳಿಸಲು ಆದೇಶ ಮಾಡಿದಾಗ ಅನುಸರಿಸಬೇಕಾದ ಪ್ರಕ್ರಿಯೆ.–** (1) 7ನೇ ಪ್ರಕರಣದ ಮೇರೆಗೆ ಕಟ್ಟಡವನ್ನು ನೆಲಸಮಗೊಳಿಸುವುದಕ್ಕಾಗಿ ಆದೇಶವನ್ನು ಮಾಡಿದಾಗ, ಕಟ್ಟಡದ ಮಾಲೀಕನು ಅಥವಾ ಅದರಲ್ಲಿ ಆಸಕ್ತಿಯನ್ನು ಹೊಂದಿರುವ ಯಾರೇ ಇತರ ವ್ಯಕ್ತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ಕಟ್ಟಡವನ್ನು ನೆಲಸಮಗೊಳಿಸತಕ್ಕದ್ದು; ಮತ್ತು ಆ ಕಾಲದೊಳಗಾಗಿ ಕಟ್ಟಡವನ್ನು ನೆಲಸಮಗೊಳಿಸದಿದ್ದರೆ, ಸಕ್ಷಮ ಪ್ರಾಧಿಕಾರಿಯು ಕಟ್ಟಡವನ್ನು ಪ್ರವೇಶಿಸತಕ್ಕದ್ದು ಮತ್ತು ಅದನ್ನು ನೆಲಸಮಗೊಳಿಸತಕ್ಕದ್ದು ಮತ್ತು ಅದರ ವಸ್ತುಗಳನ್ನು ಮಾರಾಟ ಮಾಡತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುವೇ ವೆಚ್ಚಗಳಿಗೆ ಕಟ್ಟಡದ ವಸ್ತುಗಳ ಮಾರಾಟದಿಂದ ಬಂದ ಹಣವು ಸರಿಸಮವಾಗದಿದ್ದರೆ ಅದನ್ನು ಕಟ್ಟಡದ ಮಾಲೀಕನಿಂದ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರ ವ್ಯಕ್ತಿಯಿಂದ ಭೂ–ಕಂದಾಯದ ಬಾಕಿಗಳಂತೆ ವಸೂಲಿ ಮಾಡತಕ್ಕದ್ದು.

## ಅಧ್ಯಾಯ IV

## ಕೊಳೆಗೇರಿ ತೆರವುಗೊಳಿಸುವುದು ಮತ್ತು ಪುನರ್ ಅಭಿವೃದ್ಧಿ

**9. ಯಾವುದೇ ಕೊಳೆಗೇರಿಯನ್ನು ತೆರವುಗೊಳಿಸಬೇಕಾದ ಪ್ರದೇಶವೆಂಬುದಾಗಿ ಘೋಷಿಸಲು ಅಧಿಕಾರ.–** (1) ಸಕ್ಷಮ ಪ್ರಾಧಿಕಾರಿಯು ಯಾವುದೇ ಕೊಳೆಗೇರಿಯ ಸಂಬಂಧದಲ್ಲಿ ತನ್ನ ಯಾರೇ ಅಧಿಕಾರಿಗಳಿಂದ ಬಂದ ವರದಿಯ ಮೇಲೆ ಅಥವಾ ತನ್ನ ಬಳಿ ಇರುವ ಇತರ ಮಾಹಿತಿಯ ಆಧಾರದ ಮೇಲೆ ಆ ಪ್ರದೇಶದಲ್ಲಿನ ಸ್ಥಿತಿಗತಿಗಳೊಂದಿಗೆ ವ್ಯವಹರಿಸುವ ಅತ್ಯಂತ ತೃಪ್ತಿಕರ ವಿಧಾನವೆಂದರೆ ಆ ಪ್ರದೇಶದಲ್ಲಿರುವ ಎಲ್ಲ ಕಟ್ಟಡಗಳನ್ನು ನೆಲಸಮಗೊಳಿಸುವುದು ಎಂದು ಮನದಟ್ಟು ಮಾಡಿಕೊಂಡರೆ, ಆ ಪ್ರಾಧಿಕಾರಿಯು ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ ಆ ಪ್ರದೇಶವನ್ನು ತೆರವುಗೊಳಿಸಬೇಕಾದ ಪ್ರದೇಶ ಎಂದರೆ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಆ ಪ್ರದೇಶದಲ್ಲಿನ ಎಲ್ಲಾ ಕಟ್ಟಡಗಳನ್ನು ತೆರವುಗೊಳಿಸಬೇಕಾದ ಪ್ರದೇಶವೆಂಬುದಾಗಿ ಘೋಷಿಸತಕ್ಕದ್ದು:

ಪರಂತು, ಮಾನವ ವಾಸಕ್ಕೆ ಯೋಗ್ಯವಾಗಿರುವ ಅಥವಾ ಆರೋಗ್ಯಕ್ಕೆ ಅಪಾಯಕಾರಿಯಲ್ಲದ ಅಥವಾ ಹಾನಿಕಾರಕವಲ್ಲದ ಆ ಪ್ರದೇಶದಲ್ಲಿನ ಯಾವುದೇ ಕಟ್ಟಡವನ್ನು ಘೋಷಣೆಯಿಂದ ಹೊರತುಪಡಿಸುವುದು ಅವಶ್ಯವೆಂದು ಪ್ರಾಧಿಕಾರಿಯು ಪರಿಗಣಿಸಿದರೆ ಅದನ್ನು ಘೋಷಣೆಯಿಂದ ಹೊರತುಪಡಿಸಬಹುದು.

(2) ಸಕ್ಷಮ ಪ್ರಾಧಿಕಾರವು, ಈ ಪ್ರಕರಣದ ಮೇರೆಗಿನ ಘೋಷಣೆಯ ಒಂದು ಪ್ರತಿಯನ್ನು, ವಿವರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ತೆರವುಗೊಳಿಸಬೇಕಾದ ಪ್ರದೇಶದಲ್ಲಿರುವ ಕಟ್ಟಡಗಳ ಅಧಿಭೋಗದಲ್ಲಿದ್ದ ಜನರ ಸಂಖ್ಯೆಯ ವಿವರಪಟ್ಟಿಯ ಜೊತೆಗೆ ಅಡಳಿತಗಾರನಿಗೆ ಕೂಡಲೇ ಕಳುಹಿಸತಕ್ಕದ್ದು.

**10. ಕೊಳೆಗೇರಿ ತೆರವು ಆದೇಶ.–** (1) ಸಕ್ಷಮ ಪ್ರಾಧಿಕಾರಿಯು ಯಾವುದೇ ಕೊಳೆಗೇರಿಯನ್ನು ತೆರವುಗೊಳಿಸಬೇಕಾದ ಪ್ರದೇಶವೆಂದು ಘೋಷಿಸಿದ ತರುವಾಯ, ಆದಷ್ಟು ಬೇಗನೆ, ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಅದರಲ್ಲಿ ನಿರ್ದಿಷ್ಟಪಡಿಸಲಾದ ಪ್ರತಿಯೊಂದು ಕಟ್ಟಡವನ್ನು ನೆಲಸಮಗೊಳಿಸಲು ಆದೇಶಿಸುವ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅಂಥ ಪ್ರತಿಯೊಂದು ಕಟ್ಟಡವನ್ನು ಖಾಲಿ ಮಾಡಬೇಕೆಂದು ಅಗತ್ಯಪಡಿಸುವ ಕೊಳೆಗೇರಿ ತೆರವು ಆದೇಶವನ್ನು ಅದು ಮಾಡತಕ್ಕದ್ದು ಮತ್ತು ಆದೇಶವನ್ನು ಸ್ಥಿರೀಕರಿಸಲು ಆಡಳಿತಗಾರನಿಗೆ ಸಲ್ಲಿಸತಕ್ಕದ್ದು.

(2) ಆಡಳಿತಗಾರನು ಆದೇಶವನ್ನು ಅದು ಇರುವಂತೆಯೇ ಅಥವಾ ತಾನು ಅಗತ್ಯವೆಂದು ಪರಿಗಣಿಸುವಂತಹ ಬದಲಾವಣೆಗಳಿಗೊಳಪಟ್ಟು ಸ್ಥಿರೀಕರಿಸಬಹುದು ಇಲ್ಲವೇ ಆದೇಶವನ್ನು ತಿರಸ್ಕರಿಸಬಹುದು.

(3) ಆಡಳಿತಗಾರನು ಆದೇಶವನ್ನು ಸ್ಥಿರೀಕರಿಸಿದರೆ, ಆದೇಶವು ಹಾಗೆ ಸ್ಥಿರೀಕರಣಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) ಕೊಳೆಗೇರಿ ತೆರವುಗೊಳಿಸುವ ಆದೇಶವು ಜಾರಿಗೆ ಬಂದಾಗ, ಆದೇಶ ಅನ್ವಯವಾಗುವ ಕಟ್ಟಡದ ಮಾಲೀಕರು, ಆದೇಶದ ಮೂಲಕ ಆ ಕಟ್ಟಡಗಳನ್ನು ಖಾಲಿ ಮಾಡಬೇಕೆಂದು ಅಗತ್ಯಪಡಿಸಲಾದ ದಿನಾಂಕದಿಂದ ಆರು ವಾರಗಳು ಮುಕ್ತಾಯವಾಗುವುದಕ್ಕೂ ಮುಂಚೆ ಅಥವಾ ಸಕ್ಷಮ ಪ್ರಾಧಿಕಾರವು ಯುಕ್ತವೆಂದು ಭಾವಿಸಬಹುದಾದಂಥ ಸನ್ನಿವೇಶಗಳಲ್ಲಿ ಅಂಥ ದೀರ್ಘಾವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಕಟ್ಟಡಗಳನ್ನು ನೆಲಸಮಗೊಳಿಸತಕ್ಕದ್ದು.

(5) (4)ನೇ ಉಪ–ಪ್ರಕರಣದಲ್ಲಿ ನಮೂದಿಸಲಾದ ಅವಧಿಯು ಮುಕ್ತಾಯವಾಗುವುದಕ್ಕೂ ಮುಂಚೆ ಕಟ್ಟಡಗಳನ್ನು ನೆಲಸಮಗೊಳಿಸದಿದ್ದರೆ, ಸಕ್ಷಮ ಪ್ರಾಧಿಕಾರಿಯು ಕಟ್ಟಡಗಳನ್ನು ಪ್ರವೇಶಿಸತಕ್ಕದ್ದು ಮತ್ತು ಅವುಗಳನ್ನು ನೆಲಸಮಗೊಳಿಸತಕ್ಕದ್ದು ಮತ್ತು ಅವುಗಳ ವಸ್ತುಗಳನ್ನು ಮಾರಾಟ ಮಾಡತಕ್ಕದ್ದು.

(6) ಯಾವುದೇ ಕಟ್ಟಡವನ್ನು ನೆಲಸಮಗೊಳಿಸುವಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುವೇ ವೆಚ್ಚಗಳಿಗೆ ಅದರ ವಸ್ತುಗಳ ಮಾರಾಟದಿಂದ ಬಂದ ಹಣವು ಸರಿಸಮವಾಗದಿದ್ದಲ್ಲಿ ಸಕ್ಷಮ ಪ್ರಾಧಿಕಾರವು ಭೂ–ಕಂದಾಯದ ಬಾಕಿ ಎಂಬಂತೆ ಅದನ್ನು ವಸೂಲಿ ಮಾಡತಕ್ಕದ್ದು.

(7) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೊಳೆಗೇರಿ ತೆರವು ಆದೇಶವು ಜಾರಿಯಲ್ಲಿರುವಲ್ಲಿ, ಆದೇಶವು ಅನ್ವಯಿಸುವ ಭೂಮಾಲೀಕನು ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ನಕ್ಷೆಗಳಿಗನುಸಾರವಾಗಿ ಮತ್ತು ಆ ಪ್ರಾಧಿಕಾರವು ವಿಧಿಸಲು ಯೋಗ್ಯವೆಂದು ಭಾವಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು (ಯಾವ ಕಾಲದೊಳಗೆ ಪುನರ್ ಅಭಿವೃದ್ಧಿಯನ್ನು ಪೂರ್ಣಗೊಳಿಸತಕ್ಕದ್ದೋ ಆ ಕಾಲಕ್ಕೆ ಸಂಬಂಧಿಸಿದ ಷರತ್ತೂ ಒಳಗೊಂಡಂತೆ) ಭೂಮಿಯನ್ನು ಬಳಕೆ ಯೋಗ್ಯಗೊಳಿಸಬಹುದು:

ಪರಂತು, ಮಾಲೀಕನು ತನ್ನ ಭೂಮಿಯನ್ನು ಉಪಯೋಗಿಸುವವನ ಮೇಲೆ ಹಾಗೆ ವಿಧಿಸಿದ ನಿರ್ಬಂಧ ಅಥವಾ ಷರತ್ತಿನಿಂದ ಅಥವಾ ಯಾವುದೇ ಅಂಥ ನಿರ್ಬಂಧ ಅಥವಾ ಷರತ್ತನ್ನು ರದ್ದುಗೊಳಿಸಲು ಅಥವಾ ಮಾರ್ಪಾಟುಗೊಳಿಸಲು ಸಕ್ಷಮ ಪ್ರಾಧಿಕಾರಿಯ ತರುವಾಯದ ನಿರಾಕರಣೆಯಿಂದ ಬಾಧಿತನಾದ ಮಾಲೀಕನು ನಿಯಮಿಸಬಹುದಾದಂಥ ಕಾಲದೊಳಗೆ ಆಡಳಿತಗಾರನಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಆಡಳಿತಗಾರನು ಆ ವಿಷಯದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡತಕ್ಕದ್ದು ಮತ್ತು ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(8) (7)ನೇ ಉಪ–ಪ್ರಕರಣದ ಮೇರೆಗೆ ಅನುಮೋದಿಸಿದ ನಕ್ಷೆಯನ್ನು ಅಥವಾ ವಿಧಿಸಿದ ನಿರ್ಬಂಧ ಅಥವಾ ಷರತ್ತನ್ನು ಉಲ್ಲಂಘಿಸಿ, ಯಾರೇ ವ್ಯಕ್ತಿಯು ಯಾವುದೇ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ಪ್ರಾರಂಭಿಸುವಂತೆ ಮಾಡತಕ್ಕದ್ದಲ್ಲ.

**11. ತೆರವುಗೊಂಡ ಪ್ರದೇಶವನ್ನು ಬಳಕೆ ಯೋಗ್ಯಗೊಳಿಸಲು ಸಕ್ಷಮ ಪ್ರಾಧಿಕಾರದ ಅಧಿಕಾರ.–** (1) 10ನೇ ಪ್ರಕರಣದ (7)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಕ್ಷಮ ಪ್ರಾಧಿಕಾರಿಯು, ಕೊಳೆಗೇರಿ ತೆರವು ಆದೇಶದ ಅನುಸಾರವಾಗಿ ಕಟ್ಟಡಗಳನ್ನು ತೆರವುಗೊಳಿಸಿದ ತರುವಾಯ, ಯಾವುದೇ ಕಾಲದಲ್ಲಿ, ಆದರೆ ಮಾಲೀಕನು ಭೂಮಿಯ ಪುನರ್ ಅಭಿವೃದ್ಧಿಯ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಆ ಪ್ರಾಧಿಕಾರಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಆ ಭೂಮಿಯನ್ನು ಬಳಕೆ ಯೋಗ್ಯಗೊಳಿಸುವುದನ್ನು ನಿರ್ಧರಿಸುವುದು ಅವಶ್ಯಕವಾಗಿದೆಯೆಂದು ಮನದಟ್ಟಾದರೆ ಆದೇಶದ ಮೂಲಕ ಹಾಗೆ ನಿರ್ಧರಿಸಬಹುದು.

(2) ಕೊಳೆಗೇರಿ ತೆರವು ಆದೇಶದ ಅನುಸಾರವಾಗಿ ಆ ಭೂಮಿಯಲ್ಲಿನ ಕಟ್ಟಡಗಳನ್ನು ತೆರವುಗೊಳಿಸಿರುವಲ್ಲಿ, ಪ್ರಾಧಿಕಾರವು ಅನುಮೋದಿಸಿದ ನಕ್ಷೆಯನ್ನು ಅಥವಾ 10ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ವಿಧಿಸಿದ ಯಾವುವೇ ನಿರ್ಬಂಧಗಳನ್ನು ಅಥವಾ ಷರತ್ತುಗಳನ್ನು ಉಲ್ಲಂಘಿಸಿ ಅದರ ಮಾಲೀಕನು ಭೂಮಿಯನ್ನು ಬಳಕೆಯೋಗ್ಯಗೊಳಿಸಿದ್ದಾನೆಂದು ಅಥವಾ ಪಡಿಸುತ್ತಿರುವನೆಂದು, ಅಥವಾ ಅಂಥ ಷರತ್ತುಗಳ ಮೇರೆಗೆ ನಿರ್ದಿಷ್ಟಪಡಿಸಿದ ಕಾಲ ಯಾವುದಾದರೂ ಇದ್ದರೆ ಆ ಕಾಲದೊಳಗೆ ಬಳಕೆ ಯೋಗ್ಯಗೊಳಿಸಿಲ್ಲವೆಂದು ಸಕ್ಷಮ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಆದೇಶದ ಮೂಲಕ ಆ ಭೂಮಿಯನ್ನು ಬಳಕೆ ಯೋಗ್ಯಗೊಳಿಸಲು ನಿರ್ಧರಿಸಬಹುದು:

ಪರಂತು, ಅಂಥ ಆದೇಶವನ್ನು ಹೊರಡಿಸುವ ಮೊದಲು, ಅಂಥ ಆದೇಶವನ್ನು ಏಕೆ ಹೊರಡಿಸಬಾರದು ಎಂಬ ಬಗ್ಗೆ ಕಾರಣ ತಿಳಿಸಲು ಮಾಲೀಕನಿಗೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

## ಅಧ್ಯಾಯ V

## ಭೂ ಸ್ವಾಧೀನ

**12. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ಸರ್ಕಾರದ ಅಧಿಕಾರ.–** ಸಕ್ಷಮ ಪ್ರಾಧಿಕಾರದಿಂದ ಯಾವುದೇ ಮನವಿ ಬಂದ ಮೇಲೆ, ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದ ಸಂಬಂಧದಲ್ಲಿ ಯಾವುದೇ ಸುಧಾರಣಾ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಥವಾ ಯಾವುದೇ ತೆರವು ಪ್ರದೇಶವನ್ನು ಬಳಕೆಯೋಗ್ಯಗೊಳಿಸಲು ಯಾವುದೇ ಅಂಥ ಪ್ರದೇಶದೊಳಗಿನ, ಅದಕ್ಕೆ ಹೊಂದಿಕೊಂಡಿರುವ ಅಥವಾ ಅದರ ಸುತ್ತಮುತ್ತಲಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ, ಕೇಂದ್ರ ಸರ್ಕಾರವು ಈ ಪ್ರಕರಣದ ಅನುಸಾರವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿದೆ ಎಂಬ ಬಗ್ಗೆ ಒಂದು ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು:

ಪರಂತು, ಅಂಥ ನೋಟೀಸನ್ನು ಪ್ರಕಟಿಸುವ ಮೊದಲು ಕೇಂದ್ರ ಸರ್ಕಾರವು, ಅಂಥ ಭೂಮಿಯ ಮಾಲೀಕನನ್ನು ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರಬಹುದಾದ ಯಾರೇ ಇತರೆ ವ್ಯಕ್ತಿಯನ್ನು ಅದನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದು ಎಂಬ ಬಗ್ಗೆ ಕಾರಣ ತೋರಿಸುವಂತೆ ಕೇಳಬಹುದು, ಮತ್ತು ಭೂಮಿಯ ಮಾಲೀಕನು ಅಥವಾ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರೆ ವ್ಯಕಿಯು ತೋರಿಸಿದ ಕಾರಣ ಯಾವುದಾದರೂ ಇದ್ದರೆ, ಅದನ್ನು ಪರಿಗಣಿಸಿದ ತರುವಾಯ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

(2) ಮೇಲೆ ಹೇಳಲಾದಂತೆ, ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸಿದಾಗ, ಆ ನೋಟೀಸನ್ನು ಹಾಗೆ ಪ್ರಕಟಿಸಿದ ದಿನಾಂಕದಂದು ಮತ್ತು ಅಂದಿನಿಂದ ಆ ಭೂಮಿಯು ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ಸಂಪೂರ್ಣವಾಗಿ ನಿಹಿತವಾಗತಕ್ಕದ್ದು.

**13. ಕೇಂದ್ರ ಸರ್ಕಾರವು ಸ್ವಾಧೀನಪಡಿಸಿಕೊಂಡ ಭೂಮಿಯು ಸಕ್ಷಮ ಪ್ರಾಧಿಕಾರಕ್ಕೆ ಲಭ್ಯವಾಗುವಂತೆ ಮಾಡುವುದು.–** ಕೊಳೆಗೇರಿಯಲ್ಲಿನ ಅಥವಾ ತೆರವು ಪ್ರದೇಶದಲ್ಲಿನ ಯಾವುದೇ ಭೂಮಿಯನ್ನು, ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡಿರುವಲ್ಲಿ, ಕೇಂದ್ರ ಸರ್ಕಾರವು, ಯಾವುದೇ ಸುಧಾರಣಾ ಕಾಮಗಾರಿಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ಅಥವಾ ನೆಲಸಮಗೊಳಿಸುವ ಯಾವುದೇ ಆದೇಶವನ್ನು ಪಾಲಿಸುವುದಕ್ಕಾಗಿ ಅಥವಾ ಪುನರ್‌ಅಭಿವೃದ್ಧಿಗೊಳಿಸುವ ಉದ್ದೇಶಕ್ಕಾಗಿ ಆ ಭೂಮಿಯು ಸಕ್ಷಮ ಪ್ರಾಧಿಕಾರಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು:

ಪರಂತು, ಸಕ್ಷಮ ಪ್ರಾಧಿಕಾರದಿಂದ ಯಾವುದೇ ಮನವಿ ಬಂದ ಮೇಲೆ, ಕೇಂದ್ರ ಸರ್ಕಾರಕ್ಕೆ ಯಾವುದೇ ಅಂಥ ಭೂಮಿಯು ಅಥವಾ ಅದರ ಯಾವುದೇ ಭಾಗವು ಈ ಪ್ರಕರಣದಲ್ಲಿ ನಮೂದಿಸಲಾದ ಉದ್ದೇಶಗಳಿಗೆ ಸೂಕ್ತವಲ್ಲವೆಂದು ಮನದಟ್ಟಾದರೆ, ಕೇಂದ್ರ ಸರ್ಕಾರವು ಭೂಮಿಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಸಾರ್ವಜನಿಕ ಉದ್ದೇಶಕ್ಕಾಗಿ ಅಥವಾ ಉದ್ದೇಶಗಳಿಗಾಗಿ ಉಪಯೋಗಿಸಬಹುದು ಅಥವಾ ಉಪಯೋಗಿಸಲು ಅನುಮತಿಸಬಹುದು.

**14. ಪರಿಹಾರವನ್ನು ಸ್ವೀಕರಿಸುವ ಹಕ್ಕು.–** ಈ ಅಧಿನಿಯಮದ ಮೇರೆಗೆ ಸ್ವಾಧೀನ ಪಡಿಸಿಕೊಂಡ ಯಾವುದೇ ಭೂಮಿಯಲ್ಲಿನ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ಈ ಅಧಿನಿಯಮದಲ್ಲಿ ಈ ಮುಂದೆ ಉಪಬಂಧಿಸಿದಂತೆ ಪರಿಹಾರವನ್ನು ಕೇಂದ್ರ ಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**15. ಪರಿಹಾರವನ್ನು ನಿರ್ಧರಿಸಲು ಆಧಾರಗಳು.–** (1) ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯ ಸಂಬಂಧದಲ್ಲಿ ಪರಿಹಾರವಾಗಿ ಸಂದಾಯ ಮಾಡಬೇಕಾದ ಮೊಬಲಗು, 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಪ್ರಕಟಿಸಿದ ದಿನಾಂಕದ ನಿಕಟಪೂರ್ವದ ಹಿಂದಿನ ನಿರಂತರ ಐದು ವರ್ಷಗಳ ಅವಧಿಯಲ್ಲಿ ಅಂಥ ಭೂಮಿಯಿಂದ ವಾಸ್ತವಿಕವಾಗಿ ಉತ್ಪತ್ತಿಯಾದ ನಿವ್ವಳ ಸರಾಸರಿ ಮಾಸಿಕ ಆದಾಯದ ಅರವತ್ತರಷ್ಟಕ್ಕೆ ಸಮನಾದ ಮೊಬಲಗು ಆಗಿರತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ಅನುಸೂಚಿಯಲ್ಲಿ ನಿರೂಪಿಸಲಾದ ರೀತಿಯಲ್ಲಿ ಮತ್ತು ಸೂತ್ರಗಳಿಗನುಸಾರವಾಗಿ ಲೆಕ್ಕಹಾಕತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು, ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ, (2)ನೇ ಉಪ–ಪ್ರಕರಣದ ಉಪಬಂಧಗಳ ಅನುಸಾರವಾಗಿ ಭೂಮಿಯಿಂದ ವಾಸ್ತವಿಕವಾಗಿ ಉತ್ಪತ್ತಿಯಾದ ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ನಿರ್ಧರಿಸತಕ್ಕದ್ದು ಮತ್ತು ಹಾಗೆ ನಿರ್ಧರಿಸಿದ ಮೊಬಲಗನ್ನು ನಿರ್ದಿಷ್ಟಪಡಿಸಿ ರಾಜಪತ್ರದಲ್ಲಿ ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಭೂ–ಮಾಲೀಕನು ಮತ್ತು ಅದರಲ್ಲಿ ಹಿತಾಸಕ್ತಿಯುಳ್ಳ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ನಿರ್ಧರಿಸಿದ ಮೊತ್ತಕ್ಕೆ ಒಪ್ಪಿದ್ದಾನೆಯೇ ಮತ್ತು ಅವನು ಹಾಗೆ ಒಪ್ಪಿಲ್ಲದಿದ್ದರೆ, ಭೂಮಿಯಿಂದ ವಾಸ್ತವಿಕವಾಗಿ ಉತ್ಪತ್ತಿಯಾದ ನಿವ್ವಳ ಸರಾಸರಿ ಮಾಸಿಕ ಆದಾಯದ ಮೊಬಲಗು ಎಷ್ಟು ಎಂದು ಅವನು ಕ್ಲೇಮು ಮಾಡುತ್ತಾನೆ ಎಂಬುದನ್ನು ತಿಳಿಸಬೇಕೆಂದು ಕೇಳತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ನಿರ್ಧರಿಸಿದ ನಿವ್ವಳ ಸರಾಸರಿ ಮಾಸಿಕ ಆದಾಯದ ಮೊಬಲಗಿಗೆ ಒಪ್ಪದಿರುವ ಮತ್ತು ಆ ಮೊಬಲಗಿಗಿಂತ ಹೆಚ್ಚಿನ ಮೊಬಲಗನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಆ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಡಳಿತಗಾರನಿಗೆ ಅಪೀಲನ್ನು ಸಲ್ಲಿಸಬಹುದು.

(5) ಆಡಳಿತಗಾರನು ಅಪೀಲನ್ನು ಸ್ವೀಕರಿಸಿದ ಮೇಲೆ ಅಪೀಲುದಾರನನ್ನು ವಿಚಾರಣೆ ಮಾಡಿದ ತರುವಾಯ, ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ನಿರ್ಧರಿಸತಕ್ಕದ್ದು, ಮತ್ತು ಅವನ ನಿರ್ಧಾರವೇ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(6) ಯಾವ ಭೂಮಿಗೆ ಸಂಬಂಧಪಟ್ಟಂತೆ ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ನಿರ್ಧರಿಸಲಾಗಿದೆಯೋ ಆ ಭೂಮಿಯ ಮೇಲೆ ಯಾವುದೇ ಕಟ್ಟಡವಿರುವಲ್ಲಿ ಅಂಥ ಕಟ್ಟಡದ ಸಂಬಂಧದಲ್ಲಿ ಪ್ರತ್ಯೇಕ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ:

ಪರಂತು, ಭೂ–ಮಾಲೀಕನು ಮತ್ತು ಅಂಥ ಭೂಮಿಯ ಮೇಲಿನ ಕಟ್ಟಡದ ಮಾಲೀಕನು ಬೇರೆ ಬೇರೆಯವರಾಗಿದ್ದರೆ, ಸಕ್ಷಮ ಪ್ರಾಧಿಕಾರವು ಪರಿಹಾರದ ಮೊಬಲಗನ್ನು ಭೂ–ಮಾಲೀಕನ ಮತ್ತು ಕಟ್ಟಡದ ಮಾಲೀಕನ ನಡುವೆ, ಸ್ವಾಧೀನಪಡಿಸಿಕೊಂಡ ದಿನಾಂಕದಂದು ಭೂಮಿಯ ಮಾರುಕಟ್ಟೆ ಬೆಲೆಯು ಕಟ್ಟಡದ ಮಾರುಕಟ್ಟೆಯ ಬೆಲೆಯಷ್ಟೇ ಇದ್ದರೆ ಅದೇ ಪ್ರಮಾಣಕ್ಕನುಸಾರವಾಗಿ ಭಾಗ ಮಾಡಿ ಹಂಚತಕ್ಕದ್ದು.

**16. ಪರಿಹಾರವನ್ನು ಭಾಗ ಮಾಡಿ ಹಂಚುವುದು.**–(1) 15ನೇ ಪ್ರಕರಣದ ಮೇರೆಗೆ ನಿರ್ಧರಿಸಿದ ಪರಿಹಾರದ ಮೊಬಲಗಿನಲ್ಲಿ ಹಿತಾಸಕ್ತಿ ಹೊಂದಿರುವುದಾಗಿ ಅನೇಕ ವ್ಯಕ್ತಿಗಳು ಕ್ಲೇಮು ಮಾಡಿದಾಗ, ಸಕ್ಷಮ ಪ್ರಾಧಿಕಾರವು, ತನ್ನ ಅಭಿಪ್ರಾಯದಲ್ಲಿ ಪರಿಹಾರವನ್ನು ಸ್ವೀಕರಿಸಲು ಯಾರು ಹಕ್ಕುಳ್ಳವರಾಗಿದ್ದಾರೆ ಮತ್ತು ಅವರಲ್ಲಿ ಪ್ರತಿಯೊಬ್ಬರಿಗೂ ಸಂದಾಯ ಮಾಡಬೇಕಾದ ಮೊಬಲಗು ಎಷ್ಟು ಎಂಬುದನ್ನು ನಿರ್ಧರಿಸತಕ್ಕದ್ದು.

(2) ಪರಿಹಾರವನ್ನು ಅಥವಾ ಅದರ ಯಾವುದೇ ಭಾಗವನ್ನು ಭಾಗ ಮಾಡಿ ಹಂಚುವುದರ ಬಗ್ಗೆ ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ವ್ಯಕ್ತಿಗಳಿಗೆ ಸಂದಾಯ ಮಾಡಬೇಕೆಂಬುದರ ಬಗ್ಗೆ ಯಾವುದೇ ವಿವಾದ ಉಂಟಾದರೆ, ಸಕ್ಷಮ ಪ್ರಾಧಿಕಾರವು ಅಂಥ ವಿವಾದವನ್ನು ಆಡಳಿತಗಾರನ ತೀರ್ಮಾನಕ್ಕೆ ಕಳುಹಿಸತಕ್ಕದ್ದು; ಮತ್ತು ಆಡಳಿತಗಾರನು ಯಾವುದೇ ಅಂಥ ವಿವಾದವನ್ನು ತೀರ್ಮಾನಿಸುವಾಗ, ಸಾಧ್ಯವಾಗಬಹುದಾದಷ್ಟರಮಟ್ಟಿಗೆ, ಭೂ ಸ್ವಾಧೀನ ಅಧಿನಿಯಮ, 1894 (1894ರ 1) ಭಾಗ–IIIರ ಉಪಬಂಧಗಳನ್ನು ಅನುಸರಿಸತಕ್ಕದ್ದು.

**17. ಪರಿಹಾರದ ಸಂದಾಯ ಅಥವಾ ಅದನ್ನು ನ್ಯಾಯಾಲಯದಲ್ಲಿ ಠೇವಣಿ ಇಡುವುದು.**– (1) ಪರಿಹಾರದ ಮೊಬಲಗನ್ನು ನಿರ್ಧರಿಸಿದ ತರುವಾಯ, ಸಕ್ಷಮ ಪ್ರಾಧಿಕಾರವು ಕೇಂದ್ರ ಸರ್ಕಾರದ ಪರವಾಗಿ ಪರಿಹಾರದ ಹಣವನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಗಳಿಗೆ ಕೊಡಲು ಸಿದ್ಧವಿರತಕ್ಕದ್ದು ಮತ್ತು ಸಂದಾಯಮಾಡತಕ್ಕದ್ದು.

(2) ಪರಿಹಾರಕ್ಕೆ ಹಕ್ಕುಳ್ಳ ವ್ಯಕ್ತಿಗಳು ಅದನ್ನು ಸ್ವೀಕರಿಸಲು ಸಮ್ಮತಿಸದಿದ್ದರೆ, ಅಥವಾ ಪರಿಹಾರವನ್ನು ಸ್ವೀಕರಿಸುವ ಹಕ್ಕಿನ ಬಗ್ಗೆ ಅಥವಾ ಅದರ ಯಾವುದೇ ಭಾಗವನ್ನು ಹಂಚುವುದರ ಬಗ್ಗೆ ಯಾವುದೇ ವಿವಾದ ಇದ್ದರೆ, ಸಕ್ಷಮ ಪ್ರಾಧಿಕಾರಿಯು ಆ ಪರಿಹಾರದ ಮೊಬಲಗನ್ನು ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಠೇವಣಿ ಇಡತಕ್ಕದ್ದು ಮತ್ತು ನ್ಯಾಯಾಲಯವು ಭೂ ಸ್ವಾಧೀನ ಅಧಿನಿಯಮ, 1894 (1894ರ 1)ರ 32ನೇ ಮತ್ತು 33ನೇ ಪ್ರಕರಣಗಳಲ್ಲಿ ವಿಧಿಸಿದ ರೀತಿಯಲ್ಲಿ ಹಾಗೆ ಠೇವಣಿ ಇಡಲಾದ ಹಣದ ಬಗ್ಗೆ ವ್ಯವಹರಿಸತಕ್ಕದ್ದು.

**18. ಪರಿಹಾರ, ಇತ್ಯಾದಿಗಳನ್ನು ನಿರ್ಧರಿಸುವ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರದ ಅಧಿಕಾರಗಳು.**– (1) ಸಕ್ಷಮ ಪ್ರಾಧಿಕಾರವು ಪರಿಹಾರದ ಮೊಬಲಗನ್ನು ಅಥವಾ ಅದರ ಭಾಗವನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ಆದೇಶದ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾರೇ ವ್ಯಕ್ತಿಯನ್ನು ಅವನಲ್ಲಿರುವ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು.

(2) ಸಕ್ಷಮ ಪ್ರಾಧಿಕಾರವು 15ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸುವಾಗ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯನ್ನು ವಿಚಾರಣೆ ನಡೆಸುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವಂತಹ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು. ಎಂದರೆ:–

(ಎ) ಯಾರೇ ವ್ಯಕ್ತಿಗೆ ಸಮನು ಮಾಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಪರೀಕ್ಷೆಗಾಗಿ ಕಮಿಷನುಗಳನ್ನು ಹೊರಡಿಸುವುದು.

## ಅಧ್ಯಾಯ VI

## ಕೊಳೆಗೇರಿಗಳಲ್ಲಿನ ಬಾಡಿಗೆದಾರರನ್ನು ಹೊರಹಾಕುವುದರಿಂದ ರಕ್ಷಣೆ ನೀಡುವುದು

**19. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ಬಾಡಿಗೆದಾರರನ್ನು ಹೊರಹಾಕುವುದಕ್ಕಾಗಿ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಕ್ಷಮ ಪ್ರಾಧಿಕಾರದಿಂದ ಲಿಖಿತದಲ್ಲಿ ಪೂರ್ವಾನುಮತಿಯನ್ನು ಪಡೆಯದ ಹೊರತು, ಯಾರೇ ವ್ಯಕ್ತಿಯು,–

(ಎ) ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ತಿದ್ದುಪಡಿ ಅಧಿನಿಯಮ, 1964ರ (1964ರ 43) ಪ್ರಾರಂಭದ ತರುವಾಯ, ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದಿಂದ ಅಥವಾ ಭೂಮಿಯಿಂದ ಬಾಡಿಗೆದಾರನನ್ನು ಹೊರಹಾಕುವುದಕ್ಕಾಗಿ – ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಪಡೆಯುವುದಕ್ಕಾಗಿ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(ಬಿ) ಅಂಥ ಪ್ರದೇಶದಲ್ಲಿನ ಯಾವುದೇ ಕಟ್ಟಡದಿಂದ ಅಥವಾ ಭೂಮಿಯಿಂದ ಬಾಡಿಗೆದಾರನನ್ನು ಹೊರಹಾಕುವುದಕ್ಕಾಗಿ ಅಧಿನಿಯಮವು ಪ್ರಾರಂಭವಾಗುವುದಕ್ಕೂ ಮೊದಲು ಹೂಡಿದ್ದ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಅಂಥ ಡಿಕ್ರಿಯನ್ನು ಅಥವಾ ಆದೇಶವನ್ನು ಪಡೆದಿದ್ದರೆ, ಅಂಥ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅನುಮತಿಯನ್ನು ಪಡೆಯಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಸಲ್ಲಿಸತಕ್ಕದ್ದು.

(3) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರವು, ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಆ ಪ್ರಕರಣದ ಸಂದರ್ಭಗಳಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಂಕ್ಷಿಪ್ತ ವಿಚಾರಣೆಯನ್ನು ಮಾಡಿದ ತರುವಾಯ, ಅಂಥ ಅನುಮತಿಯನ್ನು ಲಿಖಿತದಲ್ಲಿನ ಆದೇಶದ ಮೂಲಕ ಮಂಜೂರು ಮಾಡತಕ್ಕದ್ದು ಅಥವಾ ಮಂಜೂರು ಮಾಡಲು ನಿರಾಕರಿಸತಕ್ಕದ್ದು.

(4) (3)ನೇ ಉಪ–ಪ್ರಕರಣದ ಮೇರೆಗೆ ಅನುಮತಿಯನ್ನು ಮಂಜೂರು ಮಾಡುವಾಗ ಅಥವಾ ನಿರಾಕರಿಸುವಾಗ, ಸಕ್ಷಮ ಪ್ರಾಧಿಕಾರವು ಈ ಮುಂದಿನ ಅಂಶಗಳನ್ನು, ಎಂದರೆ:–

(ಎ) ಬಾಡಿಗೆದಾರನನ್ನು ಹೊರಹಾಕಿದರೆ, ಅವನ ಸಂಪಾದನೆಯ ಮಿತಿಯೊಳಗೆ ಅವನಿಗೆ ಬದಲಿ ವಸತಿ ದೊರೆಯುತ್ತದೆಯೇ ಎಂಬುದನ್ನು;

(ಬಿ) ಕೊಳೆಗೇರಿಗಳ ಸುಧಾರಣೆ ಮತ್ತು ತೆರವುಗೊಳಿಸುವ ಹಿತದೃಷ್ಟಿಯಿಂದ ಹೊರಹಾಕಲಾಗಿದೆಯೆ ಎಂಬುದನ್ನು;

(ಸಿ) ನಿಯಮಿಸಬಹುದಾದಂಥ ಇತರ ಅಂಶಗಳು, ಯಾವುವಾದರೂ ಇದ್ದರೆ ಆ ಅಂಶಗಳನ್ನು

– ಗಣನೆಗೆ ತೆಗೆದುಕೊಳ್ಳತಕ್ಕದ್ದು.

(5) ಸಕ್ಷಮ ಪ್ರಾಧಿಕಾರವು ಅನುಮತಿ ನೀಡಲು ನಿರಾಕರಿಸಿದಾಗ, ಅಂಥ ನಿರಾಕರಣೆಗೆ ಕಾರಣಗಳ ಒಂದು ಸಂಕ್ಷಿಪ್ತ ವಿವರಣೆಯನ್ನು ದಾಖಲು ಮಾಡತಕ್ಕದ್ದು ಮತ್ತು ಅದರ ಪ್ರತಿಯನ್ನು ಅರ್ಜಿದಾರನಿಗೆ ಒದಗಿಸತಕ್ಕದ್ದು.

**20. ಅಪೀಲುಗಳು.**– 6ಎ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅಥವಾ 19ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುಮತಿಯನ್ನು ನೀಡಲು ನಿರಾಕರಿಸುವ ಸಕ್ಷಮ ಪ್ರಾಧಿಕಾರದ ಆದೇಶದಿಂದ

ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಬಹುದಾದ ಕಾಲದೊಳಗೆ ಆಡಳಿತಗಾರನಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಆಡಳಿತಗಾರನು ಅಪೀಲುದಾರನನ್ನು ವಿಚಾರಣೆ ಮಾಡಿದ ತರುವಾಯ, ಅಂಥ ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**20ಎ. ಬಾಡಿಗೆದಾರನು ಖಾಲಿ ಮಾಡಿದ ಆವರಣದ ಸ್ವಾಧೀನವನ್ನು ಪುನಃ ಪಡೆಯುವುದು.–** (1) ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದ ಅಧಿಭೋಗದಲ್ಲಿರುವ ಬಾಡಿಗೆದಾರನು, ಯಾವುದೇ ಸುಧಾರಣಾ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅಥವಾ ಕಟ್ಟಡವನ್ನು ಪುನರ್‌ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಕಟ್ಟಡವು ಬೇಕಾಗಿದೆ ಎಂಬ ಕಾರಣದ ಮೇಲೆ ಯಾವುದೇ ಕಟ್ಟಡವನ್ನು ಖಾಲಿ ಮಾಡಿದರೆ ಅಥವಾ ಅಲ್ಲಿಂದ ಅವನನ್ನು ಹೊರಹಾಕಿದರೆ, ಬಾಡಿಗೆದಾರನು ನಿಯಮಿಸಬಹುದಾದ ಕಾಲದೊಳಗೆ ಸಂದರ್ಭಾನುಸಾರ, ಸುಧಾರಣಾ ಕಾಮಗಾರಿಯನ್ನು ಪೂರ್ಣಗೊಳಿಸಿದ ತರುವಾಯ ಅಥವಾ ಕಟ್ಟಡವನ್ನು ಪುನರ್‌ನಿರ್ಮಿಸಿದ ತರುವಾಯ, ಅದೇ ಕಟ್ಟಡದ ಅಧಿಭೋಗದಲ್ಲಿರಲು ಬಯಸುತ್ತೇನೆಂದು ಸಕ್ಷಮ ಪ್ರಾಧಿಕಾರಿಗೆ ಘೋಷಣೆಯನ್ನು ಸಲ್ಲಿಸಬಹುದು.

(2) ಅಂಥ ಘೋಷಣೆಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ಕಟ್ಟಡದ ಸುಧಾರಣಾ ಕಾಮಗಾರಿಯ ಅಥವಾ ಪುನರ್ ನಿರ್ಮಾಣ ಕಾಮಗಾರಿಯ ನಕ್ಷೆಗಳನ್ನು ಮತ್ತು ಅದರ ಅಂದಾಜು ವೆಚ್ಚಗಳನ್ನು ಮತ್ತು ಅವಶ್ಯವಾಗಬಹುದಾದಂಥ ಇತರೆ ವಿವರಗಳನ್ನು ಕಟ್ಟಡದ ಮಾಲೀಕನು ತನಗೆ ಒದಗಿಸಬೇಕೆಂದು ಆದೇಶದ ಮೂಲಕ ಅಗತ್ಯಪಡಿಸತಕ್ಕದ್ದು ಮತ್ತು ಒದಗಿಸಿದ ಅಂಥ ನಕ್ಷೆಗಳು ಮತ್ತು ಅಂದಾಜುಗಳು ಮತ್ತು ವಿವರಗಳು, ಯಾವುವಾದರೂ ಇದ್ದರೆ, ಅವುಗಳ ಆಧಾರದ ಮೇಲೆ ಮತ್ತು 20ಬಿ ಪ್ರಕರಣದ (3)ನೇ ಉಪ–ಪ್ರಕರಣದ ಉಪಬಂಧಗಳನ್ನು ಗಮನದಲ್ಲಿರಿಸಿಕೊಂಡು, ಮತ್ತು ಅದು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, (1)ನೇ ಉಪ–ಪ್ರಕರಣದ ಮೇರೆಗೆ ಅವನು ಮಾಡಿದ ಘೋಷಣೆಗೆ ಅನುಸಾರವಾಗಿ ಕಟ್ಟಡದ ಅಧಿಭೋಗವನ್ನು ಅವನಿಗೆ ಪುನಃ ಕೊಟ್ಟಿದ್ದಿದ್ದರೆ, ಅವನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ತಾತ್ಕಾಲಿಕವಾಗಿ ನಿರ್ಧರಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಮೇರೆಗೆ ತಾತ್ಕಾಲಿಕವಾಗಿ ನಿರ್ಧರಿಸಲಾದ ಬಾಡಿಗೆಯನ್ನು ಬಾಡಿಗೆದಾರನಿಗೆ ಮತ್ತು ಮಾಲೀಕನಿಗೆ ನಿಯಮಿಸಿದ ರೀತಿಯಲ್ಲಿ ತಿಳಿಸತಕ್ಕದ್ದು.

(4) ಅಂಥ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಬಾಡಿಗೆದಾರನು (1)ನೇ ಉಪ–ಪ್ರಕರಣದ ಮೇರೆಗೆ ಅವನು ಮಾಡಿದ ಘೋಷಣೆಗೆ ಅನುಸಾರವಾಗಿ, ಕಟ್ಟಡದ ಅಧಿಭೋಗವನ್ನು ಪುನಃ ಪಡೆದಾಗ, ನಿಯಮಿಸಬಹುದಾದ ಕಾಲದೊಳಗೆ ಸಕ್ಷಮ ಪ್ರಾಧಿಕಾರಿಗೆ (2)ನೇ ಉಪ–ಪ್ರಕರಣದ ಮೇರೆಗೆ ನಿರ್ಧರಿಸಲಾದ ತಾತ್ಕಾಲಿಕ ಬಾಡಿಗೆಯನ್ನು 20ಬಿ ಪ್ರಕರಣದ ಮೇರೆಗೆ ಬಾಡಿಗೆಯನ್ನು ಅಂತಿಮವಾಗಿ ನಿರ್ಧರಿಸುವವರೆಗೆ ಮಾಲೀಕನಿಗೆ ಸಂದಾಯ ಮಾಡುವುದಾಗಿ ಲಿಖಿತದಲ್ಲಿ ತಿಳಿಸಿದರೆ, ಆಗ, ಸಕ್ಷಮ ಪ್ರಾಧಿಕಾರಿಯು, ಸಂದರ್ಭಾನುಸಾರ, ಸುಧಾರಣಾ ಕಾಮಗಾರಿಯನ್ನು ಅಥವಾ ಕಟ್ಟಡದ ಪುನರ್ ನಿರ್ಮಾಣವನ್ನು ಪೂರ್ಣಗೊಳಿಸಿದ ತರುವಾಯ, ಕಟ್ಟಡದ ಅಧಿಭೋಗವನ್ನು ಬಾಡಿಗೆದಾರನಿಗೆ ಕೊಡಬೇಕೆಂದು ಮಾಲೀಕನಿಗೆ ನಿರ್ದೇಶಿಸತಕ್ಕದ್ದು ಮತ್ತು ಮಾಲೀಕನು ಅಂಥ ನಿರ್ದೇಶನವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

**20ಬಿ. ಕೊಳೆಗೇರಿಗಳಲ್ಲಿನ ಕಟ್ಟಡಗಳ ಬಾಡಿಗೆ.–** (1) ಕೊಳೆಗೇರಿಯಲ್ಲಿರುವ ಯಾವುದೇ ಕಟ್ಟಡವನ್ನು ಯಾವುದೇ ಸುಧಾರಣಾ ಕಾಮಗಾರಿಯನ್ನು ಕಾರ್ಯಗತಗೊಳಿಸಿದ ತರುವಾಯ ಅಥವಾ ಅದನ್ನು ಪುನರ್‌ನಿರ್ಮಾಣ ಮಾಡಿದ ತರುವಾಯ ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ, ಆ ಕಟ್ಟಡದ ಬಾಡಿಗೆಯನ್ನು ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

(2) ಆ ಯಾವುದೇ ಕಟ್ಟಡವನ್ನು 20ಎ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶನದ ಅನುಸಾರವಾಗಿ, ಕಟ್ಟಡದ ಸ್ವಾಧೀನದಲ್ಲಿದ್ದಂಥ ಬಾಡಿಗೆದಾರನಲ್ಲದ ಬೇರೊಬ್ಬ ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿರುವಲ್ಲಿ, ಆ ಬಾಡಿಗೆದಾರನು ಮಾಲೀಕನಿಗೆ,–

(ಎ) ಕಟ್ಟಡವಿರುವ ಪ್ರದೇಶದಲ್ಲಿ ಮತ್ತು ಆ ಕಟ್ಟಡಕ್ಕೆ ಅನ್ವಯವಾಗುವಂಥ ಬಾಡಿಗೆ ನಿಯಂತ್ರಣಕ್ಕೆ ಸಂಬಂಧಿಸಿದ ಸಾರ್ವತ್ರಿಕ ಕಾನೂನು ಜಾರಿಯಲ್ಲಿದ್ದರೆ, ಆ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದ ಬಾಡಿಗೆಯನ್ನು;

(ಬಿ) ಅಂಥ ಪ್ರದೇಶದಲ್ಲಿ ಅಂಥ ಕಾನೂನು ಜಾರಿಯಲ್ಲಿ ಇಲ್ಲದಿದ್ದರೆ, ಮಾಲೀಕನು ಮತ್ತು ಬಾಡಿಗೆದಾರನು ಪರಸ್ಪರ ಒಪ್ಪಿಕೊಳ್ಳಬಹುದಾದಂಥ ಬಾಡಿಗೆಯನ್ನು

– ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(3) ಆ ಯಾವುದೇ ಕಟ್ಟಡವನ್ನು 20ಎ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶನಕ್ಕೆ ಅನುಸಾರವಾಗಿ ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿರುವಲ್ಲಿ, ಆ ಬಾಡಿಗೆದಾರನು, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಬಾಡಿಗೆ ನಿಯಂತ್ರಣಕ್ಕೆ ಸಂಬಂಧಪಟ್ಟ ಯಾವುದೇ ಕಾನೂನು ಇದ್ದಾಗ್ಯೂ, ಮಾಲೀಕನಿಗೆ,–

(ಎ) ಕಟ್ಟಡದ ಸಂಬಂಧದಲ್ಲಿ ಯಾವುದೇ ಸುಧಾರಣಾ ಕಾಮಗಾರಿಯನ್ನು ಕಾರ್ಯಗತಗೊಳಿಸಿದ್ದರೆ, ಈ ಮುಂದಿನ ಒಟ್ಟು ಮೊಬಲಗುಗಳಿಗೆ ಸಮನಾದ ವಾರ್ಷಿಕ ಬಾಡಿಗೆಯನ್ನು, ಎಂದರೆ:–

(i) ಸುಧಾರಣಾ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅವನು ಕಟ್ಟಡವನ್ನು ತೆರವು ಮಾಡುವುದಕ್ಕೆ ನಿಕಟಪೂರ್ವದಲ್ಲಿ ಬಾಡಿಗೆದಾರನು ಸಂದಾಯ ಮಾಡುತ್ತಿದ್ದ ವಾರ್ಷಿಕ ಬಾಡಿಗೆಯನ್ನು;

(ii) ಸುಧಾರಣಾ ಕಾಮಗಾರಿಯ ವೆಚ್ಚದ ಶೇಕಡಾ ಆರರಷ್ಟನ್ನು; ಮತ್ತು

(iii) ಸುಧಾರಣಾ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕದಂದು 12ನೇ ಪ್ರಕರಣದ ಮೇರೆಗೆ ಆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಿದ್ದರೆ ಹೇಗೋ ಹಾಗೆ, ಅಂಥ ಸುಧಾರಣೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಆ ಯಾವುದೇ ಭೂಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಪರಿಹಾರ ಮೊತ್ತಕ್ಕೆ ಸಮನಾದ ಮೊತ್ತದ ಶೇಕಡಾ ಆರರಷ್ಟನ್ನು;

(ಬಿ) ಕಟ್ಟಡವನ್ನು ಪುನರ್ ನಿರ್ಮಾಣ ಮಾಡಿದ್ದರೆ, ಕಟ್ಟಡದ ಪುನರ್‌ನಿರ್ಮಾಣದ ವೆಚ್ಚವನ್ನು ಮತ್ತು ಕಟ್ಟಡವನ್ನು ಯಾವ ಭೂಮಿಯ ಮೇಲೆ ಪುನರ್‌ನಿರ್ಮಿಸಲಾಗಿದೆಯೋ ಆ ಭೂಮಿಯ ಬೆಲೆಯೂ ಸೇರಿ ಒಟ್ಟಾರೆ ವೆಚ್ಚದ ಶೇಕಡಾ ನಾಲ್ಕಕ್ಕೆ ಸಮನಾದ ವಾರ್ಷಿಕ ಬಾಡಿಗೆಯನ್ನು

– ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

**ವಿವರಣೆ:**– ಈ ಖಂಡದ ಉದ್ದೇಶಗಳಿಗಾಗಿ, ಆ ಭೂಮಿಯ ಬೆಲೆಯನ್ನು ಕಟ್ಟಡದ ಪುನರ್ ನಿರ್ಮಾಣದ ಪ್ರಾರಂಭದ ದಿನಾಂಕದಂದು 12ನೇ ಪ್ರಕರಣದ ಮೇರೆಗೆ ಸ್ವಾಧೀನಪಡಿಸಿಕೊಂಡಿದ್ದಿದ್ದರೆ, ಆ ಭೂಮಿಯ ಸಂಬಂಧದಲ್ಲಿ ಸಂದಾಯಮಾಡಬೇಕಾದ ಪರಿಹಾರಕ್ಕೆ ಸಮನಾದ ಮೊಬಲಗು ಎಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಕಟ್ಟಡದ ಸಂಬಂಧದಲ್ಲಿ ಬಾಡಿಗೆದಾರನು ಸಂದಾಯಮಾಡಬೇಕಾದ ಬಾಡಿಗೆಯನ್ನು, ಬಾಡಿಗೆದಾರನು ಅಥವಾ ಮಾಲೀಕನು ಅರ್ಜಿಯನ್ನು ಸಲ್ಲಿಸಿದಾಗ (5)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಾಧಿಕಾರಿಯು ನಿರ್ಧರಿಸತಕ್ಕದ್ದು:

ಪರಂತು, ಅಂಥ ಬಾಡಿಗೆಯನ್ನು ನಿರ್ಧರಿಸುವುದಕ್ಕಾಗಿ ಮಾಲೀಕನಿಂದ ಅಥವಾ ಬಾಡಿಗೆದಾರನಿಂದ ಬಂದ ಅರ್ಜಿಯನ್ನು, ಸಂದರ್ಭಾನುಸಾರ, ಸುಧಾರಣಾ ಕಾಮಗಾರಿಯನ್ನು ಪೂರ್ಣಗೊಳಿಸಿದ ದಿನಾಂಕದಿಂದ ಅಥವಾ ಕಟ್ಟಡವನ್ನು ಪುನರ್‌ನಿರ್ಮಾಣ ಮಾಡಿದಂದಿನಿಂದ ತೊಂಬತ್ತು ದಿನಗಳು ಮುಕ್ತಾಯವಾದ ನಂತರ ಸಾಕಷ್ಟು ಕಾರಣಗಳಿದ್ದ ಹೊರತು, ಪುರಸ್ಕರಿಸತಕ್ಕದ್ದಲ್ಲ.

(5) (4)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯನ್ನು ಯಾವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದೋ ಆ ಪ್ರಾಧಿಕಾರಿಯು,–

(ಎ) ಸದರಿ ಕಟ್ಟಡವಿರುವ ಪ್ರದೇಶದಲ್ಲಿ ಬಾಡಿಗೆ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಒಂದು ಸಾರ್ವತ್ರಿಕ ಕಾನೂನು ಜಾರಿಯಲ್ಲಿದ್ದಲ್ಲಿ, ಆ ಪ್ರದೇಶದಲ್ಲಿರುವ ಕಟ್ಟಡಗಳಿಗೆ ಬಾಡಿಗೆಗಳನ್ನು ನಿಗದಿಪಡಿಸುವುದಕ್ಕಾಗಿ ಯಾವ ಪ್ರಾಧಿಕಾರಿಗೆ ಅರ್ಜಿಗಳನ್ನು ಸಲ್ಲಿಸಬಹುದೋ ಆ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ

ಬಾಡಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಪ್ರಾಧಿಕಾರಿಯು ಆ ಸಾರ್ವತ್ರಿಕ ಕಾನೂನಿನ ಮೇರೆಗೆ ಹೊಂದಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು; ಮತ್ತು ಅಪೀಲುಗಳಿಗೆ ಸಂಬಂಧಪಟ್ಟ ಉಪಬಂಧಗಳೂ ಸೇರಿದಂತೆ ಅಂಥ ಕಾನೂನಿನ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು;

(ಬಿ) ಆ ಪ್ರದೇಶದಲ್ಲಿ ಅಂಥ ಕಾನೂನು ಜಾರಿಯಲ್ಲಿಲ್ಲದಿದ್ದರೆ, ಕೇಂದ್ರ ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಅಂಥ ನಿಯಮಗಳು ಬಾಡಿಗೆಯನ್ನು ನಿರ್ಧರಿಸುವಾಗ ಆ ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆಗೆ ಮತ್ತು ಅಂಥ ಪ್ರಾಧಿಕಾರದ ತೀರ್ಮಾನದ ವಿರುದ್ಧ ಅಪೀಲುಗಳನ್ನು ಸಲ್ಲಿಸಲು ಉಪಬಂಧಿಸಬಹುದು.

(6) ಈ ಪ್ರಕರಣದ ಮೇರೆಗೆ ಬಾಡಿಗೆಯನ್ನು ಅಂತಿಮವಾಗಿ ನಿರ್ಧರಿಸಿದಲ್ಲಿ, ಆಗ ಬಾಡಿಗೆದಾರನು ಸಂದಾಯ ಮಾಡಿದ ಬಾಡಿಗೆಯ ಮೊಬಲಗನ್ನು ಹಾಗೆ ಅಂತಿಮವಾಗಿ ನಿರ್ಧರಿಸಿದ ಬಾಡಿಗೆಯಲ್ಲಿ ಸರಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ಮೊಬಲಗು ಅಂತಿಮವಾಗಿ ನಿರ್ಧರಿಸಿದ ಬಾಡಿಗೆಗಿಂತ ಕಡಿಮೆಯಾಗಿದ್ದರೆ ಅಥವಾ ಹೆಚ್ಚಾಗಿದ್ದರೆ ಬಾಡಿಗೆದಾರನು ಸಂದರ್ಭಾನುಸಾರ ಆ ಕೊರತೆಯ ಹಣವನ್ನು ಸಂದಾಯ ಮಾಡತಕ್ಕದ್ದು ಅಥವಾ ಮರುಪಾವತಿಗೆ ಹಕ್ಕುಳ್ಳವನಾಗಿರತಕ್ಕದ್ದು.

**21. ಕೆಲವು ಕಟ್ಟಡಗಳಿಂದ ಬಾಡಿಗೆದಾರರನ್ನು ಹೊರಹಾಕುವುದಕ್ಕೆ ಈ ಅಧ್ಯಾಯವು ಅನ್ವಯವಾಗುವುದಿಲ್ಲ.–** ಈ ಅಧ್ಯಾಯದಲ್ಲಿರುವುದು ಯಾವುದೂ, ಸರ್ಕಾರಕ್ಕೆ, ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದಿಂದ ಯಾವುದೇ ಕಾನೂನಿನ ಮೇರೆಗೆ ಬಾಡಿಗೆದಾರನನ್ನು ಹೊರಹಾಕುವುದಕ್ಕೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ VII

### ಸಂಕೀರ್ಣ

**22. ಪ್ರವೇಶಿಸುವ ಅಧಿಕಾರಗಳು.–** ಸಕ್ಷಮ ಪ್ರಾಧಿಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಯಾವುದೇ ವಿಚಾರಣೆ, ತಪಾಸಣೆ, ಅಳತೆ, ಮೌಲ್ಯ ನಿರ್ಣಯ ಅಥವಾ ಮೋಜಣಿ ಮಾಡಲು ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಿದಂಥ ಅಥವಾ ಯಾವುದೇ ಉದ್ದೇಶಗಳಿಗಾಗಿ ನಿರ್ವಹಿಸುವುದು ಅವಶ್ಯಕವಾಗಿರುವಂಥ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದೊಳಗೆ ಅಥವಾ ಭೂಮಿಗೆ ಅಥವಾ ಅದರ ಮೇಲೆ ಸಹಾಯಕರೊಂದಿಗೆ ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆ ಪ್ರವೇಶಿಸುವುದು ಕಾನೂನುಸಮ್ಮತವಾಗಿರತಕ್ಕದ್ದು.

**23. ತಪಾಸಣಾ ಅಧಿಕಾರಗಳು.–** (1) ಸಕ್ಷಮ ಪ್ರಾಧಿಕಾರಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಯಾರೇ ವ್ಯಕ್ತಿಯನ್ನು,–

(ಎ) ಕೊಳೆಗೇರಿಯಲ್ಲಿನ ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಇರುವ ಯಾವುದೇ ಚರಂಡಿಯನ್ನು, ಶೌಚಾಲಯವನ್ನು, ಮೂತ್ರಾಲಯವನ್ನು, ರೊಚ್ಚುಗುಂಡಿಯನ್ನು, ಪೈಪನ್ನು, ಗ್ರಾಮಸಾರವನ್ನು ಅಥವಾ ಮೋರಿಯನ್ನು ತಪಾಸಣೆ ಮಾಡಲು ಮತ್ತು ಸಂದರ್ಭಾನುಸಾರ, ಚರಂಡಿಯಿಂದ, ಶೌಚಾಲಯದಿಂದ, ಮೂತ್ರಾಲಯದಿಂದ, ರೊಚ್ಚುಗುಂಡಿಯಿಂದ, ಪೈಪಿನಿಂದ, ಗ್ರಾಮಸಾರದಿಂದ ಅಥವಾ ಮೋರಿಯಿಂದ ಉಂಟಾದ ಯಾವುದೇ ತೊಂದರೆಯನ್ನು ತಡೆಗಟ್ಟುವ ಅಥವಾ ನಿವಾರಿಸುವ ಉದ್ದೇಶಕ್ಕಾಗಿ ತನ್ನ ವಿವೇಚನಾನುಸಾರ ನೆಲವನ್ನು ಅಗೆಯಲು;

(ಬಿ) ಕೊಳೆಗೇರಿಯಲ್ಲಿ ನಿರ್ಮಾಣದ ಹಂತದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸಲು, ಮಟ್ಟಗಳನ್ನು ತಿಳಿಯಲು ಅಥವಾ ಯಾವುದೇ ಮೀಟರನ್ನು ತೆಗೆದುಹಾಕಲು, ಪರೀಕ್ಷಿಸಲು, ಪರಿಶೀಲಿಸಲು, ಬದಲಾಯಿಸಲು ಅಥವಾ ಓದಲು

– ಅಧಿಕೃತಗೊಳಿಸಬಹುದು.

(2) ಅಂಥ ತಪಾಸಣೆಯನ್ನು ನಡೆಸಿದ ಮೇಲೆ ತೊಂದರೆಯನ್ನು ತಡೆಗಟ್ಟಲು ಅಥವಾ ನಿವಾರಿಸಲು ನೆಲವನ್ನು ಅಗಿಯುವುದು ಅವಶ್ಯವೆಂದು ಕಂಡುಬಂದರೆ, ಅದಕ್ಕೆ ತಗುಲಿದ ಖರ್ಚುಗಳನ್ನು ಭೂಮಿಯ ಅಥವಾ ಕಟ್ಟಡದ ಮಾಲೀಕನು ಅಥವಾ ಅಧಿಭೋಗದಾರನು ಸಂದಾಯ ಮಾಡತಕ್ಕದ್ದು. ಆದರೆ, ಹಾಗೆ ನೆಲವನ್ನು ಅಗಿಯದೆ ಇದ್ದಿದ್ದರೂ ಯಾವುದೇ ತೊಂದರೆ ಇರುತ್ತಿರಲಿಲ್ಲವೆಂದು ಕಂಡುಬಂದರೆ, ಅಂಥ ತಪಾಸಣೆಯ ಉದ್ದೇಶಕ್ಕಾಗಿ ಅಗಿದ, ಹಾನಿಪಡಿಸಿದ ಅಥವಾ ತೆಗೆದುಹಾಕಿದ ನೆಲವನ್ನು ಅಥವಾ ಕಟ್ಟಡದ ಯಾವುದೇ ಭಾಗವನ್ನು, ಚರಂಡಿಯನ್ನು ಅಥವಾ ಇತರ ಕಾಮಗಾರಿಯನ್ನು ಸಕ್ಷಮ ಪ್ರಾಧಿಕಾರವು ಸಂದರ್ಭಾನುಸಾರ ಮುಚ್ಚಿಬಿಡತಕ್ಕದ್ದು, ಮೊದಲಿನಂತೆ ಮಾಡತಕ್ಕದ್ದು ಅಥವಾ ಅದನ್ನು ಸರಿಪಡಿಸತಕ್ಕದ್ದು.

**24. ಕಾಮಗಾರಿ ಪ್ರಗತಿಯಲ್ಲಿರುವ ಭೂಮಿಗೆ ಹೊಂದಿಕೊಂಡಿರುವ ಭೂಮಿಯನ್ನು ಪ್ರವೇಶಿಸಲು ಅಧಿಕಾರ.–** (1) ಈ ಬಗ್ಗೆ ಸಕ್ಷಮ ಪ್ರಾಧಿಕಾರಿಯು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಕಾಮಗಾರಿಯು ನಡೆಯುತ್ತಿರುವ ಐವತ್ತು ಗಜದೊಳಗಿನ ಯಾವುದೇ ಭೂಮಿಯನ್ನು, ಯಾವುದೇ ಮಣ್ಣು, ಜೆಲ್ಲಿ, ಕಲ್ಲು ಅಥವಾ ಇತರೆ ಸಾಮಗ್ರಿಗಳನ್ನು ಅದರ ಮೇಲೆ ಹಾಕುವ ಉದ್ದೇಶಕ್ಕಾಗಿ ಅಥವಾ ಅಂಥ ಕಾಮಗಾರಿ ಸ್ಥಳಕ್ಕೆ ಪ್ರವೇಶಿಸುವುದಕ್ಕಾಗಿ ಅಥವಾ ಅದನ್ನು ಸಾಗಿಸುವುದಕ್ಕೆ ಸಂಬಂಧಿಸಿದ ಯಾವುದೇ ಇತರ ಉದ್ದೇಶಗಳಿಗಾಗಿ ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆಯೇ ಪ್ರವೇಶಿಸಬಹುದು.

(2) ಹಾಗೆ ಅಧಿಕೃತಗೊಂಡ ವ್ಯಕ್ತಿಯು (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಪ್ರವೇಶಿಸುವ ಮೊದಲು ಆ ಉದ್ದೇಶವನ್ನು ತಿಳಿಸತಕ್ಕದ್ದು ಮತ್ತು ಅಧಿಭೋಗದಾರನು ಅಥವಾ ಮಾಲೀಕನು, ಆ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಷ್ಟು ಭೂಮಿಗೆ ಬೇಲಿ ಹಾಕಬೇಕೆಂದು ಅಗತ್ಯಪಡಿಸಿದರೆ, ಹಾಗೆ ಮಾಡತಕ್ಕದ್ದು.

(3) ಹಾಗೆ ಅಧಿಕೃತಗೊಂಡ ಯಾರೇ ವ್ಯಕ್ತಿಯು, ಈ ಪ್ರಕರಣದಿಂದ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಸಾಧ್ಯವಾದಷ್ಟೂ ಹಾನಿ ಮಾಡತಕ್ಕದ್ದಲ್ಲ ಮತ್ತು ಹಾನಿ ಉಂಟಾದಲ್ಲಿ ಅದು ಖಾಯಂ ಅಥವಾ ತಾತ್ಕಾಲಿಕವಾದರೂ, ಅಂಥ ಯಾವುದೇ ಹಾನಿಗೆ ಆ ಭೂ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಅಥವಾ ಇಬ್ಬರಿಗೂ ಸಕ್ಷಮ ಪ್ರಾಧಿಕಾರವು ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**25. ಕಟ್ಟಡಗಳನ್ನು ಭೇದಿಸಿ ಪ್ರವೇಶಿಸುವುದು.–** ಯಾವುದೇ ಸ್ಥಳಕ್ಕೆ ಪ್ರವೇಶಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಗೆ, ಯಾವುದೇ ಬಾಗಿಲು, ಹೊರಬಾಗಿಲು ಅಥವಾ ಇತರ ತಡೆಗಟ್ಟನ್ನು,–

(ಎ) ಹಾಗೆ ಪ್ರವೇಶಿಸುವ ಉದ್ದೇಶಕ್ಕಾಗಿ ಅವನು ಅದನ್ನು ತೆರೆಯುವುದು ಅವಶ್ಯಕವೆಂದು ಪರಿಗಣಿಸಿದರೆ; ಮತ್ತು

(ಬಿ) ಮಾಲೀಕನು ಅಥವಾ ಅಧಿಭೋಗದಾರನು ಅಲ್ಲಿ ಇರದಿದ್ದರೆ ಅಥವಾ ಇದ್ದರೂ ಕೂಡ ಅಂಥ ಬಾಗಿಲನ್ನು, ಹೊರಬಾಗಿಲನ್ನು ಅಥವಾ ತಡೆಗಟ್ಟನ್ನು ತೆರೆಯಲು ನಿರಾಕರಿಸಿದರೆ

– ತೆರೆಯುವುದು ಅಥವಾ ತೆರೆಸುವುದು ಕಾನೂನುಸಮ್ಮತವಾಗಿರತಕ್ಕದ್ದು.

**26. ಹಗಲಿನಲ್ಲಿ ಪ್ರವೇಶ ಮಾಡಬೇಕು.–** ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಪ್ರವೇಶವನ್ನು ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವಣ ವೇಳೆಯನ್ನು ಹೊರತುಪಡಿಸಿ ಮಾಡತಕ್ಕದ್ದಲ್ಲ.

**27. ಸಾಮಾನ್ಯವಾಗಿ ಮಾಲೀಕರ ಸಮ್ಮತಿಯನ್ನು ಪಡೆಯಬೇಕು.–** ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಅಧಿಭೋಗದಾರನ ಸಮ್ಮತಿ ಇಲ್ಲದೆ ಅಥವಾ ಅಲ್ಲಿ ಅಧಿಭೋಗದಾರನು ಇಲ್ಲದಿದ್ದರೆ, ಅದರ ಮಾಲೀಕನ ಸಮ್ಮತಿ ಇಲ್ಲದೆ ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಪ್ರವೇಶ ಮಾಡತಕ್ಕದ್ದಲ್ಲ, ಮತ್ತು ಸಂದರ್ಭಾನುಸಾರ, ಅಂಥ ಪ್ರವೇಶವನ್ನು ಮಾಡಲು ಉದ್ದೇಶಿಸಿದ ಬಗ್ಗೆ ಇಪ್ಪತ್ತನಾಲ್ಕು ಗಂಟೆಗಳಿಗೆ ಕಡಿಮೆ ಇಲ್ಲದಂತೆ ಲಿಖಿತ ನೋಟೀಸನ್ನು ಸದರಿ ಅಧಿಭೋಗದಾರನಿಗೆ ಅಥವಾ ಮಾಲೀಕನಿಗೆ ನೀಡದೆ ಅಂಥ ಪ್ರವೇಶವನ್ನು ಮಾಡತಕ್ಕದ್ದಲ್ಲ:

ಪರಂತು, ತಪಾಸಣೆ ಮಾಡಬೇಕಾದ ಸ್ಥಳವು ಒಂದು ಜಾನುವಾರು ದೊಡ್ಡಿ ಅಥವಾ ಶೌಚಾಲಯ, ಮೂತ್ರಾಲಯ ಅಥವಾ ನಿರ್ಮಾಣದ ಹಂತದಲ್ಲಿರುವ ಕಾಮಗಾರಿ ಸ್ಥಳವಾಗಿದ್ದರೆ, ಅಂಥ ನೋಟೀಸಿನ ಅಗತ್ಯವಿರತಕ್ಕದ್ದಲ್ಲ.

**28. ಹೊರಹಾಕುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರವು ಮಾತ್ರ ಚಲಾಯಿಸುವುದು.–** ಸಕ್ಷಮ ಪ್ರಾಧಿಕಾರವು ಕಟ್ಟಡದ ಮಾಲೀಕನಿಂದ ಬಂದ ಮನವಿಯ ಮೇಲೆ ಅಥವಾ ತನ್ನ ಬಳಿ ಇರುವ ಇತರ ಮಾಹಿತಿಯ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಹೊರಡಿಸಿದ ಅಥವಾ ನೀಡಿದ ಯಾವುದೇ ಸೂಚನೆ, ಆದೇಶ ಅಥವಾ ನಿರ್ದೇಶನದ ಅನುಸಾರವಾಗಿ ಕಟ್ಟಡದ ಅಧಿಭೋಗದಾರರು ಅದನ್ನು ಖಾಲಿ ಮಾಡಿಲ್ಲವೆಂದು, ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾದರೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅಧಿಭೋಗದಾರನನ್ನು ಕಟ್ಟಡದಿಂದ ಹೊರಹಾಕುವ ಬಗ್ಗೆ ಆದೇಶದ ಮೂಲಕ ನಿರ್ದೇಶಿಸತಕ್ಕದ್ದು ಮತ್ತು ಅಂಥ ಹೊರಹಾಕುವಿಕೆಯ ಉದ್ದೇಶಕ್ಕಾಗಿ ಅವಶ್ಯವಿರಬಹುದಾದಂಥ ಬಲವನ್ನು ಉಪಯೋಗಿಸಬಹುದು ಅಥವಾ ಉಪಯೋಗಿಸುವಂತೆ ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ, ಯಾವುದೇ ಆದೇಶವನ್ನು ಮಾಡುವ ಮೊದಲು ಸಕ್ಷಮ ಪ್ರಾಧಿಕಾರವು, ಕಟ್ಟಡದ ಅಧಿಭೋಗದಾರರನ್ನು ಅಲ್ಲಿಂದ ಏಕೆ ಹೊರಹಾಕಬಾರದು ಎಂಬ ಬಗ್ಗೆ ಕಾರಣ ತೋರಿಸಲು ಅವರಿಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು.

**29. ಕೊಳೆಗೇರಿಗಳಲ್ಲಿನ ಅಸಹ್ಯಕರ ಅಥವಾ ಅಪಾಯಕಾರಿ ವೃತ್ತಿಗಳನ್ನು ತೊರೆಸಲು ಅಧಿಕಾರ.–** ಕೊಳೆಗೇರಿಗಳಲ್ಲಿ ಅಪಾಯಕಾರಿ ಅಥವಾ ಅಸಹ್ಯಕರ ವೃತ್ತಿಯನ್ನು ನಡೆಸುವ ಯಾರೇ ವ್ಯಕ್ತಿಗೆ ಸಕ್ಷಮ ಪ್ರಾಧಿಕಾರಿಯು ಲಿಖಿತ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಆ ಪ್ರದೇಶದಿಂದ ವೃತ್ತಿಯನ್ನು ತೊರೆಯಲು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು, ಆ ವೃತ್ತಿಯನ್ನು ನಡೆಸುವ ವ್ಯಕ್ತಿಗೆ ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ಕಾರಣ ತೋರಿಸಲು ಒಂದು ಯುಕ್ತ ಅವಕಾಶವನ್ನು ಒದಗಿಸಿದ ಹೊರತು ಮಾಡತಕ್ಕದ್ದಲ್ಲ.

**30. ಅಪೀಲುಗಳು.–** (1) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು, ಸಕ್ಷಮ ಪ್ರಾಧಿಕಾರಿಯು ಹೊರಡಿಸಿದ ಅಥವಾ ನೀಡಿದ ಯಾವುದೇ ನೋಟೀಸು, ಆದೇಶ ಅಥವಾ ನಿರ್ದೇಶನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ನೀಡಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಆಡಳಿತಗಾರನಿಗೆ ಅಪೀಲು ಮಾಡಿಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಯಾವ ನೋಟೀಸಿನ, ಆದೇಶದ ಅಥವಾ ನಿರ್ದೇಶನದ ವಿರುದ್ಧವಾಗಿ ಅಪೀಲನ್ನು ಸಲ್ಲಿಸಲಾಗಿದೆಯೋ ಅದರ ನಕಲು ಪ್ರತಿಯೊಂದಿಗೆ ಲಿಖಿತದಲ್ಲಿನ ಅರ್ಜಿಯ ಮೂಲಕ ಸಲ್ಲಿಸತಕ್ಕದ್ದು.

(3) ಅಪೀಲನ್ನು ಅಂಗೀಕರಿಸಿದ ಮೇಲೆ, ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಜಾರಿಗೊಳಿಸುವ ಎಲ್ಲ ವ್ಯವಹರಣೆಗಳನ್ನು ಮತ್ತು ಅದರ ಯಾವುದೇ ಉಲ್ಲಂಘನೆಗಾಗಿ ಎಲ್ಲ ಪ್ರಾಸಿಕ್ಯೂಷನ್‌ಗಳನ್ನು ಅಪೀಲು ತೀರ್ಮಾನವಾಗುವವರೆಗೆ ಸ್ಥಗಿತಗೊಳಿಸತಕ್ಕದ್ದು ಮತ್ತು ಅಪೀಲಿನಲ್ಲಿ ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ತಳ್ಳಿಹಾಕಿದರೆ, ಅದನ್ನು ಪಾಲಿಸದೆ ಇದ್ದುದನ್ನು ಅಪರಾಧವೆಂದು ಭಾವಿಸತಕ್ಕದ್ದಲ್ಲ.

(4) ಅಪೀಲುದಾರನನ್ನು ವಿಚಾರಿಸಿದ ಹೊರತು ಅಥವಾ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಕಾಲಾವಕಾಶವನ್ನು ಕೊಟ್ಟಿದ್ದ ಹೊರತು, ಈ ಪ್ರಕರಣದ ಮೇರೆಗೆ ಯಾವುದೇ ಅಪೀಲನ್ನು ತೀರ್ಮಾನಿಸತಕ್ಕದ್ದಲ್ಲ.

(5) ಅಪೀಲಿನಲ್ಲಿ ಆಡಳಿತಗಾರನ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**31. ನೋಟೀಸು, ಇತ್ಯಾದಿಯನ್ನು ಜಾರಿ ಮಾಡುವುದು.–** (1) ಈ ಅಧಿನಿಯಮದ ಮೇರೆಗೆ ಹೊರಡಿಸಿದ ಪ್ರತಿಯೊಂದು ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನು ಉಳಿದು,–

(ಎ) ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಯಾರಿಗೆ ಕೊಡಬೇಕೆಂದು ಅಥವಾ ನೀಡಬೇಕೆಂದು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಗೆ ಕೊಡುವ ಅಥವಾ ನೀಡುವ ಅಥವಾ ಅದನ್ನು ಅಂಚೆಯಿಂದ ಕಳುಹಿಸುವ ಮೂಲಕ; ಅಥವಾ

(ಬಿ) ಅಂಥ ವ್ಯಕ್ತಿಯು ಕಂಡುಬರದಿದ್ದರೆ, ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಅವನ ತಿಳಿದಿರುವ ಕೊನೆಯ ವಾಸಸ್ಥಳದ ಅಥವಾ ವ್ಯವಹಾರದ ಯಾವುದೇ ಎದ್ದುಕಾಣುವ ಭಾಗದಲ್ಲಿ ಅಂಟಿಸುವ ಮೂಲಕ ಅಥವಾ ಅವನ ಕುಟುಂಬದ ವಯಸ್ಕ ಪುರುಷನಿಗೆ ಅಥವಾ ಸೇವಕನಿಗೆ ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಕೊಡುವ ಮೂಲಕ ಅಥವಾ ನೀಡುವ ಮೂಲಕ ಅಥವಾ ಅದಕ್ಕೆ ಸಂಬಂಧಿಸಿದ ಕಟ್ಟಡ ಅಥವಾ ಭೂಮಿ ಯಾವುದಾದರೂ ಇದ್ದರೆ, ಅದರ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮಾಡುವ ಮೂಲಕ ಜಾರಿಗೊಳಿಸತಕ್ಕದ್ದು.

(2) ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದರೆ, ಅವನ ಪೋಷಕನಿಗೆ ಅಥವಾ ಅವನ ಕುಟುಂಬದ ಯಾರೇ ವಯಸ್ಕ ಪುರುಷ ಸದಸ್ಯನಿಗೆ ಅಥವಾ ಸೇವಕನಿಗೆ ಜಾರಿಮಾಡಿದುದನ್ನು ಅಪ್ರಾಪ್ತ ವಯಸ್ಕನಿಗೆ ಜಾರಿಗೊಳಿಸಿರುವುದಾಗಿ ಭಾವಿಸತಕ್ಕದ್ದು.

(3) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ಪ್ರತಿಯೊಂದು ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಸಾರ್ವಜನಿಕ ನೋಟೀಸೆಂದು, ಆದೇಶವೆಂದು ಅಥವಾ ನಿರ್ದೇಶನವೆಂದು ಜಾರಿಗೊಳಿಸಬೇಕಾಗಿದೆಯೋ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಯಾರೇ ವ್ಯಕ್ತಿಗೆ ಅಂಥ ನೋಟೀಸೆಂದು, ಆದೇಶವೆಂದು, ನಿರ್ದೇಶನವೆಂದು ಜಾರಿಗೊಳಿಸುವ ಅಗತ್ಯವಿಲ್ಲವೋ ಆ ಪ್ರತಿಯೊಂದು ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು ಅದರ ಪ್ರತಿಯನ್ನು ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಎದ್ದು ಕಾಣುವಂಥ ಭಾಗದಲ್ಲಿ ಅಥವಾ ಸಕ್ಷಮ ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ಅವಧಿಯಲ್ಲಿ, ಅಂಥ ಇತರ ಸಾರ್ವಜನಿಕ ಸ್ಥಳದಲ್ಲಿ ಅಂಟಿಸಿದರೆ, ಅಥವಾ ಅಂಥ ಸ್ಥಳೀಯ ಸುದ್ದಿ ಪತ್ರಿಕೆಯಲ್ಲಿ ಅಥವಾ ಅಂಥ ಇತರ ರೀತಿಯಲ್ಲಿ ಪ್ರಕಟಿಸಿದರೆ ಯುಕ್ತವಾಗಿ ಜಾರಿಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

**32. ದಂಡನೆಗಳು.–** (1) ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಥವಾ ನೀಡಿದ ಯಾವುದೇ ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ಆಗಲಿ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) 10ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ನಿರ್ಬಂಧವನ್ನು ಅಥವಾ ಷರತ್ತನ್ನು ಅಥವಾ ತೆರವು ಪ್ರದೇಶವನ್ನು ಪುನರ್ ಅಭಿವೃದ್ಧಿಪಡಿಸುವುದಕ್ಕಾಗಿ ಮಾಡಿದ ಯಾವುದೇ ನಕ್ಷೆಯನ್ನು ಉಲ್ಲಂಘಿಸಿ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸುವ ಅಥವಾ ಪ್ರಾರಂಭಿಸುವಂತೆ ಮಾಡುವ ಯಾರೇ ಆಗಲಿ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಈ ಅಧಿನಿಯಮದ ಮೇರೆಗೆ ಅಧಿಕೃತಗೊಂಡ ಯಾರೇ ವ್ಯಕ್ತಿಯು ಪ್ರವೇಶಿಸುವುದನ್ನು ಅಡ್ಡಿಪಡಿಸುವ ಅಥವಾ ಹಾಗೆ ಪ್ರವೇಶಿಸಿದ ನಂತರ ಅಂಥ ವ್ಯಕ್ತಿಗೆ ಉಪದ್ರವ ನೀಡುವ ಯಾರೇ ಆಗಲಿ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ಅಥವಾ ಅದು ಕ್ರಮಕ್ಕೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನಗೆ ತಿಳಿಯದೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(5) (3)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ, ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕನ ಅಥವಾ ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆದಿದೆಯೆಂದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪನಿ' ಎಂದರೆ ಒಂದು ನಿಗಮಿತ ನಿಕಾಯ ಎಂದು ಅರ್ಥ, ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ ಆ ಫರ್ಮಿನ ಪಾಲುದಾರ.

**33. ಕೆಲವು ಸಂದರ್ಭಗಳಲ್ಲಿ ಕಟ್ಟಡಗಳನ್ನು ನೆಲಸಮಗೊಳಿಸಲು ಆದೇಶ.–** (1) 10ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ನಿರ್ಬಂಧವನ್ನು ಅಥವಾ ಷರತ್ತನ್ನು ಅಥವಾ ಯಾವುದೇ ತೆರವು ಪ್ರದೇಶವನ್ನು ಪುನರ್‌ಅಭಿವೃದ್ಧಿ ಮಾಡುವ ನಕ್ಷೆಯನ್ನು ಉಲ್ಲಂಘಿಸಿ ಅಥವಾ ಈ ಅಧಿನಿಯಮದ ಮೇರೆಗೆ ನೀಡಿದ ಅಥವಾ ಕೊಟ್ಟ ಯಾವುದೇ ನೋಟೀಸನ್ನು, ಆದೇಶವನ್ನು ಅಥವಾ ನಿರ್ದೇಶನವನ್ನು ಉಲ್ಲಂಘಿಸಿ, ಯಾವುದೇ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸಿದರೆ ಅಥವಾ ನಿರ್ಮಿಸಲಾಗುತ್ತಿದ್ದರೆ ಅಥವಾ ಪೂರ್ಣಗೊಳಿಸಿದ್ದರೆ, ಸಕ್ಷಮ ಪ್ರಾಧಿಕಾರಿಯು ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನ್ವಯವಾಗಬಹುದಾದ ಇತರ ಯಾವುದೇ ಪರಿಹಾರೋಪಾಯದ ಜೊತೆಗೆ ಅಂಥ ನಿರ್ಮಾಣವನ್ನು ಆದೇಶದಲ್ಲಿ ನಿದಿಷ್ಟಪಡಿಸಬಹುದಾದಂತೆ ಎರಡು ತಿಂಗಳಿಗೂ ಮೀರದ ಕಾಲದೊಳಗೆ ಅದರ ಮಾಲೀಕನು ಅದನ್ನು ನೆಲಸಮಗೊಳಿತಕ್ಕದ್ದೆಂದು ನಿರ್ದೇಶನ ನೀಡುವ ಆದೇಶವನ್ನು ಮಾಡಬಹುದು ಮತ್ತು ಮಾಲೀಕನು ಆ ಆದೇಶವನ್ನು ಪಾಲಿಸಲು ವಿಫಲಗೊಂಡರೆ, ಸಕ್ಷಮ ಪ್ರಾಧಿಕಾರಿಯು ತಾನೇ ಸ್ವತಃ ಆ ಕಟ್ಟಡವನ್ನು ನೆಲಸಮ ಮಾಡುವಂತೆ ಮಾಡಬಹುದು ಮತ್ತು ಹಾಗೆ ನೆಲಸಮ ಮಾಡಿದ ಖರ್ಚುಗಳನ್ನು ಭೂ ಕಂದಾಯದ ಬಾಕಿ ಎಂಬಂತೆ ಮಾಲೀಕನಿಂದ ವಸೂಲು ಮಾಡತಕ್ಕದ್ದು:

ಪರಂತು, ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡದೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಕಟ್ಟಡವನ್ನು ನೆಲಸಮ ಮಾಡಿಸುವ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯು ಅಗತ್ಯವಿರಬಹುದಾದಂಥ ಬಲವನ್ನು ಉಪಯೋಗಿಸಬಹುದು ಅಥವಾ ಉಪಯೋಗಿಸುವಂತೆ ಮಾಡಬಹುದು.

**34. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.–** ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ದರ್ಜೆಗಿಂತ ಕಡಿಮೆಯಲ್ಲದ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**35. ಪ್ರಾಸಿಕ್ಯೂಷನ್‌ಗಾಗಿ ಸಕ್ಷಮ ಪ್ರಾಧಿಕಾರದ ಅಥವಾ ಅದು ಅಧಿಕೃತಗೊಳಿಸಿದ ಅಧಿಕಾರಿಯ ಪೂರ್ವ ಮಂಜೂರಾತಿ.–** ಸಕ್ಷಮ ಪ್ರಾಧಿಕಾರದ ಅಥವಾ ಈ ಬಗ್ಗೆ ಸಕ್ಷಮ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**36. ಪ್ರತ್ಯಾಯೋಜಿಸಲು ಅಧಿಕಾರ.–** (1) ಸಕ್ಷಮ ಪ್ರಾಧಿಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಅದು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಅದರಲ್ಲಿ ನಮೂದಿಸಬಹುದಾದಂಥ ಅಧಿಕಾರಿ ಅಥವಾ ಸ್ಥಳೀಯ ಪ್ರಾಧಿಕಾರವು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

(2) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 10ನೇ ಪ್ರಕರಣದ (7)ನೇ ಉಪ–ಪ್ರಕರಣದ, 15ನೇ ಪ್ರಕರಣದ, 20ನೇ ಪ್ರಕರಣದ ಮತ್ತು 30ನೇ ಪ್ರಕರಣದ ಮೇರೆಗೆ ಆಡಳಿತಗಾರನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು, ಮುಖ್ಯ ಕಾರ್ಯದರ್ಶಿಯು ಅಥವಾ ಅದರಲ್ಲಿ ನಮೂದಿಸಬಹುದಾದಂಥ ಇತರ ಅಧಿಕಾರಿಯು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**37. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ, ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸಕ್ಷಮ ಪ್ರಾಧಿಕಾರದ ವಿರುದ್ಧ ಅಥವಾ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**37ಎ. ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನು ಉಳಿದು, ಯಾವ ವಿಷಯದ ಬಗ್ಗೆ ಸಕ್ಷಮ ಪ್ರಾಧಿಕಾರವು ಅಥವಾ ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ಧರಿಸಲು ಅಧಿಕಾರ ಹೊಂದಿರುವುದೋ ಅಥವಾ ಹೊಂದಿರುವನೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕೆ ಅನುಸಾರವಾಗಿ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮದ ಬಗ್ಗೆ ಯಾವುದೇ ನ್ಯಾಯಾಲಯವು ಅಥವಾ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ.

**38. ಸಕ್ಷಮ ಪ್ರಾಧಿಕಾರ, ಮುಂತಾದವರು ಲೋಕ ನೌಕರ ಆಗಿರುವುದು.–** ಸಕ್ಷಮ ಪ್ರಾಧಿಕಾರವನ್ನು ಮತ್ತು ಈ ಅಧಿನಿಯಮದ ಮೇರೆಗೆ ಅದು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯನ್ನು, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ (1860ರ 45) ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂಬುದಾಗಿ ಭಾವಿಸತಕ್ಕದ್ದು.

**39. ಈ ಅಧಿನಿಯಮವು ಇತರೆ ಕಾನೂನುಗಳನ್ನು ಮೀರಿ ಪರಿಣಾಮಕಾರಿಯಾಗಿರುವುದು.–** ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ಯಾವುದೇ ಇತರ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿರುವುದು ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**40. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

(ಎ) ಸಕ್ಷಮ ಪ್ರಾಧಿಕಾರವು ನೋಟೀಸುಗಳನ್ನು, ಆದೇಶಗಳನ್ನು ಮತ್ತು ಇತರ ಲಿಖಿತ ಪತ್ರಗಳನ್ನು ಅಧಿಪ್ರಮಾಣೀಕರಿಸುವ ರೀತಿ;

(ಬಿ) ಯಾವುದೇ ಕೊಳೆಗೇರಿಯನ್ನು ಪುನರ್‌ಅಭಿವೃದ್ಧಿಪಡಿಸಲು ನಕ್ಷೆಗಳನ್ನು ಸಿದ್ಧಪಡಿಸುವುದು ಮತ್ತು ಅಂಥ ನಕ್ಷೆಗಳಲ್ಲಿ ಸೇರಿಸಬೇಕಾದ ವಿಷಯಗಳು;

(ಬಿಬಿ) 6ಎ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಸಲ್ಲಿಸಬೇಕಾದ ಅರ್ಜಿ ನಮೂನೆ ಮತ್ತು ಅದರಲ್ಲಿ ಒದಗಿಸಬೇಕಾದ ಮಾಹಿತಿ ಮತ್ತು ಅಂಥ ಅರ್ಜಿಯ ಸಂಬಂಧದಲ್ಲಿ ವಿಧಿಸಬೇಕಾದ ಫೀಜು;

(ಬಿಬಿಬಿ) 15ನೇ ಮತ್ತು 19ನೇ ಪ್ರಕರಣಗಳ ಮೇರೆಗೆ ನಡೆಸಬಹುದಾದ ವಿಚಾರಣೆಗಳ ರೀತಿ;

(ಸಿ) 19ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅನುಮತಿಗಾಗಿ ಅರ್ಜಿಗಳನ್ನು ಸಲ್ಲಿಸಬೇಕೋ ಆ ನಮೂನೆ ಮತ್ತು ರೀತಿ ಮತ್ತು ಅಂಥ ಅರ್ಜಿಗಳ ಸಂಬಂಧದಲ್ಲಿ ವಿಧಿಸಬೇಕಾದ ಫೀಜು;

(ಡಿ) 19ನೇ ಪ್ರಕರಣದ ಮೇರೆಗೆ ಅನುಮತಿ ನೀಡುವುದಕ್ಕೆ ಮುಂಚೆ ಅಥವಾ ನಿರಾಕರಿಸುವ ಮುಂಚೆ ಸಕ್ಷಮ ಪ್ರಾಧಿಕಾರವು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಪರಿಗಣನೆಗೆ ತೆಗೆದುಕೊಳ್ಳಬೇಕಾದ ಸಂಗತಿಗಳು;

(ಇ) 10ನೇ ಪ್ರಕರಣದ (7)ನೇ ಉಪ–ಪ್ರಕರಣದ ಅಥವಾ 20ನೇ ಪ್ರಕರಣದ ಮೇರೆಗೆ ಅಪೀಲನ್ನು ಯಾವ ಕಾಲದೊಳಗೆ ಸಲ್ಲಿಸಬಹುದೋ ಆ ಕಾಲ;

(ಇಇ) (1)ನೇ ಉಪ–ಪ್ರಕರಣದ ಮೇರೆಗೆ ಘೋಷಣೆಯನ್ನು ಯಾವ ಕಾಲದೊಳಗೆ ಸಲ್ಲಿಸಬಹುದೋ ಆ ಕಾಲ ಅಥವಾ ಮಾಹಿತಿಯನ್ನು ಯಾವ ಕಾಲದೊಳಗೆ ಕಳುಹಿಸಬಹುದೋ ಆ ಕಾಲ, 20ಎ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಮತ್ತು ಅಂತಹ ಘೋಷಣೆಗೆ ಸಂಬಂಧಿಸಿದಂತೆ ವಿಧಿಸಬೇಕಾದ ಫೀಜು ಯಾವುದಾದರೂ ಇದ್ದರೆ, ಅದು;

(ಇಇಇ) 20ಎ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ನಕ್ಷೆಗಳನ್ನು, ಅಂದಾಜುಗಳನ್ನು ಮತ್ತು ಇತರ ವಿವರಗಳನ್ನು ಯಾವ ಕಾಲದೊಳಗೆ ಒದಗಿಸಬಹುದೋ ಆ ಕಾಲ;

(ಇಇಇಇ) 20ಎ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ತಾತ್ಕಾಲಿಕ ಬಾಡಿಗೆಯನ್ನು ನಿಗದಿಪಡಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರವು ಅನುಸರಿಸಬೇಕಾದ ಕಾರ್ಯವಿಧಾನ;

(ಇಇಇಇಇ) 20ಎ ಪ್ರಕರಣದ ಮೇರೆಗೆ ತಾತ್ಕಾಲಿಕವಾಗಿ ನಿರ್ಧರಿಸಲಾದ ಬಾಡಿಗೆಯ ಬಗ್ಗೆ ಬಾಡಿಗೆದಾರರಿಗೆ ಮತ್ತು ಮಾಲೀಕರಿಗೆ ತಿಳಿಸತಕ್ಕ ರೀತಿ;

(ಇಇಇಇಇಇ) 20ಬಿ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಯಾವ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದೋ ಆ ವಿಷಯಗಳು;

(ಎಫ್) ಯಾವ ಅಧಿಕಾರಿಗಳಿಗೆ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ 36ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದೋ ಆ ಅಧಿಕಾರಿಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು; ಮತ್ತು

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಅನುಕ್ರಮ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**ಅನುಸೂಚಿ**

(15ನೇ ಪ್ರಕರಣವನ್ನು ನೋಡಿ)

**ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ನಿರ್ಣಯಿಸುವುದಕ್ಕಾಗಿ ಸೂತ್ರಗಳು**

1. ಸಕ್ಷಮ ಪ್ರಾಧಿಕಾರವು 15ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುಕ್ರಮವಾಗಿ ಬರುವ ಐದು ವರ್ಷಗಳ ಅವಧಿಯಲ್ಲಿ, ಅಂಥ ಭೂಮಿಯ ಮೇಲಿನ ಯಾವುದೇ ಕಟ್ಟಡವನ್ನೊಳಗೊಂಡು ಆರ್ಜಿಸಿದ ಭೂಮಿಯ ಮಾಲೀಕನು ಪಡೆದ ಒಟ್ಟು ವಾಸ್ತವಿಕ ಬಾಡಿಗೆಯನ್ನು ಮೊದಲು ನಿರ್ಧರಿಸತಕ್ಕದ್ದು.

2. ಹಾಗೆ ನಿರ್ಧರಿಸಲು ಸಕ್ಷಮ ಪ್ರಾಧಿಕಾರವು ಯಾವುದೇ ಸ್ಥಳೀಯ ವಿಚಾರಣೆಯನ್ನು ನಡೆಸಬಹುದು ಮತ್ತು ಅಗತ್ಯವಾದರೆ, ಅಂಥ ಭೂಮಿಯ ಬಾಡಿಗೆಯ ಮೌಲ್ಯವನ್ನು ತೋರಿಸುವ ಸಂಬಂಧಪಟ್ಟ ಪುರಸಭೆ ಅಥವಾ ಇತರೆ ಸ್ಥಳೀಯ ಪ್ರಾಧಿಕಾರದ ಸ್ವತ್ತು ತೆರಿಗೆ ನಿರ್ಧರಣೆಯ ಪುಸ್ತಕಗಳ ಉದ್ಧೃತ ಭಾಗಗಳ ಪ್ರಮಾಣೀಕೃತ ಪ್ರತಿಗಳನ್ನು ಪಡೆಯಬಹುದು.

3. 15ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ನಿವ್ವಳ ಸರಾಸರಿ ಮಾಸಿಕ ಆದಾಯವು ಸರಾಸರಿ ತಿಂಗಳ ಒಟ್ಟು ಬಾಡಿಗೆಯ ಶೇಕಡಾ ಅರವತ್ತರಷ್ಟು ಆಗಿರತಕ್ಕದ್ದು ಅದು ಕಂಡಿಕೆ 1ರ ಮೇರೆಗೆ ಸಕ್ಷಮ ಪ್ರಾಧಿಕಾರವು ನಿರ್ಧರಿಸಿದಂತೆ ಐದು ಅನುಕ್ರಮ ವರ್ಷಗಳಲ್ಲಿ ಒಟ್ಟು ಬಾಡಿಗೆಯ ಅರವತ್ತರ ಒಂದು ಭಾಗವಾಗಿರತಕ್ಕದ್ದು.

4. ಮೇಲೆ ಉಲ್ಲೇಖಿಸಿದ ಒಟ್ಟು ಮಾಸಿಕ ಬಾಡಿಗೆಯ ಶೇಕಡಾ ನಲವತ್ತರಷ್ಟನ್ನು ನಿವ್ವಳ ಸರಾಸರಿ ಮಾಸಿಕ ಆದಾಯವನ್ನು ನಿರ್ಧರಿಸುವಾಗ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ. ಆದರೆ, ಪುರಸಭೆಗೆ ಅಥವಾ ಇತರೆ ಸ್ಥಳೀಯ ಪ್ರಾಧಿಕಾರಕ್ಕೆ ಯಾವುದೇ ಆಸ್ತಿ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ, ಸಂಗ್ರಹಣಾ ವೆಚ್ಚಗಳು, ಆದಾಯ ತೆರಿಗೆ ಅಥವಾ ವಸೂಲಾಗದ ಸಾಲಗಳಿಗಾಗಿ ಹಾಗೂ, ಭೂಮಿಯ ಮೇಲಿನ ಕಟ್ಟಡ, ಯಾವುದಾದರೂ ಇದ್ದರೆ, ಅದರ ದುರಸ್ತಿ ಮತ್ತು ನಿರ್ವಹಣೆಯ ಕಾಮಗಾರಿಗಳಿಗಾಗಿ, ಭೂ ಮಾಲೀಕನು ಸಾಮಾನ್ಯವಾಗಿ ಖರ್ಚು ಮಾಡುವ ವೆಚ್ಚದ ಬದಲಾಗಿ ಶೇಕಡಾ ನಲವತ್ತರಷ್ಟನ್ನು ಕಡಿತಗೊಳಿಸತಕ್ಕದ್ದು.

5. ಯಾವುದೇ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಿಸದಿರುವಾಗ ಅಥವಾ ಮಾಲೀಕನು ಸದರಿ ಐದು ವರ್ಷಗಳ ಪೂರ್ಣ ಅವಧಿಗೆ ಅಥವಾ ಅದರ ಯಾವುದೇ ಭಾಗದ ಅವಧಿಯಲ್ಲಿ ಆ ಭೂಮಿಯ ಅಧಿಭೋಗಕ್ಕಾಗಿ ಯಾವುದೇ ಬಾಡಿಗೆಯನ್ನು ಸ್ವೀಕರಿಸದಿರುವಾಗ ಸದರಿ ಅವಧಿಯಲ್ಲಿ ಬಾಡಿಗೆಗಾಗಿ ಕೊಟ್ಟಿದ್ದ ಭೂಮಿಯಾಗಿದ್ದಿದ್ದರೆ, ವಾಸ್ತವವಾಗಿ ಮಾಲೀಕನು ಪಡೆಯಬಹುದಾಗಿದ್ದಂಥ ಆದಾಯವನ್ನು ಒಟ್ಟು ಬಾಡಿಗೆ ಎಂದು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಯಾವ ಮುಂಚಿನ ಅವಧಿಯಲ್ಲಿ ಅಥವಾ ತರುವಾಯದ ಅವಧಿಯಲ್ಲಿ ಅದು ಖಾಲಿ ಉಳಿಯಿತೋ ಆ ಅವಧಿಯಲ್ಲಿ ಆ ಭೂಮಿಯಿಂದ ಅಥವಾ ಅಕ್ಕಪಕ್ಕದಲ್ಲಿರುವ ಅಂಥಹುದೇ ಭೂಮಿಯಿಂದ ವಾಸ್ತವಿಕವಾಗಿ ಪಡೆದ ಬಾಡಿಗೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

********

## ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990

## (1990ರ ಅಧಿನಿಯಮ ಸಂಖ್ಯೆ 25)

[ಸೆಪ್ಟೆಂಬರ್ 12, 1990.]

ಪ್ರಸಾರ ಭಾರತಿ ಎಂದು ಕರೆಯಲಾಗುವ, ಭಾರತ ಪ್ರಸಾರಣ ನಿಗಮವನ್ನು ಸ್ಥಾಪಿಸಿ, ಅದು ತನ್ನ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಪರಿಭಾಷಿಸುವುದನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳನ್ನು ಉಪಬಂಧಿಸುವ ಅಧಿನಿಯಮ.

ಅದು, ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 ಎಂದು ಕರೆಯತಕ್ಕದ್ದು.

(2) ಅದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಅದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು * ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಕಾಶವಾಣಿ" ಎಂದರೆ, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುತ್ತಿದ್ದ ಯಾವ ಕಚೇರಿಗಳು, ನಿಲಯಗಳು ಮತ್ತು ಇತರ ಕಾರ್ಯಸಂಸ್ಥೆಗಳು ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯದ ಆಲ್ ಇಂಡಿಯಾ ರೇಡಿಯೋದ ಭಾಗವಾಗಿದ್ದವೋ ಅಥವಾ ಮಹಾನಿರ್ದೇಶಕರ ಅಧೀನದಲ್ಲಿದ್ದವೋ ಅವುಗಳು ಎಂದು ಅರ್ಥ;

(ಬಿ) "ಗೊತ್ತುಪಡಿಸಿದ ದಿನ" ಎಂದರೆ, 3ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕ ಎಂದು ಅರ್ಥ;

(ಸಿ) "ಪ್ರಸಾರಣ" ಎಂದರೆ, ಬಾಹ್ಯಕಾಶದ ಮೂಲಕ ಅಥವಾ ಮರು ಪ್ರಸಾರ ಕೇಂದ್ರಗಳ ಮಾಧ್ಯಮದ ಮೂಲಕ ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಸಾರ್ವಜನಿಕರು ಪಡೆಯಬೇಕೆಂದು ಉದ್ದೇಶಿಸಿದ ಕೇಬಲ್‌ಗಳ ಮೂಲಕ ವಿದ್ಯುತ್ಕಾಂತೀಯ ತರಂಗಗಳ ಪ್ರಸಾರಣದ ಮೂಲಕ ಎಲ್ಲ ಬಗೆಯ ಚಿಹ್ನೆಗಳು, ಸಂಕೇತಗಳು, ಬರಹಗಳು, ಚಿತ್ರಗಳು, ಪ್ರತಿಬಿಂಬಗಳು ಮತ್ತು ಧ್ವನಿಗಳಂತಹ ಸಂಪರ್ಕದ ಯಾವುದೇ ರೀತಿಯ ಪ್ರಸಾರ ಎಂದು ಅರ್ಥ ಮತ್ತು ಅದರ ಎಲ್ಲ ವ್ಯಾಕರಣ ವ್ಯತ್ಯಾಸಗಳನ್ನು ಮತ್ತು ಸಜಾತೀಯ ಪದಾವಳಿಗಳನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಡಿ) "ಮಂಡಲಿ" ಎಂದರೆ, ಪ್ರಸಾರ ಭಾರತಿ ಮಂಡಲಿ ಎಂದು ಅರ್ಥ;

(ಇ) "ಪ್ರಸಾರಣ ಪರಿಷತ್ತು" ಎಂದರೆ, 14ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಪರಿಷತ್ತು ಎಂದು ಅರ್ಥ;

---

* 15ನೇ ಸೆಪ್ಟೆಂಬರ್ 1997ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂ. ಎಸ್.ಓ 509 (ಇ) ಜುಲೈ 22, 1997, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ II ವಿಭಾಗ 3(ii) ನೋಡಿ.

(ಎಫ್) "ಅಧ್ಯಕ್ಷ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿಗಮದ ಅಧ್ಯಕ್ಷ ಎಂದು ಅರ್ಥ;

(ಜಿ) "ನಿಗಮ" ಎಂದರೆ, 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಎಂದು ಅರ್ಥ;

(ಹೆಚ್) "ದೂರದರ್ಶನ" ಎಂದರೆ, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವ ಕಚೇರಿಗಳು, ಕೇಂದ್ರಗಳು ಮತ್ತು ಇತರ ಕಾರ್ಯಸಂಸ್ಥೆಗಳು, ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯದ ದೂರದರ್ಶನದ ಭಾಗವಾಗಿದ್ದವೋ ಅಥವಾ ಮಹಾನಿರ್ದೇಶಕರ ಅಧೀನದಲ್ಲಿದ್ದವೋ ಅವುಗಳು ಎಂದು ಅರ್ಥ;

(ಐ) "ಚುನಾಯಿತ ಸದಸ್ಯ" ಎಂದರೆ, 3ನೇ ಪ್ರಕರಣದ ಮೇರೆಗೆ ಚುನಾಯಿತನಾದ ಸದಸ್ಯ ಎಂದು ಅರ್ಥ;

(ಜೆ) "ಕಾರ್ಯನಿರ್ವಾಹಕ ಸದಸ್ಯ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾರ್ಯನಿರ್ವಾಹಕ ಸದಸ್ಯ ಎಂದು ಅರ್ಥ;

(ಕೆ) "ಕೇಂದ್ರ" ಎಂದರೆ, ಸ್ಟುಡಿಯೋಗಳನ್ನು ಅಥವಾ ವಾಹಕಗಳನ್ನು ಅಥವಾ ಅವೆರಡನ್ನು ಹೊಂದಿರುವ ಯಾವುದೇ ದೂರದರ್ಶನ ಪ್ರಸಾರ ಮಾಡುವ ಕೇಂದ್ರ ಎಂದು ಅರ್ಥ ಮತ್ತು ಅದು ಮರು ಪ್ರಸಾರ ಕೆಂದ್ರವನ್ನು ಒಳಗೊಳ್ಳುತ್ತದೆ;

(ಎಲ್) "ಸದಸ್ಯ" ಎಂದರೆ, ಮಂಡಲಿಯ ಸದಸ್ಯ ಎಂದು ಅರ್ಥ;

(ಎಂ) "ಸದಸ್ಯ (ಹಣಕಾಸು)" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ (ಹಣಕಾಸು) ಎಂದು ಅರ್ಥ;

(ಎನ್) "ಸದಸ್ಯ (ಸಿಬ್ಬಂದಿ) ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ (ಸಿಬ್ಬಂದಿ) ಎಂದು ಅರ್ಥ;

(ಓ) "ನಾಮನಿರ್ದೇಶಿತ ಸದಸ್ಯ" ಎಂದರೆ 3ನೇ ಪ್ರಕರಣದ ಮೇರೆಗೆ ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯವು ನಾಮನಿರ್ದೇಶಿಸಿದ ಸದಸ್ಯ ಎಂದು ಅರ್ಥ;

(ಪಿ) "ಖರ್ಚು ಮಾಡಲೇಬೇಕಾದ ನಿಧಿ" ಎಂದರೆ, ಕೆಲವು ಯೋಜನೆಗಳ ವೆಚ್ಚವನ್ನು ಭರಿಸುವುದಕ್ಕೆ ಆಕಾಶವಾಣಿ ಮತ್ತು ದೂರದರ್ಶನದ ವಾಣಿಜ್ಯ ರಾಜಸ್ವಗಳಿಂದ ಸೃಜಿಸಿದ ನಿಧಿ ಎಂದು ಅರ್ಥ;

(ಕ್ಯೂ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಎಂದು ಅರ್ಥ;

(ಆರ್) "ಅರೆಕಾಲಿಕ ಸದಸ್ಯ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಲಿಯ ಅರೆಕಾಲಿಕ ಸದಸ್ಯ ಎಂದು ಅರ್ಥ, ಆದರೆ ಇದರಲ್ಲಿ ಪದನಿಮಿತ್ತ ಸದಸ್ಯನು ನಾಮನಿರ್ದೇಶಿತ ಸದಸ್ಯನು ಅಥವಾ ಚುನಾಯಿತ ಸದಸ್ಯನು ಒಳಗೊಳ್ಳುವುದಿಲ್ಲ;

(ಎಸ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಟಿ) "ನೌಕರಿಭರ್ತಿ ಮಂಡಲಿ" ಎಂದರೆ, 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಮಂಡಲಿ ಎಂದು ಅರ್ಥ;

(ಯು) "ವಿನಿಯಮನಗಳು" ಎಂದರೆ, ಈ ಅಧಿನಿಯಮದ ಮೇರೆಗೆ ನಿಗಮವು ರಚಿಸಿದ ವಿನಿಯಮನಗಳು ಎಂದು ಅರ್ಥ;

(ವಿ) "ನಿಲಯ" ಎಂದರೆ, ಸ್ಟುಡಿಯೋಗಳನ್ನು ಅಥವಾ ವಾಹಕಗಳನ್ನು ಅಥವಾ ಅವೆರಡನ್ನು ಹೊಂದಿರುವ ಯಾವುದೇ ಪ್ರಸಾರಣ ಕೇಂದ್ರ ಎಂದು ಅರ್ಥ ಮತ್ತು ಅದು ಮರು ಪ್ರಸಾರ ಕೇಂದ್ರವನ್ನು ಒಳಗೊಳ್ಳುತ್ತದೆ;

(ಡಬ್ಲ್ಯೂ) "ಪೂರ್ಣಕಾಲಿಕ ಸದಸ್ಯ" ಎಂದರೆ, ಕಾರ್ಯನಿರ್ವಾಹಕ ಸದಸ್ಯ, ಸದಸ್ಯ (ಹಣಕಾಸು) ಅಥವಾ ಸದಸ್ಯ (ಸಿಬ್ಬಂದಿ) ಎಂದು ಅರ್ಥ;

(ಎಕ್ಸ್) "ವರ್ಷ" ಎಂದರೆ, ಹಣಕಾಸು ವರ್ಷ ಎಂದು ಅರ್ಥ.

## ಅಧ್ಯಾಯ II

### ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ)

3. **ನಿಗಮದ ಸ್ಥಾಪನೆ ಮತ್ತು ರಚನೆ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಎಂಬ ಹೆಸರಿನ ಒಂದು ನಿಗಮವನ್ನು ಸ್ಥಾಪಿಸತಕ್ಕದ್ದು.

(2) ನಿಗಮವು, ಮೇಲೆ ಹೇಳಿದ ಹೆಸರುಳ್ಳ, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರನ್ನು ಮಾಡಿಕೊಳ್ಳುವ ಅಧಿಕಾರದೊಂದಿಗೆ ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು, ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ನಿಗಮದ ಕೇಂದ್ರ ಕಾರ್ಯಸ್ಥಾನವು ನವದೆಹಲಿಯಲ್ಲಿರತಕ್ಕದ್ದು ಮತ್ತು ನಿಗಮವು ಭಾರತದ ಇತರ ಸ್ಥಳಗಳಲ್ಲಿ ಮತ್ತು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ, ಭಾರತದ ಹೊರಗಡೆ ಕಚೇರಿಗಳನ್ನು, ಕೇಂದ್ರಗಳನ್ನು ಅಥವಾ ನಿಲಯಗಳನ್ನು ಸ್ಥಾಪಿಸಬಹುದು.

(4) ನಿಗಮದ ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ಪ್ರಸಾರ ಭಾರತಿ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು. ಅದು ಈ ಅಧಿನಿಯಮದ ಮೇರೆಗೆ ನಿಗಮವು ಚಲಾಯಿಸಬಹುದಾದ ಅಥವಾ ಮಾಡಬಹುದಾದ ಅಂತಹ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂತಹ ಎಲ್ಲ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡಬಹುದು.

(5) ಮಂಡಲಿಯು,–

(ಎ) ಅಧ್ಯಕ್ಷನನ್ನು;

(ಬಿ) ಒಬ್ಬ ಕಾರ್ಯನಿರ್ವಾಹಕ ಸದಸ್ಯನನ್ನು;

(ಸಿ) ಒಬ್ಬ ಸದಸ್ಯನನ್ನು (ಹಣಕಾಸು);

(ಡಿ) ಒಬ್ಬ ಸದಸ್ಯನನ್ನು (ಸಿಬ್ಬಂದಿ);

(ಇ) ಆರು ಅರೆಕಾಲಿಕ ಸದಸ್ಯರನ್ನು;

(ಎಫ್) ಮಹಾನಿರ್ದೇಶಕರನ್ನು (ಆಕಾಶವಾಣಿ), ಪದನಿಮಿತ್ತ;

(ಜಿ) ಮಹಾನಿರ್ದೇಶಕರನ್ನು (ದೂರದರ್ಶನ), ಪದನಿಮಿತ್ತ;

(ಹೆಚ್) ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯವು ನಾಮನಿರ್ದೇಶಿಸಬೇಕಾದ, ಆ ಮಂತ್ರಾಲಯದ ಒಬ್ಬ ಪ್ರತಿನಿಧಿಯನ್ನು; ಮತ್ತು

(ಐ) ನಿಗಮದ ನೌಕರರ ಇಬ್ಬರು ಪ್ರತಿನಿಧಿಗಳನ್ನು, ಅವರಲ್ಲಿ ಒಬ್ಬರನ್ನು ಇಂಜಿನಿಯರಿಂಗ್ ಸಿಬ್ಬಂದಿಯೊಳಗಿಂದ ಚುನಾಯಿಸತಕ್ಕದ್ದು ಮತ್ತು ಒಬ್ಬರನ್ನು ಇತರ ನೌಕರರೊಳಗಿಂದ ಚುನಾಯಿಸತಕ್ಕದ್ದು

– ಒಳಗೊಂಡಿರತಕ್ಕದ್ದು.

(6) ನಿಗಮವು, ತನ್ನ ಪ್ರಕಾರ್ಯಗಳನ್ನು, ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ದಕ್ಷತೆಯಿಂದ ನೆರವೇರಿಸಲು, ಚಲಾಯಿಸಲು ಮತ್ತು ನಿರ್ವಹಿಸಲು ಅವಶ್ಯವೆನಿಸಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು:

ಪರಂತು, ಪ್ರತಿಯೊಂದು ಸಮಿತಿಯ ಎಲ್ಲ ಅಥವಾ ಬಹುಸಂಖ್ಯಾತ ಸದಸ್ಯರು ಸದಸ್ಯರಾಗಿರತಕ್ಕದ್ದು ಮತ್ತು ಸದಸ್ಯನಾಗಿಲ್ಲದ ಯಾವುದೇ ಅಂತಹ ಸಮಿತಿಯ ಸದಸ್ಯನು ಸಮಿತಿಯ ಸಭೆಗಳಿಗೆ ಹಾಜರಾಗುವ ಮತ್ತು ಅದರ ವ್ಯವಹರಣೆಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಮಾತ್ರ ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(7) ನಿಗಮವು, ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪಾಲಿಸಲು, ಯಾವ ವ್ಯಕ್ತಿಯ ನೆರವು ಅಥವಾ ಸಲಹೆಯು ತನಗೆ ಅಗತ್ಯವೆಂದು ಬಯಸುವುದೋ ಆ ವ್ಯಕ್ತಿಯೊಂದಿಗೆ ಸಹವರ್ತಿಯಾಗಬಹುದು ಮತ್ತು ಹಾಗೆ ಸಹವರ್ತಿಯಾದ ವ್ಯಕ್ತಿಯು ಯಾವ ಉದ್ದೇಶಗಳಿಗಾಗಿ ಅವನು ಸಹವರ್ತಿಯಾಗಿದ್ದನೋ ಆ ಉದ್ದೇಶಗಳಿಗೆ ಸುಸಂಬದ್ಧವಾಗುವಂತೆ ಮಂಡಲಿಯ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(8) ಮಂಡಲಿಯ ಅಥವಾ (6)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ನೇಮಕ ಮಾಡಿದ ಯಾವುದೇ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಮಂಡಲಿಯಲ್ಲಿನ ಅಥವಾ ಅಂತಹ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಬಿ) ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಅಥವಾ ಅಂತಹ ಸಮಿತಿಯ ಸದಸ್ಯನ ನೇಮಕದಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟು ಮಾಡದ ಮಂಡಲಿಯ ಅಥವಾ ಅಂತಹ ಸಮಿತಿಯ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷದ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

4. **ಅಧ್ಯಕ್ಷನ ಮತ್ತು ಇತರ ಸದಸ್ಯರ ನೇಮಕ.**– (1) ಪದನಿಮಿತ್ತ ಸದಸ್ಯರನ್ನು, ನಾಮನಿರ್ದೇಶಿತ ಸದಸ್ಯರನ್ನು ಮತ್ತು ಚುನಾಯಿತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು, –

(ಎ) ರಾಜ್ಯಸಭೆಯ ಸಭಾಪತಿ, – ಅವನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಭಾರತ ಪತ್ರಿಕಾ ಪರಿಷತ್ತು ಅಧಿನಿಯಮ, 1978 (1978ರ 37)ರ 4ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ಪತ್ರಿಕಾ ಪರಿಷತ್ತಿನ ಅಧ್ಯಕ್ಷ; ಮತ್ತು

(ಸಿ) ಭಾರತದ ರಾಷ್ಟ್ರಪತಿಯಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ

– ಇವರನ್ನೊಳಗೊಂಡ ಸಮಿತಿಯ ಶಿಫಾರಸ್ಸಿನ ಮೇಲೆ ಭಾರತದ ರಾಷ್ಟ್ರಪತಿಯು ನೇಮಕಮಾಡತಕ್ಕದ್ದು.

(2) ಸದಸ್ಯರ ಯಾವುದೇ ನೇಮಕವು, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(3) ಅಧ್ಯಕ್ಷನು ಮತ್ತು ಅರೆಕಾಲಿಕ ಸದಸ್ಯರು ಸಾರ್ವಜನಿಕ ಜೀವನದಲ್ಲಿ ಖ್ಯಾತ ವ್ಯಕ್ತಿಗಳಾಗಿರತಕ್ಕದ್ದು; ಕಾರ್ಯನಿರ್ವಾಹಕ ಸದಸ್ಯನು ಆಡಳಿತ, ವ್ಯವಸ್ಥಾಪನೆ, ಪ್ರಸಾರಣ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ನಾಟಕ ಅಥವಾ ಪತ್ರಿಕೋದ್ಯಮ, ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು; ಸದಸ್ಯನು (ಹಣಕಾಸು) ಹಣಕಾಸಿನ ವಿಷಯಗಳ ಬಗ್ಗೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಸದಸ್ಯನು (ಸಿಬ್ಬಂದಿ), ಸಿಬ್ಬಂದಿ ವ್ಯವಸ್ಥಾಪನೆ ಮತ್ತು ಆಡಳಿತದ ಬಗ್ಗೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಸಮಿತಿಯು ಮಾಡಿದ ಶಿಫಾರಸ್ಸುಗಳು ಈ ಪ್ರಕರಣದ ಮೇರೆಗಿನ ನೇಮಕಗಳ ಉದ್ದೇಶಗಳಿಗೆ ಬಂಧನಕಾರಿಯಾಗಿರತಕ್ಕದ್ದು.

**5. ಕಾರ್ಯನಿರ್ವಾಹಕ ಸದಸ್ಯನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಕಾರ್ಯನಿರ್ವಾಹಕ ಸದಸ್ಯನು ನಿಗಮದ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಮಂಡಲಿಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು, ಮಂಡಲಿಯು ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಅದರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**6. ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.–** *(1) ಅಧ್ಯಕ್ಷನು ಅರೆಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅವನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಎಪ್ಪತ್ತು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡಿರತಕ್ಕದ್ದು.

ಪರಂತು, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ತಿದ್ದುಪಡಿ ಅಧಿನಿಯಮ, 2008 (2008ರ ಸಂಖ್ಯೆ 12)ರ ಪ್ರಾರಂಭದ ನಿಕಟಪೂರ್ವದಲ್ಲಿ ಅಧ್ಯಕ್ಷನಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಆತನ ನೇಮಕವು ಈ ಉಪಪ್ರಕರಣದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನದಂದು ಹಾಗೆ ಅಧ್ಯಕ್ಷನಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಪದಧಾರಣ ಮಾಡಿರುವುದು ನಿಂತು ಹೋದ ಕಾರಣದಿಂದ ಆತನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಸದಸ್ಯನು (ಹಣಕಾಸು) ಮತ್ತು ಸದಸ್ಯನು (ಸಿಬ್ಬಂದಿ) ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಸದಸ್ಯನು, ತಾನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೆರಡು ವರ್ಷ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2ಎ) ಕಾರ್ಯನಿರ್ವಾಹಕ ಸದಸ್ಯನು ಪೂರ್ಣಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅವನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೈದು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ತಿದ್ದುಪಡಿ ಅಧಿನಿಯಮ, 2008ರ ಪ್ರಾರಂಭದ ನಿಕಟಪೂರ್ವದಲ್ಲಿ ಕಾರ್ಯನಿರ್ವಾಹಕ ಸದಸ್ಯನಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಆತನ ನೇಮಕವು ಈ ಉಪಪ್ರಕರಣದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನದಂದು ಹಾಗೆ ಕಾರ್ಯನಿರ್ವಾಹಕ ಸದಸ್ಯನಾಗಿ ಪದಧಾರಣ ಮಾಡಿರುವುದು ನಿಂತು ಹೋದ ಕಾರಣದಿಂದ ಆತನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) ಅರೆಕಾಲಿಕ ಸದಸ್ಯರ ಪದಾವಧಿಯು ಆರು ವರ್ಷಗಳಾಗಿರತಕ್ಕದ್ದು; ಆದರೆ ಅಂತಹ ಸದಸ್ಯರ ಪೈಕಿ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡನೇ ವರ್ಷವು ಮುಕ್ತಾಯವಾದ ಮೇಲೆ ನಿವೃತ್ತರಾಗತಕ್ಕದ್ದು.

---

* (1)ನೇ ಉಪಪ್ರಕರಣದ ಬದಲಾಗಿ 2008ರ 12ನೇ ಸಂಖ್ಯೆಯ ಅಧಿನಿಯಮದ 2ನೇ ಉಪಪ್ರಕರಣದ ಮೂಲಕ ಪ್ರತ್ಯಾಯೋಜಿಸಲಾಗಿದೆ.

(4) ಚುನಾಯಿತ ಸದಸ್ಯನ ಪದಾವಧಿಯು, ಎರಡು ವರ್ಷಗಳವರೆಗೆ ಅಥವಾ ಅವನು ನಿಗಮದ ನೌಕರನಾಗಿರುವುದು ನಿಂತು ಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಇರತಕ್ಕದ್ದು.

(5) ನಿಗಮವು ಸ್ಥಾಪನೆಯಾದ ನಂತರ ಸಾಧ್ಯವಾದಷ್ಟು ಬೇಗನೆ, ಭಾರತದ ರಾಷ್ಟ್ರಪತಿಯು, ಆದೇಶದ ಮೂಲಕ, ಅರೆಕಾಲಿಕ ಸದಸ್ಯರೆಂದು ಹಾಗೆ ಪದ ಧಾರಣ ಮಾಡಿದ ಸದಸ್ಯರ ಪೈಕಿ ಮೂರನೇ ಒಂದು ಭಾಗದಷ್ಟು ಸದಸ್ಯರು ಆ ತರುವಾಯ ಪ್ರತಿ ಎರಡು ವರ್ಷಕ್ಕೊಮ್ಮೆ ನಿವೃತ್ತಿ ಹೊಂದತಕ್ಕದ್ದೆಂಬ ದೃಷ್ಟಿಯಿಂದ ಅರೆಕಾಲಿಕ ಸದಸ್ಯರ ಪೈಕಿ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸುವುದಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಉಪಬಂಧವನ್ನು ರಚಿಸಬಹುದು.

(6) ಅಧ್ಯಕ್ಷನ ಪದವನ್ನು ಹೊಂದಿರುವ ವ್ಯಕ್ತಿಯ ಅಥವಾ ಯಾರೇ ಇತರ ಸದಸ್ಯನ ಪದಾವಧಿಯ ಮುಕ್ತಾಯಕ್ಕೆ ಮುಂಚೆ, ಯಾವುದೇ ಕಾರಣಕ್ಕಾಗಿ ಖಾಲಿಸ್ಥಾನವು ಉಂಟಾದಲ್ಲಿ, ಅಂತಹ ಖಾಲಿಸ್ಥಾನವನ್ನು ಆಕಸ್ಮಿಕ ಖಾಲಿ ಸ್ಥಾನವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂತಹ ಖಾಲಿಸ್ಥಾನವನ್ನು ಭರ್ತಿಮಾಡಲು ನೇಮಕಗೊಂಡ ಅಥವಾ ಚುನಾಯಿತನಾದ ವ್ಯಕ್ತಿಯು, ಅಂತಹ ಖಾಲಿಸ್ಥಾನವು ಉಂಟಾಗಿರದಿದ್ದರೆ ಅವನ ಪದದಲ್ಲಿನ ಪೂರ್ವಾಧಿಕಾರಿಯು ಪದಧಾರಣ ಮಾಡಬಹುದಾಗಿದ್ದ, ಮುಕ್ತಾಯವಾಗದೆ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(7) ಪೂರ್ಣಕಾಲಿಕ ಸದಸ್ಯರು ನಿಗಮದ ನೌಕರರಾಗಿರತಕ್ಕದ್ದು ಮತ್ತು ಸಂಬಳಗಳಿಗೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಸಂಬಳಗಳನ್ನು ಮತ್ತು ಭತ್ಯೆಗಳನ್ನು ಮತ್ತು ಸೇವಾ ಷರತ್ತುಗಳನ್ನು ಅವರ ನೇಮಕದ ನಂತರ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.

(8) ಅಧ್ಯಕ್ಷನು ಮತ್ತು ಅರೆಕಾಲಿಕ ಸದಸ್ಯರು ನಿಯಮಿಸಬಹುದಾದಂತಹ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

**7. ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ತೆಗೆದುಹಾಕುವುದು ಮತ್ತು ಅಮಾನತಿನಲ್ಲಿ ಇಡುವುದು.–** (1) (3)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಮತ್ತು ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಅಥವಾ ಯಾರೇ ಇತರ ಸದಸ್ಯನನ್ನು, ಭಾರತದ ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖದ ಮೇರೆಗೆ, ಸರ್ವೋಚ್ಚ ನ್ಯಾಯಾಲಯವು ನಿಯಮಗಳ ಮೂಲಕ ಉಪಬಂಧಿಸಬಹುದಾದಂತಹ ಪ್ರಕ್ರಿಯೆಗನುಸಾರವಾಗಿ ವಿಚಾರಣೆಯನ್ನು ನಡೆಸಿ, ದುರ್ವರ್ತನೆಯ ಕಾರಣದ ಮೇಲೆ, ಸಂದರ್ಭಾನುಸಾರ, ಆ ಅಧ್ಯಕ್ಷನನ್ನು ಅಥವಾ ಅಂತಹ ಇತರ ಸದಸ್ಯನನ್ನು ತೆಗೆದುಹಾಗಬೇಕೆಂದು ವರದಿ ಮಾಡಿದ ನಂತರ, ಅಂತಹ ಕಾರಣದ ಮೇಲೆ ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರ ಅವನನ್ನು ಪದದಿಂದ ತೆಗೆದುಹಾಕತಕ್ಕದ್ದು.

(2) ರಾಷ್ಟ್ರಪತಿಯು, ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಅಥವಾ ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಅಥವಾ ಇತರ ಸದಸ್ಯನನ್ನು, (1)ನೇ ಉಪಪ್ರಕರಣದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಯಾರಿಗೆ ಸಂಬಂಧಿಸಿದಂತೆ ಉಲ್ಲೇಖವನ್ನು ಮಾಡಲಾಗಿದೆಯೋ, ಅವರಿಗೆ ಸಂಬಂಧಿಸಿದಂತೆ ಅಂಥ ಉಲ್ಲೇಖದ ಮೇಲೆ ಸರ್ವೋಚ್ಚ ನ್ಯಾಯಾಲಯದ ವರದಿಯನ್ನು ಸ್ವೀಕರಿಸಿದ ನಂತರ ರಾಷ್ಟ್ರಪತಿಯು ಆದೇಶವನ್ನು ಮಾಡುವವರೆಗೆ, ಪದದಿಂದ ಅಮಾನತುಗೊಳಿಸಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಷ್ಟ್ರಪತಿಯು, ಆದೇಶದ ಮೂಲಕ, ಅಧ್ಯಕ್ಷನು ಅಥವಾ ಯಾರೇ ಪೂರ್ಣಕಾಲಿಕ ಸದಸ್ಯನು,–

(ಎ) ಭಾರತದ ನಾಗರಿಕನಾಗಿರುವುದು ನಿಂತುಹೋಗಿದ್ದರೆ; ಅಥವಾ

(ಬಿ) ದಿವಾಳಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಸಿ) ತನ್ನ ಪದಾವಧಿಯಲ್ಲಿ, ತನ್ನ ಪದದ ಕರ್ತವ್ಯಗಳನ್ನು ಹೊರತುಪಡಿಸಿ ಹೊರಗಿನ ಯಾವುದೇ ವೇತನ ಪಡೆಯುವ ಉದ್ಯೋಗದಲ್ಲಿ ನಿರತನಾಗಿದ್ದರೆ; ಅಥವಾ

(ಡಿ) ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಇ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ, ದೈಹಿಕ ಅಥವಾ ಮಾನಸಿಕ ದೌರ್ಬಲ್ಯದ ಕಾರಣಕ್ಕಾಗಿ ಪದದಲ್ಲಿ ಮುಂದುವರಿಯಲು ಅಸಮರ್ಥನಾಗಿದ್ದರೆ

– ಅಂತಹ ಅಧ್ಯಕ್ಷನನ್ನು ಅಥವಾ ಅಂಥ ಪೂರ್ಣಕಾಲಿಕ ಸದಸ್ಯನನ್ನು ಅವನ ಪದದಿಂದ ತೆಗೆದುಹಾಕಬಹುದು:

ಪರಂತು, ರಾಷ್ಟ್ರಪತಿಯು, ಆದೇಶದ ಮೂಲಕ, ಯಾರೇ ಅರೆಕಾಲಿಕ ಸದಸ್ಯನು ದಿವಾಳಿ ಎಂದು ನ್ಯಾಯನಿರ್ಣೀತನಾಗಿದ್ದರೆ ಅಥವಾ ಅವನು ನೈತಿಕ ಅಧಃಪತನವನನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ರಾಷ್ಟ್ರಪತಿಯ ಅಭಿಪ್ರಾಯದಲ್ಲಿ, ದೈಹಿಕ ಅಥವಾ ಮಾನಸಿಕ ದೌರ್ಬಲತೆಯ ಕಾರಣಕ್ಕಾಗಿ ಪದದಲ್ಲಿ ಮುಂದುವರಿಯಲು ಅಸಮರ್ಥನಾಗಿದ್ದರೆ, ಆತನನ್ನು ಅವನ ಪದದಿಂದ ತೆಗೆದು ಹಾಕಬಹುದು.

(4) ಯಾರೇ ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಅಥವಾ ಯಾರೇ ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನು ಅಥವಾ ಯಾರೇ ಪೂರ್ಣಕಾಲಿಕ ಸದಸ್ಯನು, ನಿಗಮದ ಅಥವಾ ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಹೊಂದಿರುತ್ತಿದ್ದರೆ ಸದಸ್ಯನಾಗಿ ಅಲ್ಲದೆ ಅದರ ಯಾವುದೇ ಲಾಭದಲ್ಲಿ ಅಥವಾ ಅದರಿಂದ ಉಂಟಾಗುವ ಯಾವುದೇ ಪ್ರಯೋಜನದಲ್ಲಿ ಅಥವಾ ಉಪಲಬ್ಧಿಯಲ್ಲಿ ಮತ್ತು ನಿಗಮಿತ ಕಂಪನಿಯ ಇತರ ಸದಸ್ಯರೊಂದಿಗೆ ಸಾಮಾನ್ಯವಾಗಿ ಯಾವುದೇ ರೀತಿಯಲ್ಲಿ ಭಾಗವಹಿಸಿದರೆ, ಅವನನ್ನು (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

(5) ಅರೆಕಾಲಿಕ ಸದಸ್ಯನು, ನಿಗಮದ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಹೊಂದಿರುತ್ತಿದ್ದರೆ, ಅವನನ್ನು (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

(6) ಅಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು, ಭಾರತದ ರಾಷ್ಟ್ರಪತಿಗೆ ಲಿಖಿತ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂತಹ ರಾಜೀನಾಮೆಯು ಅಂಗೀಕೃತವಾದ ಮೇಲೆ, ಅಧ್ಯಕ್ಷನು ಅಥವಾ ಇತರ ಸದಸ್ಯನು ತನ್ನ ಪದವನ್ನು ತೆರವುಗೊಳಿಸಿದ್ದಾನೆಂದು ಭಾವಿಸತಕ್ಕದ್ದು.

**8**. **ಮಂಡಲಿಯ ಸಭೆಗಳು**.– (1) ಮಂಡಲಿಯು, ತನ್ನ ಸಭೆಗಳ ಕಾರ್ಯಕಲಾಪವನ್ನು ನಿರ್ವಹಿಸುವ ಬಗ್ಗೆ (ಅಂತಹ ಸಭೆಗಳಲ್ಲಿ ಕೋರಂನ್ನೂ ಒಳಗೊಂಡಂತೆ) ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಪ್ರತೀ ವರ್ಷ ಆರಕ್ಕಿಂತ ಕಡಿಮೆ ಸಭೆಗಳನ್ನು ನಡೆಸತಕ್ಕದ್ದಲ್ಲ, ಆದರೆ ಒಂದು ಸಭೆಯ ಮತ್ತು ಮತ್ತೊಂದು ಸಭೆಯ ನಡುವೆ ಮೂರು ತಿಂಗಳುಗಳ ಅಂತರವಿರತಕ್ಕದ್ದಲ್ಲ.

(2) ಸದಸ್ಯನು, ಅಧ್ಯಕ್ಷನ ಅನುಮತಿಯಿಲ್ಲದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ, ತನ್ನ ಪದವನ್ನು ತೆರವುಗೊಳಿಸಿದ್ದಾನೆಂದು ಭಾವಿಸತಕ್ಕದ್ದು.

(3) ಅಧ್ಯಕ್ಷನು ಮಂಡಲಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವನು ಯಾವುದೇ ಕಾರಣದಿಂದ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಕಾರ್ಯನಿರ್ವಾಹಕ ಸದಸ್ಯನು ಮತ್ತು ಅವರಿಬ್ಬರು ಗೈರು ಹಾಜರಾದಲ್ಲಿ, ಅಂತಹ ಸಭೆಯಲ್ಲಿ ಹಾಜರಿರುವ ಸದಸ್ಯರು ಚುನಾಯಿಸಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು, ಸಮಸಮವಾಗಿ ಮತಗಳು ಬಂದ ಪಕ್ಷದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

**9. ನಿಗಮದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ನಿಯಮಿಸಬಹುದಾದಂತಹ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ನಿಗಮವು, ನೌಕರಿಭರ್ತಿ ಮಂಡಲಿಯೊಂದಿಗೆ ಸಮಾಲೋಚಿಸಿದ ನಂತರ, ಮಹಾನಿರ್ದೇಶಕನನ್ನು (ಆಕಾಶವಾಣಿ), ಮಹಾನಿರ್ದೇಶಕನನ್ನು (ದೂರದರ್ಶನ) ಮತ್ತು ಅವಶ್ಯವೆನಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು.

(2) ಅಂಥ ಅಧಿಕಾರಿಗಳ ಮತ್ತು ನೌಕರರ ನೌಕರಿಭರ್ತಿಯ ವಿಧಾನ ಮತ್ತು ಅದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳು ಮತ್ತು ಅಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ಷರತ್ತುಗಳು ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

**10. ನೌಕರಿಭರ್ತಿ ಮಂಡಲಿಗಳ ಸ್ಥಾಪನೆ.–** (1) ನಿಗಮವು, ಗೊತ್ತುಪಡಿಸಿದ ದಿನದ ನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಮತ್ತು ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, 9ನೇ ಪ್ರಕರಣದ ಉದ್ದೇಶಗಳಿಗಾಗಿ, ನಿಗಮದ ಸದಸ್ಯರನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಹೊರತುಪಡಿಸಿ ಪೂರ್ಣವಾಗಿ ಇತರ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ಅಥವಾ ಹೆಚ್ಚು ನೌಕರಿಭರ್ತಿ ಮಂಡಲಿಗಳನ್ನು ಸ್ಥಾಪಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯುಳ್ಳ ಹುದ್ದೆಗಳಿಗೆ ನೇಮಕ ಮಾಡುವ ಉದ್ದೆಶಗಳಿಗಾಗಿ, ನೌಕರಿಭರ್ತಿ ಮಂಡಲಿಯು, ಅಧ್ಯಕ್ಷನನ್ನು, ಇತರ ಸದಸ್ಯರನ್ನು, ಪದನಿಮಿತ್ತ ಸದಸ್ಯರನ್ನು, ನಾಮನಿರ್ದೇಶಿತ ಸದಸ್ಯರನ್ನು ಮತ್ತು ಚುನಾಯಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ರಚಿತವಾಗಿರುವ ನೌಕರಿ ಭರ್ತಿ ಮಂಡಲಿಯ ಸದಸ್ಯರ ವಿದ್ಯಾರ್ಹತೆಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅಂತಹ ಸದಸ್ಯರು ಯಾವ ಅವಧಿಗಾಗಿ ಪದಧಾರಣ ಮಾಡತಕ್ಕದ್ದೋ ಆ ಅವಧಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

**11. ಅಧಿಕಾರಿಗಳ ಮತ್ತು ನೌಕರರ ಸ್ಥಾನಮಾನ.–** (1) ಗೊತ್ತುಪಡಿಸಿದ ದಿನಕ್ಕೂ ಮುಂಚೆ ಆಕಾಶವಾಣಿ ಅಥವಾ ದೂರದರ್ಶನದ ಉದ್ದೇಶಕ್ಕಾಗಿ ನೇಮಕಾತಿಯಾಗಿದ್ದ ಮತ್ತು 2000ರ ಏಪ್ರಿಲ್, 1 ರಂದು ಇದ್ದಂತೆ ನಿಗಮದಲ್ಲಿ ಸೇವೆಯಲ್ಲಿರುವ ಎಲ್ಲ ಅಧಿಕಾರಿಗಳನ್ನು ಮತ್ತು ನೌಕರರನ್ನು 2000ರ ಏಪ್ರಿಲ್, 1 ರಿಂದ ಜಾರಿಗೆ ಬರುವಂತೆ ನಿಗಮದಲ್ಲಿ ಪ್ರತಿನಿಯೋಜನೆ ಮೇಲಿದ್ದಾರೆಂದು ಭಾವಿಸತಕ್ಕದ್ದು ಮತ್ತು ಅವರ ವಯೋನಿವೃತ್ತಿಯವರೆಗೆ ಅವರು ಹಾಗೆ ಮುಂದುವರೆಯತಕ್ಕದ್ದು.

(2) ಗೊತ್ತುಪಡಿಸಿದ ದಿನದಂದು ಅಥವಾ ತರುವಾಯ 2007ರ ಅಕ್ಟೋಬರ್, 5ನೇ ದಿನದವರೆಗಿನ ಕಾಲಾವಧಿಯಲ್ಲಿ ನೇಮಕಾತಿಯಾಗಿದ್ದ ಎಲ್ಲ ಅಧಿಕಾರಿಗಳನ್ನು ಮತ್ತು ನೌಕರರನ್ನು, 2000ರ ಏಪ್ರಿಲ್, 1ರಿಂದ ಅಥವಾ ನಿಗಮದ ಸೇವೆಗೆ ಅವರು ಸೇರಿದ ದಿನಾಂಕದಿಂದ ಜಾರಿಗೆ ಬರುವಂತೆ ಇದರಲ್ಲಿ ಯಾವುದು ನಂತರವೋ ಅಲ್ಲಿಂದ ಮತ್ತು ಅವರ ವಯೋನಿವೃತ್ತಿಯವರೆಗೆ ಅವರು ನಿಗಮದ ಪ್ರತಿನಿಯೋಜನೆ ಮೇಲಿದ್ದಾರೆಂದು ಭಾವಿಸತಕ್ಕದ್ದು.

**ವಿವರಣೆ.–** ಉಪ ಪ್ರಕರಣಗಳು (1)ರ ಮತ್ತು (2)ರ ಉದ್ದೇಶಕ್ಕಾಗಿ, **"**ನೇಮಕಾತಿಗೊಂಡಿದ್ದ ಅಧಿಕಾರಿಗಳು ಮತ್ತು ನೌಕರರು**"** ಎಂದರೆ, ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಅಡಿಯಲ್ಲಾಗಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳಿಗನುಸಾರವಾಗಿಯಾಗಲಿ ನೇಮಕಾತಿಗೊಂಡಿದ್ದ ಅಧಿಕಾರಿಗಳು ಮತ್ತು ನೌಕರರು. ಆದರೆ, ದಿನಗೂಲಿ, ಸಾಂದರ್ಭಿಕ, ಅಡ್–ಹಾಕ್ ಅಥವಾ ವರ್ಕ್ ಚಾರ್ಜ್‌ಡ್ ಆಧಾರದ ಮೇಲೆ ಪ್ರತಿನಿಯೋಜಿಸಿಕೊಂಡಿದ್ದ ಅಥವಾ ನೇಮಕಗೊಂಡಿದ್ದ ವ್ಯಕ್ತಿಗಳು ಇದರಲ್ಲಿ ಒಳಗೊಳ್ಳತಕ್ಕದ್ದಲ್ಲ.

(3) ಉಪ–ಪ್ರಕರಣ (1)ರಲ್ಲಿ ಮತ್ತು ಉಪ–ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಮತ್ತು ನೌಕರರು, ಕೇಂದ್ರ ಸರ್ಕಾರದ ನೌಕರನಿಗೆ ಅನ್ವಯವಾಗಬಹುದಾದಂಥ ವೇತನಕ್ಕೆ ಮತ್ತು ಎಲ್ಲ ಇತರ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಗಳು ಮತ್ತು ನೌಕರರು, ಯಾವುದೇ ಪ್ರತಿನಿಯೋಜನೆಯ ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನಿಗಮವು ಉಪ–ಪ್ರಕರಣ (1)ರಲ್ಲಿ ಮತ್ತು ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳ ಮತ್ತು ನೌಕರರ ಮೇಲೆ ಶಿಸ್ತು ಮತ್ತು ಮೇಲ್ವಿಚಾರಣಾ ಅಧಿಕಾರಗಳನ್ನು ಮತ್ತು ಸಂಪೂರ್ಣ ನಿಯಂತ್ರಣವನ್ನು ಹೊಂದಿರತಕ್ಕದ್ದು, ಒಂದು ಸ್ಥಳದಿಂದ, ಹುದ್ದೆಯಿಂದ ಅಥವಾ ಮಾಧ್ಯಮದಿಂದ ಮತ್ತೊಂದಕ್ಕೆ ವರ್ಗಾವಣೆ ಮಾಡುವ ಮತ್ತು ಅಮಾನತ್ತುಗೊಳಿಸುವ ಅಧಿಕಾರವನ್ನು ಒಳಗೊಂಡು ಶಿಸ್ತು ವ್ಯವಹರಣೆಗಳನ್ನು ಪ್ರಾರಂಭಿಸುವ ಮತ್ತು ದೊಡ್ಡ ಮತ್ತು ಚಿಕ್ಕ ದಂಡನೆಗಳನ್ನು ವಿಧಿಸುವ ಅಧಿಕಾರವನ್ನು ಒಳಗೊಂಡಿರತ್ತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವ, ತೆಗೆದುಹಾಕುವ ಅಥವಾ ವಜಾಗೊಳಿಸುವ ಮುಖ್ಯ ದಂಡನೆಗಳನ್ನು ವಿಧಿಸುವ ಅಧಿಕಾರವನ್ನು ಚಲಾಯಿಸತಕ್ಕದ್ದು.

(5) 2007ರ ಅಕ್ಟೋಬರ್, 5ರ ತರುವಾಯ ನೇಮಕಾತಿಗೊಂಡಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ನಿಗಮದ ಅಧಿಕಾರಿಗಳಾಗಿರತಕ್ಕದ್ದು ಮತ್ತು ನೌಕರರಾಗಿರತಕ್ಕದ್ದು ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಸೇವಾ ಷರತ್ತುಗಳು ಅನ್ವಯವಾಗತಕ್ಕದ್ದು.

**11ಎ. ಕೆಲವು ಅಧಿಕಾರಿಗಳಿಗೆ ಮತ್ತು ನೌಕರರಿಗೆ 11ನೆಯ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.–** (1) ಪ್ರಕರಣ 11ರ ಉಪಬಂಧಗಳು, ಭಾರತೀಯ ಮಾಹಿತಿ ಸೇವೆಯಲ್ಲಿ, ಕೇಂದ್ರ ಸಚಿವಾಲಯ ಸೇವೆಯಲ್ಲಿ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ವೃಂದದ ಹೊರಗಿನ ಯಾವುದೇ ವೃಂದದಲ್ಲಿ ಯಾವುದೇ ಇತರ ಸೇವೆಯಲ್ಲಿ ಗೊತ್ತುಪಡಿಸಿದ ದಿನಕ್ಕೆ ಮುಂಚೆ ಆಕಾಶವಾಣಿಯಲ್ಲಿ ಅಥವಾ ದೂರದರ್ಶನದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಥವಾ ಆ ದಿನದ ತರುವಾಯ ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.

(2) ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ನಿಗಮದ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿರ್ದಿಷ್ಟಪಡಿಸಿರಬಹುದಾದಂತಿರತಕ್ಕದ್ದು.

**11ಬಿ. ಆಕಾಶವಾಣಿ ಮತ್ತು ದೂರದರ್ಶನದ ಹುದ್ದೆಗಳನ್ನು ನಿಗಮಕ್ಕೆ ವರ್ಗಾವಣೆ ಮಾಡುವುದು.–** (1) ಉಪ–ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಕೇಡರ್‌ಗಳ ಸಂಖ್ಯೆಯಲ್ಲಿ ಒಳಗೊಂಡಿರುವ ಹುದ್ದೆಗಳನ್ನು ಹೊರತುಪಡಿಸಿ ಆಕಾಶವಾಣಿ ಮತ್ತು ದೂರದರ್ಶದಲ್ಲಿನ ಈ ಮುಂಚಿನ ಎಲ್ಲ ಹುದ್ದೆಗಳನ್ನು 2000ರ ಏಪ್ರಿಲ್, 1ನೇ ದಿನದಿಂದ ಜಾರಿಗೆ ಬರುವಂತೆ ನಿಗಮಕ್ಕೆ ವರ್ಗಾವಣೆ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಭಾರತೀಯ ಮಾಹಿತಿ ಸೇವೆಯ, ಕೇಂದ್ರ ಸಚಿವಾಲಯದ ಸೇವೆಯ ಸೇವಾ ವೃಂದಗಳ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ವೃಂದದ ಹೊರಗಿನ ಯಾವುದೇ ಕೇಡರ್ ಸಂಖ್ಯೆಯಲ್ಲಿ ಒಳಗೊಂಡಿರುವ ಹುದ್ದೆಗಳಿಗೆ ಸಂಬಂಧಪಟ್ಟಂಥ ಎಲ್ಲ ವಿಷಯಗಳನ್ನು, ನಿಗಮಕ್ಕೆ ಅಂಥ ಹುದ್ದೆಗಳು ಸಂಬಂಧಪಡುವಷ್ಟರ ಮಟ್ಟಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

**12. ನಿಗಮದ ಪ್ರಕಾರ್ಯಗಳು ಮತ್ತು ಅಧಿಕಾರಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸಾರ್ವಜನಿಕರಿಗೆ ಮಾಹಿತಿ ನೀಡಲು, ಶಿಕ್ಷಣ ಒದಗಿಸಲು ಮತ್ತು ಮನರಂಜನೆ ಒದಗಿಸಲು ಮತ್ತು ರೇಡಿಯೋ ಮತ್ತು ದೂರದರ್ಶನದ ಮೂಲಕ ಪ್ರಸಾರಣದ ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಸಾರ್ವಜನಿಕ ಪ್ರಸಾರಣ ಸೇವೆಗಳನ್ನು ಸಂಘಟಿಸುವುದು ಮತ್ತು ನಡೆಸುವುದು ನಿಗಮದ ಪ್ರಾಥಮಿಕ ಕರ್ತವ್ಯವಾಗಿರತಕ್ಕದ್ದು.

**ವಿವರಣೆ.–** ಸಂದೇಹಗಳ ನಿವಾರಣೆಗಾಗಿ ಈ ಪ್ರಕರಣದ ಉಪಬಂಧಗಳು ಭಾರತ ಟೆಲಿಗ್ರಾಫ್ ಅಧಿನಿಯಮ, 1885 (1885ರ 13)ರ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಮತ್ತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(2) ನಿಗಮವು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಈ ಮುಂದಿನ ಉದ್ದೇಶಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ:–

(ಎ) ದೇಶದ ಏಕತೆಯನ್ನು ಮತ್ತು ಅಖಂಡತೆಯನ್ನು ಮತ್ತು ಸಂವಿಧಾನದಲ್ಲಿ ನಿರೂಪಿಸಿದ ಮೌಲ್ಯಗಳನ್ನು ಎತ್ತಿಹಿಡಿಯುವುದು;

(ಬಿ) ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸಾರ್ವಜನಿಕ ಹಿತಾಸಕ್ತಿಯ ಎಲ್ಲ ವಿಷಯಗಳ ಬಗ್ಗೆ ಮುಕ್ತವಾಗಿ, ನಿಜವಾಗಿ ಮತ್ತು ವಸ್ತುನಿಷ್ಠವಾಗಿ ಮಾಹಿತಿ ಪಡೆಯುವ ನಾಗರಿಕರ ಹಕ್ಕನ್ನು ರಕ್ಷಿಸುವುದು, ಮತ್ತು ತನ್ನದೇ ಆದ ಯಾವುದೇ ಅಭಿಪ್ರಾಯವನ್ನು ಅಥವಾ ಸಿದ್ಧಾಂತವನ್ನು ಪ್ರತಿಪಾದಿಸದೆ ಭಿನ್ನ ನಿಲುವುಗಳನ್ನೂ ಒಳಗೊಂಡಂತೆ ಮಾಹಿತಿಯನ್ನು ನಿಷ್ಪಕ್ಷಪಾತವಾಗಿ ಮತ್ತು ಸಮತೋಲಿತ ರೀತಿಯಲ್ಲಿ ಪ್ರಸ್ತುತ ಪಡಿಸುವುದು;

(ಸಿ) ಶಿಕ್ಷಣ ಕ್ಷೇತ್ರಗಳಿಗೆ ವಿಶೇಷ ಗಮನ ನೀಡುವುದು ಮತ್ತು ಸಾಕ್ಷರತೆ, ಕೃಷಿ, ಗ್ರಾಮೀಣಾಭಿವೃದ್ಧಿ, ಪರಿಸರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪ್ರಸಾರ ಮಾಡುವುದು;

(ಡಿ) ಸೂಕ್ತ ಕಾರ್ಯಕ್ರಮಗಳನ್ನು ಪ್ರಸಾರಣ ಮಾಡುವ ಮೂಲಕ ದೇಶದ ವಿವಿಧ ಪ್ರಾಂತ್ಯಗಳ ವೈವಿಧ್ಯಮಯ ಸಂಸ್ಕೃತಿ ಮತ್ತು ಭಾಷೆಗಳಿಗೆ ಸಾಕಷ್ಟು ಪ್ರಸಾರ ಅವಕಾಶವನ್ನು ಒದಗಿಸುವುದು;

(ಇ) ಆರೋಗ್ಯಕರ ಸ್ಪರ್ಧೆ ಮತ್ತು ಕ್ರೀಡಾಮನೋಭಾವದ ಬಗ್ಗೆ ಹುಮ್ಮಸ್ಸನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕ್ರೀಡೆಗಳು ಮತ್ತು ಆಟಗಳಿಗೆ ಸಾಕಷ್ಟು ಪ್ರಸಾರ ಅವಕಾಶವನ್ನು ಒದಗಿಸುವುದು;

(ಎಫ್) ಯುವಕರ ವಿಶೇಷ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತ ಕಾರ್ಯ0ಕ್ರಮಗಳನ್ನು ರೂಪಿಸುವುದು;

(ಜಿ) ಮಹಿಳೆಯ ಸ್ಥಾನಮಾನಕ್ಕೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಪ್ರಜ್ಞೆಯ ತಿಳಿವಳಿಕೆಯನ್ನು ಕೊಡುವುದು ಮತ್ತು ಅದಕ್ಕೆ ಉತ್ತೇಜನ ನೀಡುವುದು ಮತ್ತು ಮಹಿಳೆಯರ ಉನ್ನತಿಗೆ ವಿಶೇಷ ಗಮನವನ್ನು ನೀಡುವುದು;

(ಹೆಚ್) ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸುವುದು ಮತ್ತು ಶೋಷಣೆ, ಅಸಮಾನತೆ ಮತ್ತು ಅಸ್ಪೃಶ್ಯತೆ ಮುಂತಾದಂತಹ ಸಾಮಾಜಿಕ ಅನಿಷ್ಟಗಳ ಬಗ್ಗೆ ಹೋರಾಡುವುದು ಮತ್ತು ಸಮಾಜದ ದುರ್ಬಲವರ್ಗಗಳ ಕಲ್ಯಾಣವನ್ನು ವೃದ್ಧಿಪಡಿಸುವುದು;

(ಐ) ದುಡಿಯುವ ವರ್ಗಗಳ ಹಕ್ಕುಗಳನ್ನು ಸಂರಕ್ಷಿಸುವುದು ಮತ್ತು ಅವರ ಕಲ್ಯಾಣವನ್ನು ವೃದ್ಧಿಪಡಿಸುವುದು;

(ಜೆ) ಗ್ರಾಮೀಣ ಮತ್ತು ದುರ್ಬಲವರ್ಗಗಳ ಜನರ ಮತ್ತು ಗಡಿಪ್ರದೇಶಗಳಲ್ಲಿ, ಹಿಂದುಳಿದ ಅಥವಾ ದೂರದ ಪ್ರದೇಶಗಳಲ್ಲಿ ವಾಸಿಸುವ ಜನರ ಸೇವೆ ಮಾಡುವುದು;

(ಕೆ) ಅಲ್ಪಸಂಖ್ಯಾತರ ಮತ್ತು ಬುಡಕಟ್ಟು ಜನಾಂಗಗಳ ವಿಶೇಷ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಒದಗಿಸುವುದು;

(ಎಲ್) ಮಕ್ಕಳ, ಅಂಧರ, ವೃದ್ಧರ, ಅಂಗವಿಕಲರ ಮತ್ತು ಇತರ ದುರ್ಬಲ ವರ್ಗಗಳ ಜನರ ಹಿತಾಸಕ್ತಿಯನ್ನು ಸಂರಕ್ಷಿಸಲು ವಿಶೇಷ ಕ್ರಮಗಳನ್ನು ಕೈಗೊಳ್ಳುವುದು;

(ಎಂ) ಭಾರತದಲ್ಲಿನ ಭಾಷೆಗಳಲ್ಲಿ ಪರಸ್ಪರ ಸಂಪರ್ಕ ಉಂಟು ಮಾಡುವಂಥ ರೀತಿಯಲ್ಲಿ ಪ್ರಸಾರಣದ ಮೂಲಕ ರಾಷ್ಟ್ರೀಯ ಸಮಗ್ರತೆಯನ್ನು ಪ್ರೋತ್ಸಾಹಿಸುವುದು; ಮತ್ತು ಪ್ರತಿಯೊಂದು ರಾಜ್ಯದಲ್ಲಿ, ಆ ರಾಜ್ಯದ ಭಾಷೆಯಲ್ಲಿ ಪ್ರಾದೇಶಿಕ ಪ್ರಸಾರಣ ಸೇವೆಗಳ ಹಂಚಿಕೆಗೆ ಅನುಕೂಲ ಕಲ್ಪಿಸುವುದು;

(ಎನ್) ಸೂಕ್ತ ತಂತ್ರಜ್ಞಾನದ ಆಯ್ಕೆ ಮತ್ತು ಲಭ್ಯವಿರುವ ಪ್ರಸಾರಣ ತರಂಗಾಂತರಗಳ ಅತ್ಯುತ್ತಮ ಬಳಕೆಯ ಮೂಲಕ ವ್ಯಾಪಕ ಪ್ರಸಾರಣ ಕವರೇಜ್ ಅನ್ನು ಒದಗಿಸುವುದು ಮತ್ತು ಉನ್ನತ ಗುಣಮಟ್ಟದ ಗ್ರಹಿಕೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(ಓ) ರೇಡಿಯೋ ಮತ್ತು ದೂರದರ್ಶನ ಪ್ರಸಾರಣ ತಂತ್ರಜ್ಞಾನವನ್ನು ನಿರಂತರವಾಗಿ ತಹಲ್‌ವರೆಗೆ ಪರಿಷ್ಕರಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

(ಪಿ) ವಿವಿಧ ಹಂತಗಳಲ್ಲಿ ಪ್ರಸಾರಣದ ಹೆಚ್ಚುವರಿ ಚಾನೆಲ್‌ಗಳನ್ನು ಸ್ಥಾಪಿಸುವ ಮೂಲಕ ಪ್ರಸಾರಣ ಸೌಲಭ್ಯಗಳನ್ನು ವಿಸ್ತರಿಸುವುದು.

(3) ವಿಶೇಷವಾಗಿ, ಮತ್ತು ಮೇಲೆ ಹೇಳಿದ ಉಪಬಂದಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ನಿಗಮವು, –

(ಎ) ಕಾರ್ಯಕ್ರಮಗಳನ್ನು ನೀಡುವುದಕ್ಕೆ ಮತ್ತು ನಿರ್ಮಿಸುವುದಕ್ಕೆ ಸಾರ್ವಜನಿಕ ಸೇವೆಯೆಂದು ಪ್ರಸಾರಣವನ್ನು ನಿರ್ವಹಿಸುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು;

(ಬಿ) ರೇಡಿಯೋ ಮತ್ತು ದೂರದರ್ಶನಕ್ಕಾಗಿ ಸುದ್ದಿ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು;

(ಸಿ) ಪ್ರಸಾರಣಕ್ಕಾಗಿ ಕ್ರೀಡೆಗಳು ಮತ್ತು ಇತರ ಪಂದ್ಯಗಳು, ಚಲನ ಚಿತ್ರಗಳು, ಧಾರಾವಾಹಿಗಳು, ವಿಶೇಷ ಸಂದರ್ಭಗಳು, ಸಭೆಗಳು, ಸಮಾರಂಭಗಳು, ಅಥವಾ ಸಾರ್ವಜನಿಕ ಹಿತಾಸಕ್ತಿಯ ಸಂಗತಿಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಮತ್ತು ಹಕ್ಕುಗಳನ್ನು ಅಥವಾ ವಿಶೇಷ ಅಧಿಕಾರಗಳನ್ನು ಖರೀದಿ ಮಾಡುವುದಕ್ಕೆ ಅಥವಾ ಅನ್ಯಥಾ ಆರ್ಜಿಸುವುದಕ್ಕೆ ಮಾತುಕತೆ ನಡೆಸಲು ಮತ್ತು ಸೇವೆಗಳಿಗೆ ಅಂತಹ ಕಾರ್ಯಕ್ರಮಗಳನ್ನು, ಹಕ್ಕುಗಳನ್ನು ಅಥವಾ ವಿಶೇಷಾಧಿಕಾರಗಳನ್ನು ಹಂಚಿಕೆ ಮಾಡುವುದಕ್ಕೆ ಪ್ರಕ್ರಿಯೆಗಳನ್ನು ರೂಪಿಸಲು;

(ಡಿ) ರೇಡಿಯೋ, ದೂರದರ್ಶನ ಮತ್ತು ಇತರ ಸಾಮಗ್ರಿಗಳ ಗ್ರಂಥಾಲಯ ಅಥವಾ ಗ್ರಂಥಾಲಯಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು;

(ಇ) ನಿಗಮವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ವ್ಯಕ್ತಿಗಳಿಗೆ ಮತ್ತು ಅಂತಹ ರೀತಿಯಲ್ಲಿ ಮತ್ತು ಅಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಬಹುದಾದ ಕಾರ್ಯಕ್ರಮಗಳನ್ನು, ಶ್ರೋತೃ ವರ್ಗದ ಬಗ್ಗೆ ಸಂಶೋಧನೆಯನ್ನು, ಮಾರುಕಟ್ಟೆಯ ಅಥವಾ ತಾಂತ್ರಿಕ ಸೇವೆಯನ್ನು ಕಾಲಕಾಲಕ್ಕೆ ನಡೆಸಲು ಅಥವಾ ಆರಂಭ ಮಾಡಲು;

(ಎಫ್) ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಇತರ ಸೇವೆಗಳನ್ನು ಒದಗಿಸಲು

– ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(4) (2) ಮತ್ತು (3)ನೇ ಉಪಪ್ರಕರಣಗಳಲ್ಲಿರುವುದಾವುದೂ, ಕೇಂದ್ರ ಸರ್ಕಾರದ ಪರವಾಗಿ ಮತ್ತು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸುಬಹುದಾದಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ವಿದೇಶ ಪ್ರಸಾರಣ ಸೇವೆಗಳ ನಿರ್ವಹಣೆ ಮಾಡುವುದರಿಂದ ಮತ್ತು ಕೇಂದ್ರ ಸರ್ಕಾರವು ವೆಚ್ಚಗಳನ್ನು ತುಂಬಿ ಕೊಡುವುದಕ್ಕಾಗಿ ಮಾಡಿದ ವ್ಯವಸ್ಥೆಗಳ ಆಧಾರದ ಮೇಲೆ ಭಾರತದ ಹೊರಗಿನ ಸಂಘಟನೆಗಳು ಮಾಡಿದ ಪ್ರಸಾರಣದ ಮೇಲ್ವಿಚಾರಣೆ ಮಾಡುವುದುದರಿಂದ ನಿಗಮವನ್ನು ಪ್ರತಿಬಂಧಿಸತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿ ನಿರೂಪಿಸಿದ ಉದ್ದೇಶಗಳಿಗೆ ಉತ್ತೇಜನ ನೀಡುವುದಕ್ಕಾಗಿ ಸಾಕಷ್ಟು ಸಮಯ ದೊರಕಿಸಿ ಕೊಡಲಾಗಿದೆಯೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಜಾಹೀರಾತಿನ ಸಂಬಂಧದಲ್ಲಿ ಪ್ರಸಾರಣ ಸಮಯದ ಗರಿಷ್ಠ ಮಿತಿಯನ್ನು ನಿರ್ಧರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(6) ನಿಗಮವು ಈ ಪ್ರಕರಣದ ಯಾವುದೇ ಉಪಬಂಧಗಳನ್ನು ಪಾಲಿಸಲು ವಿಫಲವಾಗಿದೆ ಎಂಬ ಕಾರಣದ ಮಾತ್ರದಿಂದಲೇ ಯಾವುದೇ ಸಿವಿಲ್ ಸ್ವರೂಪದ ಹೊಣೆಗಾರಿಕೆಗೆ ಅದು ಒಳಪಡತಕ್ಕದ್ದಲ್ಲ.

(7) ನಿಗಮವು ಜಾಹೀರಾತುಗಳಿಗೆ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಮತ್ತು ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯಕ್ರಮಗಳಿಗೆ ಫೀಜನ್ನು ಮತ್ತು ಇತರ ಸೇವಾ ಶುಲ್ಕಗಳನ್ನು ನಿರ್ಧರಿಸುವುದಕ್ಕೆ ಮತ್ತು ವಿಧಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಲಾದ ಮತ್ತು ಸಂಗ್ರಹಿಸಲಾದ ಫೀಜುಗಳು ಮತ್ತು ಇತರ ಸೇವಾ ಶುಲ್ಕಗಳು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಮಿತಿಗಳನ್ನು ಮೀರತಕ್ಕದ್ದಲ್ಲ.

**13. ಸಂಸದೀಯ ಸಮಿತಿ.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ವಿಶೇಷವಾಗಿ, 12ನೇ ಪ್ರಕರಣದಲ್ಲಿ ನಿರೂಪಿಸಲಾದ ಉದ್ದೇಶಗಳಿಗನುಸಾರವಾಗಿ ನಿಗಮವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದೆ ಎಂಬುದನ್ನು ನೋಡಿಕೊಳ್ಳಲು ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆಗನುಗುಣವಾಗಿ ಲೋಕಸಭೆಯು, ತನ್ನ ಸದಸ್ಯರ ಪೈಕಿ ಚುನಾಯಿಸಿದ ಹದಿನೈದು ಮಂದಿಯನ್ನು ಮತ್ತು ರಾಜ್ಯ ಸಭೆಯು ತನ್ನ ಸದಸ್ಯರ ಪೈಕಿ ಚುನಾಯಿಸಿದ ಏಳು ಮಂದಿಯನ್ನು ಒಳಗೊಂಡ ಸಂಸತ್ತಿನ ಇಪ್ಪತ್ತೆರಡು ಸದಸ್ಯರಿರುವ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅದರ ಮೇಲಿನ ವರದಿಯನ್ನು ಸಂಸತ್ತಿಗೆ ಸಲ್ಲಿಸತಕ್ಕದ್ದು.

(2) ಸಮಿತಿಯು, ಲೋಕಸಭಾಧ್ಯಕ್ಷರು ಮಾಡಬಹುದಾದಂತಹ ನಿಯಮಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸತಕ್ಕದ್ದು.

**14. ಪ್ರಸಾರಣ ಪರಿಷತ್ತಿನ ಸ್ಥಾಪನೆ, ಅದರ ಸದಸ್ಯರ ಪದಾವಧಿ ಮತ್ತು ಅವರನ್ನು ತೆಗೆದುಹಾಕುವಿಕೆ, ಇತ್ಯಾದಿ.–** (1) 15ನೇ ಪ್ರಕರಣದಲ್ಲಿ ಉಲ್ಲೇಖಿಸಿದ ದೂರುಗಳನ್ನು ಸ್ವೀಕರಿಸುವುದಕ್ಕೆ ಮತ್ತು ಪರ್ಯಾಲೋಚಿಸುವುದಕ್ಕೆ ಮತ್ತು 12ನೇ ಪ್ರಕರಣದಲ್ಲಿ ನಿರೂಪಿಸಿದ ಉದ್ದೇಶಗಳಿಗೆ ಅನುಸಾರವಾಗಿ ನಿಗಮವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅದಕ್ಕೆ ಸಲಹೆ ನೀಡುವುದಕ್ಕೆ ಪ್ರಸಾರಣ ಪರಿಷತ್ತು ಎಂದು ಕರೆಯಲಾಗುವ ಪರಿಷತ್ತನ್ನು, ಗೊತ್ತುಪಡಿಸಿದ ದಿನದ ನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಅಧಿಸೂಚನೆಯ ಮೂಲಕ ಸ್ಥಾಪಿಸತಕ್ಕದ್ದು.

(2) ಪ್ರಸಾರಣ ಪರಿಷತ್ತು,–

(i) ಭಾರತದ ರಾಷ್ಟ್ರಪತಿಯು, ಸಾರ್ವಜನಿಕ ಜೀವನದಲ್ಲಿ ಖ್ಯಾತರಾದ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡಿದ ಅಧ್ಯಕ್ಷನನ್ನು ಮತ್ತು ಹತ್ತು ಇತರ ಸದಸ್ಯರನ್ನು;

(ii) ಲೋಕಸಭೆಯ ಸಭಾಧ್ಯಕ್ಷರು ನಾಮನಿರ್ದೇಶಿಸಿದ ಅದರ ಇಬ್ಬರು ಹಾಗೂ ರಾಜ್ಯಸಭೆಯ ಸಭಾಪತಿಯು ನಾಮನಿರ್ದೇಶಿಸಿದ ಅದರ ಇಬ್ಬರು ಸದಸ್ಯರೂ ಸೇರಿದಂತೆ ಸಂಸತ್ತಿನ ನಾಲ್ವರು ಸದಸ್ಯರನ್ನು

– ಒಳಗೊಂಡಿರತಕ್ಕದ್ದು.

(3) ಪ್ರಸಾರಣ ಪರಿಷತ್ತಿನ ಅಧ್ಯಕ್ಷನು ಪೂರ್ಣಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಇತರ ಸದಸ್ಯನು ಅರೆಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅಧ್ಯಕ್ಷನು ಅಥವಾ ಅರೆಕಾಲಿಕ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಂಥ ಪದವನ್ನು ಧಾರಣ ಮಾಡತಕ್ಕದ್ದು.

(4) ಪ್ರಸಾರಣ ಪರಿಷತ್ತು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ನೆರವನ್ನು ಮತ್ತು ಸಹಾಯವನ್ನು ನೀಡಲು ಅವಶ್ಯವೆಂದು ಭಾವಿಸಬಹುದಾದಂತಹ ಸಂಖ್ಯೆಯ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಬಹುದು.

(5) ಪ್ರಸಾರಣ ಪರಿಷತ್ತಿನ ಅಧ್ಯಕ್ಷನು ನಿಯಮಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ರಜೆ, ನಿವೃತ್ತ ವೇತನ (ಯಾವುದಾದರೂ ಇದ್ದರೆ), ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಪ್ರಸಾರಣ ಪರಿಷತ್ತಿನ ಅಧ್ಯಕ್ಷನ ನೇಮಕದ ನಂತರ ಅವನ ಸಂಬಳವನ್ನು ಮತ್ತು ಭತ್ಯೆಗಳನ್ನು ಮತ್ತು ಸೇವಾ ಷರತ್ತುಗಳನ್ನು ಅವನಿಗೆ ಅನನುಕೂಲವಾಗುವ ಹಾಗೆ ವ್ಯತ್ಯಸ್ತಗೊಳ್ಳತಕ್ಕದ್ದಲ್ಲ.

(6) ಪ್ರಸಾರಣ ಪರಿಷತ್ತಿನ ಇತರ ಸದಸ್ಯರು ಮತ್ತು (4)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪ್ರಾದೇಶಿಕ ಪರಿಷತ್ತುಗಳ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

**15. ಪ್ರಸಾರಣ ಪರಿಷತ್ತಿನ ಅಧಿಕಾರ ವ್ಯಾಪ್ತಿ ಮತ್ತು ಅದು ಅನುಸರಿಸಬೇಕಾದ ಕಾರ್ಯವಿಧಾನ.–** (1) ಪ್ರಸಾರಣ ಪರಿಷತ್ತು, –

(i) ನಿಗಮದ ನಿರ್ದಿಷ್ಟ ಕಾರ್ಯಕ್ರಮ ಅಥವಾ ಪ್ರಸಾರಣ ಅಥವಾ ಕಾರ್ಯನಿರ್ವಹಣೆಯು ನಿರ್ದಿಷ್ಟ ಸಂದರ್ಭಗಳಲ್ಲಿ ಅಥವಾ ಸಾಮಾನ್ಯವಾಗಿ ಯಾವ ಉದ್ದೇಶಗಳಿಗೆ ನಿಗಮವನ್ನು ಸ್ಥಾಪಿಸಲಾಗಿದೆಯೋ ಆ ಉದ್ದೇಶಗಳಿಗೆ ಅನುಸಾರವಾಗಿ ಇಲ್ಲವೆಂದು ಆರೋಪಿಸಿ ಯಾರೇ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳ ಸಮೂಹದಿಂದ;

(ii) ನಿಗಮವು ಪ್ರಸಾರಣ ಮಾಡಿದ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ (ಗೋಪ್ಯತೆಯ ಅನಗತ್ಯ ಅತಿಕ್ರಮಣ, ತಪ್ಪು ನಿರೂಪಣೆ, ವಿರೂಪತೆ ಅಥವಾ ವಸ್ತು ನಿಷ್ಠತೆಯ ಕೊರತೆ ಇವುಗಳೂ ಸೇರಿದಂತೆ) ಅನ್ಯಾಯವಾಗಿ ಅಥವಾ ಅನುಚಿತವಾಗಿ ತನ್ನನ್ನು ಬಿಂಬಿಸಿದ್ದಾರೆಂದು ಕ್ಲೇಮು ಮಾಡುವ (ನಿಗಮದ ಅಧಿಕಾರಿಯನ್ನು ಅಥವಾ ನೌಕರನನ್ನು ಹೊರತುಪಡಿಸಿ) ಯಾರೇ ವ್ಯಕ್ತಿಯಿಂದ

– ದೂರುಗಳನ್ನು ಸ್ವೀಕರಿಸತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ದೂರನ್ನು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಕಾಲದೊಳಗೆ ಸಲ್ಲಿಸತಕ್ಕದ್ದು.

(3) ಪ್ರಸಾರಣ ಪರಿಷತ್ತು, ತಾನು ಸ್ವೀಕರಿಸಿದ ದೂರುಗಳ ವಿಲೇವಾರಿಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತಹ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(4) ದೂರು ಪೂರ್ಣವಾಗಿ ಅಥವಾ ಭಾಗಶಃ ನ್ಯಾಯಸಮ್ಮತವಾಗಿದೆಯೆಂದು ಕಂಡುಬಂದರೆ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕಾರ್ಯನಿರ್ವಾಹಕ ಸದಸ್ಯನಿಗೆ ಪ್ರಸಾರಣ ಪರಿಷತ್ತು ಸಲಹೆ ನೀಡತಕ್ಕದ್ದು.

(5) ಪ್ರಸಾರಣ ಪರಿಷತ್ತಿನ ಶಿಫಾರಸ್ಸನ್ನು ಅಂಗೀಕರಿಸಲು ಕಾರ್ಯನಿರ್ವಾಹಕ ಸದಸ್ಯನು ಅಸಮರ್ಥನಾದರೆ, ಮಂಡಲಿಯು ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಲು ಅವನು ಮಂಡಲಿಯ ಮುಂದೆ ಅಂತಹ ಶಿಫಾರಸ್ಸನ್ನು ಮಂಡಿಸತಕ್ಕದ್ದು.

(6) ಪ್ರಸಾರಣ ಪರಿಷತ್ತಿನ ಶಿಫಾರಸ್ಸನ್ನು ಅಂಗೀಕರಿಸುವುದಕ್ಕೆ ಮಂಡಲಿಯು ಸಹ ಅಸಮರ್ಥವಾದರೆ ಅದು ಅದರ ಬಗ್ಗೆ ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ತದನುಸಾರವಾಗಿ ಅದನ್ನು ಪ್ರಸಾರಣ ಪರಿಷತ್ತಿಗೆ ತಿಳಿಸತಕ್ಕದ್ದು.

(7) (5) ಮತ್ತು (6)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರಸಾರಣ ಪರಿಷತ್ತು ಸೂಕ್ತವೆಂದು ಭಾವಿಸಿದರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಪರಿಷತ್ತು ಸೂಕ್ತವೆಂದು ಭಾವಿಸಬಹುದಾದಂತಹ ರೀತಿಯಲ್ಲಿ ದೂರಿಗೆ ಸಂಬಂಧಿಸಿದಂತೆ ತನ್ನ ಶಿಫಾರಸ್ಸುಗಳನ್ನು ಪ್ರಸಾರಣ ಮಾಡುವಂತೆ ನಿಗಮವನ್ನು ಅಗತ್ಯಪಡಿಸಬಹುದು.

## ಅಧ್ಯಾಯ III

### ಆಸ್ತಿ, ಹಣಕಾಸು ಮತ್ತು ಲೆಕ್ಕಪತ್ರಗಳು

16. **ಕೇಂದ್ರ ಸರ್ಕಾರದ ಕೆಲವು ಆಸ್ತಿಗಳು, ಹೊಣೆಗಾರಿಕೆಗಳು, ಇತ್ಯಾದಿಗಳನ್ನು ನಿಗಮಕ್ಕೆ ವರ್ಗಾಯಿಸುವುದು.–** ಗೊತ್ತುಪಡಿಸಲಾದ ದಿನದಿಂದ,–

(ಎ) ಆಕಾಶವಾಣಿಯ ಅಥವಾ ದೂರದರ್ಶನದ ಅಥವಾ ಅವೆರಡರ ಉದ್ದೇಶಕ್ಕಾಗಿ ಆ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತು ಮತ್ತು ಆಸ್ತಿಗಳು (ರದ್ದಾಗದ ನಿಧಿಯೂ ಸೇರಿದಂತೆ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತಹ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ನಿಗಮಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಅಂತಹ ಎಲ್ಲ ಸ್ವತ್ತು ಮತ್ತು ಆಸ್ತಿಗಳ ಪುಸ್ತಕ ಮೌಲ್ಯವನ್ನು ಕೇಂದ್ರ ಸರ್ಕಾರವು ನಿಗಮಕ್ಕೆ ಒದಗಿಸಿದ ಬಂಡವಾಳವೆಂದು ಪರಿಗಣಿಸತಕ್ಕದ್ದು;

(ಬಿ) ಆಕಾಶವಾಣಿಯ ಅಥವಾ ದೂರದರ್ಶನದ ಅಥವಾ ಅವೆರಡರ ಉದ್ದೇಶಗಳಿಗಾಗಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಅಂತಹ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು, ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಿಕೊಂಡ ಎಲ್ಲ ಸಾಲಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಮಾಡಿಕೊಂಡ ಎಲ್ಲ ಕರಾರುಗಳನ್ನು ಮತ್ತು ಅದು ಮಾಡಲು ತೊಡಗಿದ ಎಲ್ಲ ಕಾರ್ಯಗಳನ್ನು ನಿಗಮವು, ನಿಗಮದೊಂದಿಗೆ ಅಥವಾ ಅದರ ಪರವಾಗಿ ವಹಿಸಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಮತ್ತು ಮಾಡಲು ತೊಡಗಿದೆಯೆಂದು ಭಾವಿಸತಕ್ಕದ್ದು;

(ಸಿ) ಅಂತಹ ದಿನದ ನಿಕಟಪೂರ್ವದಲ್ಲಿ ಆಕಾಶವಾಣಿಗೆ ಅಥವಾ ದೂರದರ್ಶನಕ್ಕೆ ಅಥವಾ ಅವೆರೆಡಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಬರಬೇಕಾದ ಹಣದ ಎಲ್ಲ ಮೊತ್ತವನ್ನು, ನಿಗಮಕ್ಕೆ ಬರಬೇಕಾಗಿದ್ದೆಂದು ಭಾವಿಸತಕ್ಕದ್ದು;

(ಡಿ) ಆಕಾಶವಾಣಿಗೆ ಅಥವಾ ದೂರದರ್ಶನಕ್ಕೆ ಅಥವಾ ಅವೆರೆಡಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕಾಗಿ ಅಂತಹ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ವಿರುದ್ಧ ಹೂಡಿದ ಅಥವಾ ಹೂಡಬಹುದಾಗಿದ್ದ ಎಲ್ಲ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ನಿಗಮವು ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು.

17. **ಕೇಂದ್ರ ಸರ್ಕಾರವು ನೀಡುವ ಅನುದಾನಗಳು, ಇತ್ಯಾದಿ.–** ಈ ಅಧಿನಿಯಮದ ಮೇರೆಗೆ ನಿಗಮವು ತನ್ನ ಪ್ರಕಾರ್ಯಗಳನ್ನು ದಕ್ಷವಾಗಿ ನಿರ್ವಹಿಸಲು ಅವಕಾಶ ಮಾಡಿಕೊಡುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಸೂಕ್ತ ಧನ ವಿನಿಯೋಗದ ನಂತರ, –

(i) ಸಂಗ್ರಹಣಾ ವೆಚ್ಚಗಳನ್ನು ಕಳೆದು, ಪ್ರಸಾರಣ ಸ್ವೀಕಾರ ಲೈಸೆನ್ಸ್ ಫೀಜುಗಳ ಉತ್ಪತ್ತಿ, ಯಾವುದಾದರೂ ಇದ್ದರೆ, ಅವುಗಳನ್ನು; ಮತ್ತು

(ii) ಆ ಸರ್ಕಾರವು ಅಗತ್ಯವೆಂದು ಪರಿಗಣಿಸುವ ಹಣದ ಅಂಥ ಇತರ ಮೊತ್ತಗಳನ್ನು

– ಈಕ್ವಿಟಿಯ, ಸಹಾಯ ಅನುದಾನದ ಅಥವಾ ಸಾಲದ ರೂಪದಲ್ಲಿ ಪ್ರತೀ ಹಣಕಾಸು ವರ್ಷದಲ್ಲಿ ನಿಗಮಕ್ಕೆ ಸಂದಾಯ ಮಾಡತಕ್ಕದ್ದು.

18. **ನಿಗಮದ ನಿಧಿ.–** (1) ನಿಗಮವು ತನ್ನದೇ ಅದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿಗಮದ ಎಲ್ಲ ಸ್ವೀಕೃತಿಗಳನ್ನು (16ನೇ ಪ್ರಕರಣದ ಮೇರೆಗೆ ನಿಗಮಕ್ಕೆ ವರ್ಗಾಯಿತವಾದ ಮೊತ್ತಗಳೂ ಸೇರಿದಂತೆ) ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ನಿಗಮವು ಮಾಡಬೇಕಾದ ಎಲ್ಲ ಸಂದಾಯಗಳನ್ನು ಅದರಿಂದ ಮಾಡತಕ್ಕದ್ದು.

(2) ನಿಧಿಗೆ ಸೇರಿದ ಎಲ್ಲ ಹಣವನ್ನು ನಿಗಮವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಒಂದು ಅಥವಾ ಹೆಚ್ಚು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು.

(3) ನಿಗಮವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಖರ್ಚು ಮಾಡಬಹುದು ಮತ್ತು ಅಂತಹ ಮೊತ್ತಗಳನ್ನು ನಿಗಮದ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ರಾಷ್ಟ್ರೀಕೃತ ಬ್ಯಾಂಕು" ಎಂದರೆ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ (1970ರ 5) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂವಾದಿ ಹೊಸ ಬ್ಯಾಂಕು ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40)ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂವಾದಿ ಹೊಸ ಬ್ಯಾಂಕು ಎಂದು ಅರ್ಥ;

**19. ಹಣದ ಹೂಡಿಕೆ.–** ನಿಗಮವು ತನ್ನ ಹಣವನ್ನು ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಭದ್ರತಾಪತ್ರಗಳಲ್ಲಿ ಅಥವಾ ನಿಯಮಿಸಬಹುದಾದಂತಹ ಇತರ ರೀತಿಯಲ್ಲಿ ಹೂಡಬಹುದು.

**20. ನಿಗಮದ ವಾರ್ಷಿಕ ಹಣಕಾಸು ವಿವರಪಟ್ಟಿ.–** (1) ನಿಗಮವು, –

(ಎ) ನಿಗಮದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಉದ್ದೇಶಿಸಿದ ವೆಚ್ಚವನ್ನು; ಮತ್ತು

(ಬಿ) ಇತರ ವೆಚ್ಚಗಳನ್ನು ಭರಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಬೇಕಾಗಿರುವ ಮೊತ್ತವನ್ನು; ಮತ್ತು, –

(i) ಇತರ ವೆಚ್ಚದಿಂದ ರಾಜಸ್ವ ವೆಚ್ಚವನ್ನು; ಮತ್ತು

(ii) ಯೋಜನಾ ವೆಚ್ಚದಿಂದ ಯೋಜನೇತರ ವೆಚ್ಚವನ್ನು

– ಬೇರ್ಪಡಿಸಿ ಪ್ರತ್ಯೇಕವಾಗಿ ತೋರಿಸುವ ಮುಂಬರುವ ಹಣಕಾಸು ವರ್ಷದ ವಾರ್ಷಿಕ ಹಣಕಾಸು ವಿವರಪಟ್ಟಿಯನ್ನು ಪ್ರತೀ ಹಣಕಾಸು ವರ್ಷದಲ್ಲಿ ತಯಾರಿಸತಕ್ಕದ್ದು.

(2) ವಾರ್ಷಿಕ ಹಣಕಾಸು ವಿವರಪಟ್ಟಿಯನ್ನು ಕೇಂದ್ರ ಸರ್ಕಾರವು ಮತ್ತು ನಿಗಮವು ಒಪ್ಪಬಹುದಾದಂತೆ ಅಂಥ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಅಂತಹ ಕಾಲದಲ್ಲಿ ಅದನ್ನು ಕಳುಹಿಸತಕ್ಕದ್ದು.

**21. ನಿಗಮದ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ನಿಗಮವು ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ನಿಗಮದ ಲೆಕ್ಕಪತ್ರಗಳ ಪರಿಶೋಧನೆಯನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ನಡೆಸತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ವಹಿಸಿದ ಯಾವುದೇ ವೆಚ್ಚವನ್ನು ನಿಗಮವು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ನಿಗಮದ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಪಟ್ಟಂತೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಅಂತಹ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸಲು ಮತ್ತು ನಿಗಮದ ಯಾವುದೇ ಕಚೇರಿಗಳನ್ನು ಪರಿಶೀಲನೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ನಿಗಮದ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನಾ

ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ವರ್ಷವರ್ಷವೂ ಕಳುಹಿಸಿಕೊಡತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**22.** [ X…X…X…]

## ಅಧ್ಯಾಯ IV

### ಸಂಕೀರ್ಣ

**23. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಸಂದರ್ಭವು ಉದ್ಭವವಾದಗಲೆಲ್ಲಾ ಕಾಲಕಾಲಕ್ಕೆ, ಭಾರತದ ಸಾರ್ವಭೌಮತೆ, ಏಕತೆ ಮತ್ತು ಅಖಂಡತೆಯ ಅಥವಾ ರಾಷ್ಟ್ರದ ಭದ್ರತೆಯ ಅಥವಾ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ವಿಷಯದ ಮೇಲೆ ಪ್ರಸಾರಣ ಮಾಡದಿರುವಂತೆ ಅಥವಾ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಮಹತ್ವದ ಯಾವುದೇ ವಿಷಯದ ಬಗ್ಗೆ ಪ್ರಸಾರಣವನ್ನು ಮಾಡಲು ಅಗತ್ಯಪಡಿಸುವ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಅದು ತಾನು ಅವಶ್ಯವೆಂದು ಭಾವಿಸಬಹುದಾದಂತಹ ನಿರ್ದೇಶನಗಳನ್ನು ನಿಗಮಕ್ಕೆ ನೀಡಬಹುದು.

(2) (1)ನೇ ಉಪಪ್ರಕಣದ ಮೇರೆಗೆ ಹೊರಡಿಸಿದ ನಿರ್ದೇಶನಕ್ಕನುಸಾರವಾಗಿ ನಿಗಮವು ಪ್ರಸಾರಣ ಮಾಡಿರುವಲ್ಲಿ, ಅಂತಹ ನಿರ್ದೇಶನಕ್ಕನುಸಾರವಾಗಿ ಅಂತಹ ಪ್ರಸಾರಣವನ್ನು ಮಾಡಲಾಗಿದೆ ಎಂಬ ಸಂಗತಿಯನ್ನು ಸಹ, ನಿಗಮವು ಇಚ್ಛಿಸಿದರೆ, ಅಂತಹ ಪ್ರಸಾರಣದೊಂದಿಗೆ ಪ್ರಕಟಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ನಿರ್ದೇಶನದ ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**24. ಮಾಹಿತಿಯನ್ನು ಪಡೆಯಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂತಹ ಮಾಹಿತಿಯನ್ನು ಒದಗಿಸುವಂತೆ ಸರ್ಕಾರವು ನಿಗಮಕ್ಕೆ ಅಗತ್ಯಪಡಿಸಬಹುದು.

**25. ಕೆಲವು ವಿಷಯಗಳಲ್ಲಿ ಸಂಸತ್ತಿಗೆ ವರದಿ ಮಾಡುವುದು ಮತ್ತು ಮಂಡಲಿಯ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಶಿಫಾರಸ್ಸುಗಳು.–** (1) ಮಂಡಲಿಯು, 23ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ನಿರ್ದೇಶನಗಳನ್ನು ಪಾಲಿಸುವಲ್ಲಿ ನಿರಂತರವಾಗಿ ತಪ್ಪಿದಲ್ಲಿ ಅಥವಾ 24ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸಲು ವಿಫಲವಾದಲ್ಲಿ, ಕೇಂದ್ರ ಸರ್ಕಾರವು, ಅದರ ಬಗ್ಗೆ ವರದಿಯನ್ನು ತಯಾರಿಸಬಹುದು ಮತ್ತು ಮಂಡಲಿಯ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮದ ಬಗ್ಗೆ (ಮಂಡಲಿಯ ರದ್ದಿಯಾತಿಯೂ ಸೇರಿದಂತೆ) ಅದರ ಯಾವುದೇ ಶಿಫಾರಸ್ಸಿಗಾಗಿ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದನ್ನು ಮಂಡಿಸಬಹುದು.

(2) ಸಂಸತ್ತಿನ ಶಿಫಾರಸ್ಸಿನ ಮೇರೆಗೆ, ರಾಷ್ಟ್ರಪತಿಯು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಆರು ತಿಂಗಳುಗಳನ್ನು ಮೀರದ ಅವಧಿಗೆ ಮಂಡಲಿಯುನ್ನು ರದ್ದುಗೊಳಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ರಾಷ್ಟ್ರಪತಿಯು ಮಂಡಲಿಯನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ಮಂಡಲಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಮಂಡಲಿಯ ವಿವರಣೆಗಳು ಮತ್ತು ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರಿಶೀಲಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ಮೇಲೆ, –

(ಎ) ರದ್ದಿಯಾತಿಯ ದಿನಾಂಕದಿಂದ ಎಲ್ಲ ಸದಸ್ಯರು ಅಂಥ ತಮ್ಮ ಪದವನ್ನು ತೆರವುಗೊಳಿಸತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ, ಮಂಡಲಿಯು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲ ಅಧಿಕಾರಗಳನ್ನು, ಪ್ರಕಾರ್ಯಗಳನ್ನು

ಮತ್ತು ಕರ್ತವ್ಯಗಳನ್ನು, ಈ ಅಧಿನಿಯಮದ ಮೇರೆಗೆ ಮಂಡಲಿಯನ್ನು ಪುನರ್‌ರಚಿಸುವವರೆಗೆ, ರಾಷ್ಟ್ರಪತಿಯು ನಿರ್ದೇಶಿಸಬಹುದಾದಂತಹ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ, ರಾಷ್ಟ್ರಪತಿಯು ಹೊಸ ನೇಮಕಗಳ ಮೂಲಕ ಮಂಡಲಿಯನ್ನು ಪುನರ್‌ರಚಿಸಬಹುದು ಮತ್ತು (3) ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತನ್ನ ಪದವನ್ನು ತೆರವುಗೊಳಿಸಿದ್ದ ಯಾರೇ ವ್ಯಕ್ತಿಯು ಅಂತಹ ಸಂದರ್ಭದಲ್ಲಿ ನೇಮಕಕ್ಕೆ ಅನರ್ಹನಾಗಿರತಕ್ಕದ್ದಲ್ಲ:

ಪರಂತು, ರಾಷ್ಟ್ರಪತಿಯು, ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಈ ಉಪಪ್ರಕರಣದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಬಹುದು.

(5) ಕೇಂದ್ರ ಸರ್ಕಾರವು (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಕ್ರಮದ ಬಗೆಗಿನ ಪೂರ್ಣ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**26. ಸದಸ್ಯನ ಪದವು ಸಂಸತ್ತಿನ ಸದಸ್ಯನನ್ನು ಅನರ್ಹಗೊಳಿಸುವುದಿಲ್ಲ.–** ಪ್ರಸಾರಣ ಪರಿಷತ್ತಿನ ಅಥವಾ 13ನೇ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯ ಸದಸ್ಯನ ಪದವು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಅದರ ಧಾರಕನನ್ನು ಅನರ್ಹಗೊಳಿಸುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**27. ಅಧ್ಯಕ್ಷನು, ಸದಸ್ಯರು, ಮುಂತಾದವರು ಲೋಕನೌಕರರಾಗಿರುವುದು.–** ನಿಗಮದ ಅಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು, ಪ್ರತಿಯೊಬ್ಬ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಮತ್ತು ಅದರ ಸಮಿತಿಯ ಪ್ರತಿಯೊಬ್ಬ ಸದಸ್ಯನನ್ನು ಪ್ರಸಾರಣ ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಸದಸ್ಯನನ್ನು ಅಥವಾ ಪ್ರಾದೇಶಿಕ ಪರಿಷತ್ತಿನ ಅಥವಾ ನೌಕರಿಭರ್ತಿ ಮಂಡಲಿಯ ಪ್ರತಿಯೊಬ್ಬ ಸದಸ್ಯನನ್ನು ಭಾರತ ದಂಡ ಸಂಹಿತೆ (1860ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**28. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಅಥವಾ ವಿನಿಯಮನಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ನಿಗಮದ, ಅದರ ಅಧ್ಯಕ್ಷನ ಅಥವಾ ಯಾರೇ ಸದಸ್ಯನ ಅಥವಾ ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಪ್ರಸಾರಣ ಪರಿಷತ್ತಿನ ಅಧ್ಯಕ್ಷನ ಅಥವಾ ಸದಸ್ಯನ ಅಥವಾ ಪ್ರಾದೇಶಿಕ ಪರಿಷತ್ತಿನ ಅಥವಾ ನೌಕರಿಭರ್ತಿ ಮಂಡಲಿಯ ಸದಸ್ಯನ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**29. ನಿಗಮದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣೀಕರಣ.–** ನಿಗಮದ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಈ ಬಗ್ಗೆ ನಿಗಮವು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ನಿಗಮವು ಬರೆದುಕೊಟ್ಟ ಎಲ್ಲ ಇತರ ಲಿಖಿತಗಳನ್ನು ಕಾರ್ಯನಿರ್ವಾಹಕ ಸದಸ್ಯನ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ನಿಗಮದ ಯಾರೇ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

**30. ಅಧಿಕಾರಗಳ ಪ್ರತ್ಯಾಯೋಜನೆ.–** ನಿಗಮವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಗಮದ ಆಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಇತರ ಅಧಿಕಾರಿಗೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳು, ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ತನ್ನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

**31. ವಾರ್ಷಿಕ ವರದಿ.–** (1) ನಿಗಮವು, ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂತಹ ಕಾಲದೊಳಗೆ ಹಿಂದಿನ ವರ್ಷದ ತನ್ನ ಕಾರ್ಯಚಟುವಟಿಕೆಗಳ (ಪ್ರಸಾರಣ ಪರಿಷತ್ತು ಮಾಡಿದ ಶಿಫಾರಸ್ಸುಗಳು ಮತ್ತು ಸಲಹೆಗಳು ಮತ್ತು ಅದರ ಬಗ್ಗೆ ತೆಗೆದುಕೊಂಡ ಕ್ರಮವೂ ಸೇರಿದಂತೆ) ಪೂರ್ಣ ಮಾಹಿತಿಯನ್ನು ನೀಡುವ ವಾರ್ಷಿಕ ವರದಿಯನ್ನು, ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(2) ಪ್ರಸಾರಣ ಪರಿಷತ್ತು, ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂತಹ ಕಾಲದೊಳಗೆ ಹಿಂದಿನ ವರ್ಷದ ತನ್ನ ಚಟುವಟಿಕೆಗಳ ಪೂರ್ಣ ಮಾಹಿತಿಯನ್ನು ನೀಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**32. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ: –

(ಎ) 6ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಪೂರ್ಣಕಾಲಿಕ ಸದಸ್ಯರಿಗೆ ಸಂಬಂಧಿಸಿದಂತೆ ಸಂಬಳಗಳು ಮತ್ತು ಭತ್ಯೆಗಳು ಮತ್ತು ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳು;

(ಬಿ) 6ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಿಗೆ ಮತ್ತು ಅರೆಕಾಲಿಕ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಸಿ) ನಿಗಮವು, 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದೋ ಆ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳು;

(ಡಿ) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೌಕರಿಭರ್ತಿ ಮಂಡಲಿಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಸ್ಥಾಪಿಸಬಹುದೋ ಆ ರೀತಿ ಮತ್ತು ಆ ಷರತ್ತುಗಳು ಮತ್ತು ಆ ನಿರ್ಬಂಧಗಳು;

(ಇ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೌಕರಿಭರ್ತಿ ಮಂಡಲಿಯ ಸದಸ್ಯರ ಅರ್ಹತೆಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅವರ ಪದಾವಧಿ;

(ಎಫ್) 11ಎ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿಗಮದಲ್ಲಿನ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಫ್ಎಫ್) ಭಾರತೀಯ ಮಾಹಿತಿ ಸೇವೆಯ, ಕೇಂದ್ರ ಸಚಿವಾಲಯ ಸೇವೆಯ ಕೇಡರ್‌ಗಳ ಸಂಖ್ಯೆಯಲ್ಲಿ ಒಳಗೊಂಡಿರುವ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ಹೊರಗಿನ ಯಾವುದೇ ಇತರ ವೃಂದದಲ್ಲಿರುವ ಹುದ್ದೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು 11ಬಿ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನಿರ್ಧರಿಸಬೇಕೋ ಆ ರೀತಿ ಮತ್ತು ಆ ನಿಬಂಧನೆಗಳು ಮತ್ತು ಆ ಷರತ್ತುಗಳು;

(ಜಿ) 14ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಪ್ರಸಾರಣ ಪರಿಷತ್ತಿನ ಅಧ್ಯಕ್ಷನಿಗೆ ಸಂಬಂಧಿಸಿದಂತೆ ಸಂಬಳಗಳು ಮತ್ತು ಭತ್ಯೆಗಳು ಮತ್ತು ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳು;

(ಹೆಚ್) 14ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ, ಪ್ರಸಾರಣ ಪರಿಷತ್ತಿನ ಇತರ ಸದಸ್ಯರಿಗೆ ಮತ್ತು ಪ್ರಾದೇಶಿಕ ಪರಿಷತ್ತುಗಳ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಐ) 19ನೇ ಪ್ರಕರಣದ ಮೇರೆಗೆ ನಿಗಮವು ಯಾವ ರೀತಿಯಲ್ಲಿ ತನ್ನ ಹಣವನ್ನು ಹೂಡಬಹುದೋ ಆ ರೀತಿ;

(ಜೆ) 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯನ್ನು ತಯಾರಿಸಬೇಕೋ ಆ ನಮೂನೆ ಮತ್ತು ಆ ರೀತಿ;

(ಕೆ) ನಿಗಮವು ಮತ್ತು ಪ್ರಸಾರಣ ಪರಿಷತ್ತು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತನ್ನ ವಾರ್ಷಿಕ ವರದಿಯನ್ನು 31ನೇ ಪ್ರಕರಣದ ಮೇರೆಗೆ ತಯಾರಿಸಬೇಕೋ ಆ ನಮೂನೆ ಮತ್ತು ಆ ಕಾಲ;

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**33. ವಿನಿಯಮನಗಳನ್ನು ರಚಿಸಲು ಅಧಿಕಾರ.–** (1) ನಿಗಮವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಲ್ಲದ ವಿನಿಯಮನಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ವಿನಿಯಮನಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ನಿಗಮವು ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯೊಂದಿಗೆ ಸಹವರ್ತಿಸಬಹುದಾಗಿದೆಯೋ ಆ ರೀತಿ ಮತ್ತು ಆ ಉದ್ದೇಶಗಳು;

(ಬಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸಭೆಗಳನ್ನು ಯಾವ ಸಮಯದಲ್ಲಿ ಮತ್ತು ಸ್ಥಳದಲ್ಲಿ ನಡೆಸಬೇಕೋ ಆ ಸಮಯ ಮತ್ತು ಆ ಸ್ಥಳ ಮತ್ತು ಅಲ್ಲಿ ಅನುಸರಿಸಬೇಕಾದ ಪ್ರಕಿಯೆ ಮತ್ತು ಮಂಡಲಿಯ ಸಭೆಯಲ್ಲಿ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅಗತ್ಯವಾದ ಕೋರಂ;

(ಸಿ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಗಮದ ಅಧಿಕಾರಿಗಳ ಮತ್ತು ಇತರ ನೌಕರರ ನೌಕರಿಭರ್ತಿಯ ವಿಧಾನಗಳು ಮತ್ತು ಸೇವಾ ಷರತ್ತುಗಳು;

(ಡಿ) 11ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು;

(ಇ) X X X X

(ಎಫ್) 12ನೇ ಪ್ರಕರಣದ (3)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ನಿಗಮವು ಒದಗಿಸಬಹುದಾದ ಸೇವೆಗಳು;

(ಜಿ) 12ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಜಾಹೀರಾತುಗಳ ಮತ್ತು ಇತರ ಕಾರ್ಯಕ್ರಮಗಳ ಸಂಬಂಧದಲ್ಲಿ ವಿಧಿಸುವ ಫೀಜುಗಳು ಮತ್ತು ಇತರ ಸೇವಾ ಶುಲ್ಕಗಳ ನಿರ್ಧರಣೆ ಮತ್ತು ವಿಧಿಸುವಿಕೆ;

(ಹೆಚ್) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ದೂರುಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಸಲ್ಲಿಸಬೇಕೋ ಆ ರೀತಿ ಮತ್ತು ಆ ಅವಧಿ;

(ಐ) ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಯಾವ ಇತರ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧವು ಅವಶ್ಯವೆಂದು ನಿಗಮವು ಅಭಿಪ್ರಾಯಪಡುವುದೋ, ಆ ಯಾವುದೇ ಇತರ ವಿಷಯ:

ಪರಂತು, (ಸಿ) ಖಂಡದ ಅಥವಾ (ಡಿ) ಖಂಡದ ಮೇರೆಗಿನ ವಿನಿಯಮನಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದೇ ಮಾಡತಕ್ಕದ್ದು.

**34. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ಮಾಡಕೊಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**35. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಗಳ ನಿವಾರಣೆಗಾಗಿ, ತಾನು ಅಗತ್ಯವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಗೊತ್ತುಪಡಿಸಿದ ದಿನದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಅಂತಹ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

******

## ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986

## (1986ರ ಅಧಿನಿಯಮ ಸಂಖ್ಯೆ 47)

**[22ನೇ ಸೆಪ್ಟೆಂಬರ್ 1986.]**

ಆಂತರಿಕ ಗಲಭೆಗಳ ವಿರುದ್ಧ ರಾಜ್ಯಗಳನ್ನು ರಕ್ಷಿಸುವ ದೃಷ್ಟಿಯಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಮಾಡುವುದಕ್ಕಾಗಿ ಕೇಂದ್ರ ಸಶಸ್ತ್ರ ಬಲಗಳ ಸ್ಥಾಪನೆಗಾಗಿ ಮತ್ತು ವಿನಿಯಮನಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಅದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯ ಸಂಬಂಧದಲ್ಲಿ "ಸಕ್ರಿಯ ಕರ್ತವ್ಯ" ಎಂದರೆ,–

(i) ಭಯೋತ್ಪಾದಕರ ಅಥವಾ ಒಕ್ಕೂಟದ ವಿರುದ್ಧ ಬಂಡೆದ್ದ ಯಾರೇ ವ್ಯಕ್ತಿಯ ವಿರುದ್ಧದ ಕಾರ್ಯಾಚರಣೆಗಳಲ್ಲಿ ನಿರತವಾಗಿರುವ; ಅಥವಾ

(ii) ಪಿಕಟನ್ನು ನಡೆಸುತ್ತಿರುವ ಅಥವಾ ಭಯೋತ್ಪಾದಕ ಚಟುವಟಿಕೆಯನ್ನು ನಿಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಗಸ್ತಿನಲ್ಲಿ ಅಥವಾ ಇತರೆ ಕರ್ತವ್ಯದಲ್ಲಿ ನಿರತವಾಗಿರುವ

– ಭದ್ರತಾ ಪಡೆಯ ಘಟಕಕ್ಕೆ ಯಾವ ಅವಧಿಯಲ್ಲಿ ಅಂಥ ವ್ಯಕ್ತಿಯು ಸೇರಿರುವನೋ ಅಥವಾ ಅದರ ಭಾಗವಾಗಿರುವನೋ ಆ ಅವಧಿಯಲ್ಲಿ ಭದ್ರತಾ ಪಡೆಯ ಸದಸ್ಯನಾಗಿ ನಿರ್ವಹಿಸುವ ಯಾವುದೇ ಕರ್ತವ್ಯ ಎಂದು ಅರ್ಥ.

(ಬಿ) "ಸಹಾಯಕ ಕಮಾಂಡರ್" ಎಂದರೆ, ಸಹಾಯಕ ಕಮಾಂಡರ್ ಗ್ರೇಡ್ I, ಸಹಾಯಕ ಕಮಾಂಡರ್ ಗ್ರೇಡ್ II ಅಥವಾ ಸಹಾಯಕ ಕಮಾಂಡರ್ ಗ್ರೇಡ್ III ಆಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಸಿ) "ಸಿವಿಲ್ ಅಪರಾಧ" ಎಂದರೆ, ಕ್ರಿಮಿನಲ್ ನ್ಯಾಯಾಲಯವು ಅಥವಾ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧಿನಿಯಮ, 1952 (1952ರ 46)ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನು ಅಧಿವಿಚಾರಣೆ ಮಾಡಬಹುದಾದಂಥ ಅಪರಾಧ ಎಂದು ಅರ್ಥ;

---

* ದಿನಾಂಕ: ಅಕ್ಟೋಬರ್ 16, 1986 ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ 737 (ಇ) ದಿನಾಂಕ: 16–10–1986 ಭಾರತದ ವಿಶೇಷ ಗೆಜೆಟ್ ಭಾಗ II ನೋಡಿ.

(ಡಿ) “ಸಿವಿಲ್ ಕಾರಾಗೃಹ” ಎಂದರೆ, ಕಾರಾಗೃಹಗಳ ಅಧಿನಿಯಮ, 1894 (1894ರ 9)ರ ಮೇರೆಗೆ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಮೇರೆಗೆ ಯಾರೇ ಕ್ರಿಮಿನಲ್ ಬಂದಿಯನ್ನು ಬಂಧಿಸಿ ಇಡುವುದಕ್ಕಾಗಿ ಉಪಯೋಗಿಸುವ ಯಾವುದೇ ಜೈಲು ಅಥವಾ ಸ್ಥಳ ಎಂದು ಅರ್ಥ;

(ಇ) “ಹೋರಾಟದ ವೃತ್ತಿಗ” ಎಂದರೆ, ಹೋರಾಟದ ವೃತ್ತಿಗನಾಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಎಫ್) “ಕಮಾಂಡರ್” ಎಂದರೆ, ಭದ್ರತಾ ಪಡೆಯ ಯಾವುದೇ ಘಟಕಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧದಲ್ಲಿ ಕಮಾಂಡರ್ ಪದ ಬಳಸಿದಾಗ ಆ ಘಟಕಕ್ಕೆ ಸಂಬಂಧಿಸಿದಂತೆ ಆ ಉಪಬಂಧದಲ್ಲಿ ಉಲ್ಲೇಖಿಸಿದ ವಿವರಣೆಯ ವಿಷಯಗಳಿಗೆ ಸಂಬಂಧಿಸಿದಂತೆ ಕಮಾಂಡರ್‌ನ ಪ್ರಕಾರ್ಯಗಳನ್ನು ನಿರ್ವಹಿಸುವ ಕರ್ತವ್ಯನಿರತ ಅಧಿಕಾರಿ;

(ಜಿ) “ಕ್ರಿಮಿನಲ್ ನ್ಯಾಯಾಲಯ” ಎಂದರೆ, ಭಾರತದ ಯಾವುದೇ ಭಾಗದಲ್ಲಿನ ಸಾಮಾನ್ಯ ಕ್ರಿಮಿನಲ್ ನ್ಯಾಯದ ನ್ಯಾಯಾಲಯ ಎಂದು ಅರ್ಥ ಮತ್ತು ಅದರಲ್ಲಿ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧಿನಿಯಮ, 1952 (1952ರ 46)ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನ ನ್ಯಾಯಾಲಯವೂ ಸೇರುತ್ತದೆ;

(ಹೆಚ್) “ಉಪ ಮಹಾ ನಿರೀಕ್ಷಕ” ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಉಪ ಮಹಾ ನಿರೀಕ್ಷಕ ಎಂದು ಅರ್ಥ;

(ಐ) “ಮಹಾ ನಿರ್ದೇಶಕ” ಮತ್ತು “ಅಪರ ಮಹಾ ನಿರ್ದೇಶಕ” ಎಂದರೆ, ಅನುಕ್ರಮವಾಗಿ 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಮಹಾ ನಿರ್ದೇಶಕ ಮತ್ತು ಅಪರ ಮಹಾ ನಿರ್ದೇಶಕ ಎಂದು ಅರ್ಥ;

(ಜೆ) “ಗ್ರೂಪ್” ಎಂದರೆ, ಕೇಂದ್ರ ಸರ್ಕಾರವು ಒಂದು ಗ್ರೂಪ್ ಎಂದು ರಚಿಸಿದ ಭದ್ರತಾ ಪಡೆಯ ಒಂದು ಘಟಕ ಎಂದು ಅರ್ಥ;

(ಕೆ) “ಗ್ರೂಪ್ ಕಮಾಂಡರ್” ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಗ್ರೂಪ್ ಕಮಾಂಡರ್ ಎಂದು ಅರ್ಥ;

(ಎಲ್) “ಮಹಾ – ನಿರೀಕ್ಷಕ” ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಮಹಾ – ನಿರೀಕ್ಷಕ ಎಂದು ಅರ್ಥ;

(ಎಂ) “ಜಡ್ಜ್ ಅಟಾರ್ನಿ–ಜನರಲ್”, “ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್”, “ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್” ಮತ್ತು “ಜಡ್ಜ್ ಅಟಾರ್ನಿ” ಎಂದರೆ, ಅನುಕ್ರಮವಾಗಿ ಕೇಂದ್ರ ಸರ್ಕಾರವು ಆಯಾ ದರ್ಜೆಯಲ್ಲಿ ನೇಮಕ ಮಾಡಿದ ಭದ್ರತಾ ಪಡೆಯ ಜಡ್ಜ್ ಅಟಾರ್ನಿ–ಜನರಲ್, ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್, ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್ ಮತ್ತು ಜಡ್ಜ್ ಅಟಾರ್ನಿ ಎಂದು ಅರ್ಥ;

(ಎನ್) “ಭದ್ರತಾ ಪಡೆಯ ಸದಸ್ಯ” ಎಂದರೆ, ಒಬ್ಬ ಅಧಿಕಾರಿ, ಸಹಾಯಕ ಕಮಾಂಡರ್, ರೇಂಜರ್ ಅಥವಾ ಹೋರಾಟದ ವೃತ್ತಿಗ ಎಂದು ಅರ್ಥ;

(ಒ) “ಅಧಿಸೂಚನೆ” ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಪಿ) “ಅಪರಾಧ” ಎಂದರೆ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಕೃತ್ಯ ಅಥವಾ ಲೋಪ ಎಂದು ಅರ್ಥ ಮತ್ತು ಅದು ಸಿವಿಲ್ ಅಪರಾಧವನ್ನು ಒಳಗೊಳ್ಳುತ್ತದೆ;

(ಕ್ಯೂ) “ಅಧಿಕಾರಿ” ಎಂದರೆ, ಭದ್ರತಾ ಪಡೆಯ ಅಧಿಕಾರಿಯಾಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಆರ್) “ನಿಯಮಿಸಲಾದುದು” ಎಂದರೆ, ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಎಸ್) "ರೇಂಜರ್" ಎಂದರೆ, ಭದ್ರತಾ ಪಡೆಯ ರೇಂಜರ್ ಗ್ರೇಡ್ I ಮತ್ತು ರೇಂಜರ್ ಗ್ರೇಡ್ II ಎಂದು ಅರ್ಥ;

(ಟಿ) "ನಿಯಮ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮ ಎಂದು ಅರ್ಥ;

(ಯು) "ಭದ್ರತಾ ಪಡೆ" ಎಂದರೆ, ರಾಷ್ಟ್ರೀಯ ಭದ್ರತಾ ಪಡೆ ಎಂದು ಅರ್ಥ;

(ವಿ) "ಭದ್ರತಾ ಪಡೆ ನ್ಯಾಯಾಲಯ" ಎಂದರೆ, 61ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನ್ಯಾಯಾಲಯ ಎಂದು ಅರ್ಥ;

(ಡಬ್ಲ್ಯು) "ಭದ್ರತಾ ಪಡೆ ಅಭಿರಕ್ಷೆ" ಎಂದರೆ, ನಿಯಮಗಳಿಗೆ ಅನುಸಾರವಾಗಿ ಭದ್ರತಾ ಪಡೆಯ ಒಬ್ಬ ಸದಸ್ಯನನ್ನು ದಸ್ತಗಿರಿ ಮಾಡುವುದು ಅಥವಾ ಬಂಧನದಲ್ಲಿರಿಸುವುದು ಎಂದು ಅರ್ಥ;

(ಎಕ್ಸ್) "ಮೇಲಧಿಕಾರಿ" ಎಂದರೆ, ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ ವರಿಷ್ಠ ಅಧಿಕಾರಿ ಪದವನ್ನು ಬಳಸಿದಾಗ,–

(i) ಭದ್ರತಾ ಪಡೆಯ ಯಾವ ಸದಸ್ಯನ ಕಮಾಂಡಿಗೆ ಅಂಥ ವ್ಯಕ್ತಿಯು ನಿಯಮಗಳಿಗೆ ಅನುಸಾರವಾಗಿ ತತ್ಕಾಲದಲ್ಲಿ ಒಳಪಟ್ಟಿರುತ್ತಾನೋ ಆ ಯಾರೇ ಸದಸ್ಯ; ಮತ್ತು

(ii) ಉನ್ನತ ದರ್ಜೆಯ ಅಥವಾ ವರ್ಗದ ಯಾರೇ ಅಧಿಕಾರಿ

– ಎಂದು ಅರ್ಥ ಮತ್ತು ಅದರಲ್ಲಿ ಅಂಥ ವ್ಯಕ್ತಿಯು ಅಧಿಕಾರಿಯಾಗಿರದಿದ್ದಾಗ ಸಹಾಯಕ ಕಮಾಂಡರ್ ಅಥವಾ ಉನ್ನತ ದರ್ಜೆಯ ಅಥವಾ ವರ್ಗದ ರೇಂಜರ್ ಒಳಗೊಳ್ಳುತ್ತಾರೆ.

(ವೈ) "ಭಯೋತ್ಪಾದಕ" ಎಂದರೆ, ಕಾನೂನು ಮೂಲಕ ಸ್ಥಾಪಿತವಾದ ಸರ್ಕಾರವನ್ನು ಆತಂಕಪಡಿಸುವ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನು ಹುಟ್ಟಿಸುವ ಅಥವಾ ಜನರ ಯಾವುದೇ ವರ್ಗವನ್ನು ಪ್ರತ್ಯೇಕಿಸುವ ಅಥವಾ ವಿವಿಧ ವರ್ಗಗಳ ಜನರಲ್ಲಿ ಸಾಮರಸ್ಯವನ್ನು ಕೆಡಿಸುವ ಉದ್ದೇಶದಿಂದ ಬಾಂಬುಗಳನ್ನು, ಡೈನಮೈಟ್‌ಗಳನ್ನು ಅಥವಾ ಇತರೆ ಸ್ಫೋಟಕ ವಸ್ತುಗಳನ್ನು ಅಥವಾ ದಹ್ಯ ವಸ್ತುಗಳನ್ನು ಅಥವಾ ಬಂದೂಕುಗಳನ್ನು ಅಥವಾ ಇತರೆ ಮಾರಕಾಸ್ತ್ರಗಳನ್ನು ಅಥವಾ ವಿಷ ಅಥವಾ ಹಾನಿಕಾರಕ ಅನಿಲ ಅಥವಾ ಇತರ ರಾಸಾಯನಿಕಗಳನ್ನು ಅಥವಾ ಅಪಾಯಕಾರಿ ಸ್ವರೂಪದ ಇತರ ಯಾವುದೇ ವಸ್ತುಗಳನ್ನು (ಜೈವಿಕ ಅಥವಾ ಅನ್ಯಥಾ) ಬಳಸುವ ಮೂಲಕ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಮರಣ ಅಥವಾ ಕ್ಷತಿಗಳನ್ನು ಉಂಟುಮಾಡುವ ಅಥವಾ ಸ್ವತ್ತಿಗೆ ಹಾನಿ ಅಥವಾ ನಾಶ ಉಂಟು ಮಾಡುವ ಅಥವಾ ಸಮುದಾಯದ ಜೀವನಕ್ಕೆ ಅವಶ್ಯವಿರುವ ಯಾವುದೇ ಸರಬರಾಜುಗಳಿಗೆ ಅಥವಾ ಸೇವೆಗಳಿಗೆ ಅಡ್ಡಿಯುಂಟು ಮಾಡುವ ರೀತಿಯಲ್ಲಿ ಅಥವಾ ಉಂಟು ಮಾಡುವ ಸಂಭವವಿರುವ ಯಾವುದೇ ಕೃತ್ಯವನ್ನು ಅಥವಾ ಕಾರ್ಯವನ್ನು ಮಾಡುವ ಯಾರೇ ವ್ಯಕ್ತಿ ಎಂದು ಅರ್ಥ;

(ಝಡ್) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿಲ್ಲದ, ಆದರೆ ಭಾರತ ದಂಡ ಸಂಹಿತೆಯಲ್ಲಿ (1960ರ 45) ಪರಿಭಾಷಿಸಿರುವ ಎಲ್ಲಾ ಪದಗಳು ಮತ್ತು ಪದಾವಳಿಗಳು ಆ ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(2) ಈ ಅಧಿನಿಯಮದಲ್ಲಿ, ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರದ ಯಾವುದೇ ಕಾನೂನಿಗೆ ಮಾಡಿದ ಉಲ್ಲೇಖಗಳನ್ನು ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನುಗಳಿಗೆ ಮಾಡಿದ ಉಲ್ಲೇಖಗಳೆಂಬುದಾಗಿ ಅರ್ಥೈಸತಕ್ಕದ್ದು.

3. **ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗಳು.**– (1) ಭದ್ರತಾ ಪಡೆಯಲ್ಲಿ ನೇಮಕಗೊಂಡ (ಪ್ರತಿ ನಿಯೋಜನೆಯ ಮೇಲಾಗಲಿ ಅಥವಾ ಯಾವುದೇ ಇತರೆ ರೀತಿಯಲ್ಲಾಗಲಿ) ಈ ಮುಂದಿನ ವ್ಯಕ್ತಿಗಳು ಅವರು ಎಲ್ಲಿಯೇ ಇದ್ದರೂ ಈ ಅಧಿನಿಯಮಕ್ಕೊಳಪಟ್ಟಿರತಕ್ಕದ್ದು, ಎಂದರೆ:–

(ಎ) ಅಧಿಕಾರಿಗಳು ಮತ್ತು ಸಹಾಯಕ ಕಮಾಂಡರುಗಳು; ಮತ್ತು

(ಬಿ) ರೇಂಜರುಗಳು ಮತ್ತು ಹೋರಾಟದ ವೃತ್ತಿಗರು.

(2) ಈ ಅಧಿನಿಯಮಕ್ಕೊಳಪಟ್ಟ ಪ್ರತಿಯೊಬ್ಬ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಮತ್ತು ನಿಯಮಗಳ ಅನುಸಾರವಾಗಿ ಭದ್ರತಾ ಪಡೆಯಿಂದ ಅವನನ್ನು ವಾಪಸು ಕಳಿಸುವವರೆಗೆ, ನಿವೃತ್ತಿಗೊಳಿಸುವವರೆಗೆ, ಬಿಡುಗಡೆ ಮಾಡುವವರೆಗೆ, ವಿಮೋಚನೆಗೊಳಿಸುವವರೆಗೆ, ತೆಗೆದು ಹಾಕುವವರೆಗೆ ಅಥವಾ ವಜಾ ಮಾಡುವವರೆಗೆ ಹಾಗೆ ಒಳಪಟ್ಟಿರುವುದು ಉಳಿಯತಕ್ಕದ್ದು.

## ಅಧ್ಯಾಯ II

### ಭದ್ರತಾ ಪಡೆಯ ಸ್ಥಾಪನೆ ಮತ್ತು ಭದ್ರತಾ ಪಡೆಯ ಸದಸ್ಯರ ಸೇವಾ ಷರತ್ತುಗಳು

4. **ಭದ್ರತಾ ಪಡೆಯ ಸ್ಥಾಪನೆ.–** (1) ಆಂತರಿಕ ಗಲಭೆಗಳಿಂದ ರಾಜ್ಯಗಳನ್ನು ರಕ್ಷಿಸುವ ದೃಷ್ಟಿಯಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕಾಗಿ ರಾಷ್ಟ್ರೀಯ ಭದ್ರತಾ ಪಡೆ ಎಂದು ಕರೆಯಲಾಗುವ ಒಕ್ಕೂಟ ಸಶಸ್ತ್ರ ಪಡೆಯು ಇರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸ್ಥಾಪಿಸತಕ್ಕದ್ದು ಮತ್ತು ಭದ್ರತಾ ಪಡೆಯ ಸದಸ್ಯರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

5. **ನಿಯಂತ್ರಣ, ನಿರ್ದೇಶನ ಇತ್ಯಾದಿ:–** (1) ಭದ್ರತಾ ಪಡೆಯ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು, ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು, ಮತ್ತು ಅದು ಚಲಾಯಿಸತಕ್ಕದ್ದು ಮತ್ತು ಅದಕ್ಕೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು, ಭದ್ರತಾ ಪಡೆಯ ಕಮ್ಯಾಂಡ್ ಮತ್ತು ಮೇಲ್ವಿಚಾರಣೆಯು ಭದ್ರತಾ ಪಡೆಯ ಮಹಾ ನಿರ್ದೇಶಕನಾಗಿ ಕೇಂದ್ರ ಸರ್ಕಾರವು ನೇಮಕ ಮಾಡುವ ಅಧಿಕಾರಿಯಲ್ಲಿ ನಿಹಿತವಾಗತಕ್ಕದ್ದು.

(2) ಮಹಾ ನಿರ್ದೇಶಕನು ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಷ್ಟು ಸಂಖ್ಯೆಯ ಅಪರ ಮಹಾ ನಿರ್ದೇಶಕರುಗಳ, ಮಹಾ ನಿರೀಕ್ಷಕರುಗಳ, ಉಪ ಮಹಾ ನಿರೀಕ್ಷಕರುಗಳ, ಗ್ರೂಪ್ ಕಮಾಂಡರುಗಳ ಮತ್ತು ಇತರ ಅಧಿಕಾರಿಗಳ ನೆರವು ಪಡೆಯತಕ್ಕದ್ದು.

6. **ಭಾರತದ ಹೊರಗೆ ಸೇವೆ ಸಲ್ಲಿಸುವ ಹೊಣೆಗಾರಿಕೆ.–** ಭದ್ರತಾ ಪಡೆಯ ಪ್ರತಿಯೊಬ್ಬ ಸದಸ್ಯನು ಭಾರತದ ಯಾವುದೇ ಭಾಗದಲ್ಲಿ ಹಾಗೂ ಭಾರತದ ಹೊರಗೆ ಸೇವೆ ಸಲ್ಲಿಸಲು ಹೊಣೆಗಾರನಾಗಿರತಕ್ಕದ್ದು.

7. **ಹುದ್ದೆಗೆ ರಾಜೀನಾಮೆ ಮತ್ತು ಅದರಿಂದ ಹಿಂದೆ ಸರಿಯುವುದು.–** ಭದ್ರತಾ ಪಡೆಯ ಯಾರೇ ಸದಸ್ಯನು ನಿಯಮಿಸಲಾದ ಪ್ರಾಧಿಕಾರದಿಂದ ಲಿಖಿತದಲ್ಲಿ ಪೂರ್ವಾನುಮೋದನೆ ಪಡೆದ ಹೊರತು,–

(ಎ) ಅವನ ನಿಯೋಜನೆಯ ಅವಧಿಯಲ್ಲಿ ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಲು; ಅಥವಾ

(ಬಿ) ಅವನ ಉದ್ಯೋಗದ ಎಲ್ಲ ಅಥವಾ ಯಾವುವೇ ಕರ್ತವ್ಯಗಳಿಂದ ತಾನೇ ಹಿಂದಕ್ಕೆ ಸರಿಯಲು

– ಸ್ವತಂತ್ರನಾಗಿರತಕ್ಕದ್ದಲ್ಲ.

8. **ಈ ಅಧಿನಿಯಮದ ಮೇರೆಗಿನ ಸೇವಾ ಅವಧಿ.–** ಈ ಅಧಿನಿಯಮಕ್ಕೊಳಪಟ್ಟ ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರಪತಿಯ ಇಷ್ಟಪರ್ಯಂತ ಪದವನ್ನು ಧಾರಣ ಮಾಡತಕ್ಕದ್ದು.

9. **ಕೇಂದ್ರ ಸರ್ಕಾರವು ಸೇವೆಯನ್ನು ಕೊನೆಗೊಳಿಸುವುದು.–** ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾಮಾಡಬಹುದು ಅಥವಾ ತೆಗೆದು ಹಾಕಬಹುದು.

10. **ಮಹಾ ನಿರ್ದೇಶಕನು ಮತ್ತು ಇತರೆ ಅಧಿಕಾರಿಗಳು ಯಾರೇ ವ್ಯಕ್ತಿಯನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಆತನ ದರ್ಜೆಯನ್ನು ಇಳಿಸುವುದು.–** (1) ಮಹಾ–ನಿರ್ದೇಶಕನು, ಯಾರೇ ಅಪರ ಮಹಾ –

ನಿರ್ದೇಶಕನು ಅಥವಾ ಯಾರೇ ಮಹಾ–ನಿರೀಕ್ಷಕನು, ಅಧಿಕಾರಿಯನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾಮಾಡಬಹುದು ಅಥವಾ ತೆಗೆದುಹಾಕಬಹುದು ಅಥವಾ ಕೆಳಗಿನ ದರ್ಜೆಗೆ ಅಥವಾ ದರ್ಜೆಗೆ ಅಥವಾ ದರ್ಜೆಗಳಿಗೆ ಇಳಿಸಬಹುದು.

(2) ಉಪ ಮಹಾ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಅಥವಾ ನಿಯಮಿಸಲಾದ ಯಾರೇ ಅಧಿಕಾರಿಯು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ಅವನ ಕಮಾಂಡಿನಲ್ಲಿರುವ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾ ಮಾಡಬಹುದು ಅಥವಾ ತೆಗೆದುಹಾಕಬಹುದು.

(3) (2)ನೇ ಉಪ ಪ್ರಕರಣದಲ್ಲಿ ಹೇಳಲಾದ ಯಾರೇ ಅಧಿಕಾರಿಯು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ಅವನ ಕಮಾಂಡಿನಲ್ಲಿರುವ ಯಾರೇ ವ್ಯಕ್ತಿಯನ್ನು ಕೆಳಗಿನ ಶ್ರೇಣಿಗೆ ಅಥವಾ ದರ್ಜೆಗೆ ಅಥವಾ ದರ್ಜೆಗಳಿಗೆ ಇಳಿಸಬಹುದು.

(4) ಈ ಪ್ರಕರಣದ ಮೇರೆಗಿನ ಯಾವುದೇ ಅಧಿಕಾರದ ಚಲಾವಣೆಯ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

**11. ಸೇವೆಯನ್ನು ಕೊನೆಗೊಳಿಸಿರುವ ಬಗ್ಗೆ ಪ್ರಮಾಣಪತ್ರ.–** ಸೇವೆಯಿಂದ ನಿವೃತ್ತಿಹೊಂದಿದ, ಬಿಡುಗಡೆಯಾದ, ವಿಮೋಚನೆಗೊಂಡ, ತೆಗೆದುಹಾಕಿದ ಅಥವಾ ವಜಾ ಆದ ಸಹಾಯಕ ಕಮಾಂಡರನಿಗೆ ಅಥವಾ ರೇಂಜರನಿಗೆ ಅಥವಾ ಹೋರಾಟದ ವೃತ್ತಿಗನಿಗೆ ಆತನು ಯಾವ ಅಧಿಕಾರಿಯ ಕಮಾಂಡಿಗೆ ಒಳಪಟ್ಟಿರುತ್ತಾನೋ ಆ ಅಧಿಕಾರಿಯು,–

(ಎ) ಅವನ ಸೇವೆಯನ್ನು ಕೊನೆಗೊಳಿಸುವ ಪ್ರಾಧಿಕಾರವನ್ನು;

(ಬಿ) ಹಾಗೆ ಕೊನೆಗೊಳಿಸಿದ್ದಕ್ಕೆ ಕಾರಣವನ್ನು; ಮತ್ತು

(ಸಿ) ಭದ್ರತಾ ಪಡೆಯಲ್ಲಿ ಅವನು ಸಲ್ಲಿಸಿದ ಪೂರ್ಣ ಸೇವಾವಧಿಯನ್ನು

– ನಿರೂಪಿಸಿರುವ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು.

**12. ಸಂಘಗಳನ್ನು ರಚಿಸುವ ಹಕ್ಕು, ವಾಕ್ ಸ್ವಾತಂತ್ರ್ಯ, ಇತ್ಯಾದಿಗಳ ಸಂಬಂಧದಲ್ಲಿ ನಿರ್ಬಂಧಗಳು.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರದ ಅಥವಾ ನಿಯಮಿಸಲಾದ ಪ್ರಾಧಿಕಾರದ ಲಿಖಿತ ಪೂರ್ವ ಮಂಜೂರಾತಿ ಪಡೆಯದೆ,–

(ಎ) ಯಾವುದೇ ವೃತ್ತಿ ಸಂಘದ, ಕಾರ್ಮಿಕ ಸಂಘದ, ರಾಜಕೀಯ ಸಂಘಟನೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಅವುಗಳೊಂದಿಗೆ ಸಹವರ್ತಿಯಾಗಿರತಕ್ಕದ್ದಲ್ಲ ಅಥವಾ ವೃತ್ತಿ ಸಂಘಗಳ, ಕಾರ್ಮಿಕ ಸಂಘಗಳ ಅಥವಾ ರಾಜಕೀಯ ಸಂಘಗಳ, ಯಾವುದೇ ವರ್ಗದೊಂದಿಗೆ ಯಾವುದೇ ರೀತಿಯಲ್ಲಿ ಸಹವರ್ತಿಯಾಗಿರತಕ್ಕದ್ದಲ್ಲ; ಅಥವಾ

(ಬಿ) ಭದ್ರತಾ ಪಡೆಯ ಒಂದು ಭಾಗವಾಗಿ ಮನ್ನಣೆ ಪಡೆಯದ ಅಥವಾ ಕೇವಲ ಸಾಮಾಜಿಕ, ಮನರಂಜನಾ ಅಥವಾ ಧಾರ್ಮಿಕ ಸ್ವರೂಪದ್ದಲ್ಲದ ಯಾವುದೇ ಸೊಸೈಟಿಯ, ಸಂಸ್ಥೆಯ, ಸಂಘದ ಅಥವಾ ಸಂಘಟನೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅವುಗಳೊಂದಿಗೆ ಯಾವುದೇ ರೀತಿಯಲ್ಲಿ ಸಹವರ್ತಿಯಾಗಿರತಕ್ಕದ್ದಲ್ಲ; ಅಥವಾ

(ಸಿ) ಪತ್ರಿಕೆಗಳಿಗೆ ತಿಳಿಸುವುದನ್ನು ಅಥವಾ ಯಾವುದೇ ಪುಸ್ತಕವನ್ನು, ಪತ್ರವನ್ನು ಅಥವಾ ಇತರ ದಸ್ತಾವೇಜನ್ನು ಪ್ರಕಟಿಸುವುದನ್ನು ಅಥವಾ ಪ್ರಕಟಿಸುವಂತೆ ಮಾಡುವುದನ್ನು, ತನ್ನ ಕರ್ತವ್ಯಗಳನ್ನು ಸದ್ಭಾವನೆಯಿಂದ ನಿರ್ವಹಿಸುವಾಗ ತಿಳಿಸಿದ್ದ ಹೊರತು ಅಥವಾ ಪ್ರಕಟಿಸಿದ್ದ ಹೊರತು ಅಥವಾ ಪ್ರಕಟಿಸುವಂತೆ ಮಾಡಿದ್ದ ಹೊರತು, ಅಥವಾ ಅದು ಸಂಪೂರ್ಣವಾಗಿ ಸಾಹಿತ್ಯಿಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿರುವ ಅಥವಾ ನಿಯಮಿಸಿದ ಸ್ವರೂಪದ್ದಾಗಿರುವ ಹೊರತು, ಪತ್ರಿಕೆಗಳಿಗೆ ತಿಳಿಸಿತಕ್ಕದ್ದಲ್ಲ ಅಥವಾ ಅವುಗಳನ್ನು ಪ್ರಕಟಿಸತಕ್ಕದ್ದಲ್ಲ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

**ವಿವರಣೆ:–** ಯಾವುದೇ ಸೊಸೈಟಿಯು, ಸಂಸ್ಥೆಯು, ಸಂಘವು ಅಥವಾ ಸಂಘಟನೆಯು ಈ ಉಪ ಪ್ರಕರಣದ (ಬಿ) ಖಂಡದ ಮೇರೆಗೆ ಪೂರ್ಣವಾಗಿ ಸಾಮಾಜಿಕ, ಮನರಂಜನಾ ಅಥವಾ ಧಾರ್ಮಿಕ ಸ್ವರೂಪದ್ದಾಗಿದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ರಾಜಕೀಯ ಉದ್ದೇಶಗಳಿಗಾಗಿ ಅಥವಾ ನಿಯಮಿಸಬಹುದಾದಂಥ ಇತರೆ ಉದ್ದೇಶಗಳಿಗಾಗಿ ಯಾವುದೇ ಸಭೆಯಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕದ್ದಲ್ಲ ಅಥವಾ ವ್ಯಕ್ತಿಗಳ ಯಾವುದೇ ನಿಕಾಯವು ಏರ್ಪಡಿಸಿದ ಯಾವುದೇ ಪ್ರದರ್ಶನದಲ್ಲಿ ಭಾಗವಹಿಸತಕ್ಕದ್ದಲ್ಲ.

**13. ಅಧಿಕಾರಿಗಳನ್ನು ಹೊರತುಪಡಿಸಿ ಇತರ ಬಾಧಿತ ವ್ಯಕ್ತಿಗಳಿಗೆ ಪರಿಹಾರೋಪಾಯ.–** (1) ಮೇಲಧಿಕಾರಿಯಿಂದ ಅಥವಾ ಇತರ ಅಧಿಕಾರಿಯಿಂದ ಅನ್ಯಾಯಕ್ಕೆ ಒಳಗಾಗಿದ್ದೇನೆಂದು ತಾನು ಭಾವಿಸುವ ಅಧಿಕಾರಿಯನ್ನು ಹೊರತುಪಡಿಸಿ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನು ಯಾರ ಕಮಾಂಡಿನಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಅಧಿಕಾರಿಗೆ ದೂರು ಸಲ್ಲಿಸಬಹುದು.

(2) ಯಾವ ಅಧಿಕಾರಿಯ ವಿರುದ್ಧ ದೂರನ್ನು ನೀಡಬೇಕಾಗಿದೆಯೋ ಆ ಅಧಿಕಾರಿಯೇ (1)ನೇ ಉಪ ಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಬೇಕಾಗಿರುವಾಗ, ಆ ಬಾಧಿತ ವ್ಯಕ್ತಿಯು ಆ ದೂರನ್ನು ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ ಸಲ್ಲಿಸಬಹುದು.

(3) ಯಾವುದೇ ಅಂಥ ದೂರನ್ನು ಸ್ವೀಕರಿಸಿದ ಪ್ರತಿಯೊಬ್ಬ ಅಧಿಕಾರಿಯು, ಫಿರ್ಯಾದಿಗೆ ಪೂರ್ಣ ಪರಿಹಾರವನ್ನು ನೀಡುವ ಸಲುವಾಗಿ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಪೂರ್ಣ ತನಿಖೆಯನ್ನು ನಡೆಸತಕ್ಕದ್ದು; ಅಥವಾ ಅವಶ್ಯವಿದ್ದಾಗ, ಮೇಲಧಿಕಾರಿಗೆ ಆ ದೂರನ್ನು ಕಳುಹಿಸಿಕೊಡತಕ್ಕದ್ದು.

(4) ಮಹಾ–ನಿರ್ದೇಶಕನು ಮೇಲೆ ಹೇಳಿದ ಯಾವುವೇ ಉಪ ಪ್ರಕರಣಗಳ ಮೇರೆಗೆ ಮಾಡಿದ ಯಾವುದೇ ತೀರ್ಮಾನವನ್ನು ಪರಿಷ್ಕರಿಸಬಹುದು, ಆದರೆ, ಅದಕ್ಕೊಳಪಟ್ಟು, ಅಂಥ ತೀರ್ಮಾನವು ಅಂತಿಮವಾಗಿರತಕ್ಕದ್ದು.

**14. ಬಾಧಿತ ಅಧಿಕಾರಿಗಳಿಗೆ ಪರಿಹಾರ.–** ಯಾರೇ ಅಧಿಕಾರಿಯು ಅವನ ಕಮಾಂಡರನಿಂದ ಅಥವಾ ಯಾರೇ ಇತರೆ ಮೇಲಧಿಕಾರಿಯಿಂದ ತಾನು ಅನ್ಯಾಯಕ್ಕೊಳಗಾಗಿದ್ದೇನೆಂದು ಭಾವಿಸಿದರೆ ಮತ್ತು ಅವನ ಕಮಾಂಡರನಿಗೆ ಅಥವಾ ಅಂಥ ಇತರೆ ಮೇಲಧಿಕಾರಿಗೆ ಯುಕ್ತ ಅರ್ಜಿಯನ್ನು ಸಲ್ಲಿಸಿದ ಮೇಲೆ ತಾನು ಯಾವ ಪರಿಹಾರಕ್ಕೆ ಅರ್ಹನಾಗಿದ್ದೇನೆಂದು ಅವನು ಪರಿಗಣಿಸಿದ್ದಾನೋ ಆ ಪರಿಹಾರವನ್ನು ಪಡೆಯದಿರುವಾಗ, ಕ್ರಮವಾದ ಮಾರ್ಗದ ಮೂಲಕ ಮಹಾ ನಿರ್ದೇಶಕನಿಗೆ ಅಥವಾ ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸಬಹುದು.

## ಅಧ್ಯಾಯ III

## ಅಪರಾಧಗಳು

**15. ಒಕ್ಕೂಟದ ವಿರುದ್ಧ ಬಂಡೆದ್ದಿರುವ ಭಯೋತ್ಪಾದಕರಿಗೆ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಮರಣದಂಡನೆಯಿಂದ ದಂಡಿತವಾಗುವ ಅಪರಾಧಗಳು.–** ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಎಂದರೆ:–

(ಎ) ಅವನ ಕರ್ತವ್ಯದ ಸ್ಥಳವನ್ನು ಲಜ್ಜಾಸ್ಪದವಾಗಿ ತ್ಯಜಿಸಿದರೆ ಅಥವಾ ಕಾರ್ಯಾಚರಣೆ ಸಮಯದಲ್ಲಿ ಹೇಡಿತನವನ್ನು ತೋರಿಸುವಂಥ ರೀತಿಯಲ್ಲಿ ದುರ್ನಡತೆಯಿಂದ ನಡೆದುಕೊಂಡರೆ;

(ಬಿ) ಒಕ್ಕೂಟದ ವಿರುದ್ಧ ಬಂಡೆದ್ದ ಭಯೋತ್ಪಾದಕನ ಅಥವಾ ಯಾರೇ ವ್ಯಕ್ತಿಯ ಜೊತೆ ವಿಶ್ವಾಸಘಾತದಿಂದ ಪತ್ರವ್ಯವಹಾರ ನಡೆಸಿದರೆ, ಅಥವಾ ಅವರಿಗೆ ಗುಪ್ತವಾರ್ತೆಯನ್ನು ತಿಳಿಸಿದರೆ; ಅಥವಾ

(ಸಿ) ಯಾರೇ ಭಯೋತ್ಪಾದಕನಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣವನ್ನು, ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು, ಸಾಮಗ್ರಿಗಳನ್ನು ಅಥವಾ ಸರಬರಾಜುಗಳನ್ನು ಮಾಡಿದರೆ ಅಥವಾ ಯಾವುದೇ ಇತರೆ ರೀತಿಯಲ್ಲಿ ನೆರವು ನೀಡಿದರೆ; ಅಥವಾ

(ಡಿ) ಭದ್ರತಾ ಪಡೆಯ ಅಥವಾ ಮಿಲಿಟರಿಯ, ನೌಕಾದಳದ, ವಾಯುದಳದ ಅಥವಾ ಭಾರತದ ಇತರೆ ಯಾವುದೇ ಸಶಸ್ತ್ರಬಲದ ಅಥವಾ ಅದರೊಂದಿಗೆ ಅಥವಾ ಅಂಥವೇ ಬಲಗಳ ಯಾವುದೇ ಭಾಗದೊಂದಿಗೆ ಸಹಕರಿಸುತ್ತಿರುವ ಯಾವುವೇ ಬಲಗಳ ಯಶಸ್ಸಿಗೆ ಗಂಡಾಂತರವನ್ನುಂಟು ಮಾಡಲು ಯೋಜಿಸಿದ ಯಾವುದೇ ಕೃತ್ಯವನ್ನು ತಿಳಿದೂ ತಿಳಿದೂ ಮಾಡಿದರೆ

– ಅವನು ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ನಂತರ, ಮರಣದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿದಂಥ ಇತರ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**16. ಇತರೆ ವೇಳೆಗಳಿಗಿಂತ ಸಕ್ರಿಯ ಕರ್ತವ್ಯದ ಮೇಲಿರುವಾಗ ಮಾಡಿದ ಅಪರಾಧಗಳಿಗಾಗಿ ತೀವ್ರ ದಂಡನೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಸಂರಕ್ಷಣೆಯನ್ನು ಅತಿಕ್ರಮಿಸಿದರೆ, ಅಥವಾ ಕಾವಲುಗಾರನ ಮೇಲೆ ಬಲ ಪ್ರಯೋಗಿಸಿದರೆ ಅಥವಾ ಅಪರಾಧಿಕ ಬಲವನ್ನು ಬಳಸಿದರೆ; ಅಥವಾ

(ಬಿ) ಲೂಟಿ ಮಾಡಲು ಯಾವುದೇ ಮನೆಗೆ ಅಥವಾ ಇತರೆ ಸ್ಥಳಕ್ಕೆ ಕನ್ನ ಹಾಕಿದರೆ; ಅಥವಾ

(ಸಿ) ಕೆಲಸದ ಮೇಲಿರುವಾಗ ಕಾವಲುಗಾರನು ನಿದ್ದೆ ಮಾಡಿದರೆ ಅಥವಾ ಮದ್ಯಪಾನ ಮಾಡಿದರೆ; ಅಥವಾ

(ಡಿ) ಅವನ ಮೇಲಧಿಕಾರಿಯ ಆದೇಶ ಪಡೆಯದೆ ಅವನು ಪಹರೆ, ಪಿಕೆಟ್, ಗಸ್ತು ಅಥವಾ ಹುದ್ದೆಯ ಸ್ಥಳವನ್ನು ಬಿಟ್ಟರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾದಿಯೆಂದು ಅಪರಾಧ ನಿರ್ಣಯವಾದ ಮೇಲೆ,–

(i) ಸಕ್ರಿಯ ಕರ್ತವ್ಯದ ಮೇಲಿರುವಾಗ ಯಾವುದೇ ಅಂಥ ಅಪರಾಧ ಮಾಡಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ii) ಅವನು ಸಕ್ರಿಯ ಕರ್ತವ್ಯದ ಮೇಲೆ ಇಲ್ಲದಿರುವಾಗ ಅಂಥ ಯಾವುದೇ ಅಪರಾಧವನ್ನು ಮಾಡಿದ್ದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**17. ದಂಗೆ.–** ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡುವ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಎಂದರೆ:–

(ಎ) ಭದ್ರತಾ ಪಡೆಯಲ್ಲಿ ಅಥವಾ ಮಿಲಿಟರಿಯಲ್ಲಿ, ನೌಕಾದಳದಲ್ಲಿ, ವಾಯುದಳದಲ್ಲಿ ಅಥವಾ ಭಾರತದ ಯಾವುದೇ ಇತರೆ ಸಶಸ್ತ್ರದಳದಲ್ಲಿ ಅಥವಾ ಅದರೊಂದಿಗೆ ಸಹಕರಿಸುತ್ತಿರುವ ಯಾವುದೇ ದಳಗಳಲ್ಲಿ ಯಾವುದೇ ದಂಗೆಯನ್ನುಂಟುಮಾಡಲು ಯಾರೇ ಇತರೆ ವ್ಯಕ್ತಿಯೊಂದಿಗೆ ಪ್ರಾರಂಭಿಸಿದರೆ, ದುಷ್ಪ್ರೇರೆಪಿಸಿದರೆ, ಪ್ರೇರೇಪಿಸಿದರೆ ಅಥವಾ ಒಳಸಂಚು ನಡೆಸಿದರೆ; ಅಥವಾ

(ಬಿ) ಯಾವುದೇ ಅಂಥ ದಂಗೆಯಲ್ಲಿ ಸೇರಿದರೆ; ಅಥವಾ

(ಸಿ) ಯಾವುದೇ ಅಂಥ ದಂಗೆಯ ಸಮಯದಲ್ಲಿ ಹಾಜರಿದ್ದು, ಅದನ್ನು ಹತ್ತಿಕ್ಕಲು ಅವನು ಅತ್ಯಧಿಕ ಪ್ರಯತ್ನ ಮಾಡದಿದ್ದರೆ; ಅಥವಾ

(ಡಿ) ಯಾವುದೇ ಅಂಥ ದಂಗೆಯ ಅಸ್ತಿತ್ವ, ಅಥವಾ ದಂಗೆ ಏಳುವ ಉದ್ದೇಶವಿರುವುದು ಅಥವಾ ಯಾವುದೇ ಅಂಥ ದಂಗೆಯ ಒಳಸಂಚಿನ ಬಗ್ಗೆ ತಿಳಿದೂ ತಿಳಿದೂ ಅಥವಾ ನಂಬಲು ಕಾರಣಗಳಿದ್ದರೂ

ಅವುಗಳನ್ನು ತನ್ನ ಕಮಾಂಡರನಿಗೆ ಅಥವಾ ಇತರ ಮೇಲಧಿಕಾರಿಗೆ ವಿಳಂಬ ಮಾಡದೆ ಮಾಹಿತಿ ನೀಡದಿದ್ದರೆ; ಅಥವಾ

(ಇ) ಭದ್ರತಾ ಪಡೆಯಲ್ಲಿ ಅಥವಾ ಮಿಲಿಟರಿಯಲ್ಲಿ, ನೌಕಾದಳದಲ್ಲಿ, ವಾಯುದಳದಲ್ಲಿ ಅಥವಾ ಭಾರತದ ಯಾವುದೇ ಇತರೆ ಸಶಸ್ತ್ರದಳದಲ್ಲಿ ಅಥವಾ ಅದಕ್ಕೆ ಸಹಕರಿಸುತ್ತಿರುವ ಯಾವುದೇ ದಳಗಳಲ್ಲಿನ ಯಾರೇ ವ್ಯಕ್ತಿಯನ್ನು ಅವನ ಕರ್ತವ್ಯದಿಂದ ಅಥವಾ ಒಕ್ಕೂಟ ನಿಷ್ಠೆಯಿಂದ ದುರ್ಮಾರ್ಗಕ್ಕೆ ಪ್ರೇರೇಪಿಸಲು ಪ್ರಯತ್ನಿಸಿದರೆ

– ಭದ್ರತಾ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ನಂತರ ಮರಣ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಲಾದಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

18. **ತ್ಯಜಿಸುವುದು ಅಥವಾ ತ್ಯಜಿಸಲು ನೆರವಾಗುವುದು.–** (1) ಸೇವೆಯನ್ನು ತ್ಯಜಿಸುವ ಅಥವಾ ತ್ಯಜಿಸಲು ಪ್ರಯತ್ನಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ಅನಂತರ, ಅವನು,–

(ಎ) ಸಕ್ರಿಯ ಕರ್ತವ್ಯದ ಮೇಲಿರುವಾಗ ಅಥವಾ ಸಕ್ರಿಯ ಕರ್ತವ್ಯಕ್ಕಾಗಿ ಆದೇಶಗಳನ್ನು ಪಡೆದಿರುವಾಗ ಅಪರಾಧ ಮಾಡಿದರೆ, ಮರಣದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ಬಿ) ಯಾವುದೇ ಇತರೆ ಸನ್ನಿವೇಶಗಳಲ್ಲಿ ಅಪರಾಧ ಮಾಡಿದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

2) ಅಂಥ ಯಾವುದೇ ತ್ಯಜಿಸುವವನಿಗೆ ತಿಳಿದೂ ತಿಳಿದೂ ಆಶ್ರಯ ಕೊಡುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾದಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(3) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು ತ್ಯಜಿಸಿದ ಅಥವಾ ತ್ಯಜಿಸಲು ಪ್ರಯತ್ನಿಸಿರುವುದರ ಬಗ್ಗೆ ತಿಳಿದಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಕೂಡಲೇ ತನ್ನ ಅಥವಾ ಇತರ ಮೇಲಧಿಕಾರಿಗೆ ನೋಟೀಸು ಕೊಡದಿದ್ದರೆ, ಅಥವಾ ಅಂಥ ವ್ಯಕ್ತಿಯನ್ನು ಬಂಧಿಸುವಂತೆ ಮಾಡಲು ತನ್ನ ಅಧಿಕಾರದಲ್ಲಿರುವ ಯಾವುವೇ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ಆನಂತರ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(4) ಈ ಅಧಿನಿಯಮದ ಉದ್ದೇಶಗಳಿಗಾಗಿ, ವ್ಯಕ್ತಿಯು,–

(ಎ) ಅವನು ತನ್ನ ಘಟಕಕ್ಕೆ ಅಥವಾ ಕರ್ತವ್ಯದ ಸ್ಥಳಕ್ಕೆ ವರದಿ ಮಾಡಿಕೊಳ್ಳದಿರುವ ಉದ್ದೇಶದಿಂದ ಅಂಥ ಘಟಕ ಅಥವಾ ಸ್ಥಳದಿಂದ ಯಾವುದೇ ಕಾಲದಲ್ಲಿ ಗೈರು ಹಾಜರಾದರೆ, ಅಥವಾ ಯಾವುದೇ ಕಾಲದಲ್ಲಿ ಮತ್ತು ಯಾವುವೇ ಸನ್ನಿವೇಶಗಳಲ್ಲಿ ಅವನ ಘಟಕ ಅಥವಾ ಕರ್ತವ್ಯದ ಸ್ಥಳದಿಂದ ಗೈರು ಹಾಜರಾದ ವ್ಯಕ್ತಿಯ, ಅಂಥ ಘಟಕಕ್ಕೆ ಅಥವಾ ಕರ್ತವ್ಯದ ಸ್ಥಳಕ್ಕೆ ವರದಿ ಮಾಡಿಕೊಳ್ಳದಿರುವ ಉದ್ದೇಶವನ್ನು ತಾನು ಹೊಂದಿದ್ದೇನೆಂದು ತೋರಿಸುವ ಯಾವುದೇ ಕೃತ್ಯವನ್ನು ಮಾಡಿದ್ದರೆ;

(ಬಿ) ಯಾವುದೇ ಸಕ್ರಿಯ ಕರ್ತವ್ಯದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಅನುಮತಿ ಇಲ್ಲದೆ ಗೈರು ಹಾಜರಾದರೆ ಆ ವ್ಯಕ್ತಿಯು ತ್ಯಜಿಸುತ್ತಾನೆಂದು

– ಭಾವಿಸತಕ್ಕದ್ದು.

19. **ಅನುಮತಿಯಿಲ್ಲದೆ ಗೈರು ಹಾಜರಿ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ಅನುಮತಿ ಇಲ್ಲದೆ ಗೈರು ಹಾಜರಾದರೆ; ಅಥವಾ

(ಬಿ) ಅವನಿಗೆ ಮಂಜೂರಾದ ರಜೆ ಅವಧಿಯನ್ನು ಮೀರಿ ಹೆಚ್ಚು ದಿನ ಸಾಕಷ್ಟು ಕಾರಣವಿಲ್ಲದೆ ಉಳಿದರೆ; ಅಥವಾ

(ಸಿ) ಗೈರು ಹಾಜರಿ ರಜೆಯಲ್ಲಿದ್ದಾಗ ಮತ್ತು ಅವನು ಯಾವ ಘಟಕಕ್ಕೆ ಅಥವಾ ಅದರ ಭಾಗಕ್ಕೆ ಸೇರಿರುವನೋ ಆ ಯಾವುದೇ ಘಟಕ ಅಥವಾ ಭಾಗವು ಸಕ್ರಿಯ ಕರ್ತವ್ಯದ ಮೇಲೆ ಹಾಜರಾಗುವಂತೆ ಆದೇಶ ಮಾಡಿರುವುದರ ಬಗ್ಗೆ ಸಮುಚಿತ ಪ್ರಾಧಿಕಾರದಿಂದ ಮಾಹಿತಿ ಸ್ವೀಕರಿಸಿದ್ದಾಗ ಸಾಕಷ್ಟು ಕಾರಣವಿಲ್ಲದೆ, ವಿಳಂಬ ಮಾಡದೆ ಸಕ್ರಿಯ ಕರ್ತವ್ಯಕ್ಕೆ ಪುನಃ ಸೇರಲು ವಿಫಲನಾದರೆ; ಅಥವಾ

(ಡಿ) ಪೆರೇಡಿಗಾಗಿ ಅಥವಾ ಕವಾಯತಿಗೆ ಅಥವಾ ಕರ್ತವ್ಯಕ್ಕೆ ಗೊತ್ತುಪಡಿಸಿದ ಸ್ಥಳದಲ್ಲಿ ನಿಗದಿತ ಕಾಲದಲ್ಲಿ ಸಾಕಷ್ಟು ಕಾರಣವಿಲ್ಲದೆ ಹಾಜರಾಗಲು ವಿಫಲನಾದರೆ; ಅಥವಾ

(ಇ) ಪೆರೇಡ್‌ನಲ್ಲಿರುವಾಗ, ಅಥವಾ ಪಥಸಂಚಲನದಲ್ಲಿರುವಾಗ, ಸಾಕಷ್ಟು ಕಾರಣವಿಲ್ಲದೆ ಅಥವಾ ಅವನ ಮೇಲಧಿಕಾರಿಯಿಂದ ಅನುಮತಿ ಪಡೆಯದೆ, ಪೆರೇಡನ್ನು ಅಥವಾ ಪಥ ಸಂಚಲವನ್ನು ಬಿಟ್ಟು ಹೋದರೆ; ಅಥವಾ

(ಎಫ್) ಕ್ಯಾಂಪಿನಲ್ಲಿರುವಾಗ ಅಥವಾ ಬೇರೆಲ್ಲಾದರೂ ಇರುವಾಗ, ಯಾವುದೇ ಸಾಮಾನ್ಯ, ಸ್ಥಳೀಯ ಅಥವಾ ಇತರೆ ಆದೇಶದ ಮೂಲಕ, ಅವನ ಮೇಲಧಿಕಾರಿಯಿಂದ ಪಾಸು ಪಡೆಯದೆ ಅಥವಾ ಲಿಖಿತ ಅನುಮತಿ ಪಡೆಯದೆ ಯಾವುವೇ ನಿಗದಿತ ಎಲ್ಲೆಗಳನ್ನು ಅಥವಾ ಯಾವುದೇ ನಿಷೇದಿತ ಸ್ಥಳವನ್ನು ಮೀರಿ ಹೋಗಿರುವುದು ಕಂಡು ಬಂದರೆ; ಅಥವಾ

(ಜಿ) ಯಾವುದೇ ಶಾಲೆಗೆ ಹಾಜರಾಗಬೇಕೆಂದು ಯುಕ್ತವಾಗಿ ಆದೇಶಿಸಿದ್ದಾಗ ಅವನ ಮೇಲಧಿಕಾರಿಯಿಂದ ಅನುಮತಿ ಪಡೆಯದೆ ಅಥವಾ ಯುಕ್ತ ಕಾರಣವಿಲ್ಲದೆ, ಗೈರು ಹಾಜರಾದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**20. ಮೇಲಧಿಕಾರಿಗೆ ಹೊಡೆಯುವುದು ಅಥವಾ ಬೆದರಿಕೆ ಹಾಕುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ತನ್ನ ಮೇಲಧಿಕಾರಿಯ ಮೇಲೆ ಆಪರಾಧಿಕ ಬಲ ಬಳಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಬಿ) ಅಂಥ ಅಧಿಕಾರಿಗೆ ಬೆದರಿಸುವ ಭಾಷೆ ಬಳಸಿದರೆ; ಅಥವಾ

(ಸಿ) ಅಂಥ ಅಧಿಕಾರಿಗೆ ಅವಿಧೇಯ ಭಾಷೆ ಬಳಸಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ,–

(i) ಅಂಥ ಅಧಿಕಾರಿಯು ಅವನ ಪದದ ನಿರ್ವಹಣೆ ಮಾಡುತ್ತಿರುವ ಕಾಲದಲ್ಲಾಗಿದ್ದರೆ ಅಥವಾ ಅವನು ಸಕ್ರಿಯ ಕರ್ತವ್ಯದ ಮೇಲಿರುವಾಗ ಅಪರಾಧ ನಡೆದಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಸೂಚಿಸಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ii) ಇತರೆ ಸಂದರ್ಭಗಳಲ್ಲಿ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧದ ಸಂದರ್ಭದಲ್ಲಿ, ಕಾರಾವಾಸವು ಐದು ವರ್ಷಗಳನ್ನು ಮೀರತಕ್ಕದ್ದಲ್ಲ.

**21. ಮೇಲಧಿಕಾರಿಗೆ ಅವಿಧೇಯತೆಯನ್ನು ತೋರಿಸುವುದು.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನ ಮೇಲಧಿಕಾರಿಯ ಅಧಿಕಾರವನ್ನು, ಅವನ ಪದದ ನಿರ್ವಹಣೆಯಲ್ಲಿ ಅವನ ವರಿಷ್ಠ ಅಧಿಕಾರಿಯು ಮೌಖಿಕವಾಗಿಯಾಗಲಿ, ಅಥವಾ ಲಿಖಿತದಲ್ಲಾಗಲಿ ಅಥವಾ ಸಂಜ್ಞೆಯ ಮೂಲಕವಾಗಲಿ ಅಥವಾ ಇತರ ರೀತಿಯಲ್ಲಾಗಲಿ ವೈಯಕ್ತಿಕವಾಗಿ ನೀಡುವ ಯಾವುದೇ ಕಾನೂನು ಸಮ್ಮತ ಆಜ್ಞೆಯನ್ನು ಉದ್ದೇಶ ಪೂರ್ವಕವಾಗಿ ಪ್ರತಿಭಟಿಸುವಂಥ ರೀತಿಯಲ್ಲಿ ಅವಿಧೇಯತೆ ತೋರಿದರೆ ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾದ ನಂತರ ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಮತ್ತು ಅವನ ಮೇಲಧಿಕಾರಿಯು ನೀಡಿದ ಯಾವುದೇ ಕಾನೂನುಸಮ್ಮತ ಆಜ್ಞೆಯನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**22. ಹಲ್ಲೆ ಮಾಡುವುದು ಮತ್ತು ಅಡ್ಡಿಪಡಿಸುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಯಾವುದೇ ಜಗಳದಲ್ಲಿ, ಬೀದಿ ಜಗಳದಲ್ಲಿ ಅಥವಾ ಗಲಭೆಯಲ್ಲಿ ತೊಡಗಿದ್ದರೆ, ಯಾರು ಅವನ ಬಂಧನಕ್ಕೆ ಆದೇಶಿಸುತ್ತಾನೋ ಅವನು ತನ್ನ ದರ್ಜೆಗಿಂತ, ಕೆಳದರ್ಜೆಯವರಾಗಿದ್ದಾಗ್ಯೂ ಅಂಥವನ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ಯಾರೇ ಅಂಥ ಅಧಿಕಾರಿಯ ಮೇಲೆ ಆಪರಾಧಿಕ ಬಲವನ್ನು ಪ್ರಯೋಗಿಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಬಿ) ಯಾರೇ ವ್ಯಕ್ತಿಯನ್ನು ಅವನು ಈ ಅಧಿನಿಯಮಕ್ಕೊಳಪಟ್ಟಿರಲಿ ಅಥವಾ ಪಡದಿರಲಿ, ಅವನನ್ನು ಕಾನೂನು ಸಮ್ಮತವಾಗಿ ಯಾರ ಅಭಿರಕ್ಷೆಯಲ್ಲಿಡಲಾಗಿದೆಯೋ, ಮತ್ತು ಅವನು ತನ್ನ ಮೇಲಧಿಕಾರಿಯಾಗಿರಲಿ ಅಥವಾ ಆಗಿಲ್ಲದಿರಲಿ ಅವನ ಮೇಲೆ ಆಪರಾಧಿಕ ಬಲವನ್ನು ಪ್ರಯೋಗಿಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಸಿ) ಅವನನ್ನು ಬಂಧಿಸುವ ಅಥವಾ ಅವನನ್ನು ವಶಕ್ಕೆ ತೆಗೆದುಕೊಳ್ಳುವ ಬೆಂಗಾವಲು ಪಡೆಯನ್ನು ಪ್ರತಿರೋಧಿಸಿದರೆ; ಅಥವಾ

(ಡಿ) ಸೇನಾಸಾಲು ಮನೆಗಳಿಂದ, ಶಿಬರಗಳಿಂದ ಅಥವಾ ವಸತಿಗೃಹಗಳಿಂದ ಓಡಿಹೋದರೆ; ಅಥವಾ

(ಇ) ಯಾವುದೇ ಸಾಮಾನ್ಯ, ಸ್ಥಳೀಯ ಅಥವಾ ಇತರೆ ಆದೇಶಗಳನ್ನು ಪಾಲಿಸಲು ನಿರಾಕರಿಸಿದರೆ

– ಭದ್ರತಾ ಪಡೆಯ ನ್ಯಾಯಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಎರಡು ವರ್ಷಗಳವರೆಗೆ ಮತ್ತು ಇತರೆ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ, ಅಥವಾ ಅವುಗಳ ಪೈಕಿ ಯಾವುದಾದರೊಂದು ಸಂದರ್ಭದಲ್ಲಿ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**23. ಅಗೌರವ ನಡತೆಯ ಕೆಲವು ರೀತಿಗಳು.–**ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ಕ್ರೂರ, ಅಸಭ್ಯ ಅಥವಾ ಅಸ್ವಾಭಾವಿಕ ರೀತಿಯ ಯಾವುದೇ ಅಗೌರವ ನಡತೆಯ ತಪ್ಪಿತಸ್ಥನಾಗಿದ್ದರೆ; ಅಥವಾ

(ಬಿ) ಕೆಲಸ ತಪ್ಪಿಸಿಕೊಳ್ಳಲು ಕಾಯಿಲೆಬಂದವನಂತೆ ನಟಿಸಿದರೆ ಅಥವಾ ಸೋಗು ಹಾಕಿದರೆ ಅಥವಾ ತಾನೇ ರೋಗವನ್ನು ಅಥವಾ ದುರ್ಬಲತೆಯನ್ನು ಉಂಟು ಮಾಡಿಕೊಂಡರೆ ಅಥವಾ ತನ್ನ ರೋಗವನ್ನು ವಾಸಿ ಮಾಡಿಕೊಳ್ಳಲು ಉದ್ದೇಶಪೂರ್ವಕವಾಗಿ ವಿಳಂಬಮಾಡಿದ್ದರೆ ಅಥವಾ ಅವನ ರೋಗವನ್ನು ಅಥವಾ ದುರ್ಬಲತೆಯನ್ನು ಉಲ್ಬಣಗೊಳಿಸಿಕೊಂಡರೆ; ಅಥವಾ

(ಸಿ) ಸೇವೆಗೆ ತನ್ನನ್ನು ಅನರ್ಹನನ್ನಾಗಿಸುವ ಅಥವಾ ಯಾರೇ ಇತರ ವ್ಯಕ್ತಿಯನ್ನು ಅನರ್ಹನನ್ನಾಗಿ ಮಾಡುವ ಉದ್ದೇಶದಿಂದ ಸ್ವಯಿಚ್ಛೆಯಿಂದ ತಾನೇ ಗಾಯ ಮಾಡಿಕೊಂಡರೆ ಅಥವಾ ಆ ವ್ಯಕ್ತಿಗೆ ಗಾಯಗೊಳಿಸಿದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**24. ಅಧೀನ ನೌಕರನಿಗೆ ತೊಂದರೆ ಕೊಡುವುದು.–** ದರ್ಜೆ ಅಥವಾ ಸ್ಥಾನದಲ್ಲಿ ತನಗೆ ಅಧೀನವಾಗಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಆಪರಾಧಿಕ ಬಲ ಪ್ರಯೋಗಿಸುವ ಅಥವಾ ಇತರೆ ರೀತಿಯಲ್ಲಿ ತೊಂದರೆ ಕೊಡುವ ಯಾರೇ ಅಧಿಕಾರಿಯು, ಸಹಾಯಕ ಕಮಾಂಡರನು ಅಥವಾ ಶ್ರೇಣಿ–I ರ ರೇಂಜರನು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**25. ಪಾನಮತ್ತತೆ.–** (1) ಕರ್ತವ್ಯದ ಮೇಲಿರಲಿ ಅಥವಾ ಇಲ್ಲದಿರಲಿ ಪಾನಮತ್ತ ಸ್ಥಿತಿಯಲ್ಲಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಮದ್ಯಸಾರವನ್ನು ಅಥವಾ ಯಾವುದೇ ಮಾದಕ ವಸ್ತುವನ್ನು ಅದೊಂದನ್ನೇ ತೆಗೆದುಕೊಳ್ಳಲಿ ಅಥವಾ ಯಾವುದೇ ಇತರೆ ವಸ್ತುವಿನೊಂದಿಗೆ ಬೆರೆಸಿ ತೆಗೆದುಕೊಳ್ಳಲಿ, ಹಾಗೆ ತೆಗೆದುಕೊಂಡು ಅದರ ಪ್ರಭಾವಕ್ಕೊಳಗಾಗಿದ್ದರೆ, ಅವನಿಗೆ ವಹಿಸಿದ ಕರ್ತವ್ಯವನ್ನು ನಿರ್ವಹಿಸಲು ಅಥವಾ ನಿರ್ವಹಿಸಲು ಅವನಿಗೆ ವಹಿಸಬಹುದಾದಂಥ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥನಾಗಿದ್ದರೆ ಅಥವಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸಿದರೆ ಅಥವಾ ಭದ್ರತಾ ಪಡೆಗೆ ಅಗೌರವ ತರುವ ರೀತಿಯಲ್ಲಿ ವರ್ತಿಸಿದರೆ ಅವನು ಪಾನಮತ್ತ ಸ್ಥಿತಿಯಲ್ಲಿರುವನೆಂದು ಭಾವಿಸತಕ್ಕದ್ದು.

**26. ಅಭಿರಕ್ಷೆಯಲ್ಲಿರುವ ವ್ಯಕ್ತಿಯು ತಪ್ಪಿಸಿಕೊಳ್ಳಲು ಅನುಮತಿಸುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ಪಡೆಯ, ಪಿಕೆಟಿನ, ಗಸ್ತಿನ, ಸೇನಾ ತುಕಡಿಯ ಅಥವಾ ನೆಲೆಯ ಮೇಲೆ ಕಮಾಂಡಿನಲ್ಲಿರುವಾಗ, ಸೂಕ್ತ ಅಧಿಕಾರವಿಲ್ಲದೆ ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಅವನ ವಶಕ್ಕೆ ಒಪ್ಪಿಸಿರುವ ಯಾರೇ ವ್ಯಕ್ತಿಯನ್ನು ಬಿಡುಗಡೆ ಮಾಡಿದರೆ, ಅಥವಾ ಹಾಗೆ ವಶಕ್ಕೆ ಒಪ್ಪಿಸುವ ಯಾರೇ ಕೈದಿಯನ್ನು ಅಥವಾ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳಲು ನಿರಾಕರಿಸಿದರೆ; ಅಥವಾ

(ಬಿ) ಅವನ ವಶಕ್ಕೆ ಒಪ್ಪಿಸಿರುವ ಅಥವಾ ಯಾವ ವ್ಯಕ್ತಿಯನ್ನು ಇಟ್ಟುಕೊಳ್ಳುವುದು ಅಥವಾ ಕಾವಲು ಕಾಯುವುದು ಅವನ ಕರ್ತವ್ಯವಾಗಿದೆಯೋ ಆ ವ್ಯಕ್ತಿಯು ತಪ್ಪಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಅವಕಾಶ ನೀಡಿದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಅವನು ಉದ್ದೇಶಪೂರ್ವಕವಾಗಿ ಅದನ್ನು ಮಾಡಿದ್ದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಮತ್ತು ಅವನು ಉದ್ದೇಶಪೂರ್ವಕವಾಗಿ ಅದನ್ನು

ಮಾಡಿರದಿದ್ದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

27. **ದಸ್ತಗಿರಿಗೆ ಅಥವಾ ಬಂಧನಕ್ಕೆ ಸಂಬಂಧಿಸಿದಂತೆ ಅಕ್ರಮಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ದಸ್ತಗಿರಿಯಾದ ಅಥವಾ ಬಂಧನದಲ್ಲಿರುವ ವ್ಯಕ್ತಿಯನ್ನು ಅಧಿವಿಚಾರಣೆಗೆ ಒಳಪಡಿಸದೆ ಅನವಶ್ಯಕವಾಗಿ ಅವನನ್ನು ತಡೆಹಿಡಿದಿಟ್ಟುಕೊಂಡರೆ ಅಥವಾ ತನಿಖೆಗಾಗಿ ಸೂಕ್ತ ಪ್ರಾಧಿಕಾರಿಯ ಮುಂದೆ ಅವನ ಪ್ರಕರಣವನ್ನು ತರಲು ವಿಫಲನಾದರೆ; ಅಥವಾ

(ಬಿ) ಭದ್ರತಾ ಪಡೆಯ ಅಭಿರಕ್ಷೆಗೆ ಆ ವ್ಯಕ್ತಿಯನ್ನು ಒಪ್ಪಿಸಿದ ನಂತರ ಹಾಗೆ ಒಪ್ಪಿಸಿದ ಕಾಲದಲ್ಲಿ ಯುಕ್ತ ಕಾರಣವಿಲ್ಲದೆ ಅಥವಾ ಕಾರ್ಯಸಾಧ್ಯವಾಗುವಷ್ಟು ಬೇಗ ಮತ್ತು ತದನಂತರದ ಯಾವುದೇ ಸಂದರ್ಭದಲ್ಲಿ ನಲವತ್ತೆಂಟು ಗಂಟೆಗಳೊಳಗಾಗಿ ಅಧಿಕಾರಿಯ ಅಥವಾ ದಸ್ತಗಿರಿಯಾದ ವ್ಯಕ್ತಿಯು ಯಾರ ಅಭಿರಕ್ಷೆಯಲ್ಲಿರುತ್ತಾನೋ ಆ ಇತರ ವ್ಯಕ್ತಿಯ ವಶಕ್ಕೆ ಒಪ್ಪಿಸಲು, ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯನ್ನು ಹಾಗೆ ವಶಕ್ಕೆ ಒಪ್ಪಿಸಲಾಗಿದೆಯೋ ಆ ಅಪರಾಧದ ಬಗ್ಗೆ ತಾನೇ ಸಹಿ ಮಾಡಿದ ಲಿಖಿತದಲ್ಲಿನ ವರದಿಯನ್ನು ಸಲ್ಲಿಸಲು ವಿಫಲನಾದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗಿರತಕ್ಕದ್ದು.

28. **ಅಭಿರಕ್ಷೆಯಿಂದ ತಪ್ಪಿಸಿಕೊಳ್ಳುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕಾನೂನುಬದ್ಧ ಅಭಿರಕ್ಷೆಯಲ್ಲಿದ್ದು ತಪ್ಪಿಸಿಕೊಂಡರೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ನಂತರ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

29. **ಸ್ವತ್ತಿನ ಸಂಬಂಧದಲ್ಲಿನ ಅಪರಾಧಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ಸರ್ಕಾರಕ್ಕೆ ಅಥವಾ ಭದ್ರತಾ ಪಡೆಯ ಯಾವುದೇ ಮೆಸ್‌ಗೆ, ಬ್ಯಾಂಡ್‌ಗೆ ಅಥವಾ ಸಂಸ್ಥೆಗೆ, ಅಥವಾ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಸೇರಿರುವ ಯಾವುದೇ ಸ್ವತ್ತನ್ನು ಕಳವು ಮಾಡಿದರೆ; ಅಥವಾ

(ಬಿ) ಅಂಥ ಯಾವುದೇ ಸ್ವತ್ತನ್ನು ತನ್ನ ಸ್ವಂತ ಉಪಯೋಗಕ್ಕೆ ಅಪ್ರಾಮಾಣಿಕವಾಗಿ ದುರುಪಯೋಗ ಮಾಡಿಕೊಂಡರೆ ಅಥವಾ ಅದನ್ನು ಮಾರ್ಪಾಡಿಸಿಕೊಂಡರೆ; ಅಥವಾ

(ಸಿ) ಅಂಥ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಆಪರಾಧಿಕ ನಂಬಿಕೆ ದ್ರೋಹ ಮಾಡಿದರೆ; ಅಥವಾ

(ಡಿ) ಯಾವ ಸ್ವತ್ತಿಗೆ ಸಂಬಂಧಿಸಿದಂತೆ (ಎ), (ಬಿ) ಮತ್ತು (ಸಿ) ಖಂಡಗಳ ಮೇರೆಗಿನ ಯಾವುದೇ ಅಪರಾಧಗಳನ್ನು ಮಾಡಲಾಗಿದೆಯೋ ಆ ಯಾವುದೇ ಅಂಥ ಸ್ವತ್ತನ್ನು ಅಂಥ ಅಪರಾಧ ನಡೆದಿದೆಯೆಂದು ತಿಳಿದೂ ತಿಳಿದೂ ಅಥವಾ ನಂಬಲು ಕಾರಣಗಳಿದ್ದರೂ ಅದನ್ನು ಅಪ್ರಾಮಾಣಿಕವಾಗಿ ಸ್ವೀಕರಿಸಿದರೆ ಅಥವಾ ತನ್ನಲ್ಲೇ ಇಟ್ಟುಕೊಂಡರೆ; ಅಥವಾ

(ಇ) ಅವನಿಗೆ ವಹಿಸಲಾಗಿರುವ ಸರ್ಕಾರದ ಯಾವುದೇ ಸ್ವತ್ತನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಅದಕ್ಕೆ ಹಾನಿಉಂಟು ಮಾಡಿದರೆ; ಅಥವಾ

(ಎಫ್) ಮೋಸ ಮಾಡುವ ಅಥವಾ ಒಬ್ಬ ವ್ಯಕ್ತಿಗೆ ಅಕ್ರಮವಾಗಿ ಲಾಭ ಮಾಡಿಕೊಡುವ ಕಾರಣದಿಂದ ಅಥವಾ ಮತ್ತೊಬ್ಬ ವ್ಯಕ್ತಿಗೆ ಅಕ್ರಮವಾಗಿ ನಷ್ಟ ಉಂಟು ಮಾಡುವ ಉದ್ದೇಶದಿಂದ ಯಾವುದೇ ಇತರೆ ಕೃತ್ಯವನ್ನು ಮಾಡಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**30. ಬಲಾದ್ಗ್ರಹಣ ಮತ್ತು ಸುಲಿಗೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಬಲಾದ್ಗ್ರಹಣ ಮಾಡಿದರೆ; ಅಥವಾ

(ಬಿ) ಸೂಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಯಿಂದ ಹಣ, ಸಾಮಾನು ಸರಂಜಾಮುಗಳನ್ನು ಬಲಾತ್ಕಾರದಿಂದ ಸುಲಿಗೆ ಮಾಡಿದರೆ ಅಥವಾ ಸೇವೆಯನ್ನು ಬಲಾತ್ಕಾರದಿಂದ ಮಾಡಿಸಿಕೊಂಡರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**31. ಸಾಧನ ಸಾಮಗ್ರಿಗಳೊಂದಿಗೆ ಓಡಿ ಹೋಗುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಯಾವುವೇ ಶಸ್ತ್ರಾಸ್ತ್ರಗಳು, ಮದ್ದುಗುಂಡು, ಸಾಧನಸಾಮಗ್ರಿ, ಉಪಕರಣಗಳು, ಸಲಕರಣೆಗಳು, ಬಟ್ಟೆ ಬರೆಗಳು ಅಥವಾ ಅವನ ಉಪಯೋಗಕ್ಕಾಗಿ ನೀಡಿದ ಅಥವಾ ಅವನಿಗೆ ವಹಿಸಿದ ಸರ್ಕಾರದ ಸ್ವತ್ತಾಗಿರುವ ಇತರ ವಸ್ತುಗಳು ಇವುಗಳೊಂದಿಗೆ ಓಡಿಹೋದರೆ, ಅಥವಾ ಆ ವಸ್ತುಗಳೊಂದಿಗೆ ಹಾಗೆ ಓಡಿ ಹೋಗಲು ಅವನು ಸಂಬಂಧ ಹೊಂದಿದ್ದರೆ; ಅಥವಾ

(ಬಿ) (ಎ) ಖಂಡದಲ್ಲಿ ಹೇಳಿರುವ ಯಾವುದನ್ನಾದರೂ ನಿರ್ಲಕ್ಷ್ಯದಿಂದ ಕಳೆದುಕೊಂಡರೆ; ಅಥವಾ

(ಸಿ) ಅವನಿಗೆ ನೀಡಿದ ಯಾವುದೇ ಪದಕವನ್ನು ಅಥವಾ ಪ್ರಶಸ್ತಿಯನ್ನು ಮಾರಾಟ ಮಾಡಿದರೆ, ಗಿರವಿ ಇಟ್ಟರೆ, ನಾಶಪಡಿಸಿದರೆ ಅಥವಾ ವಿರೂಪಗೊಳಿಸಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಮತ್ತು ಇತರ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಇವೆರಡೂ ಸಂದರ್ಭಗಳಲ್ಲಿ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**32. ಸ್ವತ್ತಿಗೆ ಹಾನಿ ಮಾಡುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) 31ನೇ ಪ್ರಕರಣದ (ಎ) ಖಂಡದಲ್ಲಿ ಹೇಳಿರುವ ಯಾವುದೇ ಸ್ವತ್ತನ್ನು ಅಥವಾ ಯಾವುದೇ ಭದ್ರತಾ ಪಡೆಯ ಮೆಸ್‌ಗೆ, ಬ್ಯಾಂಡ್‌ಗೆ ಅಥವಾ ಸಂಸ್ಥೆಗೆ ಅಥವಾ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಸೇರಿದ ಯಾವುದೇ ಸ್ವತ್ತನ್ನು ನಾಶಗೊಳಿಸಿದರೆ ಅಥವಾ ಅದಕ್ಕೆ ಹಾನಿಯುಂಟು ಮಾಡಿದರೆ; ಅಥವಾ

(ಬಿ) ಬೆಂಕಿಯ ಅಥವಾ ಇನ್ನಾವುದೇ ಇತರೆ ರೀತಿಯ ಮೂಲಕ ಸರ್ಕಾರದ ಯಾವುದೇ ಸ್ವತ್ತಿಗೆ ಹಾನಿಯುಂಟುಮಾಡುವ, ಅಥವಾ ಅದನ್ನು ನಾಶಪಡಿಸುವಂಥ ಯಾವುದೇ ಕೃತ್ಯವನ್ನು ಮಾಡಿದರೆ; ಅಥವಾ

(ಸಿ) ಅವನಿಗೆ ವಹಿಸಿದ ಯಾವುದೇ ಪ್ರಾಣಿಯನ್ನು ಕೊಂದರೆ, ಗಾಯಗೊಳಿಸಿದರೆ, ಅದರೊಂದಿಗೆ ಓಡಿಹೋದರೆ, ಪೀಡಿಸಿದರೆ ಅಥವಾ ಅದನ್ನು ಕಳೆದುಕೊಂಡರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಅವನು ಉದ್ದೇಶಪೂರ್ವಕವಾಗಿ ಆ ಕೃತ್ಯವನ್ನು ಮಾಡಿದ್ದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಮತ್ತು ಯುಕ್ತ ಕಾರಣವಿಲ್ಲದೆ ಆ ಕೃತ್ಯವನ್ನು ಮಾಡಿದ್ದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**33. ಸುಳ್ಳು ಆಪಾದನೆಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ, ಆಪಾದನೆಯು ಸುಳ್ಳೆಂದು ತಿಳಿದೂ ತಿಳಿದೂ ಅಥವಾ ಸುಳ್ಳೆಂದು ನಂಬಲು ಕಾರಣಗಳಿದ್ದೂ ಅಂಥ ಸುಳ್ಳು ಆಪಾದನೆ ಮಾಡಿದರೆ; ಅಥವಾ

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ದೂರು ನೀಡುವಾಗ, ಅಂಥ ಹೇಳಿಕೆಯು ಸುಳ್ಳೆಂದು ತಿಳಿದೂ ತಿಳಿದೂ ಅಥವಾ ಸುಳ್ಳೆಂದು ನಂಬಲು ಕಾರಣಗಳಿದ್ದೂ, ಅಂಥ ವ್ಯಕ್ತಿಯ ಚಾರಿತ್ರ್ಯಕ್ಕೆ ಧಕ್ಕೆತರುವ ಯಾವುದೇ ಹೇಳಿಕೆಯನ್ನು ನೀಡಿದರೆ ಅಥವಾ ಯಾವುದೇ ಮಹತ್ವದ ಸಂಗತಿಯನ್ನು ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಬಚ್ಚಿಟ್ಟರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**34. ಸರ್ಕಾರಿ ದಸ್ತಾವೇಜುಗಳಲ್ಲಿ ಸುಳ್ಳು ನಿರೂಪಣೆ ಮಾಡುವುದು ಮತ್ತು ಸುಳ್ಳು ಘೋಷಣೆ ನೀಡುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಅವನು ತಯಾರಿಸಿದ ಅಥವಾ ಸಹಿ ಮಾಡಿದ ಯಾವುದೇ ವರದಿಯಲ್ಲಿ, ವಿವರಪಟ್ಟಿಕೆಯಲ್ಲಿ, ಪಟ್ಟಿಯಲ್ಲಿ, ಪ್ರಮಾಣಪತ್ರದಲ್ಲಿ, ಪುಸ್ತಕದಲ್ಲಿ ಅಥವಾ ಇತರೆ ದಸ್ತಾವೇಜಿನಲ್ಲಿ ಅಥವಾ ಯಾವುದರ ಒಳಾಂಶಗಳ ನಿಷ್ಕೃಷ್ಟತೆಯನ್ನು ಖಚಿತಪಡಿಸಿಕೊಳ್ಳುವುದು ಅವನ ಕರ್ತವ್ಯವಾಗಿರುವುದೋ ಅವುಗಳಲ್ಲಿ ತಿಳಿದೂ ತಿಳಿದೂ ಯಾವುದೇ ಸುಳ್ಳು ಅಥವಾ ಮೋಸದ ಹೇಳಿಕೆಯನ್ನು ಕೊಟ್ಟರೆ ಅಥವಾ ಕೊಡುವುದರಲ್ಲಿ ಭಾಗಿಯಾದರೆ; ಅಥವಾ

(ಬಿ) (ಎ) ಖಂಡದಲ್ಲಿ ಹೇಳಿರುವ ರೀತಿಯ ಯಾವುದೇ ದಸ್ತಾವೇಜಿನಲ್ಲಿ ಮೋಸ ಮಾಡುವ ಉದ್ದೇಶದಿಂದ ತಿಳಿದೂ ತಿಳಿದೂ ಯಾವುದೇ ಲೋಪ ಮಾಡಿದರೆ ಅಥವಾ ಮಾಡುವುದರಲ್ಲಿ ಭಾಗಿಯಾದರೆ; ಅಥವಾ

(ಸಿ) ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಯಾರೇ ವ್ಯಕ್ತಿಗೆ ಕ್ಷತಿಯನ್ನುಂಟು ಮಾಡಿದರೆ, ಅಥವಾ ಯಾವ ದಸ್ತಾವೇಜನ್ನು ಸಂರಕ್ಷಿಸುವುದು ಅಥವಾ ಹಾಜರುಪಡಿಸುವುದು ಅವನ ಕರ್ತವ್ಯವಾಗಿದೆಯೋ ಆ ಯಾವುದೇ ದಸ್ತಾವೇಜನ್ನು ತಿಳಿದೂ ತಿಳಿದೂ ಮತ್ತು ಮೋಸ ಮಾಡುವ ಉದ್ದೇಶದಿಂದ ಬಚ್ಚಿಟ್ಟರೆ, ವಿರೂಪಗೊಳಿಸಿದರೆ, ಬದಲಾವಣೆ ಮಾಡಿದರೆ ಅಥವಾ ತೆಗೆದುಕೊಂಡು ಓಡಿ ಹೋದರೆ; ಅಥವಾ

(ಡಿ) ಯಾವುದೇ ವಿಷಯದ ಸಂಬಂಧದಲ್ಲಿ ಘೋಷಣೆಯನ್ನು ಮಾಡುವುದು ಅವನ ಅಧಿಕೃತ ಕರ್ತವ್ಯವಾಗಿರುವಲ್ಲಿ, ಅವನು ತಿಳಿದೂ ತಿಳಿದೂ ಸುಳ್ಳು ಘೋಷಣೆ ಮಾಡಿದರೆ; ಅಥವಾ

(ಇ) ಯಾವ ಹೇಳಿಕೆಯು ಸುಳ್ಳಾಗಿರುವುದೋ ಆ ಸುಳ್ಳು ಹೇಳಿಕೆಯ ಮೂಲಕ ಮತ್ತು ಸುಳ್ಳೆಂದು ತಿಳಿದೂ ಅಥವಾ ನಂಬಿಯೂ ಅಥವಾ ನಿಜವೆಂದು ನಂಬಲು ಆಗದಿರುವ ಹೇಳಿಕೆಯ ಮೂಲಕ, ಅಥವಾ ಯಾವುದೇ ಪುಸ್ತಕದಲ್ಲಿ ಅಥವಾ ದಾಖಲೆಯಲ್ಲಿ ಸುಳ್ಳು ನಮೂದನ್ನು ಮಾಡುವ ಮೂಲಕ ಅಥವಾ ಅದರಲ್ಲಿ ನಮೂದನ್ನು ಬಳಸಿಕೊಳ್ಳುವ ಮೂಲಕ; ಅಥವಾ ಸುಳ್ಳು ಹೇಳಿಕೆಯನ್ನೊಳಗೊಂಡಿರುವ ಯಾವುದೇ ದಸ್ತಾವೇಜನ್ನು ತಯಾರಿಸುವ ಮೂಲಕ ಅಥವಾ ನಿಜವಾದ ನಮೂದು ಮಾಡುವುದನ್ನು ಅಥವಾ ನಿಜವಾದ ಹೇಳಿಕೆಯನ್ನು ಒಳಗೊಂಡಿರುವ ದಸ್ತಾವೇಜನ್ನು ತಯಾರಿಸಲು ತಪ್ಪುವ ಮೂಲಕ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ

ಯಾವುದೇ ವಿಶ್ರಾಂತಿ ವೇತನವನ್ನು, ಭತ್ಯವನ್ನು ಅಥವಾ ಇತರ ಪ್ರಯೋಜನವನ್ನು ಅಥವಾ ವಿಶೇಷ ಸವಲತ್ತನ್ನು ಪಡೆದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**35. ನೇಮಕದ ಸಮಯದಲ್ಲಿ ಸುಳ್ಳು ಘೋಷಣೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನ ನೇಮಕದ ಸಮಯದಲ್ಲಿ, ಅವನ ನೇಮಕಕ್ಕೆ ಸಂಬಂಧಿಸಿದಂತೆ, ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿಕೆಯನ್ನು ನೀಡಿದ್ದಾನೆಂದು, ಅಥವಾ ಘೋಷಣೆಯನ್ನು ಮಾಡಿದ್ದಾನೆಂದು ಕಂಡುಬಂದರೆ, ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**36. ಭದ್ರತಾ ಪಡೆ ನ್ಯಾಯಾಲಯಕ್ಕೆ ಸಂಬಂಧಿಸಿದ ಅಪರಾಧಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷಿದಾರನಾಗಿ ಹಾಜರಾಗಲು ಕ್ರಮಬದ್ಧವಾಗಿ ಸಮನು ಹೊರಡಿಸಿದಾಗ ಅಥವಾ ಆದೇಶಿಸಿದಾಗ ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಹಾಜರಾಗಲು ತಪ್ಪಿದರೆ; ಅಥವಾ

(ಬಿ) ಪ್ರಮಾಣ ಅಥವಾ ದೃಢೀಕರಣ ಮಾಡುವಂತೆ ಭದ್ರತಾ ಪಡೆ ನ್ಯಾಯಾಲಯವು ಕಾನೂನು ಸಮ್ಮತವಾಗಿ ಅಗತ್ಯಪಡಿಸಿದಾಗ ಹಾಗೆ ಮಾಡಲು ನಿರಾಕರಿಸಿದರೆ; ಅಥವಾ

(ಸಿ) ಅವನ ಅಧಿಕಾರದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಅಥವಾ ವಶಕ್ಕೆ ಒಪ್ಪಿಸಬೇಕೆಂದು ಭದ್ರತಾ ಪಡೆ ನ್ಯಾಯಾಲಯವು, ಕಾನೂನು ಸಮ್ಮತವಾಗಿ ಅಗತ್ಯಪಡಿಸಿದಾಗ, ಅದನ್ನು ಹಾಜರುಪಡಿಸಲು ಅಥವಾ ವಶಕ್ಕೆ ಒಪ್ಪಿಸಲು ನಿರಾಕರಿಸಿದರೆ; ಅಥವಾ

(ಡಿ) ಸಾಕ್ಷಿದಾರನಾಗಿ, ಯಾವುದೇ ಪ್ರಶ್ನೆಗೆ ಉತ್ತರಿಸಲು ಕಾನೂನಿನ ಮೂಲಕ ಬದ್ಧನಾಗಿರುವಾಗ ಆ ಯಾವುದೇ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರೆ; ಅಥವಾ

(ಇ) ಭದ್ರತಾ ಪಡೆ ನ್ಯಾಯಾಲಯದ ವ್ಯವಹರಣೆಗಳಲ್ಲಿ ಅಪಮಾನಕರ ಅಥವಾ ಬೆದರಿಸುವ ಭಾಷೆಯನ್ನು ಬಳಸುವ ಮೂಲಕ ಅಥವಾ ಯಾವುದೇ ಅಡ್ಡಿಯುಂಟು ಮಾಡುವ ಮೂಲಕ ಅಥವಾ ಅಡಚಣೆ ಉಂಟುಮಾಡುವ ಮೂಲಕ ಆ ನ್ಯಾಯಾಲಯ ನಿಂದನೆಯ ತಪ್ಪಿತಸ್ಥನಾದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**37. ಸುಳ್ಳು ಸಾಕ್ಷ್ಯ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಮುಂದೆ, ಈ ಅಧಿನಿಯಮದ ಮೇರೆಗೆ ಪ್ರಮಾಣ ಅಥವಾ ದೃಢೀಕರಣ ಮಾಡಿಸಲು ಸಕ್ಷಮನಾದ ಯಾರೇ ಅಧಿಕಾರಿಯ ಮುಂದೆ ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ ವಿಚಾರಣಾ ನ್ಯಾಯಾಲಯದ ಮುಂದೆ ಪ್ರಮಾಣ ಅಥವಾ ದೃಢೀಕರಣವನ್ನು ಮಾಡಿ ಸುಳ್ಳಾಗಿರುವ ಮತ್ತು ಸುಳ್ಳೆಂದು ತಿಳಿದೂ ಅಥವಾ ನಂಬಿಯೂ ಅಥವಾ ನಿಜವೆಂದು ನಂಬಲು ಆಗದಿರುವ ಯಾವುದೇ ಹೇಳಿಕೆಯನ್ನು ನೀಡಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**38. ವೇತನವನ್ನು ಕಾನೂನುಬಾಹಿರವಾಗಿ ತಡೆಹಿಡಿದಿಡುವುದು.–** ಈ ಅಧಿನಿಯಮಕೊಳ್ಳಪಟ್ಟ ವ್ಯಕ್ತಿಯ ವೇತನವನ್ನು ಸ್ವೀಕರಿಸಿರುವ ಯಾರೇ ಅಧಿಕಾರಿ, ಸಹಾಯಕ ಕಮಾಂಡರ್ ಅಥವಾ ರೇಂಜರ್ ಗ್ರೇಡ್ I – ಇವರು ಅದನ್ನು ಕೊಡಬೇಕಾದಾಗ ಸಂದಾಯ ಮಾಡಲು ಕಾನೂನು ಬಾಹಿರವಾಗಿ ತಡೆ ಹಿಡಿದರೆ ಅಥವಾ ಸಂದಾಯ ಮಾಡಲು ನಿರಾಕರಿಸಿದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**39. ತಕ್ಕುದಲ್ಲದ ನಡತೆ.–** ತಮ್ಮ ಸ್ಥಾನಕ್ಕೆ ತಕ್ಕುದಲ್ಲದ ಮತ್ತು ಅವನಿಂದ ಅಪೇಕ್ಷಿಸಲಾಗುವ ಚಾರಿತ್ರ್ಯಕ್ಕೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸುವ ಯಾರೇ ಅಧಿಕಾರಿಯು ಅಥವಾ ಸಹಾಯಕ ಕಮಾಂಡರ್‌ನು, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ವಜಾಗೊಳ್ಳುವುದಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**40. ಸುವ್ಯವಸ್ಥೆ ಮತ್ತು ಶಿಸ್ತಿನ ಉಲ್ಲಂಘನೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರದಿದ್ದರೂ ಸಹ, ಭದ್ರತಾ ಪಡೆಯ ಸುವ್ಯವಸ್ಥೆಗೆ ಮತ್ತು ಶಿಸ್ತಿಗೆ ಧಕ್ಕೆ ತರುವಂಥ ಯಾವುದೇ ಕೃತ್ಯದ ಅಥವಾ ಲೋಪದ ತಪ್ಪಿತಸ್ಥನಾದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**41. ಸಂಕೀರ್ಣ ಅಪರಾಧಗಳು.–** ಈ ಅಧಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ:–

(ಎ) ಯಾವುದೇ ಸೇನಾ ತುಕಡಿ ಅಥವಾ ನೆಲೆ ಅಥವಾ ಪಥಸಂಚಲನದ ಕಮಾಂಡಿನಲ್ಲಿರುವ ಮತ್ತು ಅವನ ಕಮಾಂಡಿನಲ್ಲಿರುವ ಯಾರೊಬ್ಬ ವ್ಯಕ್ತಿಯನ್ನು ಹೊಡೆಯಲಾಗಿದೆಯೆಂದು ಅಥವಾ ಇತರ ರೀತಿಯಲ್ಲಿ ಕೆಟ್ಟ ರೀತಿಯಿಂದ ನಡೆದುಕೊಳ್ಳಲಾಗಿದೆಯೆಂದು ಅಥವಾ ಯಾರೇ ವ್ಯಕ್ತಿಯನ್ನು ಪೀಡಿಸಲಾಗಿದೆಯೆಂದು ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಗಲಭೆ ಉಂಟು ಮಾಡಲಾಗಿದೆಯೆಂದು, ಅಥವಾ ಯಾವುದೇ ದೊಂಬಿಯನ್ನು ಅಥವಾ ಅತಿಕ್ರಮ ಪ್ರವೇಶವನ್ನು ಮಾಡಲಾಗಿದೆಯೆಂದು ದೂರನ್ನು ಸ್ವೀಕರಿಸಿದ ನಂತರ, ಗಾಯಗೊಂಡಿರುವ ವ್ಯಕ್ತಿಗೆ ಯುಕ್ತ ಹಾನಿ ಪರಿಹಾರವನ್ನು ಕೊಡಲು ಅಥವಾ ಯುಕ್ತ ಅಧಿಕಾರಿಗೆ ಪ್ರಕರಣವನ್ನು ವರದಿ ಮಾಡಲು ವಿಫಲನಾದರೆ; ಅಥವಾ

(ಬಿ) ಯಾವುದೇ ಪೂಜಾಸ್ಥಳವನ್ನು ಅಪವಿತ್ರಗೊಳಿಸಿದರೆ, ಅಥವಾ ಇತರ ರೀತಿಯಲ್ಲಿ ಧರ್ಮವನ್ನು ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದರೆ, ಅಥವಾ ಯಾರೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡಿದರೆ; ಅಥವಾ

(ಸಿ) ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದರೆ, ಮತ್ತು ಅಂಥ ಪ್ರಯತ್ನದಲ್ಲಿ ಅಂಥ ಅಪರಾಧ ಮಾಡುವ ಬಗ್ಗೆ ಯಾವುದೇ ಕೃತ್ಯ ಮಾಡಿದರೆ; ಅಥವಾ

(ಡಿ) ಸಹಾಯಕ ಕಮಾಂಡರ್ ದರ್ಜೆಗಿಂತ ಕಡಿಮೆ ದರ್ಜೆಯ ಹುದ್ದೆಯಲ್ಲಿ ಇದ್ದು, ಕರ್ತವ್ಯದ ಮೇಲಿಲ್ಲದಾಗ, ಯುಕ್ತ ಅಧಿಕಾರಿಯ ಅನುಮತಿಯಿಲ್ಲದೆ, ಶಿಬಿರದ ಒಳಗೆ ಅಥವಾ ಅದರ ಸುತ್ತಮುತ್ತ ಅಥವಾ ಯಾವುದೇ ಪಟ್ಟಣದ ಒಳಗೆ ಅಥವಾ ಅದರ ಸುತ್ತಮುತ್ತ ಅಥವಾ ಅಲ್ಲಿಗೆ ಹೋಗುವಾಗ ಅಥವಾ ಅಲ್ಲಿಂದ ಹಿಂತಿರುಗುವಾಗ ರೈಫಲ್‌ನ್ನು, ಖಡ್ಗವನ್ನು ಅಥವಾ ಇತರ ಮಾರಕ ಆಯುಧವನ್ನು ಒಯ್ಯುತ್ತಿರುವುದು ಕಂಡು ಬಂದರೆ; ಅಥವಾ

(ಇ) ಯಾರೇ ವ್ಯಕ್ತಿಗೆ ನೇಮಕವನ್ನು ಅಥವಾ ಸೇವೆಯಲ್ಲಿರುವ ಯಾರೇ ವ್ಯಕ್ತಿಗೆ ಗೈರು ಹಾಜರಿ ರಜೆಯನ್ನು ಅಥವಾ ಪದೋನ್ನತಿಯನ್ನು ಅಥವಾ ಯಾವುದೇ ಇತರ ಅನುಕೂಲ ದೊರಕಿಸಿಕೊಡುವುದಕ್ಕಾಗಿ ಅಥವಾ ಅವನಿಗೆ ತೃಪ್ತಿಪಡಿಸುವುದಕ್ಕಾಗಿ ತನಗಾಗಿ ಅಥವಾ ಯಾರೇ ಇತರೆ ವ್ಯಕ್ತಿಗಾಗಿ ಪ್ರತ್ಯಕ್ಷವಾಗಿ ಅಥವಾ

ಪರೋಕ್ಷವಾಗಿ ಯಾವುದೇ ಪ್ರತಿಫಲವಾಗಿ ಅಥವಾ ಇನಾಮಾಗಿ ಯಾವುದೇ ಪರಿತೋಷವನ್ನು ಅಂಗೀಕರಿಸಿದರೆ ಅಥವಾ ಪಡೆದರೆ, ಅಥವಾ ಅಂಗೀಕರಿಸಲು ಒಪ್ಪಿದರೆ, ಅಥವಾ ಪಡೆಯಲು ಪ್ರಯತ್ನಿಸಿದರೆ; ಅಥವಾ

(ಎಫ್) ಅವನು ಎಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೋ ಅ ದೇಶದ ಯಾರೇ ನಿವಾಸಿಯ ಅಥವಾ ಆ ದೇಶದಲ್ಲಿ ವಾಸಿಸುತ್ತಿರುವ ವ್ಯಕ್ತಿಯ ಸ್ವತ್ತಿನ ಅಥವಾ ಆ ವ್ಯಕ್ತಿಯ ವಿರುದ್ಧ ಯಾವುದೇ ಅಪರಾಧವನ್ನು ಮಾಡಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

42. **ಪ್ರಯತ್ನಿಸುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15 ರಿಂದ 41 ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಪರಾಧಗಳನ್ನು ಮಾಡಲು ಪ್ರಯತ್ನಿಸಿದರೆ, ಅಂಥ ಪ್ರಯತ್ನದಲ್ಲಿ ಅಪರಾಧ ಮಾಡುವುದರ ಸಂಬಂಧದಲ್ಲಿ ಯಾವುದೇ ಕೃತ್ಯವನ್ನು ಮಾಡಿದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಅಂಥ ಪ್ರಯತ್ನದ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ,–

(ಎ) ಮಾಡಲು ಪ್ರಯತ್ನಿಸಿದ ಅಪರಾಧಕ್ಕೆ ಮರಣದಂಡನೆಯನ್ನು ವಿಧಿಸಬಹುದಾಗಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ; ಮತ್ತು

(ಬಿ) ಮಾಡಲು ಪ್ರಯತ್ನಿಸಿದಂತಹ ಅಪರಾಧಕ್ಕೆ ಕಾರಾವಾಸದ ಶಿಕ್ಷೆ ವಿಧಿಸಬಹುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿದ ದೀರ್ಘಾವಧಿಯ ಅರ್ಧದಷ್ಟು ಅವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ

– ಗುರಿಯಾಗತಕ್ಕದ್ದು.

43. **ಮಾಡಲಾದ ಅಪರಾಧಗಳಿಗೆ ದುಷ್ಪ್ರೇರಣೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15 ರಿಂದ 41 ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಹಾಗೆ ದುಷ್ಪ್ರೇರಿಸಲಾದ ಕೃತ್ಯವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿದ್ದರೆ ಮತ್ತು ಅಂಥ ದುಷ್ಪ್ರೇರಣೆಗೆ ದಂಡನೆ ವಿಧಿಸುವುದಕ್ಕಾಗಿ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಆ ಅಪರಾಧಕ್ಕಾಗಿ ಉಪಬಂಧಿಸಲಾದ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

44. **ಮಾಡದೇ ಇರುವ ಅಪರಾಧಗಳಿಗೆ ದುಷ್ಪ್ರೇರಣೆ.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15ನೇ, 17ನೇ ಪ್ರಕರಣಗಳ ಮತ್ತು 18ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮರಣ ದಂಡನೆಯಿಂದ ದಂಡನೀಯವಾಗಬಹುದಾದ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಆ ಅಪರಾಧವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿರದಿದ್ದರೆ, ಮತ್ತು ಅಂಥ ದುಷ್ಪ್ರೇರಣೆಯ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು 15 ರಿಂದ 41ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಕಾರಾವಾಸದಿಂದ ದಂಡನೀಯವಾಗಬಹುದಾದ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಆ ಅಪರಾಧವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿಲ್ಲದಿದ್ದರೆ, ಮತ್ತು ಅಂಥ ದುಷ್ಪ್ರೇರಣೆಯ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಆ ಅಪರಾಧಕ್ಕಾಗಿ ಉಪಬಂಧಿಸಿದ ಗರಿಷ್ಠ ಅವಧಿಯ ಅರ್ಧದಷ್ಟರವರೆಗೆ

ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

45. **ಸಿವಿಲ್ ಅಪರಾಧಗಳು.–** 46ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭಾರತದಲ್ಲಿ ಅಥವಾ ಭಾರತದ ಆಚೆ ಯಾವುದೇ ಸಿವಿಲ್ ಅಪರಾಧವನ್ನು ಮಾಡಿದರೆ ಅವನನ್ನು ಈ ಅಧಿನಿಯಮದ ವಿರುದ್ಧದ ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು, ಈ ಪ್ರಕರಣದ ಮೇರೆಗೆ ಹಾಗೆ ಆರೋಪಿಸಲಾಗಿದ್ದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಪಡಲು ಗುರಿಯಾಗತಕ್ಕದ್ದು ಮತ್ತು ಅಪರಾಧಿಯೆಂದು ನಿರ್ಣೀತನಾದ ತರುವಾಯ, ಈ ಮುಂದಿನಂತೆ ದಂಡಿತನಾಗತಕ್ಕದ್ದು, ಎಂದರೆ:–

(ಎ) ಅಪರಾಧವು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮರಣದಂಡನೆಯಿಂದ ದಂಡನೀಯವಾಗುವಂಥ ಅಪರಾಧವಾಗಿದ್ದರೆ, ಅವನು ಮೇಲೆ ಹೇಳಿದ ಕಾನೂನಿನ ಮೇರೆಗೆ ಆ ಅಪರಾಧಕ್ಕಾಗಿ ಗೊತ್ತುಪಡಿಸಿರುವ ಯಾವುದೇ ದಂಡನೆಗೆ ಮತ್ತು ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ಬಿ) ಯಾವುದೇ ಇತರೆ ಸಂದರ್ಭದಲ್ಲಿ, ಅವನು ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಆ ಅಪರಾಧಕ್ಕಾಗಿ ಗೊತ್ತುಪಡಿಸಿರುವ ಯಾವುದೇ ದಂಡನೆಗೆ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

46. **ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡದ ಸಿವಿಲ್ ಅಪರಾಧಗಳು.–** ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು, ಈ ಅಧಿನಿಯಮಕ್ಕೊಳಪಡದ ವ್ಯಕ್ತಿಗೆ ಸಂಬಂಧಿಸಿದಂತೆ ಅವನ ವಿರುದ್ಧ ಕೊಲೆ ಅಥವಾ ಕೊಲೆಯೆನಿಸದ ಆಪರಾಧಿಕ ನರಹತ್ಯೆಯ ಅಥವಾ ಈ ಅಧಿನಿಯಮಕ್ಕೊಳಪಡದ ವ್ಯಕ್ತಿಯ ಮೇಲೆ ಬಲಾತ್ ಸಂಭೋಗದ ಅಪರಾಧವನ್ನೆಸಗುವ ವ್ಯಕ್ತಿಯನ್ನು, ಅವನು,–

(ಎ) ಸಕ್ರಿಯ ಕರ್ತವ್ಯದ ಮೇಲಿರುವಾಗ; ಅಥವಾ

(ಬಿ) ಭಾರತದ ಹೊರಗಿನ ಯಾವುದೇ ಸ್ಥಳದಲ್ಲಿ

– ಸದರಿ ಅಪರಾಧಗಳ ಪೈಕಿ ಯಾವುದೇ ಅಪರಾಧಗಳನ್ನು ಮಾಡಿದ್ದ ಹೊರತು ಈ ಅಧಿನಿಯಮದ ಮೇರೆಗಿನ ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದಲ್ಲ ಮತ್ತು ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡತಕ್ಕದ್ದಲ್ಲ.

## ಅಧ್ಯಾಯ IV

### ದಂಡನೆಗಳು

47. **ಭದ್ರತಾ ಪಡೆ ನ್ಯಾಯಾಲಯಗಳು ವಿಧಿಸಬಹುದಾದ ದಂಡನೆಗಳು.–** ಈ ಅಧಿನಿಯಮಕ್ಕೊಳಪಟ್ಟ ಮತ್ತು ಭದ್ರತಾ ಪಡೆ ನ್ಯಾಯಾಲಯಗಳಿಂದ ಅಪರಾಧಿಯೆಂದು ನಿರ್ಣೀತರಾದ ವ್ಯಕ್ತಿಗಳು ಮಾಡಿದ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಪ್ರಮಾಣಕ್ಕನುಸಾರವಾಗಿ ದಂಡನೆಗಳನ್ನು ವಿಧಿಸಬಹುದು, ಎಂದರೆ:–

(ಎ) ಮರಣದಂಡನೆ;

(ಬಿ) ಭದ್ರತಾ ಪಡೆಯ ಅಭಿರಕ್ಷೆಯಲ್ಲಿ ಮೂರು ತಿಂಗಳನ್ನು ಮೀರದ ಅವಧಿಯ ಕಾರಾವಾಸವನ್ನು ಹೊರತುಪಡಿಸಿ, ಆಜೀವ ಕಾರಾವಾಸ ಅಥವಾ ಯಾವುದೇ ಇತರೆ ಕಡಿಮೆ ಅವಧಿಯ ಕಾರಾವಾಸ;

(ಸಿ) ಸೇವೆಯಿಂದ ವಜಾ;

(ಡಿ) ಭದ್ರತಾ ಪಡೆ ಅಭಿರಕ್ಷೆಯಲ್ಲಿ ಮೂರು ತಿಂಗಳನ್ನು ಮೀರದ ಅವಧಿಯ ಕಾರಾವಾಸ;

(ಇ) ರೇಂಜರ್ ದರ್ಜೆ I ರ ಸಂದರ್ಭದಲ್ಲಿ ಶ್ರೇಣಿಗಳಲ್ಲಿ ಕಡಿಮೆ ಮಾಡುವುದು ಅಥವಾ ಕೆಳ ಶ್ರೇಣಿಗೆ ಅಥವಾ ದರ್ಜೆಗೆ ಇಳಿಸುವುದು;

(ಎಫ್) ಶ್ರೇಣಿಯ ಜ್ಯೇಷ್ಠತೆಯ ಮುಟ್ಟುಗೋಲು ಮತ್ತು ಬಡ್ತಿಯು ಸೇವಾವಧಿಯನ್ನು ಅವಲಂಬಿಸಿರುವಲ್ಲಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯ ಎಲ್ಲ ಅಥವಾ ಯಾವುದೇ ಭಾಗದ ಮುಟ್ಟುಗೋಲು;

(ಜಿ) ವೇತನ ಬಡ್ತಿಯ ಅಥವಾ ವಿಶ್ರಾಂತಿ ವೇತನದ ಅಥವಾ ನಿಯಮಿಸಲಾದ ಇತರ ಉದ್ದೇಶಕ್ಕಾಗಿ ಸೇವೆಯ ಮುಟ್ಟುಗೋಲು;

(ಹೆಚ್) ರೇಂಜರ್ ದರ್ಜೆ I ಕ್ಕಿಂತ ಕಡಿಮೆ ಇರುವ ವ್ಯಕ್ತಿಗಳ ಸಂದರ್ಭದಲ್ಲಿ ಹೊರತು ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಐ) ಸೇವೆಯಿಂದ ವಜಾ ಶಿಕ್ಷೆಗೆ ಒಳಗಾದ ವ್ಯಕ್ತಿಯ ಸಂದರ್ಭದಲ್ಲಿ ವೇತನ ಮತ್ತು ಭತ್ಯೆಗಳ ಎಲ್ಲಾ ಬಾಕಿಗಳ ಮತ್ತು ಹಾಗೆ ವಜಾಗೊಂಡ ಕಾಲದಲ್ಲಿ ಅವನಿಗೆ ಬರಬೇಕಾಗಿದ್ದ ಇತರ ಸರ್ಕಾರಿ ಹಣದ ಮುಟ್ಟುಗೋಲು;

(ಜೆ) ಯಾವ ಅಪರಾಧಕ್ಕಾಗಿ ಅವನು ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟ ಅಥವಾ ಹಾನಿಯನ್ನು ತುಂಬಿಕೊಡಲು ಅವನ ವೇತನ ಮತ್ತು ಭತ್ಯೆಗಳಿಂದ ಕಡಿತ.

(2) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ದಂಡನೆಗಳನ್ನು ಮೇಲೆ ತಿಳಿಸಿದ ಪ್ರಮಾಣದಲ್ಲಿ ಅದರ ಹಿಂದಿನ ಪ್ರತಿಯೊಂದು ದಂಡನೆಗಿಂತಲೂ ಕೆಳದರ್ಜೆಯದೆಂದು ಭಾವಿಸತಕ್ಕದ್ದು.

**48. ಭದ್ರತಾ ಪಡೆ ನ್ಯಾಯಾಲಯಗಳು ನೀಡಬಹುದಾದ ಪರ್ಯಾಯ ದಂಡನೆಗಳು.**–ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯವು, 15 ರಿಂದ 44ರ (ಎರಡೂ ಸೇರಿ) ವರೆಗಿನ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅಪರಾಧಗಳಿಗಾಗಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸಿದ ಮೇಲೆ ಯಾವ ದಂಡನೆಯಿಂದ ಆ ಅಪರಾಧಗಳಿಗೆ ಸದರಿ ಪ್ರಕರಣಗಳಲ್ಲಿ ದಂಡನೆ ವಿಧಿಸಬಹುದೆಂದು ಹೇಳಲಾಗಿದೆಯೋ ಆ ನಿರ್ದಿಷ್ಟ ದಂಡನೆಯನ್ನಾಗಲಿ ಅಥವಾ ಅದರ ಬದಲಾಗಿ, ಅಪರಾಧದ ಸ್ವರೂಪ ಮತ್ತು ಪ್ರಮಾಣವನ್ನು ಗಮನದಲ್ಲಿರಿಸಿಕೊಂಡು 47ನೇ ಪ್ರಕರಣದಲ್ಲಿ ನಿರೂಪಿಸಿರುವ ಪ್ರಮಾಣದಲ್ಲಿ ಯಾವುದಾದರೊಂದು ಕಡಿಮೆ ದಂಡನೆಯನ್ನು ವಿಧಿಸಬಹುದು.

**49. ದಂಡನೆಗಳ ಸಂಯೋಜನೆ.**– ಭದ್ರತಾ ಪಡೆ ನ್ಯಾಯಾಲಯದ ಶಿಕ್ಷೆಯನ್ನು, 47ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ದಂಡನೆಯ ಮತ್ತು ಆ ಉಪ ಪ್ರಕರಣದ (ಇ) ಯಿಂದ (ಜೆ) ವರೆಗಿನ (ಎರಡೂ ಸೇರಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚು ದಂಡನೆಗಳ ಜೊತೆಗೆ, ಅಥವಾ ಯಾವುದಾದರೊಂದು ಇತರ ದಂಡನೆ ಇಲ್ಲದೆ ವಿಧಿಸಬಹುದು.

**50. ಭದ್ರತಾ ಪಡೆ ನ್ಯಾಯಾಲಯಗಳಿಂದಲ್ಲದೆ ಅನ್ಯಥಾ ವಿಧಿಸಬಹುದಾದ ದಂಡನೆಗಳು.**– ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗಳು ಮಾಡಿದ ಅಪರಾಧಗಳ ಸಂಬಂಧದಲ್ಲಿ ದಂಡನೆಗಳನ್ನು 51 ಮತ್ತು 53ನೇ ಪ್ರಕರಣಗಳಲ್ಲಿ ಹೇಳಿರುವ ರೀತಿಯಲ್ಲಿ ಭದ್ರತಾ ಪಡೆ ನ್ಯಾಯಾಲಯದ ಮಧ್ಯಪ್ರವೇಶವಿಲ್ಲದೆಯೂ ಸಹ ವಿಧಿಸಬಹುದು.

**51. ಲಘು ದಂಡನೆಗಳು.**– (1) 52ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಗ್ರೂಪ್ ಕಮಾಂಡರನ ದರ್ಜೆಯ ಮತ್ತು ಗ್ರೂಪ್ ಕಮಾಂಡರ ದರ್ಜೆಗೆ ಮೇಲ್ಪಟ್ಟ ಕಮಾಂಡರನು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ದೋಷಾರೋಪಣೆಯನ್ನು ಹೊರಿಸಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ಯಾರೇ ವ್ಯಕ್ತಿಯ ವಿರುದ್ಧ ನಿಯಮಿಸಲಾದ ರೀತಿಯಲ್ಲಿ ವ್ಯವಹರಣೆಯನ್ನು ನಡೆಸಬಹುದು ಮತ್ತು ಅಂಥ ವ್ಯಕ್ತಿಗೆ ನಿಯಮಿಸಿದಷ್ಟರ ಮಟ್ಟಿಗೆ ಈ ಮುಂದಿನ ಒಂದು ಅಥವಾ ಹೆಚ್ಚು ಶಿಕ್ಷೆಗಳನ್ನು ವಿಧಿಸಬಹುದು, ಎಂದರೆ:–

(ಎ) ಇಪ್ಪತ್ತೆಂಟು ದಿನಗಳವರೆಗೆ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಕಾರಾವಾಸ;

(ಬಿ) ಇಪ್ಪತ್ತೆಂಟು ದಿನಗಳವರೆಗೆ ತಡೆಹಿಡಿದಿರಿಸುವುದು;

(ಸಿ) ಇಪ್ಪತ್ತೆಂಟು ದಿನಗಳವರೆಗೆ ಸೈನಿಕ ನೆಲೆಗಳಿಗೆ ಸೀಮಿತಗೊಳಿಸುವುದು;

(ಡಿ) ಹೆಚ್ಚಿನ ಪಹರೆ ಕೆಲಸವನ್ನು ಅಥವಾ ಕರ್ತವ್ಯಗಳನ್ನು ಮಾಡಿಸುವುದು;

(ಇ) ಯಾವುದೇ ಹಂಗಾಮಿ ದರ್ಜೆಯಿಂದ ವಂಚಿತನನ್ನಾಗಿಸುವುದು; ಆದರೆ ಅಂಥ ದರ್ಜೆಯನ್ನು ಅವನು ಎರಡು ವರ್ಷಗಳಿಗಿಂತ ಹೆಚ್ಚಿಗೆ ಧಾರಣ ಮಾಡಿರಬಾರದು;

(ಎಫ್) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಜಿ) ಯಾವ ಅಪರಾಧಕ್ಕಾಗಿ ಅವನನ್ನು ಶಿಕ್ಷಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

(2) ಒಂದು ಸಮೂಹವನ್ನು ಸ್ಕ್ವಾಡ್ರನ್ ಕಮಾಂಡರ್ ಅಥವಾ ಟೀಮ್ ಕಮಾಂಡರನ ದರ್ಜೆಯ ಅಧಿಕಾರಿಯು ತಾತ್ಕಾಲಿಕವಾಗಿ ಕಮಾಂಡ್ ಮಾಡುತ್ತಿದ್ದರೆ, ಅಂಥ ಅಧಿಕಾರಿಯು (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಕಮಾಂಡರ್‌ನ ಸಂಪೂರ್ಣ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) 52ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸ್ಕ್ವಾಡ್ರನ್‌ನನ್ನು ಅಥವಾ ಟೀಮನ್ನು ಅಥವಾ ಯಾವುದೇ ಸೇನಾ ತುಕಡಿಯನ್ನು ಕಮಾಂಡ್ ಮಾಡುತ್ತಿರುವ ಸ್ಕ್ವಾಡ್ರನ್ ಕಮಾಂಡರ್ ಅಥವಾ ಟೀಮಿನ ಕಮಾಂಡರನು, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪಣೆ ಮಾಡಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ವ್ಯಕ್ತಿಯ ವಿರುದ್ಧ, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ವ್ಯವಹರಣೆ ಹೂಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು, ಅಂಥ ವ್ಯಕ್ತಿಗೆ (1)ನೇ ಉಪ ಪ್ರಕರಣದ (ಎ) ಯಿಂದ (ಡಿ) ವರೆಗಿನ ಮತ್ತು (ಜಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಹೆಚ್ಚು ದಂಡನೆಗಳನ್ನು ನಿಯಮಿಸಿರುವಷ್ಟರ ಮಟ್ಟಿಗೆ ವಿಧಿಸತಕ್ಕದ್ದು. ಆದರೆ, (ಎ), (ಬಿ) ಮತ್ತು (ಸಿ) ಖಂಡಗಳ ಪ್ರತಿಯೊಂದರ ಅಡಿಯಲ್ಲಿ ವಿಧಿಸಲಾದ ದಂಡನೆಯ ಗರಿಷ್ಠ ಮಿತಿಯು ಹದಿನಾಲ್ಕು ದಿನಗಳನ್ನು ಮೀರತಕ್ಕದ್ದಲ್ಲ.

**52. 51ನೇ ಪ್ರಕರಣದ ಮೇರೆಗೆ ದಂಡನೆಗಳ ಪರಿಮಿತಿ.–** (1) 51ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಎರಡು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಿರುವ ಸಂದರ್ಭದಲ್ಲಿ, (ಸಿ) ಅಥವಾ (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳು (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆ ಕೊನೆಗೊಂಡ ನಂತರವೇ ಪರಿಣಾಮಕಾರಿಯಾಗತಕ್ಕದ್ದು.

(2) ಸದರಿ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚು ದಂಡನೆಗಳನ್ನು ಒಟ್ಟೊಟ್ಟಿಗೆ ಒಬ್ಬ ವ್ಯಕ್ತಿಗೆ ವಿಧಿಸಿರುವಾಗ, ಅಥವಾ ಸದರಿ ದಂಡನೆಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ದಂಡನೆಗಳನ್ನು ಈಗಾಗಲೇ ಅನುಭವಿಸುತ್ತಿರುವಾಗ ದಂಡನೆಗಳ ಇಡೀ ಅವಧಿಯು ಒಟ್ಟು ಐವತ್ತಾರು ದಿನಗಳನ್ನು ಮೀರತಕ್ಕದ್ದಲ್ಲ.

(3) ಸದರಿ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳನ್ನು ರೇಂಜರ್ ಗ್ರೇಡ್ – I ದರ್ಜೆಯಲ್ಲಿರುವ ಅಥವಾ ಯಾವ ಅಪರಾಧಕ್ಕಾಗಿ ಅವನನ್ನು ದಂಡಿಸಲಾಗಿದೆಯೋ ಆ ಅಪರಾಧವನ್ನು ಮಾಡುವ ಕಾಲದಲ್ಲಿ ಅಂಥ ದರ್ಜೆಯಲ್ಲಿದ್ದ ಯಾರೇ ವ್ಯಕ್ತಿಗೆ ವಿಧಿಸತಕ್ಕದ್ದಲ್ಲ.

(4) 51ನೇ ಪ್ರಕರಣದ (1)ನೇ ಉಪ ಪ್ರಕರಣದ (ಎಫ್) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಯನ್ನು ರೇಂಜರ್ ಗ್ರೇಡ್ – I ದರ್ಜೆಗಿಂತ ಕಡಿಮೆ ದರ್ಜೆಯ ಯಾರೇ ವ್ಯಕ್ತಿಗೆ ವಿಧಿಸತಕ್ಕದ್ದಲ್ಲ.

**53. ಇನ್‌ಸ್ಪೆಕ್ಟರ್ ಜನರಲ್ಲರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು, ಸ್ಕ್ವಾಡ್ರನ್ ಕಮಾಂಡರುಗಳ ದರ್ಜೆಯ ಅಧಿಕಾರಿಗಳಿಗೆ ಅಥವಾ ಅವರಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳಿಗೆ ದಂಡನೆ ವಿಧಿಸುವುದು.–** ಇನ್‌ಸ್ಪೆಕ್ಟರ್

ಜನರಲ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ನಿಯಮಿಸಿದ ರೀತಿಯಲ್ಲಿ ಯಾರ ವಿರುದ್ಧ ಈ ಅಧಿನಿಯಮದ ಮೇರೆಗಿನ ಅಪರಾಧದ ಆಪಾದನೆ ಮಾಡಲಾಗಿದೆಯೋ ಆ ಸ್ಕ್ವಾಡ್ರನ್ ಕಮಾಂಡರನ ದರ್ಜೆಯ ಅಧಿಕಾರಿಯ ಅಥವಾ ಆ ದರ್ಜೆಗಿಂತ ಕಡಿಮೆ ದರ್ಜೆಯ ಅಧಿಕಾರಿಯ ವಿರುದ್ಧ ವ್ಯವಹರಣೆಯನ್ನು ಹೂಡಬಹುದು ಮತ್ತು ಈ ಮುಂದಿನ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು, ಎಂದರೆ:–

(ಎ) ಜ್ಯೇಷ್ಠತೆಯ ಮುಟ್ಟುಗೋಲು, ಅಥವಾ ಅವರಲ್ಲಿ ಯಾರೊಬ್ಬರ ಬಡ್ತಿಯು ಸೇವಾವಧಿಯ ಮೇಲೆ ಅವಲಂಬಿತವಾಗಿದೆಯೋ ಅವರ ಸಂದರ್ಭದಲ್ಲಿ, ಒಂದು ವರ್ಷವನ್ನು ಮೀರದ ಅವಧಿಗಾಗಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಆದರೆ, ಹಾಗೆ ವಿಧಿಸುವುದಕ್ಕೆ ಮುಂಚೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಗಾಗಲು ಆತನು ಆಯ್ಕೆ ಮಾಡಿಕೊಳ್ಳುವ ಆತನ ಹಕ್ಕಿಗೆ ಒಳಪಟ್ಟಿರಬೇಕು;

(ಬಿ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಸಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸ– ಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

**54. ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಗಳಿಗೆ ದಂಡನೆ.–** (1) ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು, ನಿಯಮಿಸಿದ ರೀತಿಯಲ್ಲಿ, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪ ಮಾಡಲಾಗಿದೆಯೋ ಆ ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಯ ವಿರುದ್ಧ ವ್ಯವಹರಣೆಯನ್ನು ನಡೆಸಬಹುದು ಮತ್ತು ಈ ಮುಂದಿನ ದಂಡನೆಗಳ ಪೈಕಿ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು, ಎಂದರೆ:–

(ಎ) ಜ್ಯೇಷ್ಠತೆಯ ಮುಟ್ಟುಗೋಲು, ಅಥವಾ ಅವರಲ್ಲಿ ಯಾರೊಬ್ಬರ ಬಡ್ತಿಯು ಸೇವಾವಧಿಯ ಮೇಲೆ ಅವಲಂಬಿತವಾಗಿದೆಯೋ ಅವರ ಸಂದರ್ಭದಲ್ಲಿ, ಒಂದು ವರ್ಷವನ್ನು ಮೀರದ ಅವಧಿಗಾಗಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಆದರೆ, ಹಾಗೆ ವಿಧಿಸುವುದಕ್ಕೆ ಮುಂಚೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಗಾಗಲು ಆತನು ಆಯ್ಕೆ ಮಾಡಿಕೊಳ್ಳುವ ಆತನ ಹಕ್ಕಿಗೆ ಒಳಪಟ್ಟಿರಬೇಕು;

(ಬಿ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಸಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

(2) ಗ್ರೂಪ್ ಕಮಾಂಡರ್‌ನ ದರ್ಜೆಯ ಅಧಿಕಾರಿಯು, ನಿಯಮಿಸಿದ ರೀತಿಯಲ್ಲಿ, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪ ಮಾಡಲಾಗಿದೆಯೋ ಆ ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಯ ವಿರುದ್ಧ ವ್ಯವಹರಣೆಯನ್ನು ನಡೆಸಬಹುದು ಮತ್ತು ಈ ಮುಂದಿನ ದಂಡನೆಗಳ ಪೈಕಿ ಯಾವುದೇ ಒಂದು ದಂಡನೆಯನ್ನು ಅಥವಾ ಅವೆರಡೂ ದಂಡನೆಗಳನ್ನು ವಿಧಿಸಬಹುದು, ಎಂದರೆ:–

(ಎ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಬಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣೀಯಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

## ಅಧ್ಯಾಯ V

## ದಸ್ತಗಿರಿ ಮತ್ತು ಅಧಿವಿಚಾರಣೆ ಮಾಡುವುದಕ್ಕೆ ಮುಂಚೆ ವ್ಯವಹರಣೆಗಳು

**55. ಅಪರಾಧಿಗಳ ಅಭಿರಕ್ಷೆ.–** (1) ಯಾರ ಮೇಲೆ ಅಪರಾಧದ ದೋಷಾರೋಪಣೆ ಹೊರಿಸಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ಯಾರೇ ವ್ಯಕ್ತಿಯನ್ನು ಯಾರೇ ಮೇಲಧಿಕಾರಿಯ ಆದೇಶದ ಮೇರೆಗೆ ಭದ್ರತಾ ಪಡೆಯ ಅಭಿರಕ್ಷೆಗೆ ತೆಗೆದುಕೊಳ್ಳಬಹುದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಧಿಕಾರಿಯು ಇತರ ಯಾರೇ ಅಧಿಕಾರಿಯನ್ನು ಅಂಥ ಇತರ ಅಧಿಕಾರಿಯು ಉನ್ನತ ದರ್ಜೆಯವನಾಗಿದ್ದರೂ ಬೀದಿಜಗಳದಲ್ಲಿ, ಅಥವಾ ಗಲಭೆಯಲ್ಲಿ ತೊಡಗಿದ್ದರೆ ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಲು ಆದೇಶಿಸಬಹುದು.

**56. ತಡೆಹಿಡಿದಿರಿಸುವುದಕ್ಕೆ ಸಂಬಂಧಿಸಿದಂತೆ ಕಮಾಂಡರನ ಕರ್ತವ್ಯ.–** (1) ಒಂದು ಅಪರಾಧದ ದೋಷಾರೋಪಣೆಯನ್ನು ಹೊರಿಸಲಾಗಿರುವ ತನ್ನ ಕಮಾಂಡಿನಲ್ಲಿರುವ ವ್ಯಕ್ತಿಯನ್ನು, ಆ ಅಪರಾಧವನ್ನು ತನಿಖೆ ಮಾಡದೆಯೇ ಅಭಿರಕ್ಷೆಗೆ ಒಪ್ಪಿಸಲಾಗಿದೆಯೆಂದು ಅವನಿಗೆ ವರದಿ ಬಂದ ನಂತರ, ಸಾರ್ವಜನಿಕ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಆ ಅವಧಿಯೊಳಗೆ ಆ ತನಿಖೆ ಮಾಡುವುದು ಕಾರ್ಯ ಸಾಧ್ಯವಲ್ಲವೆಂದು ಅವನಿಗೆ ಕಂಡು ಬಂದ ಹೊರತು ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿನ ಅವಧಿಗೆ ಆತನನ್ನು ಅಭಿರಕ್ಷೆಯಲ್ಲಿ ಇಟ್ಟುಕೊಂಡಿಲ್ಲವೆಂಬ ಬಗ್ಗೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ಕಮಾಂಡರನ ಕರ್ತವ್ಯವಾಗಿರತಕ್ಕದ್ದು.

(2) ನಲವತ್ತೆಂಟು ಗಂಟೆಗಳ ಅವಧಿಯನ್ನು ಮೀರಿ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಮತ್ತು ಅದರ ಸಂಬಂಧದ ಕಾರಣಗಳನ್ನು ಕಮಾಂಡರನು ಅವನ ನಿಕಟ ಮೇಲ್ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನಲವತ್ತೆಂಟು ಗಂಟೆಗಳ ಅವಧಿಯನ್ನು ಲೆಕ್ಕ ಹಾಕುವಾಗ, ಭಾನುವಾರಗಳನ್ನು ಮತ್ತು ಇತರೆ ಸಾರ್ವಜನಿಕ ರಜಾ ದಿನಗಳನ್ನು ಬಿಟ್ಟುಬಿಡತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು, ಅವನು ಮಾಡಿದ ಯಾವುದೇ ಅಪರಾಧಕ್ಕಾಗಿ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಅಧಿವಿಚಾರಣೆ ಇತ್ಯರ್ಥದಲ್ಲಿರುವಾಗ, ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಬಹುದಾದ ಮತ್ತು ತಡೆಹಿಡಿದಿರಿಸಿಕೊಳ್ಳಬಹುದಾದ ರೀತಿಯನ್ನು ಮತ್ತು ಅವಧಿಯನ್ನು ಉಪಬಂಧಿಸಿ ನಿಯಮಗಳನ್ನು ರಚಿಸಬಹುದು.

**57. ಒಪ್ಪಿಸುವಿಕೆಯ ಮತ್ತು ಅಧಿವಿಚಾರಣೆಯ ನಡುವಿನ ಅಂತರ.–** 55ನೇ ಪ್ರಕರಣದಲ್ಲಿ ಹೇಳಲಾದಂಥ ಮತ್ತು ಸಕ್ರಿಯ ಕರ್ತವ್ಯದ ಮೇಲಿಲ್ಲದಂಥ ಯಾರೇ ವ್ಯಕ್ತಿಯನ್ನು ಅವನ ಅಧಿವಿಚಾರಣೆ ನಡೆಸುವುದಕ್ಕೆ ಭದ್ರತಾ ಪಡೆ ನ್ಯಾಯಾಲಯವು ಸಮಾವೇಶಗೊಳ್ಳದಿರುವ ಕಾರಣದಿಂದ ಎಂಟು ದಿನಗಳಿಗಿಂತ ಹೆಚ್ಚಿನ ಅವಧಿಗೆ ಅವನನ್ನು ಉಳಿಸಿಕೊಂಡಿರುವ ಪ್ರತಿಯೊಂದು ಸಂದರ್ಭದಲ್ಲಿಯೂ, ವಿಳಂಬಕ್ಕಾಗಿ ಕಾರಣಗಳನ್ನು ನೀಡಿ ಅವನ ಕಮಾಂಡರನು ಒಂದು ವಿಶೇಷ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಭದ್ರತಾ ಪಡೆ ನ್ಯಾಯಾಲಯವು ಸಮಾವೇಶಗೊಳ್ಳುವವರೆಗೆ ಅಥವಾ ಅಂಥ ವ್ಯಕ್ತಿಯನ್ನು ಅಭಿರಕ್ಷೆಯಿಂದ ಬಿಡುಗಡೆ ಮಾಡುವವರೆಗೆ ಪ್ರತಿ ಎಂಟು ದಿನಗಳ ಅಂತರಗಳಲ್ಲಿ ಅದೇ ರೀತಿಯ ವರದಿಯನ್ನು ಕಳುಹಿಸಿಕೊಡತಕ್ಕದ್ದು.

**58. ಸಿವಿಲ್ ಅಧಿಕಾರಿಗಳಿಂದ ದಸ್ತಗಿರಿ.–** ಈ ಅಧಿನಿಯಮದ ಮೇರೆಗೆ ಅಪರಾಧದ ಆಪಾದಿತನಾಗಿರುವ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಯಾರೇ ಮ್ಯಾಜಿಸ್ಟ್ರೇಟನ ಅಥವಾ ಪೊಲೀಸ್ ಅಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗಿದ್ದಾಗಲೆಲ್ಲಾ, ಅಂಥ ಮ್ಯಾಜಿಸ್ಟ್ರೇಟ್‌ನು ಅಥವಾ ಪೊಲೀಸ್ ಅಧಿಕಾರಿಯು ಅವನ ದಸ್ತಗಿರಿಗೆ ನೆರವು ನೀಡತಕ್ಕದ್ದು ಮತ್ತು ಅವನ ಕಮಾಂಡರ್ ಅಥವಾ ಆ ಸಂಬಂಧವಾಗಿ ಕಮಾಂಡರನಿಂದ ಅಧಿಕಾರ ಪಡೆದ ಅಧಿಕಾರಿಯು ಆ ಬಗ್ಗೆ ಸಹಿ ಮಾಡಿದ ಒಂದು ಲಿಖಿತ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅಂಥ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಗೆ ಒಪ್ಪಿಸತಕ್ಕದ್ದು.

**59. ತ್ಯಜಿಸಿ ಹೋದವರನ್ನು ಸೆರೆಹಿಡಿಯುವುದು.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ತ್ಯಜಿಸಿ ಹೋದಾಗಲೆಲ್ಲಾ, ಅವನು ಯಾವ ಘಟಕಕ್ಕೆ ಸೇರಿರುತ್ತಾನೋ ಆ ಘಟಕದ ಕಮಾಂಡರನ ಅಭಿಪ್ರಾಯದಲ್ಲಿ ತ್ಯಜಿಸಿ ಹೋದವನನ್ನು ಸೆರೆಹಿಡಿಯಲು ನೆರವನ್ನು ಒದಗಿಸಲು ಸಾಧ್ಯವಿರುವಂತಹ ಸಿವಿಲ್ ಅಧಿಕಾರಿಗಳಿಗೆ ತ್ಯಜಿಸಿ ಹೋಗಿರುವುದರ

ಬಗ್ಗೆ ಮಾಹಿತಿಯನ್ನು ನೀಡತಕ್ಕದ್ದು ಮತ್ತು ಅಂಥ ಅಧಿಕಾರಿಗಳು, ಆ ತರುವಾಯ ಒಬ್ಬ ವ್ಯಕ್ತಿಯ ಬಂಧನಕ್ಕಾಗಿ ಮ್ಯಾಜಿಸ್ಟ್ರೇಟನು ವಾರಂಟ್‌ನ್ನು ಹೊರಡಿಸಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಸದರಿ ತ್ಯಜಿಸಿ ಹೋದವನ ಬಂಧನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ತ್ಯಜಿಸಿ ಹೋದವವನನ್ನು ಬಂಧಿಸಿದಾಗ ಅವನನ್ನು ಭದ್ರತಾ ಪಡೆ ಅಭಿರಕ್ಷೆಗೆ ಒಪ್ಪಿಸತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟಿರುವವನೆಂದು, ಮತ್ತು ತ್ಯಜಿಸಿ ಹೋಗುವವನೆಂದು ಯುಕ್ತವಾಗಿ ನಂಬಲು ಕಾರಣಗಳಿರುವ ಯಾರೇ ವ್ಯಕ್ತಿಯನ್ನು ಯಾರೇ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು ಮತ್ತು ಅವನನ್ನು ವಿಳಂಬಮಾಡದೆ ಕಾನೂನಿಗನುಸಾರವಾಗಿ ವ್ಯವಹರಿಸಲು ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು.

**60. ಅನುಮತಿ ಇಲ್ಲದೆ ಗೈರು ಹಾಜರಾದ ಬಗ್ಗೆ ವಿಚಾರಣೆ.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಯುಕ್ತ ಅನುಮತಿ ಇಲ್ಲದೆ ಮೂವತ್ತು ದಿನಗಳ ಅವಧಿಯವರೆಗೆ ಕರ್ತವ್ಯದಿಂದ ಗೈರು ಹಾಜರಾದಾಗ, ಕಾರ್ಯಸಾಧ್ಯವಾದಷ್ಟು ಬೇಗನೆ, ಅವನು ಯಾರ ಕಮಾಂಡಿನಲ್ಲಿ ತತ್ಕಾಲದಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೋ ಅಂಥ ಗ್ರೂಪ್ ಕಮಾಂಡರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ವಿಚಾರಣಾ ನ್ಯಾಯಾಲಯವನ್ನು ನೇಮಕ ಮಾಡತಕ್ಕದ್ದು ಮತ್ತು ಅಂಥ ನ್ಯಾಯಾಲಯವು, ನಿಯಮಿಸಿದ ರೀತಿಯಲ್ಲಿ ಅವನಿಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಮಾಡಿಸಿದ ಮೇಲೆ, ವ್ಯಕ್ತಿಯ ಗೈರುಹಾಜರಿಯ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು ಅವನ ಜವಾಬ್ದಾರಿಗೆ ವಹಿಸಿದ್ದ ಸರ್ಕಾರದ ಸ್ವತ್ತಿನಲ್ಲಿ ಅಥವಾ ಯಾವುದೇ ಶಸ್ತ್ರಾಸ್ತ್ರಗಳು, ಮದ್ದುಗುಂಡು, ಉಪಕರಣ, ಸಾಧನ ಸಾಮಗ್ರಿಗಳು, ಬಟ್ಟೆ ಬರೆಗಳು ಅಥವಾ ಇತರ ಅವಶ್ಯಕ ವಸ್ತುಗಳಲ್ಲಿ ಏನಾದರೂ ಕೊರತೆ ಇದ್ದರೆ; ಮತ್ತು ಯುಕ್ತ ಅನುಮತಿ ಇಲ್ಲದೆ ಅಥವಾ ಇತರೆ ಸಾಕಷ್ಟು ಕಾರಣವಿಲ್ಲದೆ ಹಾಗೆ ಗೈರು ಹಾಜರಾಗಿರುವ ಬಗೆಗಿನ ವಾಸ್ತವಾಂಶವನ್ನು ಮನದಟ್ಟು ಮಾಡಿಕೊಂಡರೆ, ನ್ಯಾಯಾಲಯವು ಅಂಥ ಗೈರು ಹಾಜರಿಯನ್ನು ಮತ್ತು ಅದರ ಅವಧಿಯನ್ನು ಮತ್ತು ಸದರಿ ಕೊರತೆ ಏನಾದರೂ ಆಗಿದ್ದರೆ ಅದನ್ನು ಘೋಷಿಸತಕ್ಕದ್ದು, ಮತ್ತು ವಿಚಾರಣಾ ನ್ಯಾಯಾಲಯದ ವ್ಯವಹರಣೆಗಳನ್ನು ಮುಂದಿನ ಕ್ರಮಕ್ಕಾಗಿ ವಿಚಾರಣಾ ನ್ಯಾಯಾಲಯವನ್ನು ನೇಮಕ ಮಾಡಿದ ಅಧಿಕಾರಿಗೆ ಕಳುಹಿಸತಕ್ಕದ್ದು.

(2) ಗೈರು ಹಾಜರಾಗಿರುವನೆಂದು ಘೋಷಿತನಾದ ವ್ಯಕ್ತಿಯು ತದನಂತರವೂ ಶರಣಾಗದಿದ್ದರೆ ಅಥವಾ ಅವನನ್ನು ಬಂಧಿಸದಿದ್ದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅವನನ್ನು ತ್ಯಜಿಸಿ ಹೋದವನೆಂದು ಭಾವಿಸತಕ್ಕದ್ದು.

## ಅಧ್ಯಾಯ VI

## ಭದ್ರತಾ ಪಡೆ ನ್ಯಾಯಾಲಯಗಳು

**61. ಭದ್ರತಾ ಪಡೆ ನ್ಯಾಯಾಲಯಗಳ ವಿಧಗಳು.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಮೂರು ಪ್ರಕಾರಗಳ ಭದ್ರತಾ ಪಡೆ ನ್ಯಾಯಾಲಯಗಳಿರತಕ್ಕದ್ದು, ಎಂದರೆ,–

(ಎ) ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯಗಳು;

(ಬಿ) ಭದ್ರತಾ ಪಡೆ ಲಘು ನ್ಯಾಯಾಲಯಗಳು;

(ಸಿ) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯಗಳು.

**62. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ.–** ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಕೇಂದ್ರ ಸರ್ಕಾರವು ಅಥವಾ ಮಹಾ ನಿರ್ದೇಶಕನು ಅಥವಾ ಮಹಾ ನಿರ್ದೇಶಕನ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ಪಡೆದ ಯಾರೇ ಅಧಿಕಾರಿಯು ಸಮಾವೇಶಗೊಳಿಸಬಹುದು.

**63. ಭದ್ರತಾ ಪಡೆ ಲಘು ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ.–**ಭದ್ರತಾ ಪಡೆ ಲಘು ನ್ಯಾಯಾಲಯವನ್ನು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಅಧಿಕಾರ ಹೊಂದಿರುವ ಅಧಿಕಾರಿಯು ಅಥವಾ ಯಾರೇ ಅಂಥ ಅಧಿಕಾರಿಯ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ಪಡೆದ ಯಾರೇ ಅಧಿಕಾರಿಯು ಸಮಾವೇಶಗೊಳಿಸಬಹುದು.

**64. 62ನೇ ಮತ್ತು 63ನೇ ಪ್ರಕರಣಗಳ ಮೇರೆಗೆ ಹೊರಡಿಸಿದ ವಾರಂಟುಗಳ ಒಳಾಂಶಗಳು.–** 62ನೇ ಪ್ರಕರಣದ ಅಥವಾ 63ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟು, ಅದನ್ನು ಹೊರಡಿಸುವ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳನ್ನು, ಪರಿಮಿತಿಗಳನ್ನು ಅಥವಾ ಷರತ್ತುಗಳನ್ನು ಒಳಗೊಂಡಿರಬಹುದು.

**65. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ರಚನೆ.–** ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವು ಐದಕ್ಕಿಂತ ಕಡಿಮೆ ಇಲ್ಲದಷ್ಟು ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು.

**66. ಭದ್ರತಾ ಪಡೆಯ ಲಘು ನ್ಯಾಯಾಲಯದ ರಚನೆ.–** ಭದ್ರತಾ ಪಡೆಯ ಲಘು ನ್ಯಾಯಾಲಯವು ಮೂರಕ್ಕಿಂತ ಕಡಿಮೆ ಇಲ್ಲದಷ್ಟು ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು.

**67. ಭದ್ರತಾ ಪಡೆಯ ಕ್ಷಿಪ್ರ ನ್ಯಾಯಾಲಯ.–** (1) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಭದ್ರತಾ ಪಡೆಯ ಯಾವುದೇ ಘಟಕದ ಕಮಾಂಡರನು ನಡೆಸತಕ್ಕದ್ದು ಮತ್ತು ಅವನು ಮಾತ್ರವೇ ನ್ಯಾಯಾಲಯ ಆಗಿರತಕ್ಕದ್ದು.

(2) ಅಧಿಕಾರಿಗಳಾಗಿರುವ ಅಥವಾ ಸಹಾಯಕ ಕಮಾಂಡರುಗಳಾಗಿರುವ ಇತರ ಇಬ್ಬರು ವ್ಯಕ್ತಿಗಳು ಅಥವಾ ಅವರಿಬ್ಬರಲ್ಲಿ ಒಬ್ಬರು ಇಡೀ ವ್ಯವಹರಣೆಗಳಲ್ಲಿ ಹಾಜರಾಗತಕ್ಕದ್ದು, ಮತ್ತು ಅವರು ಹಾಗೆಂದು ಪ್ರಮಾಣ ಮಾಡತಕ್ಕದ್ದಲ್ಲ ಅಥವಾ ದೃಢೀಕರಣ ಮಾಡತಕ್ಕದ್ದಲ್ಲ:

ಪರಂತು, ಒಬ್ಬ ಅಧಿಕಾರಿಯ ಅಧಿವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವ ವ್ಯಕ್ತಿಗಳು ಸಾರ್ವಜನಿಕ ಸೇವೆಯ ಜರೂರು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ದರ್ಜೆಯ ಅಧಿಕಾರಿಗಳು ದೊರೆಯುವುದಿಲ್ಲವೆಂದು ಸಮಾವೇಶಗೊಳಿಸುವ ಅಧಿಕಾರಿಯು ಅಭಿಪ್ರಾಯಪಟ್ಟು ಸಮಾವೇಶಗೊಳಿಸುವ ಆದೇಶದಲ್ಲಿ ಅದನ್ನು ದಾಖಲಿಸಿದ ಹೊರತು, ಆ ಅಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರತಕ್ಕದ್ದಲ್ಲ.

**68. ಭದ್ರತಾ ಪಡೆ ನ್ಯಾಯಾಲಯದ ವಿಸರ್ಜನೆ.–** (1) ಅಧಿವಿಚಾರಣೆ ಪ್ರಾರಂಭವಾದ ನಂತರ, ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೂಲಕ ಅಗತ್ಯಪಡಿಸಿದ ಅಧಿಕಾರಿಗಳ ಕನಿಷ್ಠ ಸಂಖ್ಯೆಯಲ್ಲಿ ಕಡಿಮೆಯಾದರೆ ಅದನ್ನು ವಿಸರ್ಜಿಸತಕ್ಕದ್ದು.

(2) ಸಂಬಂಧಿಸಿದ ಜಡ್ಜ್ ಅಟಾರ್ನಿಯ ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ – ಜನರಲ್‌ನ ಅಥವಾ ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್ಲನ ಅಥವಾ ನಿರ್ಣಯಕ್ಕೆ ಮುಂಚೆ ಆಪಾದಿತನ ಅನಾರೋಗ್ಯದ ಕಾರಣದಿಂದಾಗಿ ಅಧಿವಿಚಾರಣೆಯನ್ನು ಮುಂದುವರೆಸುವುದು ಅಸಾಧ್ಯವಾದರೆ, ಭದ್ರತಾ ಪಡೆ ನ್ಯಾಯಾಲಯವನ್ನು ವಿಸರ್ಜಿಸತಕ್ಕದ್ದು.

(3) ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಸೇವೆಯ ಜರೂರು ಅವಶ್ಯಕತೆಗಳಿಂದ ಅಥವಾ ಶಿಸ್ತಿನ ಅವಶ್ಯಕತೆಗಳಿಂದ ಸದರಿ ಭದ್ರತಾ ಪಡೆಯ ನ್ಯಾಯಾಲಯವನ್ನು ಮುಂದುವರೆಸುವುದು ಅಸಾಧ್ಯವೆಂದು ಅಥವಾ ವಿಹಿತವಲ್ಲವೆಂದು ಅದಕ್ಕೆ ಅಥವಾ ಅವನಿಗೆ ಕಂಡುಬಂದರೆ, ಅದನ್ನು ವಿಸರ್ಜಿಸಬಹುದು.

(4) ಈ ಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವನ್ನು ವಿಸರ್ಜಿಸಿದಲ್ಲಿ, ಆಪಾದಿತನನ್ನು ಪುನಃ ಅಧಿವಿಚಾರಣೆಗೊಳಪಡಿಸಬಹುದು.

**69. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು.–** ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧಕ್ಕಾಗಿ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸುವುದಕ್ಕೆ ಮತ್ತು ಆ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ನೀಡುವುದಕ್ಕೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

**70. ಭದ್ರತಾ ಪಡೆ ಲಘು ನ್ಯಾಯಾಲಯದ ಅಧಿಕಾರಗಳು.–** ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧಕ್ಕಾಗಿ ಅಧಿವಿಚಾರಣೆ ನಡೆಸುವುದಕ್ಕೆ ಮತ್ತು ಮರಣದಂಡನೆಯನ್ನು ಅಥವಾ

ಎರಡು ವರ್ಷಗಳನ್ನು ಮೀರಿದ ಅವಧಿಯ ಕಾರಾವಾಸ ಶಿಕ್ಷೆಯನ್ನು ಹೊರತುಪಡಿಸಿ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ನೀಡುವುದಕ್ಕೆ ಭದ್ರತಾ ಪಡೆ ಲಘು ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

**71. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಅಧಿಕಾರಗಳು.**–(1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸಬಹುದು.

(2) ತ್ವರಿತ ಕ್ರಮಕ್ಕಾಗಿ ಯಾವುದೇ ಗಂಭೀರ ಕಾರಣವಿಲ್ಲದಿರುವಾಗ ಮತ್ತು ಶಿಸ್ತಿಗೆ ಹಾನಿಯಾಗದಂತೆ ಆರೋಪಿತ ಅಪರಾಧಿಯ ಅಧಿವಿಚಾರಣೆ ನಡೆಸಲು ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ ಹೊಂದಿರುವ ಅಧಿಕಾರಿಗೆ ಉಲ್ಲೇಖ ಮಾಡಬಹುದು. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯು 15ನೇ, 17ನೇ ಮತ್ತು 45ನೇ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗುವ ಯಾವುದೇ ಅಪರಾಧದ ಅಥವಾ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯ ವಿರುದ್ಧದ ಯಾವುದೇ ಅಪರಾಧದ ಉಲ್ಲೇಖವಿಲ್ಲದೆ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(3) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು, ಒಬ್ಬ ಅಧಿಕಾರಿಯನ್ನು, ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ಮತ್ತು ನ್ಯಾಯಾಲಯವನ್ನು ನಡೆಸುವ ಅಧಿಕಾರಿಯ ಕಮಾಂಡಿಗೆ ಒಳಪಟ್ಟಿರುವ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸಬಹುದು.

(4) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಮರಣ ದಂಡನೆ ಶಿಕ್ಷೆ ಅಥವಾ (5)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಮಿತಿಯನ್ನು ಮೀರಿದ ಅವಧಿಯ ಕಾರಾವಾಸ ಶಿಕ್ಷೆಯ ಹೊರತು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಯಾವುದೇ ಶಿಕ್ಷೆಯನ್ನು ವಿಧಿಸಬಹುದು.

(5) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಿತಿಯು,–

(ಎ) ಭದ್ರತಾ ಪಡೆ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯು ಗ್ರೂಪ್ ಕಮಾಂಡರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯನ್ನು ಹೊಂದಿರುವ ಅಧಿಕಾರಿಯಾಗಿದ್ದರೆ, ಒಂದು ವರ್ಷವಾಗಿರತಕ್ಕದ್ದು;

(ಬಿ) ಇತರೆ ಯಾವುದೇ ಸಂದರ್ಭದಲ್ಲಿ ಮೂರು ತಿಂಗಳುಗಳಾಗಿರತಕ್ಕದ್ದು.

**72. ಪುನಃ ಅಧಿವಿಚಾರಣೆಗೆ ನಿಷೇಧ.**– (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಅಥವಾ ಕ್ರಿಮಿನಲ್ ನ್ಯಾಯಾಲಯವು ಖುಲಾಸೆಗೊಳಿಸಿದಾಗ ಅಥವಾ ಅಪರಾಧಿಯೆಂದು ನಿರ್ಣಯಿಸಿದಾಗ ಅಥವಾ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ಅವನ ಬಗ್ಗೆ ವ್ಯವಹರಿಸಿದ್ದಾಗ, ಅವನು ಭದ್ರತಾ ಪಡೆ ನ್ಯಾಯಾಲಯದಿಂದ ಅದೇ ಅಪರಾಧಕ್ಕಾಗಿ ಪುನಃ ಅಧಿವಿಚಾರಣೆಗೆ ಗುರಿಯಾಗತಕ್ಕದ್ದಲ್ಲ ಅಥವಾ ಸದರಿ ಪ್ರಕರಣಗಳ ಮೇರೆಗೆ ಅವನ ಬಗ್ಗೆ ವ್ಯವಹರಿಸತಕ್ಕದ್ದಲ್ಲ.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಖುಲಾಸೆಗೊಳಿಸಿದಾಗ ಅಥವಾ ಅಪರಾಧಿಯೆಂದು ನಿರ್ಣಯಿಸಿದಾಗ ಅಥವಾ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ಅವನ ಬಗ್ಗೆ ವ್ಯವಹರಿಸಿದ್ದಾಗ, ಅವನು ಅದೇ ಅಪರಾಧಕ್ಕಾಗಿ ಅಥವಾ ಅವೇ ಸಂಗತಿಗಳ ಮೇಲೆ ಕ್ರಿಮಿನಲ್ ನ್ಯಾಯಾಲಯದಿಂದ ಪುನಃ ಅಧಿವಿಚಾರಣೆಗೆ ಗುರಿಯಾಗತಕ್ಕದ್ದಲ್ಲ.

**73. ಅಧಿವಿಚಾರಣೆಗಾಗಿ ಕಾಲ ಪರಿಮಿತಿ.**– (1) (2)ನೇ ಉಪ ಪ್ರಕರಣದ ಮೂಲಕ ಉಪಬಂಧಿಸಿದಂತೆ ಹೊರತು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಯಾವುದೇ ಅಪರಾಧಕ್ಕಾಗಿ ಭದ್ರತಾ ಪಡೆ ನ್ಯಾಯಾಲಯವು ಅಂಥ ಅಪರಾಧದ ದಿನಾಂಕದಿಂದ ಮೂರು ವರ್ಷಗಳ ಅವಧಿ ಅಂತ್ಯವಾದ ನಂತರ ಅಧಿವಿಚಾರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳು ತ್ಯಜಿಸಿಹೋಗಿರುವ ಅಪರಾಧದ ಅಥವಾ 17ನೇ ಪ್ರಕರಣದಲ್ಲಿ ಸೂಚಿಸಿರುವ ಅಪರಾಧಗಳ ಪೈಕಿ ಯಾವುದೇ ಅಪರಾಧದ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಹೇಳಿರುವ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅಪರಾಧ ಮಾಡಿದ ತರುವಾಯ ಅಂಥ ವ್ಯಕ್ತಿಯು ದಸ್ತಗಿರಿ ಆಗುವುದನ್ನು ತಪ್ಪಿಸಿಕೊಂಡ ಯಾವುದೇ ಕಾಲವನ್ನು ಹೊರತುಪಡಿಸತಕ್ಕದ್ದು.

74. **ಅಪರಾಧಿಯು ಈ ಅಧಿನಿಯಮಕ್ಕೊಳಪಟ್ಟಿರುವುದು ನಿಂತುಹೋದಾಗ ಅಧಿವಿಚಾರಣೆ, ಇತ್ಯಾದಿ.–** (1) ಈ ಅಧಿನಿಯಮಕ್ಕೊಳಪಟ್ಟಿರುವಾಗ, ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿರುವಲ್ಲಿ, ಮತ್ತು ಅವನು ಹಾಗೆ ಒಳಪಟ್ಟಿರುವುದು ನಿಂತುಹೋಗಿರುವಾಗ, ಅವನನ್ನು ಭದ್ರತಾ ಪಡೆಯ ಅಭಿರಕ್ಷೆಗೆ ತೆಗೆದುಕೊಳ್ಳಬಹುದು ಮತ್ತು ಅಭಿರಕ್ಷೆಯಲ್ಲಿಟ್ಟುಕೊಳ್ಳಬಹುದು ಮತ್ತು ಹಾಗೆ ಒಳಪಟ್ಟಿರುವುದು ಮುಂದುವರೆದಿದ್ದರೆ ಹೇಗೋ ಹಾಗೆ ಅಂಥ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದು ಮತ್ತು ದಂಡಿಸತಕ್ಕದ್ದು.

(2) ಅಂಥ ಯಾರೇ ವ್ಯಕ್ತಿಯನ್ನು ಈ ಅಧಿನಿಯಮಕ್ಕೊಳಪಡುವುದು ನಿಂತುಹೋದ ನಂತರ ಆರು ತಿಂಗಳೊಳಗಾಗಿ ಅವನ ಅಧಿವಿಚಾರಣೆ ಪ್ರಾರಂಭ ಮಾಡಿದ ಹೊರತು, ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ತ್ಯಜಿಸಿಹೋಗಿರುವ ಅಪರಾಧಕ್ಕಾಗಿ ಅಥವಾ 17ನೇ ಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಅಪರಾಧಕ್ಕಾಗಿ ಅಂಥ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸಲು ಅನ್ವಯವಾಗತಕ್ಕದ್ದಲ್ಲ ಅಥವಾ ಕ್ರಿಮಿನಲ್ ನ್ಯಾಯಾಲಯವು ಹಾಗೂ ಭದ್ರತಾ ಪಡೆ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡುವ ಅಂಥ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಬಾಧಕವುಂಟುಮಾಡತಕ್ಕದ್ದಲ್ಲ.

75. **ಶಿಕ್ಷೆಯ ಅವಧಿಯಲ್ಲಿ ಅಧಿನಿಯಮದ ಅನ್ವಯ.–** (1) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಭದ್ರತಾ ಪಡೆ ನ್ಯಾಯಾಲಯವು ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗ, ಅವನ ಶಿಕ್ಷೆಯ ಅವಧಿಯಲ್ಲಿ, ಅವನನ್ನು ಭದ್ರತಾ ಪಡೆಯಿಂದ ವಜಾಗೊಳಿಸಿದ್ದಾಗ್ಯೂ ಅಥವಾ ಈ ಅಧಿನಿಯಮಕ್ಕೊಳಪಟ್ಟಿರುವುದು ಅನ್ಯಥಾ ನಿಂತುಹೋಗಿರುವಾಗ್ಯೂ, ಅವನಿಗೆ ಈ ಅಧಿನಿಯಮವು ಅನ್ವಯಿಸತಕ್ಕದ್ದು ಮತ್ತು ಅವನು ಈ ಅಧಿನಿಯಮಕ್ಕೊಳಪಟ್ಟು ಮುಂದುವರೆದಿದ್ದರೆ ಹೇಗೋ ಹಾಗೆ ಅವನನ್ನು ಇಟ್ಟುಕೊಳ್ಳತಕ್ಕದ್ದು, ತೆಗೆದುಹಾಕತಕ್ಕದ್ದು, ಕಾರಾವಾಸದಲ್ಲಿಡತಕ್ಕದ್ದು ಮತ್ತು ಶಿಕ್ಷಿಸತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಭದ್ರತಾ ಪಡೆ ನ್ಯಾಯಾಲಯವು ಮರಣ ದಂಡನೆ ವಿಧಿಸಿದಾಗ, ಅವನಿಗೆ ಆ ದಂಡನೆಯನ್ನು ಕಾರ್ಯಗತಗೊಳಿಸುವವರೆಗೂ ಈ ಅಧಿನಿಯಮವು ಅನ್ವಯವಾಗತಕ್ಕದ್ದು.

76. **ಅಧಿವಿಚಾರಣೆಯ ಸ್ಥಳ.–** ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧವನ್ನು ಮಾಡುವ ಈ ಅಧಿನಿಯಮಕ್ಕೊಳಪಟ್ಟಿರುವ ಯಾರೇ ವ್ಯಕ್ತಿಯನ್ನು, ಅಂಥ ಅಪರಾಧಕ್ಕಾಗಿ ಯಾವುದೇ ಸ್ಥಳದಲ್ಲಿ ಅಧಿವಿಚಾರಣೆ ಮಾಡಬಹುದು ಮತ್ತು ಶಿಕ್ಷಿಸಬಹುದು.

77. **ಕ್ರಿಮಿನಲ್ ನ್ಯಾಯಾಲಯ ಮತ್ತು ಭದ್ರತಾ ಪಡೆ ನ್ಯಾಯಾಲಯದ ನಡುವೆ ಆಯ್ಕೆ.–** ಪ್ರತಿಯೊಂದು ಕ್ರಿಮಿನಲ್ ನ್ಯಾಯಾಲಯವು ಮತ್ತು ಭದ್ರತಾ ಪಡೆ ನ್ಯಾಯಾಲಯವು ಒಂದು ಅಪರಾಧದ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವಾಗ, ಯಾವ ನ್ಯಾಯಾಲಯದ ಮುಂದೆ ವ್ಯವಹರಣೆಗಳನ್ನು ಹೂಡತಕ್ಕದ್ದೆಂದು ತೀರ್ಮಾನಿಸುವುದು ಆಪಾದಿತ ವ್ಯಕ್ತಿಯು ಯಾರ ಕಮಾಂಡಿನೊಳಗೆ ಸೇವೆ ಸಲ್ಲಿಸುತ್ತಿರುತ್ತಾನೋ ಆ ಮಹಾನಿರ್ದೇಶಕನ, ಅಥವಾ ಮಹಾನಿರೀಕ್ಷಕನ ಅಥವಾ ಉಪ ಮಹಾನಿರೀಕ್ಷಕನ ಅಥವಾ ನಿಯಮಿಸಬಹುದಾದಂಥ ಇತರೆ ಅಧಿಕಾರಿಯ ವಿವೇಚನೆಗೆ ಸೇರಿರತಕ್ಕದ್ದು ಮತ್ತು ಆ ಅಧಿಕಾರಿಯು ಅವುಗಳನ್ನು ಭದ್ರತಾ ಪಡೆ ನ್ಯಾಯಾಲಯದ ಮುಂದೆ ಹೂಡತಕ್ಕದ್ದೆಂದು ತೀರ್ಮಾನಿಸಿದರೆ, ಆ ಆಪಾದಿತ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

78. **ಅಪರಾಧಿಯನ್ನು ಒಪ್ಪಿಸುವಂತೆ ಅಗತ್ಯಪಡಿಸುವುದಕ್ಕೆ ಕ್ರಿಮಿನಲ್ ನ್ಯಾಯಾಲಯದ ಅಧಿಕಾರ.–** (1)

ಅಧಿಕಾರ ವ್ಯಾಪ್ತಿ ಹೊಂದಿರುವ ಕ್ರಿಮಿನಲ್ ನ್ಯಾಯಾಲಯವು ಯಾವುದೇ ಆರೋಪಿತ ಅಪರಾಧದ ಸಂಬಂಧದಲ್ಲಿ ತನ್ನ ಮುಂದೆ ವ್ಯವಹರಣೆಗಳನ್ನು ಹೂಡತಕ್ಕದ್ದೆಂದು ಅಭಿಪ್ರಾಯಪಟ್ಟಾಗ, ಅದು ಲಿಖಿತ ನೋಟೀಸಿನ ಮೂಲಕ 77ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಯನ್ನು ತನ್ನ ಆಯ್ಕೆ ಪ್ರಕಾರ ಕಾನೂನಿನ ಅನುಸಾರವಾಗಿ ಅವನ ವಿರುದ್ಧ ವ್ಯವಹರಣೆಯನ್ನು ಮುಂದುವರೆಸಲು ಹತ್ತಿರದ ಮ್ಯಾಜಿಸ್ಟ್ರೇಟ್‌ರಿಗೆ ಅಪರಾಧಿಯನ್ನು ಒಪ್ಪಿಸುವುದಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ ಉಲ್ಲೇಖಿಸುವುದನ್ನು ಇತ್ಯರ್ಥದಲ್ಲಿರಿಸಿ ವ್ಯವಹರಣೆಗಳನ್ನು ಮುಂದೂಡುವುದಕ್ಕೆ ಅಗತ್ಯಪಡಿಸಬಹುದು.

(2) ಅಂಥ ಪ್ರತಿಯೊಂದು ಪ್ರಕರಣದಲ್ಲಿ, ಸದರಿ ಅಧಿಕಾರಿಯು, ಕೋರಿಕೆಗೆ ಅನುಸಾರವಾಗಿ ಅಪರಾಧಿಯನ್ನು ಒಪ್ಪಿಸತಕ್ಕದ್ದು ಅಥವಾ ವ್ಯವಹರಣೆಗಳನ್ನು ಯಾವ ನ್ಯಾಯಾಲಯದ ಮುಂದೆ ಹೂಡಬೇಕೆಂಬ ಬಗ್ಗೆ ಪ್ರಶ್ನೆಯನ್ನು ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಕೂಡಲೇ ಉಲ್ಲೇಖಿಸತಕ್ಕದ್ದು ಮತ್ತು ಹಾಗೆ ಉಲ್ಲೇಖಿಸಿದಾಗ ಕೇಂದ್ರ ಸರ್ಕಾರದ ಆದೇಶವೇ ಅಂತಿಮವಾಗಿರತಕ್ಕದ್ದು.

## ಅಧ್ಯಾಯ VII

### ಭದ್ರತಾ ಪಡೆ ನ್ಯಾಯಾಲಯಗಳ ಪ್ರಕ್ರಿಯೆ

**79. ಪೀಠಾಸೀನ ಅಧಿಕಾರಿ.–** ಪ್ರತಿಯೊಂದು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಲ್ಲಿ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದಲ್ಲಿ ಹಿರಿಯ ಸದಸ್ಯರು ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು.

**80. ಜಡ್ಜ್ ಅಟಾರ್ನಿಗಳು, ಇತ್ಯಾದಿ.–** ಪ್ರತಿಯೊಂದು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಲ್ಲಿ ಮತ್ತು ಪ್ರತಿಯೊಂದು ಭದ್ರತಾ ಪಡೆ ಲಘು ನ್ಯಾಯಾಲಯದಲ್ಲಿ ಜಡ್ಜ್ ಅಟಾರ್ನಿ ಅಥವಾ ಡೆಪ್ಯೂಟಿ ಜಡ್ಜ್ ಅಟಾರ್ನಿ–ಜನರಲ್ ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲ್‌ನು, ಅಥವಾ ಅಂಥ ಅಧಿಕಾರಿ ದೊರೆಯದಿದ್ದರೆ, ಜಡ್ಜ್ ಅಟರ್ನಿ ಜನರಲ್‌ನು ಅನುಮೋದಿಸಿದ ಅಧಿಕಾರಿ ಅಥವಾ ಈ ಬಗ್ಗೆ ಜಡ್ಜ್ ಅಟಾರ್ನಿ ಜನರಲ್‌ನು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಹಾಜರಾಗತಕ್ಕದ್ದು ಮತ್ತು ಹಾಜರಾಗಬಹುದು.

**81. ಆಕ್ಷೇಪಣೆಗಳು.–** (1) ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯವು ನಡೆಸುವ ಎಲ್ಲಾ ಅಧಿವಿಚಾರಣೆಗಳಲ್ಲಿ, ನ್ಯಾಯಾಲಯವು ಸಮಾವೇಶಗೊಂಡ ಕೂಡಲೇ, ಪೀಠಾಸೀನ ಅಧಿಕಾರಿಯ ಮತ್ತು ಸದಸ್ಯರ ಹೆಸರುಗಳನ್ನು ಆಪಾದಿತನಿಗೆ ಓದಿ ಹೇಳತಕ್ಕದ್ದು, ಆನಂತರ ನ್ಯಾಯಾಲಯದಲ್ಲಿ ಆಸೀನರಾಗಿರುವ ಯಾರೇ ಅಧಿಕಾರಿಯು ಅಧಿವಿಚಾರಣೆ ಮಾಡಲು ಏನಾದರೂ ಆಕ್ಷೇಪಣೆ ಇದೆಯೇ ಎಂದು ಅವನನ್ನು ಕೇಳತಕ್ಕದ್ದು.

(2) ಆಪಾದಿತನು, ಅಂಥ ಅಧಿಕಾರಿಯನ್ನು ಆಕ್ಷೇಪಿಸಿದರೆ, ಅವನ ಆಕ್ಷೇಪಣೆಯನ್ನು ಮತ್ತು ಆಕ್ಷೇಪಣೆಗೆ ಒಳಗಾದ ಅಧಿಕಾರಿಯು ಅದಕ್ಕೆ ನೀಡುವ ಉತ್ತರವನ್ನು ಸಹ ಆಲಿಸತಕ್ಕದ್ದು ಮತ್ತು ದಾಖಲಿಸತಕ್ಕದ್ದು, ಮತ್ತು ನ್ಯಾಯಾಲಯದ ಉಳಿದ ಅಧಿಕಾರಿಗಳು ಆಕ್ಷೇಪಣೆಗೊಳಗಾದ ಅಧಿಕಾರಿಯ ಗೈರು ಹಾಜರಿಯಲ್ಲಿ, ಆಕ್ಷೇಪಣೆಯ ಬಗ್ಗೆ ತೀರ್ಮಾನಿಸತಕ್ಕದ್ದು.

(3) ಮತ ಚಲಾಯಿಸಲು ಹಕ್ಕುಳ್ಳ ಅಧಿಕಾರಿಗಳ ಮತದ ಅರ್ಧದಷ್ಟು ಅಥವಾ ಅದಕ್ಕೂ ಹೆಚ್ಚು ಮತಗಳಿಂದ ಆಕ್ಷೇಪಣೆಯು ಅಂಗೀಕೃತವಾದರೆ, ಆ ಆಕ್ಷೇಪಣೆಯನ್ನು ಪುರಸ್ಕರಿಸತಕ್ಕದ್ದು, ಮತ್ತು ಆಕ್ಷೇಪಕ್ಕೊಳಗಾದ ಸದಸ್ಯನು ನಿರ್ಗಮಿಸತಕ್ಕದ್ದು, ಮತ್ತು ಅವನ ಖಾಲಿ ಸ್ಥಾನವನ್ನು, ಆಕ್ಷೇಪಿಸಲು ಆಪಾದಿತನಿಗಿರುವ ಅವೇ ಹಕ್ಕಿಗೊಳಪಟ್ಟು ಮತ್ತೊಬ್ಬ ಅಧಿಕಾರಿಯನ್ನು ಆ ಸ್ಥಾನಕ್ಕೆ ನಿಯಮಿಸಿದ ರೀತಿಯಲ್ಲಿ ತುಂಬತಕ್ಕದ್ದು.

(4) ಯಾವುದೇ ಆಕ್ಷೇಪಣೆಯನ್ನು ಮಾಡದಿದ್ದಾಗ, ಅಥವಾ ಆಕ್ಷೇಪಣೆಯನ್ನು ಮಾಡಿದ್ದು ಅದನ್ನು ತಿರಸ್ಕರಿಸಿದ್ದಾಗ ಅಥವಾ ಯಾವ ಅಧಿಕಾರಿಯ ಬಗೆಗಿನ ಆಕ್ಷೇಪಣೆಯನ್ನು ಅಂಗೀಕರಿಸಲಾಯಿತೋ ಆ ಪ್ರತಿಯೊಬ್ಬ ಅಧಿಕಾರಿಯ ಸ್ಥಾನಕ್ಕೆ ಯಾವ ಅಧಿಕಾರಿಯ ಬಗ್ಗೆ ಯಾವ ಆಕ್ಷೇಪಣೆಯನ್ನೂ ಮಾಡಲಾಗಿಲ್ಲವೋ ಅಥವಾ ಪುರಸ್ಕರಿಸಿಲ್ಲವೋ ಅಂಥ ಮತ್ತೊಬ್ಬ ಅಧಿಕಾರಿಯನ್ನು ಭರ್ತಿಮಾಡಿದಾಗ ನ್ಯಾಯಾಲಯವು ಅಧಿವಿಚಾರಣೆಯನ್ನು ಮುಂದುವರೆಸತಕ್ಕದ್ದು.

**82. ಸದಸ್ಯರ, ಜಡ್ಜ್ ಅಟಾರ್ನಿಯ ಮತ್ತು ಸಾಕ್ಷಿದಾರರ ಪ್ರಮಾಣಗಳು.–** (1) ಅಧಿವಿಚಾರಣೆ ಪ್ರಾರಂಭವಾಗುವುದಕ್ಕೆ ಮುಂಚೆ ಪ್ರತಿಯೊಂದು ಭದ್ರತಾ ಪಡೆ ನ್ಯಾಯಾಲಯದ ಪ್ರತಿಯೊಬ್ಬ ಸದಸ್ಯನಿಗೆ ಮತ್ತು ಜಡ್ಜ್ ಅಟಾರ್ನಿನಿಗೆ ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್ಲನಿಗೆ ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲ್ಲನಿಗೆ ಅಥವಾ 80ನೇ ಪ್ರಕರಣದ ಮೇರೆಗೆ ಅನುಮೋದನೆಗೊಂಡ ಅಧಿಕಾರಿಗೆ ನಿಯಮಿಸಲಾದ ರೀತಿಯಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಬೋಧಿಸತಕ್ಕದ್ದು.

(2) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡುವ ಪ್ರತಿಯೊಬ್ಬ ವ್ಯಕ್ತಿಯನ್ನು ನಿಯಮಿಸಿದ ರೀತಿಯಲ್ಲಿ ಕ್ರಮಬದ್ಧವಾಗಿ ಪ್ರಮಾಣ ಮಾಡಿಸಿದ ಅಥವಾ ಪ್ರತಿಜ್ಞೆ ಮಾಡಿಸಿದ ನಂತರ ಪರೀಕ್ಷಿಸತಕ್ಕದ್ದು.

(3) ಸಾಕ್ಷಿದಾರನು ಹನ್ನೆರಡು ವರ್ಷದ ಒಳಗಿರುವ ಮಗುವಾಗಿರುವಲ್ಲಿ ಮತ್ತು ಭದ್ರತಾ ಪಡೆ ನ್ಯಾಯಾಲಯವು ಸಾಕ್ಷಿದಾರನಿಗೆ ನಿಜ ನುಡಿಯುವುದು ಕರ್ತವ್ಯವೆಂದು ಗೊತ್ತಿದ್ದರೂ ಸಹ, ಅವನು ಪ್ರಮಾಣದ ಅಥವಾ ಪ್ರತಿಜ್ಞೆಯ ಸ್ವರೂಪವು ಅವನಿಗೆ ಗೊತ್ತಿಲ್ಲವೆಂದು ಅಭಿಪ್ರಾಯಪಟ್ಟರೆ (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**83. ಸದಸ್ಯರುಗಳಿಂದ ಮತದಾನ.–** (1) (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯದ ಪ್ರತಿಯೊಂದು ತೀರ್ಮಾನವನ್ನು ಸಂಪೂರ್ಣ ಬಹುಮತದಿಂದ ಮಾತ್ರವೇ ಅಂಗೀಕರಿಸತಕ್ಕದ್ದು; ಮತ್ತು ನಿರ್ಣಯದ ಬಗ್ಗೆಯಾಗಲೀ ಅಥವಾ ಶಿಕ್ಷೆಯ ಬಗ್ಗೆಯಾಗಲೀ ಸಮಾನ ಮತಗಳು ಬಂದಲ್ಲಿ, ತೀರ್ಮಾನವು ಆಪಾದಿತನ ಪರವಾಗಿರತಕ್ಕದ್ದು.

(2) ಮರಣದಂಡನೆಯನ್ನು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಸದಸ್ಯರಲ್ಲಿ ಕನಿಷ್ಠ ಪಕ್ಷ 2/3 ರಷ್ಟು ಸದಸ್ಯರ ಸಹಮತ ಇರದಿದ್ದರೆ, ನ್ಯಾಯಾಲಯವು ಅದನ್ನು ಅಂಗೀಕರಿಸತಕ್ಕದ್ದಲ್ಲ.

(3) ಆಕ್ಷೇಪಣೆಯನ್ನು ಅಥವಾ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಹೊರತುಪಡಿಸಿ ಇತರೆ ವಿಷಯಗಳಲ್ಲಿ ಪೀಠಾಸೀನ ಅಧಿಕಾರಿಯು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**84. ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಯಮ.–** 1872ರ ಭಾರತ ಸಾಕ್ಷ್ಯ ಅಧಿನಿಯಮವು, (1872ರ 1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯದ ಮುಂದಿರುವ ಎಲ್ಲಾ ವ್ಯವಹರಣೆಗಳಿಗೂ ಅನ್ವಯವಾಗತಕ್ಕದ್ದು.

**85. ನ್ಯಾಯಿಕ ಗಮನ.–** ಭದ್ರತಾ ಪಡೆಯ ಅಧಿಕಾರಿಗಳಾಗಿ ಸದಸ್ಯರ ಸಾಮಾನ್ಯ ತಿಳುವಳಿಕೆಗೆ ಬಂದ ಯಾವುದೇ ವಿಷಯದ ಬಗ್ಗೆ ಭದ್ರತಾ ಪಡೆ ನ್ಯಾಯಾಲಯವು ನ್ಯಾಯಿಕ ಗಮನ ತೆಗೆದುಕೊಳ್ಳಬಹುದು.

**86. ಸಾಕ್ಷಿಗಳನ್ನು ಸಮನು ಮಾಡುವುದು.–** (1) ಸಮಾವೇಶಾಧಿಕಾರಿಯು, ಭದ್ರತಾ ಪಡೆ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು, ಜಡ್ಜ್ ಅಟಾರ್ನಿಯು ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ–ಜನರಲನು ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲನು ಅಥವಾ 80ನೇ ಪ್ರಕರಣದ ಮೇರೆಗೆ ಅನುಮೋದನೆಗೊಂಡ ಅಧಿಕಾರಿಯು ಅಥವಾ ಆಪಾದಿತ ವ್ಯಕ್ತಿಯ ಕಮಾಂಡರನು ತನ್ನ ಸಹಿಯೊಂದಿಗೆ ಸಮನ್ನುಗಳನ್ನು ಹೊರಡಿಸಿ, ಸಮನ್ನುಗಳಲ್ಲಿ ಸೂಚಿಸಬಹುದಾದ ಕಾಲದಲ್ಲಿ ಮತ್ತು ಸ್ಥಳದಲ್ಲಿ, ಸಾಕ್ಷ್ಯವನ್ನು ನೀಡುವುದಕ್ಕಾಗಲಿ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರೆ ವಸ್ತುವನ್ನು ಹಾಜರುಪಡಿಸುವುದಕ್ಕಾಗಲಿ ಯಾರೇ ವ್ಯಕ್ತಿಯ ಹಾಜರಾತಿಯನ್ನು ಅಗತ್ಯಪಡಿಸಬಹುದು.

(2) ಈ ಅಧಿನಿಯಮಕ್ಕೊಳಪಟ್ಟಿರುವ ಸಾಕ್ಷಿದಾರನ ಸಂದರ್ಭದಲ್ಲಿ, ಸಮನ್ನುಗಳನ್ನು ಅವನ ಕಮಾಂಡರನಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ತದನುಸಾರವಾಗಿ ಅವನಿಗೆ ಅದನ್ನು ಜಾರಿಮಾಡತಕ್ಕದ್ದು.

(3) ಯಾರೇ ಇತರೆ ಸಾಕ್ಷಿದಾರನ ಸಂದರ್ಭದಲ್ಲಿ, ಅವನು ಯಾವ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿಯಲ್ಲಿ ಇರುವನೋ ಅಥವಾ ವಾಸಿಸುತ್ತಿರುವನೋ ಆ ಮ್ಯಾಜಿಸ್ಟ್ರೇಟನಿಗೆ ಸಮನುಗಳನ್ನು ಕಳುಹಿಸತಕ್ಕದ್ದು, ಮತ್ತು ಆ ಮ್ಯಾಜಿಸ್ಟ್ರೇಟನು, ಆ ಸಾಕ್ಷಿದಾರನನ್ನು ತನ್ನ ನ್ಯಾಯಾಲಯದಲ್ಲಿ ಹಾಜರಿರಬೇಕೆಂದು ಅಗತ್ಯಪಡಿಸಿದ್ದಿದ್ದರೆ ಹೇಗೋ ಹಾಗೆ ಸಮನ್ನುಗಳನ್ನು ಜಾರಿ ಮಾಡತಕ್ಕದ್ದು.

(4) ಸಾಕ್ಷಿದಾರನ ವಶದಲ್ಲಿರುವ ಅಥವಾ ಅಧಿಕಾರದಲ್ಲಿರುವ ಯಾವುದೇ ನಿರ್ದಿಷ್ಟ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ಅವನನ್ನು ಅಗತ್ಯಪಡಿಸಿದಾಗ, ಸಮನು ಅದರ ಬಗ್ಗೆ ಯುಕ್ತ ಖಚಿತತೆಯನ್ನು ವಿವರಿಸಿರತಕ್ಕದ್ದು.

**87. ದಸ್ತಾವೇಜುಗಳನ್ನು ಹಾಜರುಪಡಿಸುವುದರಿಂದ ವಿನಾಯಿತಿ.–** (1) 86ನೇ ಪ್ರಕರಣದಲ್ಲಿರುವುದು ಯಾವುದೂ, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 123ನೇ ಮತ್ತು 124ನೇ ಪ್ರಕರಣಗಳನ್ನು ಪರಿಣಾಮಕಾರಿಯನ್ನಾಗಿ ಮಾಡುತ್ತದೆಂದು ಅಥವಾ ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳ ಅಭಿರಕ್ಷೆಯಲ್ಲಿರುವ ಯಾವುದೇ ಪತ್ರಕ್ಕೆ, ಅಂಚೆಕಾರ್ಡ್‌ಗೆ, ಟೆಲಿಗ್ರಾಂಗೆ ಅಥವಾ ಇತರೆ ದಸ್ತಾವೇಜುಗಳಿಗೆ ಅನ್ವಯವಾಗುವಂತೆ ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

(2) ಅಂಥ ಅಭಿರಕ್ಷೆಯಲ್ಲಿರುವ ಯಾವುದೇ ದಸ್ತಾವೇಜು ಯಾವುದೇ ಜಿಲ್ಲಾ ಮ್ಯಾಜಿಸ್ಟ್ರೇಟನ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ, ಸೆಷನ್ಸ್ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಉದ್ದೇಶಕ್ಕಾಗಿ ಬೇಕಾಗಿದ್ದರೆ ಆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಸಂದರ್ಭಾನುಸಾರ, ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳು ಅಂಥ ದಸ್ತಾವೇಜುಗಳನ್ನು ಒಪ್ಪಿಸಬೇಕೆಂದು ನಿರ್ದೇಶಿಸುತ್ತಾರೋ ಆ ವ್ಯಕ್ತಿಗೆ ಅಂಥ ದಸ್ತಾವೇಜನ್ನು ಒಪ್ಪಿಸುವುದಕ್ಕೆ ಅಗತ್ಯಪಡಿಸಬಹುದು.

(3) ಯಾರೇ ಇತರೆ ಮ್ಯಾಜಿಸ್ಟ್ರೇಟನ ಅಥವಾ ಯಾರೇ ಪೋಲೀಸ್ ಕಮೀಷನರನ ಅಥವಾ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟನ ಅಭಿಪ್ರಾಯದಲ್ಲಿ, ಯಾವುದೇ ಅಂಥ ದಸ್ತಾವೇಜು ಯಾವುದೇ ಅಂಥ ಉದ್ದೇಶಕ್ಕಾಗಿ ಬೇಕಾಗಿದ್ದರೆ, ಅವನು ಸಂದರ್ಭಾನುಸಾರ ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳನ್ನು ಅಂಥ ಶೋಧನೆ ಮಾಡಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ದಸ್ತಾವೇಜನ್ನು ಯಾವುದೇ ಅಂಥ ಜಿಲ್ಲಾ ಮ್ಯಾಜಿಸ್ಟ್ರೇಟನ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ, ಸೆಷನ್ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಆದೇಶವು ಇತ್ಯರ್ಥದಲ್ಲಿರುವಾಗ ತಡೆಹಿಡಿದಿಟ್ಟುಕೊಳ್ಳುವಂತೆ ಅಗತ್ಯಪಡಿಸಬಹುದು.

**88. ಸಾಕ್ಷಿದಾರರ ಪರೀಕ್ಷೆಗಾಗಿ ಕಮೀಷನುಗಳು.–** (1) ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಯು ನಡೆಯುತ್ತಿರುವಾಗಲೆಲ್ಲಾ, ನ್ಯಾಯೋದ್ದೇಶಕ್ಕಾಗಿ ಸಾಕ್ಷಿದಾರನ ಪರೀಕ್ಷೆಯ ಅವಶ್ಯಕತೆ ಇದೆ ಎಂದು ಮತ್ತು ಪ್ರಕರಣದ ಸಂದರ್ಭಗಳಲ್ಲಿ ಯಾವ ವಿಳಂಬವು, ವೆಚ್ಚವು ಅಥವಾ ಅನಾನುಕೂಲತೆಯು ಅಸಮಂಜಸವಾಗುವುದೋ ಆ ವಿಳಂಬ, ವೆಚ್ಚ ಅಥವಾ ಅನಾನುಕೂಲತೆಯನ್ನು ಉಂಟುಮಾಡದೆಯೇ ಅಂಥ ಸಾಕ್ಷಿದಾರನ ಹಾಜರಾತಿಯನ್ನು ದೊರಕಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದಾಗ ಆ ನ್ಯಾಯಾಲಯವು ಆ ಸಾಕ್ಷಿದಾರನ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕೆ ಕಮಿಷನ್ ಹೊರಡಿಸಬಹುದೆಂದು ಜಡ್ಜ್ ಅಟಾರ್ನಿ ಜನರಲ್‌ರಿಗೆ ತಿಳಿಸಬಹುದು.

(2) ಜಡ್ಜ್ ಅಟಾರ್ನಿ–ಜನರಲ್‌ನು ಆನಂತರ, ಅವಶ್ಯವೆಂದು ಭಾವಿಸಿದರೆ, ಅಂಥ ಸಾಕ್ಷಿದಾರನ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕಾಗಿ ಆ ಸಾಕ್ಷಿದಾರನು ಯಾವ ಮುಖ್ಯ ನ್ಯಾಯಿಕ ದಂಡಾಧಿಕಾರಿಯ ಅಥವಾ ಪ್ರಥಮ ದರ್ಜೆ ದಂಡಾಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ವಾಸವಾಗಿರುವನೋ ಆ ಯಾರೇ ಮುಖ್ಯ ನ್ಯಾಯಿಕ ದಂಡಾಧಿಕಾರಿಗೆ ಅಥವಾ ಪ್ರಥಮ ದರ್ಜೆ ದಂಡಾಧಿಕಾರಿಗೆ ಕಮಿಷನನ್ನು ಹೊರಡಿಸಬಹುದು.

(3) ಯಾವ ದಂಡಾಧಿಕಾರಿಗೆ ಅಥವಾ ಅಧಿಕಾರಿಗೆ, ಕಮಿಷನನ್ನು ಹೊರಡಿಸಲಾಗಿದೆಯೋ ಆ ದಂಡಾಧಿಕಾರಿಯು ಅಥವಾ ಅಧಿಕಾರಿಯು ಅಥವಾ ಅವನು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾಗಿದ್ದರೆ, ಅವನು ಅಥವಾ ಈ ಬಗ್ಗೆ ಅವನು ನೇಮಿಸುವಂಥ ಪ್ರಥಮ ದರ್ಜೆ ದಂಡಾಧಿಕಾರಿಯು ಸಾಕ್ಷಿಯು ಇರುವ ಸ್ಥಳಕ್ಕೆ ಹೋಗತಕ್ಕದ್ದು ಅಥವಾ ತನ್ನ ಮುಂದೆ ಹಾಜರಾಗುವಂತೆ ಸಾಕ್ಷಿದಾರನಿಗೆ ಸಮನು ಹೊರಡಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ವಾರಂಟ್ ಪ್ರಕರಣಗಳಲ್ಲಿ ಅಧಿವಿಚಾರಣೆಗಳನ್ನು ನಡೆಸುವ ರೀತಿಯಲ್ಲಿಯೇ ಅವನ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವೇ ಅಧಿಕಾರಗಳನ್ನು ಚಲಾಯಿಸಬಹುದು.

(4) ಸಾಕ್ಷಿದಾರನು ಬುಡಕಟ್ಟು ಪ್ರದೇಶದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ವಾಸಿಸುತ್ತಿದ್ದರೆ, ದಂಡ ಪ್ರಕ್ರಿಯಾ ಸಂಹಿತೆ, 1973ರ XXIII–ಬಿ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿಯೇ ಕಮಿಷನ್ನನ್ನು ಹೊರಡಿಸಬಹುದು.

**89. ಕಮಿಷನ್ ಹೊರಡಿಸುವ ಮೂಲಕ ಸಾಕ್ಷಿದಾರನ ವಿಚಾರಣೆ.–** (1) ಪ್ರಾಸಿಕ್ಯೂಟರ್‌ನು ಮತ್ತು ಯಾವ ಪ್ರಕರಣದಲ್ಲಿ ಕಮಿಷನ್ನನ್ನು 88ನೇ ಪ್ರಕರಣದ ಮೇರೆಗೆ ಹೊರಡಿಸಲಾಗಿದೆಯೋ ಆ ಯಾವುದೇ ಪ್ರಕರಣದಲ್ಲಿ ಆಪಾದಿತ ವ್ಯಕ್ತಿಯು ಅನುಕ್ರಮವಾಗಿ ನ್ಯಾಯಾಲಯವು ವಿವಾದಾಂಶಕ್ಕೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಭಾವಿಸುವಂತೆ ಲಿಖಿತದಲ್ಲಿ ಯಾವುವೇ ಪ್ರಶ್ನೆಗಳನ್ನು ಕಳುಹಿಸಬಹುದು, ಮತ್ತು ಮ್ಯಾಜಿಸ್ಟ್ರೇಟ್‌ನು ಅಥವಾ ಕಮಿಷನನ್ನು ನಿರ್ವಹಿಸುವ ಅಧಿಕಾರಿಯು ಅಂಥ ಪ್ರಶ್ನೆಗಳ ಮೇಲೆ ಸಾಕ್ಷಿದಾರನನ್ನು ವಿಚಾರಣೆ ಮಾಡತಕ್ಕದ್ದು.

(2) ಪ್ರಾಸಿಕ್ಯೂಟರ್‌ನು ಮತ್ತು ಆಪಾದಿತ ವ್ಯಕ್ತಿಯು ವಕೀಲರ ಮೂಲಕ ಅಂಥ ಮ್ಯಾಜಿಸ್ಟ್ರೇಟ್‌ನ ಅಥವಾ ಅಧಿಕಾರಿಯ ಮುಂದೆ ಹಾಜರಾಗಬಹುದು ಅಥವಾ ಆಪಾದಿತನು ಅಭಿರಕ್ಷೆಯಲ್ಲಿ ಇದ್ದ ಹೊರತು ಖುದ್ದಾಗಿ

ಹಾಜರಾಗಬಹುದು ಮತ್ತು ಸದರಿ ಸಾಕ್ಷಿದಾರನನ್ನು ವಿಚಾರಣೆ ಮಾಡಬಹುದು, ಪಾಟಿ ಸವಾಲು ಮಾಡಬಹುದು ಮತ್ತು ಸಂದರ್ಭಾನುಸಾರ ಮರುವಿಚಾರಣೆ ಮಾಡಬಹುದು.

(3) 88ನೇ ಪ್ರಕರಣದ ಮೇರೆಗೆ ಕಮಿಷನನ್ನು ಹೊರಡಿಸಿದ ಮತ್ತು ಅದನ್ನು ಕ್ರಮಬದ್ಧವಾಗಿ ಜಾರಿಗೊಳಿಸಿದ ತರುವಾಯ ಅದರ ಮೇರೆಗೆ ವಿಚಾರಣೆ ಮಾಡಿದ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಜಡ್ಜ್ ಅಟಾರ್ನಿ ಜನರಲ್‌ನಿಗೆ ಹಿಂತಿರುಗಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಹಿಂತಿರುಗಿಸಲಾದ ಕಮಿಷನನ್ನು ಮತ್ತು ಸಾಕ್ಷಿದಾರರ ಹೇಳಿಕೆಯನ್ನು ಸ್ವೀಕರಿಸಿದ ಮೇಲೆ, ಜಡ್ಜ್ ಅಟಾರ್ನಿ–ಜನರಲ್‌ನು ಯಾರ ಕೋರಿಕೆಯಂತೆ ಕಮೀಷನನ್ನು ಹೊರಡಿಸಲಾಗಿತ್ತೋ ಆ ನ್ಯಾಯಾಲಯಕ್ಕೆ ಅದನ್ನು ಅಥವಾ ಅಂಥ ನ್ಯಾಯಾಲಯವನ್ನು ವಿಸರ್ಜಿಸಲಾಗಿದ್ದರೆ, ಆಪಾದಿತ ವ್ಯಕ್ತಿಯ ಅಧಿವಿಚಾರಣೆಗಾಗಿ ಸಮಾವೇಶಗೊಳಿಸಿದ್ದ ಇತರ ಯಾವುದೇ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ಹಿಂದಿರುಗಿಸಿದ ಕಮಿಷನ್ನನ್ನು ಮತ್ತು ಸಾಕ್ಷಿದಾರರ ಹೇಳಿಕೆಯು ಪ್ರಾಸಿಕ್ಯೂಟರನು ಮತ್ತು ಆಪಾದಿತ ವ್ಯಕ್ತಿಯು ಪರಿಶೀಲಿಸಲು ಮುಕ್ತವಾಗಿರತಕ್ಕದ್ದು ಮತ್ತು ಎಲ್ಲಾ ನ್ಯಾಯಸಮ್ಮತ ಅಪವಾದಗಳಿಗೊಳಪಟ್ಟು ಪ್ರಾಸಿಕ್ಯೂಟರ್‌ನಾಗಲಿ ಅಥವಾ ಆಪಾದಿತ ವ್ಯಕ್ತಿಯಾಗಲಿ ಆ ಪ್ರಕರಣದಲ್ಲಿ ಅದನ್ನು ಸಾಕ್ಷ್ಯವಾಗಿ ಓದಬಹುದು ಮತ್ತು ಅದು ನ್ಯಾಯಾಲಯದ ವ್ಯವಹರಣೆಗಳ ಭಾಗವಾಗಿರತಕ್ಕದ್ದು.

(5) 88ನೇ ಪ್ರಕರಣದ ಮೇರೆಗೆ ಯಾವ ಪ್ರಕರಣದಲ್ಲಿ ಕಮಿಷನ್ನನ್ನು ಹೊರಡಿಸಲಾಗಿದೆಯೋ ಆ ಪ್ರತಿಯೊಂದು ಪ್ರಕರಣದಲ್ಲಿ ಕಮಿಷನನ್ನು ಜಾರಿಗೊಳಿಸಲು ಮತ್ತು ಅದನ್ನು ಹಿಂದಿರುಗಿಸಲು ಸಾಕಷ್ಟು ಯುಕ್ತ ನಿರ್ದಿಷ್ಟ ಕಾಲದವರೆಗೆ ಅಧಿವಿಚಾರಣೆಯನ್ನು ಮುಂದೂಡಬಹುದು.

**90. ಆರೋಪಿಸಲಾಗಿರದ ಅಪರಾಧದ ಅಪರಾಧ ನಿರ್ಣಯ.–** ಭದ್ರತಾ ಪಡೆ ನ್ಯಾಯಾಲಯದ ಮುಂದೆ,–

(ಎ) ತ್ಯಜಿಸಿಹೋದವನೆಂದು ಆರೋಪಿತನಾಗಿರುವ ವ್ಯಕ್ತಿಯು ತ್ಯಜಿಸಿಹೋಗಲು ಪ್ರಯತ್ನಿಸಿದ ತಪ್ಪಿತಸ್ಥನೆಂದು ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಬಿ) ತ್ಯಜಿಸಿಹೋಗಲು ಪ್ರಯತ್ನಿಸುವುದಕ್ಕೆ ಸಂಬಂಧಿಸಿದಂತೆ ಆರೋಪಿತನಾದ ವ್ಯಕ್ತಿಯ ಅನುಮತಿ ಪಡೆಯದೆ ಗೈರುಹಾಜರಾಗಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಸಿ) ಆಪರಾಧಿಕ ಬಲ ಪ್ರಯೋಗದ ಆರೋಪಿತನಾಗಿರುವ ವ್ಯಕ್ತಿಯು ಹಲ್ಲೆ ಮಾಡಿದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಡಿ) ಬೆದರಿಸುವ ಭಾಷೆಯನ್ನು ಬಳಸಿದ ಆರೋಪಕ್ಕೆ ಗುರಿಯಾದ ವ್ಯಕ್ತಿಯು ಅವಿಧೇಯ ಭಾಷೆಯನ್ನು ಬಳಸಿದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಇ) 29ನೇ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಪೈಕಿ ಯಾವುದೇ ಅಪರಾಧದ ಆರೋಪಿತನಾಗಿರುವ ವ್ಯಕ್ತಿಯು, ಈ ಅಪರಾಧಗಳ ಪೈಕಿ ಯಾವುದೇ ಇತರೆ ಅಪರಾಧಕ್ಕಾಗಿ ಅವನ ಮೇಲೆ ಆರೋಪ ಹೊರಿಸಬಹುದಾಗಿತ್ತೋ ಆ ಯಾವುದೇ ಇತರ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಎಫ್) 45ನೇ ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧದ ಆರೋಪಿತನಾಗಿರುವ ವ್ಯಕ್ತಿಯು ದಂಡಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಅನ್ವಯವಾಗುವಂತಿದ್ದರೆ ಆ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಜಿ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಆರೋಪಿತನಾಗಿರುವ ವ್ಯಕ್ತಿಯು ಹೆಚ್ಚು ತೀವ್ರ ಸ್ವರೂಪದ ದಂಡನೆಯನ್ನು ಒಳಗೊಂಡ ಸನ್ನಿವೇಶಗಳಲ್ಲಿ ಅಪರಾಧವನ್ನು ಮಾಡಿದ್ದಾನೆಂದು ರುಜುವಾತುಪಡಿಸಲು ವಿಫಲನಾಗಿರುವಾಗ ಕಡಿಮೆ ತೀವ್ರತೆಯ ದಂಡನೆಯನ್ನು ಒಳಗೊಳ್ಳುವ ಸನ್ನಿವೇಶಗಳಲ್ಲಿ ಮಾಡಿರುವ ಅದೇ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಹೆಚ್) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಆರೋಪಿತನಾಗಿರುವ ವ್ಯಕ್ತಿಯು, ಆ ಅಪರಾಧ ಮಾಡಲು ಪ್ರಯತ್ನಿಸುವ ಅಥವಾ ದುಷ್ಪ್ರೇರಿಸುವ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪಿಸದಿದ್ದರೂ ಆ ಅಪರಾಧವನ್ನು ಮಾಡಲು ಪ್ರಯತ್ನಿಸಿದ್ದಾನೆ ಅಥವಾ ದುಷ್ಪ್ರೇರಿಸಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು.

91. **ಸಹಿಗಳ ಬಗ್ಗೆ ಪೂರ್ವಭಾವನೆ.–** ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುದೇ ಅರ್ಜಿಯನ್ನು, ಪ್ರಮಾಣಪತ್ರವನ್ನು, ವಾರಂಟ್‍ನ್ನು, ಉತ್ತರವನ್ನು ಅಥವಾ ಇತರೆ ದಸ್ತಾವೇಜನ್ನು ಹಾಜರುಪಡಿಸಿದ ಮೇಲೆ, ತದ್ವಿರುದ್ಧವಾದುದನ್ನು ತೋರಿಸುವವರೆಗೆ ಯಾವ ವ್ಯಕ್ತಿಯು ಮತ್ತು ಯಾವ ಲಿಪಿಯಲ್ಲಿ ಅದಕ್ಕೆ ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯೇ ಮತ್ತು ಆ ಲಿಪಿಯಲ್ಲಿಯೇ ಕ್ರಮಬದ್ಧವಾಗಿ ಸಹಿ ಮಾಡಿದ್ದಾನೆಂದು ಪೂರ್ವ ಭಾವನೆ ಮಾಡತಕ್ಕದ್ದು.

92. **ನೇಮಕದ ಪತ್ರ.–** (1) ನೇಮಕ ಪ್ರಾಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುದೇ ನೇಮಕದ ಪತ್ರವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ, ಯಾವ ಪ್ರಶ್ನೆಗಳಿಗೆ ಅವನು ಉತ್ತರ ನೀಡಿದ್ದಾನೆಂದು ನಿರೂಪಿಸಿರುವನೋ ಆ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾನೆಂಬ ಬಗ್ಗೆ ನೇಮಕಗೊಂಡ ವ್ಯಕ್ತಿಯ ಸಾಕ್ಷ್ಯವಾಗಿರತಕ್ಕದ್ದು.

(2) ಅಂಥ ವ್ಯಕ್ತಿಯ ನೇಮಕವನ್ನು, ಅವನ ನೇಮಕದ ಮೂಲ ಪತ್ರವನ್ನು ಅಥವಾ ನೇಮಕದ ಪತ್ರದ ಅಭಿರಕ್ಷೆ ಹೊಂದಿರುವ ಅಧಿಕಾರಿಯ ನೈಜ ಪ್ರತಿಯೆಂದು ಪ್ರಮಾಣೀಕರಿಸಿರುವುದಾಗಿ ತಾತ್ಪರ್ಯವಾಗುವ ಅವನ ನೇಮಕದ ಪತ್ರದ ಪ್ರತಿಯನ್ನು ಹಾಜರುಪಡಿಸುವುದರ ಮೂಲಕ ಸಾಬೀತುಪಡಿಸಬಹುದು.

93. **ಕೆಲವು ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ.–** ಭದ್ರತಾ ಪಡೆಯ ಯಾವುದೇ ಘಟಕದಲ್ಲಿನ ಯಾರೇ ವ್ಯಕ್ತಿಯ ಸೇವೆಗೆ ಅಥವಾ ಅದರಲ್ಲಿರುವ ಯಾರೇ ವ್ಯಕ್ತಿಯನ್ನು ವಜಾ ಮಾಡಿದ್ದಕ್ಕೆ ಅಥವಾ ಬಿಡುಗಡೆ ಮಾಡಿದ್ದಕ್ಕೆ ಸಂಬಂಧಿಸಿದ ಅಥವಾ ಭದ್ರತಾ ಪಡೆಯ ಯಾವುದೇ ಘಟಕದಲ್ಲಿ ಸೇವೆ ಸಲ್ಲಿಸಿರದ ಅಥವಾ ಅದಕ್ಕೆ ಸೇರಿರದ ಸನ್ನಿವೇಶಗಳಲ್ಲಿ ಅಂಥ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಪತ್ರಕ್ಕೆ, ವಿವರ ಪಟ್ಟಿಕೆಗೆ ಅಥವಾ ಇತರ ದಸ್ತಾವೇಜಿಗೆ, ಕೇಂದ್ರ ಸರ್ಕಾರವು ಅಥವಾ ಮಹಾನಿರ್ದೇಶಕನು, ಅಥವಾ ಯಾರೇ ಇತರ ಸಕ್ಷಮ ಪ್ರಾಧಿಕಾರಿಯು ಅಥವಾ ಅವನ ಪರವಾಗಿ ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವಂತಿದ್ದರೆ, ಅದು, ಅಂಥ ಪತ್ರದಲ್ಲಿ, ವಿವರಪಟ್ಟಿಕೆಯಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(2) ಪ್ರಾಧಿಕಾರವು ಪ್ರಕಟಿಸಿದೆಯೆಂದು ತಾತ್ಪರ್ಯವಾಗುವ ರಾಷ್ಟ್ರೀಯ ಭದ್ರತಾ ಪಡೆಯ ಪಟ್ಟಿ ಅಥವಾ ಗೆಜೆಟ್ಟು, ಅದರಲ್ಲಿ ಸೂಚಿಸಿರುವ ಅಧಿಕಾರಿಗಳ ಮತ್ತು ಸಹಾಯಕ ಕಮಾಂಡರುಗಳ ಸ್ಥಾನಮಾನ ಮತ್ತು ದರ್ಜೆಯ ಮತ್ತು ಅವರು ಹೊಂದಿರುವ ಯಾವುದೇ ನೇಮಕದ ಮತ್ತು ಅವರು ಯಾವ ಭದ್ರತಾ ಪಡೆಗೆ ಸೇರಿರುವರೋ ಆ ಭದ್ರತಾ ಪಡೆಯ ಸಮೂಹದ, ಘಟಕದ ಅಥವಾ ಶಾಖೆಯ ಸಾಕ್ಷ್ಯವಾಗಿರತಕ್ಕದ್ದು.

(3) ಈ ಅಧಿನಿಯಮದ ಅಥವಾ ಯಾವುವೇ ನಿಯಮಗಳ ಅನುಸಾರವಾಗಿ ಅಥವಾ ಅನ್ಯಥಾ ಪದೀಯ ಕರ್ತವ್ಯಗಳ ನಿರ್ವಹಣೆಯಲ್ಲಿ, ಯಾವುದೇ ಘಟಕದ ಪುಸ್ತಕದಲ್ಲಿ ದಾಖಲ್ಮಾಡಿರುವಲ್ಲಿ ಮತ್ತು ಅಂಥ ದಾಖಲೆಯನ್ನು ಮಾಡುವುದು ಯಾರ ಕರ್ತವ್ಯವಾಗಿರುತ್ತದೋ ಆ ಕಮಾಂಡರ್‍ನು ಅಥವಾ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಅಂಥ ದಾಖಲೆಯು ಅದರಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(4) ಅಂಥ ಪುಸ್ತಕದ ಅಭಿರಕ್ಷೆ ಹೊಂದಿರುವ ಅಧಿಕಾರಿಯು ನೈಜ ಪ್ರತಿಯೆಂದು ಪ್ರಮಾಣೀಕರಿಸಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಘಟಕದ ಪುಸ್ತಕದಲ್ಲಿನ ಯಾವುದೇ ದಾಖಲೆಯ ಪ್ರತಿಯು ಅಂಥ ದಾಖಲೆಯ ಸಾಕ್ಷ್ಯವಾಗಿರತಕ್ಕದ್ದು.

(5) ತ್ಯಜಿಸಿಹೋಗಿರುವ ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ಆರೋಪದ ಬಗ್ಗೆ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ಅಧಿವಿಚಾರಣೆಯನ್ನು ನಡೆಸುತ್ತಿರುವಲ್ಲಿ ಮತ್ತು ಅಂಥ ವ್ಯಕ್ತಿಯು ಯಾರೇ ಅಧಿಕಾರಿಯ ಅಥವಾ ಈ ಅಧಿನಿಯಮಕ್ಕೊಳಪಟ್ಟ ಇತರೆ ವ್ಯಕ್ತಿಯ ಅಥವಾ ಭದ್ರತಾ ಪಡೆಯ ಯಾವುದೇ ಘಟಕದ ಅಭಿರಕ್ಷೆಗೆ ತಾನೇ ಶರಣಾಗತನಾಗಿರುವಲ್ಲಿ ಅಥವಾ ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ಅವನನ್ನು ಬಂಧಿಸಿರುವಲ್ಲಿ, ಅಂಥ ವ್ಯಕ್ತಿಯು

ಯಾವ ಘಟಕಕ್ಕೆ ಸೇರಿರುವನೋ ಆ ಘಟಕದ ಅಂಥ ಅಧಿಕಾರಿಯು ಅಥವಾ ಸಂದರ್ಭಾನುಸಾರ ಕಮಾಂಡರನು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವನ್ನು ಮತ್ತು ಅಂಥ ಶರಣಾಗತಿಯ ಅಥವಾ ಬಂಧನದ ಸಂಗತಿಯನ್ನು, ದಿನಾಂಕ ಮತ್ತು ಸ್ಥಳವನ್ನು ಮತ್ತು ಅವನು ಯಾವ ರೀತಿಯಲ್ಲಿ ಉಡುಪನ್ನು ಧರಿಸಿದ್ದನೋ ಆ ರೀತಿಯನ್ನು ನಿರೂಪಿಸುವ ಪ್ರಮಾಣ ಪತ್ರವನ್ನು ಹಾಗೆ ಹೇಳಲಾದ ವಿಷಯಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(6) ತ್ಯಜಿಸಿಹೋಗಿರುವ ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ಆರೋಪದ ಬಗ್ಗೆ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ಅಧಿವಿಚಾರಣೆಯನ್ನು ನಡೆಸುತ್ತಿರುವಲ್ಲಿ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಒಬ್ಬ ಅಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಪೊಲೀಸ್ ಅಧಿಕಾರಿಯ ಅಭಿರಕ್ಷೆಗೆ ತಾನೇ ಶರಣಾಗತನಾಗಿರುವಲ್ಲಿ ಅಥವಾ ಆ ಪೊಲೀಸ್ ಅಧಿಕಾರಿಯು ಆತನನ್ನು ಬಂಧಿಸಿರುವಲ್ಲಿ, ಅಂಥ ಪೊಲೀಸ್ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಮತ್ತು ಅಂಥ ಶರಣಾಗತಿಯ ಅಥವಾ ಬಂಧನದ ಸಂಗತಿಯನ್ನು, ದಿನಾಂಕವನ್ನು ಮತ್ತು ಸ್ಥಳವನ್ನು ಮತ್ತು ಅವನು ಯಾವ ರೀತಿಯಲ್ಲಿ ಉಡುಪನ್ನು ಧರಿಸಿದ್ದನೋ ಆ ರೀತಿಯನ್ನು ನಿರೂಪಿಸುವ ಪ್ರಮಾಣ ಪತ್ರವು ಹಾಗೆ ಹೇಳಲಾದ ವಿಷಯಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(7) (ಎ) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ಕ್ರಮದಲ್ಲಿ ಪರೀಕ್ಷೆಗಾಗಿ ಅಥವಾ ವಿಶ್ಲೇಷಣೆಗಾಗಿ ಮತ್ತು ವರದಿಗಾಗಿ ಸರ್ಕಾರಿ ವೈಜ್ಞಾನಿಕ ತಜ್ಞನಿಗೆ ಯುಕ್ತವಾಗಿ ಸಲ್ಲಿಸಿದ ಯಾವುದೇ ವಿಷಯ ಅಥವಾ ವಸ್ತುವಿಗೆ ಸಂಬಂಧಿಸಿದಂತೆ ಈ ಉಪಪ್ರಕರಣವು ಯಾರಿಗೆ ಅನ್ವಯಿಸುವುದೋ ಆ ಸರ್ಕಾರಿ ವೈಜ್ಞಾನಿಕ ತಜ್ಞನು ರುಜು ಮಾಡಿರುವ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ವಿಚಾರಣೆಯಲ್ಲಿ, ಅಧಿವಿಚಾರಣೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಉಪಯೋಗಿಸಬಹುದು.

(ಬಿ) ಭದ್ರತಾ ಪಡೆ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಿದರೆ, ತಜ್ಞನ ವರದಿಯ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಆತನನ್ನು ಸಮನು ಮಾಡಬಹುದು ಮತ್ತು ಅವನನ್ನು ವಿಚಾರಣೆ ಮಾಡಬಹುದು.

(ಸಿ) ಭದ್ರತಾ ಪಡೆ ನ್ಯಾಯಾಲಯವು ಯಾರೇ ಅಂಥ ತಜ್ಞನನ್ನು ಸಮನು ಮಾಡಿರುವಲ್ಲಿ ಮತ್ತು ಅವನು ಖುದ್ದಾಗಿ ಹಾಜರಾಗಲು ಅಸಮರ್ಥನಾದಲ್ಲಿ ಮತ್ತು ಅವನು ಖುದ್ದಾಗಿ ಹಾಜರಾಗುವಂತೆ ಅವನಿಗೆ ನ್ಯಾಯಾಲಯವು ವ್ಯಕ್ತವಾಗಿ ನಿರ್ದೇಶಿಸಿದ ಹೊರತು, ಅವನೊಂದಿಗೆ ಕೆಲಸ ಮಾಡುತ್ತಿರುವ ಮತ್ತು ಮೊಕದ್ದಮೆಯ ಸಂಗತಿಗಳ ಬಗೆಗೆ ತಿಳಿದಿರುವವನಾಗಿರುವ ಮತ್ತು ಅವನ ಪರವಾಗಿ ನ್ಯಾಯಾಲಯದಲ್ಲಿ ತೃಪ್ತಿಕರ ರೀತಿಯಲ್ಲಿ ಸಾಕ್ಷ್ಯ ನೀಡಬಲ್ಲವನಾದ ಯಾರೇ ಜವಾಬ್ದಾರಿಯುತ ವ್ಯಕ್ತಿಯನ್ನು ಅವನು ಪ್ರತಿನಿಯೋಜಿಸಬಹುದು.

(ಡಿ) ಈ ಉಪಪ್ರಕರಣವು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 293ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ತತ್ಕಾಲದಲ್ಲಿ ನಿರ್ದಿಷ್ಟಪಡಿಸಿರುವ ಸರ್ಕಾರಿ ವೈಜ್ಞಾನಿಕ ತಜ್ಞರಿಗೆ ಅನ್ವಯಿಸುವುದು.

**94. ಆಪಾದಿತನಿಂದ ಸರ್ಕಾರಿ ಅಧಿಕಾರಿಗೆ ಉಲ್ಲೇಖ.–** (1) ತ್ಯಜಿಸಿಹೋಗಿದ್ದಕ್ಕಾಗಿ ಅಥವಾ ಅನುಮತಿ ಪಡೆಯದೆ ಗೈರುಹಾಜರಾಗಿದ್ದಕ್ಕಾಗಿ, ರಜೆ ಮುಗಿದರೂ ಬಾರದಿರುವುದಕ್ಕಾಗಿ ಅಥವಾ ಸೇವೆಗೆ ಬರಲು ಎಚ್ಚರಿಕೆ ನೀಡಿದಾಗಲೂ ಪುನಃ ಕೆಲಸಕ್ಕೆ ಬಾರದಿರುವುದಕ್ಕಾಗಿ ಮಾಡುತ್ತಿರುವ ಅಧಿವಿಚಾರಣೆಯಲ್ಲಿ, ಆಪಾದಿತ ವ್ಯಕ್ತಿಯು ತನ್ನ ಪ್ರತಿರಕ್ಷೆಯಲ್ಲಿ ತಾನು ಅನಧಿಕೃತ ಗೈರು ಹಾಜರಾಗಿದ್ದಕ್ಕಾಗಿ ಯಾವುದೇ ಸಾಕಷ್ಟು ಅಥವಾ ಯುಕ್ತ ಕಾರಣಗಳನ್ನು ತಿಳಿಸಿದರೆ ಮತ್ತು ಅದಕ್ಕೆ ಸಮರ್ಥನೆಯಾಗಿ ಸರ್ಕಾರಿ ಸೇವೆಯಲ್ಲಿರುವ ಯಾರೇ ಅಧಿಕಾರಿಯನ್ನು ಉಲ್ಲೇಖಿಸಿದ್ದರೆ, ಅಥವಾ ಆ ಯಾರೇ ಅಂಥ ಅಧಿಕಾರಿಯು ಪ್ರತಿರಕ್ಷೆಯಲ್ಲಿ ಸದರಿ ಹೇಳಿಕೆಯನ್ನು ರುಜುವಾತುಪಡಿಸುವ ಅಥವಾ ರುಜುವಾತುಪಡಿಸದಿರುವ ಸಂಭವವಿದೆಯೆಂದು ಕಂಡುಬಂದರೆ, ನ್ಯಾಯಾಲಯವು ಅಂಥ ಅಧಿಕಾರಿಗೆ ಪತ್ರ ಬರೆಯತಕ್ಕದ್ದು ಮತ್ತು ಅವನಿಂದ ಉತ್ತರ ಬರುವವರೆಗೆ ವ್ಯವಹರಣೆಗಳನ್ನು ಮುಂದೂಡತಕ್ಕದ್ದು.

(2) ಹಾಗೆ ಉಲ್ಲೇಖಿಸಿದ ಯಾರೇ ಅಧಿಕಾರಿಯ ಲಿಖಿತ ಉತ್ತರಕ್ಕೆ ಅವನು ಸಹಿ ಮಾಡಿದ್ದರೆ, ಅದನ್ನು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು ಮತ್ತು ಅದನ್ನು ನ್ಯಾಯಾಲಯದ ಮುಂದೆ ಪ್ರಮಾಣದ ಮೇಲೆ ನೀಡಿದ್ದಿದ್ದರೆ ಹೇಗೋ ಹಾಗೆ ಅದೇ ಪರಿಣಾಮ ಹೊಂದಿರತಕ್ಕದ್ದು.

(3) ಅಂಥ ಉತ್ತರವನ್ನು ಸ್ವೀಕರಿಸುವುದಕ್ಕೆ ಮುಂಚೆಯೇ ನ್ಯಾಯಾಲಯವನ್ನು ವಿಸರ್ಜಿಸಿದರೆ ಅಥವಾ ನ್ಯಾಯಾಲಯವು ಈ ಪ್ರಕರಣದ ಉಪಬಂಧಗಳನ್ನು ಪಾಲಿಸದೆ ಬಿಟ್ಟುಬಿಟ್ಟರೆ, ಸಮಾವೇಶಾಧಿಕಾರಿಯು, ತನ್ನ ವಿವೇಚಾನುಸಾರ, ವ್ಯವಹರಣೆಗಳನ್ನು ರದ್ದುಗೊಳಿಸತಕ್ಕದ್ದು ಮತ್ತು ಹೊಸ ಅಧಿವಿಚಾರಣೆಗೆ ಆದೇಶಿಸತಕ್ಕದ್ದು.

**95. ಹಿಂದಿನ ಅಪರಾಧ ನಿರ್ಣಯಗಳ ಮತ್ತು ಸಾಮಾನ್ಯ ಚಾರಿತ್ರ್ಯದ ಬಗೆಗಿನ ಸಾಕ್ಷ್ಯ.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ಅಪರಾಧಕ್ಕಾಗಿ ಒಂದು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿರುವಾಗ, ಅಂಥ ಭದ್ರತಾ ಪಡೆ ನ್ಯಾಯಾಲಯವು, ಮತ್ತೊಂದು ಭದ್ರತಾ ಪಡೆ ನ್ಯಾಯಾಲಯವು ಅಥವಾ ಕ್ರಿಮಿನಲ್ ನ್ಯಾಯಾಲಯವು ಅಂಥ ವ್ಯಕ್ತಿಯ ಬಗ್ಗೆ ನೀಡಿದ ಯಾವುದೇ ಹಿಂದಿನ ಅಪರಾಧ ನಿರ್ಣಯಗಳ ಬಗ್ಗೆ ಅಥವಾ ಈ ಅಧಿನಿಯಮದ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ಹಿಂದಿನ ದಂಡನೆಯ ಬಗ್ಗೆ ವಿಚಾರಣೆ ಮಾಡಬಹುದು ಮತ್ತು ಹಿಂದಿನ ಅಪರಾಧಗಳ ಸಾಕ್ಷ್ಯವನ್ನು ಸ್ವೀಕರಿಸಬಹುದು ಮತ್ತು ದಾಖಲಿಸಿಕೊಳ್ಳಬಹುದು ಮತ್ತು ಆ ವ್ಯಕ್ತಿಯ ಸಾಮಾನ್ಯ ಚಾರಿತ್ರ್ಯದ ಬಗ್ಗೆ ಮತ್ತು ನಿಯಮಿಸಬಹುದಾದಂಥ ಇತರೆ ವಿಷಯಗಳ ಬಗ್ಗೆ ಹೆಚ್ಚಿನ ವಿಚಾರಣೆ ಮಾಡಬಹುದು ಮತ್ತು ಅದನ್ನು ದಾಖಲಿಸಿಕೊಳ್ಳಬಹುದು.

(2) ಈ ಪ್ರಕರಣದ ಮೇರೆಗೆ ಪಡೆದ ಸಾಕ್ಷ್ಯವನ್ನು ಮೌಖಿಕವಾಗಿಯಾಗಲಿ, ಅಥವಾ ಭದ್ರತಾ ಪಡೆ ನ್ಯಾಯಾಲಯಗಳ ಪುಸ್ತಕಗಳಲ್ಲಿ ಅಥವಾ ಇತರ ಸರ್ಕಾರಿ ದಾಖಲೆಗಳಲ್ಲಿನ ನಮೂದುಗಳ ರೂಪದಲ್ಲಾಗಲಿ ಅಥವಾ ಅವುಗಳಿಂದ ಪಡೆದ ಪ್ರಮಾಣೀಕೃತ ಉದ್ಧೃತ ಭಾಗಗಳ ಮೂಲಕವಾಗಲಿ ಪಡೆದುದಾಗಿರಬಹುದು; ಮತ್ತು ಅಧಿವಿಚಾರಣೆಗೆ ಒಳಪಟ್ಟ ವ್ಯಕ್ತಿಗೆ ಅವನ ಹಿಂದಿನ ಅಪರಾಧ ನಿರ್ಣಯಗಳ ಅಥವಾ ಚಾರಿತ್ರ್ಯದ ಬಗೆಗಿನ ಸಾಕ್ಷ್ಯವನ್ನು ಸ್ವೀಕರಿಸಲಾಗುವುದೆಂದು ಅಧಿವಿಚಾರಣೆಗೆ ಮುಂಚೆ ನೋಟೀಸು ನೀಡುವ ಅವಶ್ಯಕತೆ ಇರತಕ್ಕದ್ದಲ್ಲ.

(3) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದಲ್ಲಿ ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು, ಅವನು ಸೂಕ್ತವೆಂದು ಭಾವಿಸಿದರೆ, ಅಪರಾಧಿಯ ವಿರುದ್ಧದ ಯಾವುದೇ ಹಿಂದಿನ ಅಪರಾಧ ನಿರ್ಣಯಗಳನ್ನು, ಅವನ ಸಾಮಾನ್ಯ ಚಾರಿತ್ರ್ಯವನ್ನು, ಮತ್ತು ಅವನ ಸ್ವಂತ ತಿಳುವಳಿಕೆಗೆ ಬಂದಿರುವ ನಿಯಮಿಸಬಹುದಾದಂಥ ಇತರೆ ವಿಷಯಗಳನ್ನು, ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಅವುಗಳನ್ನು ರುಜುವಾತುಪಡಿಸಲು ಅಗತ್ಯಪಡಿಸುವ ಬದಲಾಗಿ ದಾಖಲು ಮಾಡಬಹುದು.

**96. ಆಪಾದಿತನ ಮನೋವಿಕಲತೆ.–** (1) ಭದ್ರತಾ ಪಡೆ ನ್ಯಾಯಾಲಯವು ಆಪಾದನೆಗೊಳಗಾದ ವ್ಯಕ್ತಿಯು ತನ್ನ ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಅಸ್ವಸ್ಥ ಚಿತ್ತತೆಯ ಕಾರಣದಿಂದಾಗಿ ಅಸಮರ್ಥನಾಗಿದ್ದನೆಂದು ಅಥವಾ ಆಪಾದಿಸಲಾದ ಕೃತ್ಯವನ್ನು ಅವನು ಮಾಡಿದ್ದರೂ, ಅಸ್ವಸ್ಥಚಿತ್ತತೆಯ ಕಾರಣದಿಂದಾಗಿ ಆ ಕೃತ್ಯದ ಸ್ವರೂಪವನ್ನು ತಿಳಿಯಲು ಅಥವಾ ಅದು ತಪ್ಪಾದುದೆಂದು ಅಥವಾ ಕಾನೂನಿಗೆ ವಿರುದ್ಧವಾದುದೆಂದು ತಿಳಿಯಲು ಅಸಮರ್ಥನಾಗಿರುವನೆಂದು ನ್ಯಾಯಾಲಯಕ್ಕೆ ಕಂಡುಬಂದಾಗ, ನ್ಯಾಯಾಲಯವು ತದನುಸಾರವಾಗಿ ನಿರ್ಣಯವನ್ನು ದಾಖಲು ಮಾಡತಕ್ಕದ್ದು.

(2) ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು, ಸ್ಥಿರೀಕರಿಸುವ ಅಧಿಕಾರಿಗೆ, ಅಥವಾ ಸಂದರ್ಭಾನುಸಾರ, 111ನೇ ಪ್ರಕರಣದ ಮೇರೆಗೆ ಅದರ ನಿರ್ಣಯವನ್ನು ಕುರಿತು ವ್ಯವಹರಿಸಲು ಅಧಿಕಾರ ಪಡೆದ ಪ್ರಾಧಿಕಾರಿಗೆ ಪ್ರಕರಣವನ್ನು ಆ ಕೂಡಲೇ ವರದಿ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಯಾರಿಗೆ ಪ್ರಕರಣವನ್ನು ವರದಿ ಮಾಡಲಾಗಿದೆಯೋ ಆ ಸ್ಥಿರೀಕರಣ ಅಧಿಕಾರಿಯು, ನಿರ್ಣಯವನ್ನು ಸ್ಥಿರೀಕರಿಸದಿದ್ದರೆ, ಆಪಾದಿತ ವ್ಯಕ್ತಿಯು ಯಾವ ಆಪಾದನೆಗೆ ಒಳಗಾಗಿರುತ್ತಾನೋ ಆ ಅಪರಾಧಕ್ಕಾಗಿ ಅದೇ ಅಥವಾ ಮತ್ತೊಂದು ಭದ್ರತಾ ಪಡೆ ನ್ಯಾಯಾಲಯದಿಂದ ಅವನನ್ನು ಅಧಿವಿಚಾರಣೆಗೊಳಪಡಿಸುವಂತೆ ಕ್ರಮ ಕೈಗೊಳ್ಳತಕ್ಕದ್ದು.

(4) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯವನ್ನು (2)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಾಧಿಕಾರಿಗೆ ವರದಿ ಮಾಡಲಾಗಿದೆಯೋ ಆ ಪ್ರಾಧಿಕಾರಿಯು ಮತ್ತು ಅವನಿಗೆ ಹಾಗೆ ವರದಿ ಮಾಡಲಾದ ಯಾವುದೇ ಪ್ರಕರಣದಲ್ಲಿ ನಿರ್ಣಯವನ್ನು ಸ್ಥಿರೀಕರಿಸುವ ಸ್ಥಿರೀಕರಣ ಅಧಿಕಾರಿಯು ಆಪಾದಿತ ವ್ಯಕ್ತಿಯನ್ನು ನಿಯಮಿಸಿದ ರೀತಿಯಲ್ಲಿ ಅಭಿರಕ್ಷೆಯಲ್ಲಿಡಲು ಆದೇಶ ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರದ ಆದೇಶಗಳಿಗಾಗಿ ಪ್ರಕರಣವನ್ನು ವರದಿ ಮಾಡತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು, ಆಪಾದಿತ ವ್ಯಕ್ತಿಯನ್ನು ಮನೋವಿಕಲರ ರಕ್ಷಣಾ ಗೃಹದಲ್ಲಿ ಅಥವಾ ಸುರಕ್ಷಿತ ಅಭಿರಕ್ಷೆಯ ಇತರೆ ಸೂಕ್ತ ಸ್ಥಳದಲ್ಲಿ ತಡೆಹಿಡಿದಿರಿಸಬೇಕೆಂದು ಆದೇಶಿಸಬಹುದು.

**97. ಮನೋವಿಕಲ ಆಪಾದಿತನು ಅಧಿವಿಚಾರಣೆಗೆ ತರುವಾಯದಲ್ಲಿ ಯೋಗ್ಯನಾಗುವುದು.–** ಯಾರೇ ಆಪಾದಿತ ವ್ಯಕ್ತಿಯು ಮನಸ್ಸಿನ ಅಸ್ವಸ್ಥತೆಯ ಕಾರಣದಿಂದಾಗಿ ತನ್ನ ಪ್ರತಿರಕ್ಷೆ ಮಾಡಿಕೊಳ್ಳಲು ಅಸಮರ್ಥನಾಗಿರುವನೆಂದು ಕಂಡುಬಂದಲ್ಲಿ ಮತ್ತು ಅವನು 96ನೇ ಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವಲ್ಲಿ ಅಥವಾ ತಡೆಹಿಡಿದಿರಿಸಿರುವಲ್ಲಿ, ಈ ಬಗ್ಗೆ ನೇಮಿಸಲಾದ ಯಾರೇ ಅಧಿಕಾರಿಯು,–

(ಎ) ಅಂಥ ವ್ಯಕ್ತಿಯು 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿದ್ದರೆ, ಅವನು ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಸಮರ್ಥನಾಗಿದ್ದಾನೆಂದು ವೈದ್ಯಾಧಿಕಾರಿಯು ವರದಿ ಮಾಡಿದಾಗ; ಅಥವಾ

(ಬಿ) ಅಂಥ ವ್ಯಕ್ತಿಯನ್ನು 96ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸೆರೆಮನೆಯಲ್ಲಿ ತಡೆಹಿಡಿದಿರಿಸಿದ್ದರೆ, ಅವನು ತನ್ನ ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಸಮರ್ಥನಾಗಿದ್ದಾನೆಂದು ಕಾರಾಗೃಹಗಳ ಮಹಾ ನಿರೀಕ್ಷಕರ ಪ್ರಮಾಣಪತ್ರದ ಮೇಲೆ ಮತ್ತು ಅಂಥ ವ್ಯಕ್ತಿಯನ್ನು ಸದರಿ ಉಪಪ್ರಕರಣದ ಮೇರೆಗೆ ಮನೋವಿಕಲರ ರಕ್ಷಣಾ ಗೃಹದಲ್ಲಿ ತಡೆಹಿಡಿದಿರಿಸಿದ್ದರೆ, ಅಂಥ ರಕ್ಷಣಾಗೃಹದ ಯಾರೇ ಇಬ್ಬರು ಅಥವಾ ಹೆಚ್ಚು ಸಂದರ್ಶಕರ ಪ್ರಮಾಣಪತ್ರದ ಮೇಲೆ ಮತ್ತು ಆ ಉಪ ಪ್ರಕರಣದ ಮೇರೆಗೆ ಇತರೆ ಯಾವುದೇ ಸ್ಥಳದಲ್ಲಿ ಅವನನ್ನು ತಡೆಹಿಡಿದಿರಿಸಿದ್ದರೆ, ನಿಯಮಿಸಿದ ಪ್ರಾಧಿಕಾರದ ಪ್ರಮಾಣಪತ್ರದ ಮೇಲೆ

– ಅವನು ಮೊದಲು ಯಾವ ಅಪರಾಧಕ್ಕಾಗಿ ಆಪಾದಿತನಾಗಿರುವನೋ ಆ ಅಪರಾಧಕ್ಕಾಗಿ ಅದೇ ಅಥವಾ ಮತ್ತೊಂದು ಭದ್ರತಾ ಪಡೆ ನ್ಯಾಯಾಲಯದಿಂದ ಅಥವಾ ಆ ಅಪರಾಧವು ಸಿವಿಲ್ ಅಪರಾಧವಾಗಿದ್ದರೆ ಕ್ರಿಮಿನಲ್ ನ್ಯಾಯಾಲಯದಿಂದ ಅಂಥ ವ್ಯಕ್ತಿಯನ್ನು ಅಧಿವಿಚಾರಣೆಗೆ ಒಳಪಡಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**98. 97ನೇ ಪ್ರಕರಣದ ಮೇರೆಗೆ ಮಾಡಿದ ಆದೇಶಗಳನ್ನು ಕೇಂದ್ರ ಸರ್ಕಾರಕ್ಕೆ ರವಾನಿಸುವುದು.–** ಆಪಾದಿತನ ಅಧಿವಿಚಾರಣೆಗಾಗಿ 97ನೇ ಪ್ರಕರಣದ ಮೇರೆಗೆ ಒಬ್ಬ ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಕೂಡಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**99. ಮನೋವಿಕಲ ಆಪಾದಿತನ ಬಿಡುಗಡೆ.–** ಯಾರೇ ವ್ಯಕ್ತಿಯು 96ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವಲ್ಲಿ ಅಥವಾ ಅದೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಅವನನ್ನು ತಡೆಹಿಡಿದಿರಿಸಿರುವಲ್ಲಿ,–

(ಎ) ಅಂಥ ವ್ಯಕ್ತಿಯು ಸದರಿ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿದ್ದರೆ, ವೈದ್ಯಾಧಿಕಾರಿಯ ವರದಿಯ ಮೇಲೆ; ಅಥವಾ

(ಬಿ) ಅಂಥ ವ್ಯಕ್ತಿಯನ್ನು ಸದರಿ (5)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿರಿಸಿದ್ದರೆ, ಅಂಥ ಅಧಿಕಾರಿಯ ಅಥವಾ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯು ತನಗಾಗಲಿ ಅಥವಾ ಇತರ ಯಾರೇ ವ್ಯಕ್ತಿಗಾಗಲಿ ಕ್ಷತಿಯನ್ನುಂಟುಮಾಡುವ ಅಪಾಯವಿಲ್ಲವೆಂದು 97ನೇ ಪ್ರಕರಣದ (ಬಿ) ಖಂಡದಲ್ಲಿ ಹೇಳಿರುವ ಪ್ರಾಧಿಕಾರಿಗಳ ಪೈಕಿ ಯಾರೇ ಪ್ರಾಧಿಕಾರಿಯಿಂದ ಪಡೆದ ಪ್ರಮಾಣಪತ್ರದ ಮೇಲೆ

– ಕೇಂದ್ರ ಸರ್ಕಾರವು ಅಂಥ ವ್ಯಕ್ತಿಯನ್ನು ಬಿಡುಗಡೆ ಮಾಡಬೇಕೆಂದು ಅಥವಾ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಬೇಕೆಂದು ಅಥವಾ ಅವನನ್ನು ಸರ್ಕಾರಿ ಮನೋವಿಕಲ ರಕ್ಷಣಾಲಯಕ್ಕೆ ಈಗಾಗಲೇ ಕಳುಹಿಸಿರದಿದ್ದರೆ ಅವನನ್ನು ಆ ರಕ್ಷಣಾಲಯಕ್ಕೆ ವರ್ಗಾಯಿಸಬೇಕೆಂದು ಅದೇಶಿಸಬಹುದು.

**100. ಮನೋವಿಕಲ ಆಪಾದಿತನನ್ನು ಅವನ ಸಂಬಂಧಿಗಳಿಗೆ ಒಪ್ಪಿಸುವುದು.–** 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವ ಅಥವಾ ಆ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿರಿಸಿರುವ ಯಾರೇ ವ್ಯಕ್ತಿಯ ಯಾರೇ ಸಂಬಂಧಿ ಅಥವಾ ಸ್ನೇಹಿತನು ತಡೆಹಿಡಿದಿರಿಸಿರುವ ವ್ಯಕ್ತಿಯನ್ನು ತನ್ನ ರಕ್ಷಣೆಗೆ ಮತ್ತು ಅಭಿರಕ್ಷೆಗೆ ಒಪ್ಪಿಸಬೇಕೆಂದು ಇಚ್ಛಿಸಿದಲ್ಲಿ, ಕೇಂದ್ರ ಸರ್ಕಾರವು, ಅಂಥ ಸಂಬಂಧಿ ಅಥವಾ ಸ್ನೇಹಿತನ ಅರ್ಜಿಯ ಮೇಲೆ, ಮತ್ತು, ಒಪ್ಪಿಸಿದ

ಆ ವ್ಯಕ್ತಿಯ ರಕ್ಷಣೆಯನ್ನು ಸರಿಯಾಗಿ ಮಾಡುತ್ತೇವೆಂದು ಮತ್ತು ತನಗೆ ಅಥವಾ ಯಾರೇ ಇತರೆ ಅಧಿಕಾರಿಗೆ ಕ್ಷತಿಯನ್ನು ಉಂಟುಮಾಡುವುದರಿಂದ ತಡೆಯುತ್ತೇವೆಂದು ಮತ್ತು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂತಹ ಅಧಿಕಾರಿಯ ಪರಿಶೀಲನೆಗಾಗಿ ಮತ್ತು ಅಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಹಾಜರುಪಡಿಸಲಾಗುವುದೆಂದು ಮನದಟ್ಟಾಗುವಂತೆ ಭದ್ರತೆ ನೀಡಿದ ಮೇಲೆ, ಅಂಥ ವ್ಯಕ್ತಿಯನ್ನು ಅಂಥ ಸಂಬಂಧಿ ಅಥವಾ ಸ್ನೇಹಿತನಿಗೆ ಒಪ್ಪಿಸಬೇಕೆಂದು ಆದೇಶ ಮಾಡಬಹುದು.

**101. ಅಧಿವಿಚಾರಣೆ ಇತ್ಯರ್ಥದಲ್ಲಿರುವಾಗ ಸ್ವತ್ತಿನ ಅಭಿರಕ್ಷೆಗೆ ಮತ್ತು ವಿಲೆಗೆ ಆದೇಶ.–** ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಯಾವುದೇ ಅಪರಾಧ ಮಾಡುವುದಕ್ಕಾಗಿ ಅದನ್ನು ಉಪಯೋಗಿಸಲಾಗಿದೆಯೋ ಆ ಸ್ವತ್ತನ್ನು ಅಧಿವಿಚಾರಣೆ ನಡೆಯುವ ಅವಧಿಯಲ್ಲಿ ಭದ್ರತಾ ಪಡೆ ನ್ಯಾಯಾಲಯದ ಮುಂದೆ ಅದನ್ನು ಹಾಜರುಪಡಿಸಿದಾಗ, ನ್ಯಾಯಾಲಯವು, ಅಧಿವಿಚಾರಣೆಯು ಮುಕ್ತಾಯಗೊಳ್ಳುವವರೆಗೆ ಅಂಥ ಸ್ವತ್ತಿನ ಸೂಕ್ತ ಅಭಿರಕ್ಷೆಗೆ ಅದು ಯೋಗ್ಯವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು ಮತ್ತು ಆ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವಂಥಾಗಿದ್ದರೆ, ಅದು ಅವಶ್ಯವೆಂದು ಭಾವಿಸಬಹುದಾದಂಥ ಸಾಕ್ಷ್ಯವನ್ನು ದಾಖಲಿಸಿಕೊಂಡ ತರುವಾಯ ಅದನ್ನು ಮಾರಾಟ ಮಾಡಲು ಅಥವಾ ಅನ್ಯಥಾ ವಿಲೆ ಮಾಡಲು ಆದೇಶಿಸಬಹುದು.

**102. ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೋ ಆ ಸ್ವತ್ತಿನ ವಿಲೆಗೆ ಆದೇಶ.–** (1) ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಮುಂದಿರುವ ಅಧಿವಿಚಾರಣೆಯು ಮುಕ್ತಾಯವಾದ ನಂತರ, ನ್ಯಾಯಾಲಯವು ಅಥವಾ ಅಂಥ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರಿಯು, ಅಥವಾ ಅಂಥ ಅಧಿಕಾರಿಗೆ ವರಿಷ್ಠವಾಗಿರುವ ಯಾವುದೇ ಪ್ರಾಧಿಕಾರವು ಅಥವಾ ಯಾರ ನಿರ್ಣಯಕ್ಕೆ ಅಥವಾ ಶಿಕ್ಷೆಗೆ ಸ್ಥಿರೀಕರಣದ ಅಗತ್ಯವಿಲ್ಲವೋ ಆ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಯಾರ ಕಮಾಂಡಿನಲ್ಲಿ ಅಧಿವಿಚಾರಣೆ ನಡೆಯಿತೋ ಅಂಥ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಅಥವಾ ತನ್ನ ಅಭಿರಕ್ಷೆಯಲ್ಲಿರುವ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಕಂಡುಬರುವುದೋ ಅಥವಾ ಆ ಯಾವುದೇ ಅಪರಾಧ ಮಾಡುವುದಕ್ಕಾಗಿ ಯಾವ ಸ್ವತ್ತನ್ನು ಬಳಸಲಾಗಿದೆಯೋ ಆ ಯಾವುದೇ ಸ್ವತ್ತನ್ನು ಅಥವಾ ದಸ್ತಾವೇಜನ್ನು ನಾಶಪಡಿಸುವ ಮೂಲಕ, ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ, ಅದರ ಸ್ವಾಧೀನಕ್ಕೆ ಹಕ್ಕುಳ್ಳವನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಗೆ ಅದನ್ನು ಒಪ್ಪಿಸುವ ಮೂಲಕ ಅಥವಾ ಅನ್ಯಥಾ ವಿಲೆ ಮಾಡಲು ಅದು ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು.

(2) ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧ ಮಾಡಲಾಗಿದೆ ಎಂದು ಕಂಡುಬಂದಿರುವುದೋ ಆ ಸ್ವತ್ತಿನ ಸಂಬಂಧದಲ್ಲಿ 1ನೇ ಉಪಪ್ರಕರಣದ ಮೇರೆಗೆ ಯಾವುದೇ ಆದೇಶ ಮಾಡಿರುವಲ್ಲಿ ಅಧಿವಿಚಾರಣೆ ಭಾರತದೊಳಗಡೆ ಆಗಿರಲಿ ಅಥವಾ ಆಗದಿರಲಿ ಆ ಆದೇಶವನ್ನು ಮಾಡಿರುವ ಅಧಿಕಾರಿಯು ಸಹಿ ಮಾಡಿದ ಮತ್ತು ಅನುಪ್ರಮಾಣಿಸಿದ ಒಂದು ಪ್ರತಿಯನ್ನು ತತ್ಕಾಲದಲ್ಲಿ ಅಂಥ ಸ್ವತ್ತು ಯಾವ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿಯೊಳಗೆ ಇದೆಯೋ ಆ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು ಮತ್ತು ಆ ಮ್ಯಾಜಿಸ್ಟ್ರೇಟನು ತದನಂತರ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳ ಮೇರೆಗೆ ಅವನೇ ಆ ಆದೇಶವನ್ನು ಹೊರಡಿಸಿದ್ದರೆ ಹೇಗೋ ಹಾಗೆ ಅದನ್ನು ಕಾರ್ಯಗತವಾಗುವಂತೆ ಮಾಡಿಸತಕ್ಕದ್ದು.

(3) ಈ ಪ್ರಕರಣದಲ್ಲಿ 'ಸ್ವತ್ತು' ಎಂಬ ಪದವು, ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧ ಮಾಡಲಾಗಿದೆ ಎಂದು ಕಂಡುಬಂದಿರುವುದೋ, ಆ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಮೂಲತಃ ಇದ್ದಂಥ ಸ್ವತ್ತೇ ಅಲ್ಲದೆ, ಯಾವ ಸ್ವತ್ತಿನೊಳಗೆ ಅಥವಾ ಅದಕ್ಕೆ ಪರಿವರ್ತಿಸಲಾಗಿದೆಯೋ ಅಥವಾ ವಿನಿಮಯ ಮಾಡಿಕೊಳ್ಳಲಾಗಿದೆಯೋ ಆ ಯಾವುದೇ ಸ್ವತ್ತನ್ನು ಮತ್ತು ಕೂಡಲೇ ಅಥವಾ ಅನ್ಯಥಾ ಅಂಥ ಪರಿವರ್ತನೆಯಿಂದ ಅಥವಾ ವಿನಿಮಯದಿಂದ ಆರ್ಜಿಸಿದ ಯಾವುದೂ ಸಹ ಒಳಗೊಳ್ಳುತ್ತದೆ.

**103. ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು.–**
ಈ ಅಧಿನಿಯಮದ ಉಪಬಂಧಗಳ ಮೇರೆಗೆ ಭದ್ರತಾ ಪಡೆ ನ್ಯಾಯಾಲಯದಿಂದ ನಡೆಯುವ ಯಾವುದೇ ಅಧಿವಿಚಾರಣೆಯನ್ನು ಭಾರತ ದಂಡ ಸಂಹಿತೆ (1860ರ 45)ಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನಡೆಯುವ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು ಮತ್ತು ಭದ್ರತಾ ಪಡೆ ನ್ಯಾಯಾಲಯವನ್ನು ದಂಡ ಪ್ರಕ್ರಿಯಾ

ಸಂಹಿತೆ, 1973ರ (1974ರ 2) 345ನೇ ಮತ್ತು 346ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ನ್ಯಾಯಾಲಯವೆಂದು ಭಾವಿಸತಕ್ಕದ್ದು.

## ಅಧ್ಯಾಯ VIII

## ಸ್ಥಿರೀಕರಣ ಮತ್ತು ಪುನರೀಕ್ಷಣೆ

**104. ನಿರ್ಣಯ ಮತ್ತು ಶಿಕ್ಷೆಯು ಸ್ಥಿರೀಕೃತವಾದ ಹೊರತು ಸಿಂಧುವಾಗದಿರುವುದು.–** ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದ ನಿರ್ಣಯವು ಅಥವಾ ಶಿಕ್ಷೆಯು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅದು ಸ್ಥಿರೀಕೃತವಾಗಬಹುದಾದಷ್ಟರ ಮಟ್ಟಿಗೆ ಹೊರತು ಸಿಂಧುವಾಗತಕ್ಕದ್ದಲ್ಲ.

**105. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ.–** ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯಗಳನ್ನು ಮತ್ತು ಶಿಕ್ಷೆಗಳನ್ನು ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯು ಸ್ಥಿರೀಕರಿಸಬಹುದು.

**106. ಭದ್ರತಾ ಪಡೆ ಲಘು ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ.–** ಭದ್ರತಾ ಪಡೆ ಲಘು ನ್ಯಾಯಾಲಯಗಳ ನಿರ್ಣಯಗಳನ್ನು ಮತ್ತು ಶಿಕ್ಷೆಗಳನ್ನು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ ಹೊಂದಿರುವ ಅಧಿಕಾರಿಯು ಅಥವಾ ಪ್ರಾಧಿಕಾರವು ಅಥವಾ ಅಂಥ ಪ್ರಾಧಿಕಾರಿಯ ಅಥವಾ ಅಧಿಕಾರಿಯ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯು ಸ್ಥಿರೀಕರಿಸಬಹುದು.

**107. ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರಗಳ ಮೇಲೆ ಪರಿಮಿತಿ.–** 105ನೇ ಪ್ರಕರಣದ ಅಥವಾ 106ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟು, ಅದನ್ನು ಹೊರಡಿಸುವ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳನ್ನು, ಪರಿಬಂಧಗಳನ್ನು ಅಥವಾ ಷರತ್ತುಗಳನ್ನು ಒಳಗೊಂಡಿರತಕ್ಕದ್ದು.

**108. ಶಿಕ್ಷೆಗಳನ್ನು ಕಡಿಮೆ ಮಾಡುವುದಕ್ಕೆ, ಮಾಫಿ ಮಾಡುವುದಕ್ಕೆ ಅಥವಾ ಪರಿವರ್ತಿಸುವುದಕ್ಕೆ ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರ.–** 105ನೇ ಪ್ರಕರಣದ ಅಥವಾ 106ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ವಾರಂಟಿನಲ್ಲಿ ಒಳಗೊಂಡಿರಬಹುದಾದಂಥ ನಿರ್ಬಂಧಗಳಿಗೆ, ಪರಿಬಂಧಗಳಿಗೆ ಅಥವಾ ಷರತ್ತುಗಳಿಗೊಳಪಟ್ಟು ಭದ್ರತಾ ಪಡೆ ನ್ಯಾಯಾಲಯದ ಶಿಕ್ಷೆಯನ್ನು ಸ್ಥಿರೀಕರಿಸುವಾಗ ಅದು ನೀಡಿದ ದಂಡನೆಯನ್ನು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು ಅಥವಾ 47ನೇ ಪ್ರಕರಣದಲ್ಲಿ ಗೊತ್ತುಪಡಿಸಿರುವ ಪ್ರಮಾಣದಲ್ಲಿ ಹೇಳಿರುವ ಯಾವುದೇ ಕಡಿಮೆ ಶಿಕ್ಷೆಗೆ ಅಥವಾ ಶಿಕ್ಷೆಗಳಿಗೆ ಆ ಶಿಕ್ಷೆಯನ್ನು ಪರಿವರ್ತಿಸಬಹುದು ಅಥವಾ ಅಧಿವಿಚಾರಣೆಯು ಕಾನೂನುಬಾಹಿರವಾದುದೆಂದು ಕಂಡುಬಂದರೆ ಅದರ ವ್ಯವಹರಣೆಗಳನ್ನು ತಳ್ಳಿಹಾಕಬಹುದು.

**109. ನಿರ್ಣಯದ ಅಥವಾ ಶಿಕ್ಷೆಯ ಪುನರೀಕ್ಷಣೆ.–** (1) ಭದ್ರತಾ ಪಡೆ ನ್ಯಾಯಾಲಯದ ಯಾವ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸಲು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸುವ ಪ್ರಾಧಿಕಾರದ ಆದೇಶದ ಮೂಲಕ ಒಮ್ಮೆ ಪುನರೀಕ್ಷಿಸಬಹುದು ಮತ್ತು ಹಾಗೆ ಪುನರೀಕ್ಷಿಸಿದ ಮೇಲೆ ನ್ಯಾಯಾಲಯವು, ಸ್ಥಿರೀಕರಿಸುವ ಪ್ರಾಧಿಕಾರವು ಹೆಚ್ಚಿನ ಸಾಕ್ಷ್ಯವನ್ನು ಪಡೆಯಬಹುದೆಂದು ನಿರ್ದೇಶಿಸಿದರೆ, ಅದನ್ನು ಪಡೆಯಬಹುದು.

(2) ಪುನರೀಕ್ಷಣೆಯಲ್ಲಿ ನ್ಯಾಯಾಲಯವು, ಮೂಲ ತೀರ್ಮಾನವನ್ನು ಹೊರಡಿಸಿದ್ದಾಗ ಹಾಜರಿದ್ದಂಥ ಅಧಿಕಾರಿಗಳನ್ನೇ, ಆ ಅಧಿಕಾರಿಗಳಲ್ಲಿ ಯಾರಾದರೂ ಅನಿವಾರ್ಯವಾಗಿ ಗೈರುಹಾಜರಾದ ಹೊರತು ಒಳಗೊಂಡಿರತಕ್ಕದ್ದು.

(3) ಅಂಥ ಅನಿವಾರ್ಯ ಗೈರು ಹಾಜರಿಯ ಸಂದರ್ಭದಲ್ಲಿ ಅದರ ಕಾರಣವನ್ನು ವ್ಯವಹರಣೆಗಳಲ್ಲಿ ಯುಕ್ತವಾಗಿ ಪ್ರಮಾಣೀಕರಿಸತಕ್ಕದ್ದು, ಮತ್ತು ನ್ಯಾಯಾಲಯವು ಪುನರೀಕ್ಷಣೆಯನ್ನು ಮುಂದುವರಿಸತಕ್ಕದ್ದು. ಪರಂತು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವಾಗಿದ್ದರೆ, ಅದು ಐವರು ಅಧಿಕಾರಿಗಳನ್ನು ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯವಾಗಿದ್ದರೆ ಮೂವರು ಅಧಿಕಾರಿಗಳನ್ನು ಆಗಲೂ ಒಳಗೊಂಡಿರತಕ್ಕದ್ದು.

**110. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆ.–** ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಗತ್ಯವಿರತಕ್ಕದ್ದಲ್ಲ. ಆದರೆ ಕೂಡಲೇ ಅದನ್ನು ಕಾರ್ಯಗತಗೊಳಿಸಬಹುದು.

**111. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ವ್ಯವಹರಣೆಗಳ ರವಾನೆ.–** ಪ್ರತಿಯೊಂದು ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ವ್ಯವಹರಣೆಗಳನ್ನು, ವಿಳಂಬ ಮಾಡದೆ, ಯಾರ ಕಮಾಂಡಿನೊಳಗೆ ಅಧಿವಿಚಾರಣೆ ನಡೆಯಿತೋ ಆ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗೆ ಅಥವಾ ನಿಯಮಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅಥವಾ ಮಹಾನಿರ್ದೇಶಕನು ಅಥವಾ ಈ ಬಗ್ಗೆ ಅವನಿಂದ ಅಧಿಕಾರ ಪಡೆದ ಯಾರೇ ಅಧಿಕಾರಿಯು, ಮೊಕದ್ದಮೆಯ ಗುಣಾವಗುಣಗಳ ಮೇಲೆ ಆಧಾರಿತವಾದ ಕಾರಣಗಳಿಗಾಗಿ, ವ್ಯವಹರಣೆಗಳನ್ನು ರದ್ದುಪಡಿಸಬಹುದೇ ಹೊರತು ತಾಂತ್ರಿಕ ಕಾರಣಗಳ ಮೇಲೆ ಮಾತ್ರವೇ ಅಲ್ಲ ಅಥವಾ ನ್ಯಾಯಾಲಯವು ವಿಧಿಸಬಹುದಾಗಿದ್ದಂಥ ಯಾವುದೇ ಇತರೆ ಶಿಕ್ಷೆಗೆ ಆ ಶಿಕ್ಷೆಯನ್ನು ಇಳಿಸಬಹುದು.

**112. ಕೆಲವು ಸಂದರ್ಭಗಳಲ್ಲಿ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಬದಲಾಯಿಸುವುದು.–** (1) ಸ್ಥಿರೀಕರಿಸಿದ ಅಥವಾ ಸ್ಥಿರೀಕರಿಸುವ ಅಗತ್ಯವಿರದ, ಭದ್ರತಾ ಪಡೆ ನ್ಯಾಯಾಲಯವು ತಪ್ಪಿತಸ್ಥನೆಂದು ಮಾಡಿದ ನಿರ್ಣಯವು, ಯಾವುದೇ ಕಾರಣದಿಂದ ಅಸಿಂಧುವೆಂದು ಕಂಡುಬಂದಿರುವಲ್ಲಿ ಅಥವಾ ಸಾಕ್ಷ್ಯದ ಮೂಲಕ ಸಮರ್ಥನೆ ಮಾಡಲಾಗದಿರುವಲ್ಲಿ, ಶಿಕ್ಷೆಯಾಗಿ ನೀಡಿದ ದಂಡನೆಯನ್ನು ಪರಿವರ್ತಿಸಲು 124ನೇ ಪ್ರಕರಣದ ಮೇರೆಗೆ ಅಧಿಕಾರ ಹೊಂದಿರಬಹುದಾಗಿದ್ದಂಥ ಪ್ರಾಧಿಕಾರವು, ಆ ನಿರ್ಣಯವು ಸಿಂಧುವಾಗಿದ್ದರೆ, ಒಂದು ಹೊಸ ನಿರ್ಣಯವನ್ನು ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿರ್ಣಯದಲ್ಲಿ ನಿರ್ದಿಷ್ಟಪಡಿಸಿದ ಅಥವಾ ಒಳಗೊಂಡ ಅಪರಾಧಕ್ಕಾಗಿ ಶಿಕ್ಷೆ ವಿಧಿಸಬಹುದು:

ಪರಂತು, ಅಂಥ ಯಾವುದೇ ಪ್ರತ್ಯಾಯೋಜನೆಯನ್ನು, ಆಪಾದನೆಯ ಮೇಲೆ ಭದ್ರತಾ ಪಡೆ ನ್ಯಾಯಾಲಯವು ಅಂಥ ನಿರ್ಣಯವನ್ನು ಕ್ರಮಬದ್ಧವಾಗಿ ಮಾಡಿರಬಹುದಾಗಿದ್ದ ಹೊರತು ಮತ್ತು ಭದ್ರತಾ ಪಡೆ ನ್ಯಾಯಾಲಯವು ಸದರಿ ಅಪರಾಧವನ್ನು ರುಜುವಾತುಪಡಿಸುವ ಸಂಗತಿಗಳ ಬಗ್ಗೆ ಮನದಟ್ಟು ಮಾಡಿಕೊಂಡಿದೆಯೆಂದು ಕಂಡುಬಂದ ಹೊರತು ಮಾಡತಕ್ಕದ್ದಲ್ಲ.

(2) ಸ್ಥಿರೀಕರಣಗೊಂಡಿರುವ ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಿರುವ, (1)ನೇ ಉಪಪ್ರಕರಣದ ಮೇರೆಗೆ ಬದಲಿಗೆ ಪ್ರತ್ಯಾಯೋಜಿಸಿದ ನಿರ್ಣಯದ ಅನುಸಾರವಾಗಿ ವಿಧಿಸಿದ ಶಿಕ್ಷೆಯಾಗಿರದ ಭದ್ರತಾ ಪಡೆ ನ್ಯಾಯಾಲಯವು ವಿಧಿಸಿರುವ ಶಿಕ್ಷೆಯು ಯಾವುದೇ ಕಾರಣಕ್ಕಾಗಿ ಅಸಿಂಧುವೆಂದು ಕಂಡುಬಂದರೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಾಧಿಕಾರವು ಸಿಂಧುವಾಗಿರುವ ಶಿಕ್ಷೆಯನ್ನು ವಿಧಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಿದ ಶಿಕ್ಷೆಯ ಮೂಲಕ ನೀಡಿದ ದಂಡನೆಯು, ಈ ಪ್ರಕರಣದ ಮೇರೆಗೆ ಯಾವ ಶಿಕ್ಷೆಗೆ ಬದಲಾಗಿ ಶಿಕ್ಷೆಯನ್ನು ಪ್ರತ್ಯಾಯೋಜಿಸಿದ ಆ ಶಿಕ್ಷೆಯಾಗಿ ನೀಡಿದ ದಂಡನೆಗಿಂತ ಅಥವಾ ಅದನ್ನು ಮೀರಿ ದಂಡನೆಗಳ ಪ್ರಮಾಣದಲ್ಲಿ ಹೆಚ್ಚಿನದ್ದಾಗಿರತಕ್ಕದ್ದಲ್ಲ.

(4) ಪ್ರತ್ಯಾಯೋಜಿಸಿದ ಯಾವುದೇ ನಿರ್ಣಯವು, ಅಥವಾ ಈ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಶಿಕ್ಷೆಯು ಈ ಅಧಿನಿಯಮದ ಮತ್ತು ನಿಯಮಗಳ ಉದ್ದೇಶಗಳಿಗಾಗಿ ಅವು ಭದ್ರತಾ ಪಡೆ ನ್ಯಾಯಾಲಯದ ನಿರ್ಣಯ ಅಥವಾ ಸಂದರ್ಭಾನುಸಾರ ಶಿಕ್ಷೆಯಾಗಿದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**113. ಭದ್ರತಾ ಪಡೆ ನ್ಯಾಯಾಲಯದ ಆದೇಶದ, ನಿರ್ಣಯದ ಅಥವಾ ಶಿಕ್ಷೆಯ ಸಂಬಂಧದಲ್ಲಿ ಪರಿಹಾರ.–** (1) ಯಾವುದೇ ಭದ್ರತಾ ಪಡೆ ನ್ಯಾಯಾಲಯವು ಮಾಡಿದ ಯಾವುದೇ ಆದೇಶದಿಂದ ತಾನು ಬಾಧಿತನಾಗಿದ್ದೇನೆಂದು ಭಾವಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅಂಥ ಭದ್ರತಾ ಪಡೆ ನ್ಯಾಯಾಲಯದ ಯಾವುದೇ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸಲು ಅಧಿಕಾರ ಪಡೆದ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಸ್ಥಿರೀಕರಿಸುವ ಪ್ರಾಧಿಕಾರಿಯು ಹೊರಡಿಸಿದ ಆದೇಶದ ಸರಿತನದ, ಕಾನೂನು ಸಮ್ಮತತೆಯ ಅಥವಾ ಅದರ ಔಚಿತ್ಯದ ಬಗ್ಗೆ ಅಥವಾ ಆ ಆದೇಶವು ಯಾವ ವ್ಯವಹರಣೆಗೆ ಸಂಬಂಧಿಸಿದೆಯೋ ಅದರ ಕ್ರಮಬದ್ಧತೆ ಬಗ್ಗೆ ತಾನೇ ಸ್ವತಃ ಮನದಟ್ಟು ಮಾಡಿಕೊಳ್ಳಲು ಅಗತ್ಯವೆಂದು ಪರಿಗಣಿಸುವಂಥ ಕ್ರಮಗಳನ್ನು ಕೈಗೊಳ್ಳಬಹುದು.

(2) ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಸ್ಥಿರೀಕರಣಗೊಂಡ ನಿರ್ಣಯದಿಂದ ಅಥವಾ ಶಿಕ್ಷೆಯಿಂದ ತಾನು ಬಾಧಿತನಾಗಿದ್ದೇನೆಂದು ಭಾವಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರಕ್ಕೆ, ಮಹಾ ನಿರ್ದೇಶಕನಿಗೆ ಅಥವಾ ಅಂಥ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಯಾರು ಸ್ಥಿರೀಕರಿಸಿದ್ದಾರೋ ಅವರಿಗೆ ಕಮಾಂಡಿನಲ್ಲಿ ವರಿಷ್ಠರಾಗಿರುವ ಯಾರೇ ನಿಯಮಿಸಿದ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರವು, ಮಹಾ ನಿರ್ದೇಶಕನು ಅಥವಾ ಸಂದರ್ಭಾನುಸಾರ ನಿಯಮಿಸಿದ ಅಧಿಕಾರಿಯು, ಅದು ಅಥವಾ ಅವನು ಆ ಬಗ್ಗೆ ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

**114. ವ್ಯವಹರಣೆಗಳನ್ನು ರದ್ದುಗೊಳಿಸುವುದು.–** ಕೇಂದ್ರ ಸರ್ಕಾರವು, ಮಹಾನಿರ್ದೇಶಕನು ಅಥವಾ ಮಹಾ ನಿರೀಕ್ಷಕನು ಯಾವುದೇ ಭದ್ರತಾ ಪಡೆ ನ್ಯಾಯಾಲಯದ ವ್ಯವಹರಣೆಗಳನ್ನು, ಅವು ಕಾನೂನುಬಾಹಿರ ಅಥವಾ ನ್ಯಾಯೋಚಿತವಾದುವಲ್ಲವೆಂಬ ಕಾರಣಗಳ ಮೇಲೆ ರದ್ದುಗೊಳಿಸಬಹುದು.

## ಅಧ್ಯಾಯ IX

### ಶಿಕ್ಷೆಯನ್ನು ಜಾರಿಗೊಳಿಸುವುದು, ಕ್ಷಮಾದಾನ, ಮಾಫಿ, ಇತ್ಯಾದಿ

**115. ಮರಣ ದಂಡನೆಯ ರೀತಿ.–** ಮರಣದಂಡನೆಯನ್ನು ವಿಧಿಸುವಾಗ, ಭದ್ರತಾ ಪಡೆ ನ್ಯಾಯಾಲಯವು ತನ್ನ ವಿವೇಚಾನುಸಾರ, ಅಪರಾಧಿಯು ಮರಣ ಹೊಂದುವವರೆಗೆ ಅಪರಾಧಿಯ ಕುತ್ತಿಗೆಗೆ ನೇಣು ಹಾಕುವುದರಿಂದ ಅವನು ಮರಣವನ್ನು ಹೊಂದತಕ್ಕದ್ದು ಅಥವಾ ಆತನಿಗೆ ಬಂದೂಕಿನಿಂದ ಗುಂಡುಹಾರಿಸುವ ಮೂಲಕ ಆತನು ಮರಣವನ್ನು ಹೊಂದತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು.

**116. ಕಾರಾವಾಸದ ಶಿಕ್ಷೆಯ ಪ್ರಾರಂಭ.–** ಈ ಅಧಿನಿಯಮದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವು ಯಾರೇ ವ್ಯಕ್ತಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗ, ಅವನ ಶಿಕ್ಷೆಯ ಅವಧಿಯನ್ನು, ಅದನ್ನು ಪರಿಷ್ಕರಿಸಿರಲಿ ಅಥವಾ ಇಲ್ಲದಿರಲಿ, ಯಾವ ದಿನದಂದು ಮೂಲ ವ್ಯವಹರಣೆಗಳಿಗೆ ಪೀಠಾಸೀನ ಅಧಿಕಾರಿಯು ಸಹಿ ಮಾಡಿದ್ದನೋ ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಆ ನ್ಯಾಯಾಲಯವು ಸಹಿ ಮಾಡಿತ್ತೋ ಆ ದಿನದಂದು ಪ್ರಾರಂಭವಾಗಿರುವುದಾಗಿ ಲೆಕ್ಕ ಹಾಕತಕ್ಕದ್ದು:

ಪರಂತು, ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತ ವ್ಯಕ್ತಿಗೆ ಶಿಕ್ಷೆಯನ್ನು ವಿಧಿಸಲಾಯಿತೋ ಆ ಪ್ರಕರಣದ ತನಿಖೆಯ, ವಿಚಾರಣೆಯ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಮತ್ತು ಯಾವ ದಿನಾಂಕದಂದು ಮೂಲ ವ್ಯವಹರಣೆಗಳಿಗೆ ಸಹಿ ಮಾಡಲಾಗಿತ್ತೋ ಆ ದಿನಾಂಕಕ್ಕೆ ಮುಂಚೆ ಅವನು ಅನುಭವಿಸಿದ್ದ, ತಡೆಹಿಡಿದಿರಿಸಿದ್ದ ಅಥವಾ ಬಂಧನದಲ್ಲಿದ್ದ ಅವಧಿ ಯಾವುದಾದರೂ ಇದ್ದರೆ, ಅದನ್ನು ಶಿಕ್ಷೆಯ ಅವಧಿಯಲ್ಲಿ ವಜಾವಟ್ಟು ಮಾಡತಕ್ಕದ್ದು ಮತ್ತು ಕಾರಾವಾಸವನ್ನು ಅನುಭವಿಸಲು ಅಂಥ ವ್ಯಕ್ತಿಗೆ ಇರುವ ಹೊಣೆಗಾರಿಕೆಯನ್ನು ಅವನ ಶಿಕ್ಷೆಯ ಉಳಿದ ಅವಧಿ ಯಾವುದಾದರೂ ಇದ್ದರೆ ಅಷ್ಟಕ್ಕೆ ಸೀಮಿತಗೊಳಿಸತಕ್ಕದ್ದು.

**117. ಕಾರಾವಾಸ ಶಿಕ್ಷೆಯನ್ನು ಜಾರಿಗೊಳಿಸುವುದು.–** (1) ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಯಾವುದೇ ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗಲೆಲ್ಲಾ ಅಥವಾ ಯಾವುದೇ ಮರಣದಂಡನೆಯ ಶಿಕ್ಷೆಯನ್ನು ಕಾರಾವಾಸಕ್ಕೆ ತಗ್ಗಿಸಿದಾಗಲೆಲ್ಲಾ, ಸ್ಥಿರೀಕರಣಗೊಳಿಸುವ ಅಧಿಕಾರಿಯು, ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ನ್ಯಾಯಾಲಯವನ್ನು ನಡೆಸುತ್ತಿರುವ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ಇತರ ಅಧಿಕಾರಿಯು, (3) ಮತ್ತು (4)ನೇ ಉಪಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಆ ಶಿಕ್ಷೆಯನ್ನು, ಸಿವಿಲ್ ಕಾರಾಗೃಹದಲ್ಲಿ ಬಂಧನದಲ್ಲಿಡುವುದರ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ದೇಶನವನ್ನು ನೀಡಿರುವಾಗ, ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯ ಕಮಾಂಡರ್‌ನು ಅಥವಾ ನಿಯಮಿಸಬಹುದಾದಂಥ ಇತರೆ ಅಧಿಕಾರಿಯು ನಿಯಮಿಸಿದ ನಮೂನೆಯಲ್ಲಿ ವಾರಂಟನ್ನು, ಅಂಥ ವ್ಯಕ್ತಿಯನ್ನು ಯಾವ ಕಾರಾಗೃಹದಲ್ಲಿ ತಡೆಹಿಡಿದಿರಿಸಲಾಗುವುದೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ವಾರಂಟಿನೊಂದಿಗೆ ಆ ಕಾರಾಗೃಹಕ್ಕೆ ಅವನನ್ನು ಕಳುಹಿಸಲು ಏರ್ಪಾಟು ಮಾಡತಕ್ಕದ್ದು.

(3) ಮೂರು ತಿಂಗಳನ್ನು ಮೀರದ ಅವಧಿಯ ಮತ್ತು ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ವಿಧಿಸಿದ ಕಾರಾವಾಸ ಶಿಕ್ಷೆಯ ಸಂದರ್ಭದಲ್ಲಿ, (1)ನೇ ಉಪಪ್ರಕರಣದ ಮೇರೆಗಿನ ಸಮುಚಿತ ಅಧಿಕಾರಿಯು ಶಿಕ್ಷೆಯನ್ನು ಸಿವಿಲ್ ಕಾರಾಗೃಹದ ಬದಲಾಗಿ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಬಂಧನದಲ್ಲಿಡುವುದರ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

(4) ಸಕ್ರಿಯ ಕರ್ತವ್ಯದ ಮೇಲೆ ಇದ್ದಾಗ ಕಾರಾವಾಸ ಶಿಕ್ಷೆಯನ್ನು, ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯು ಯಾರ ಕಮಾಂಡಿನಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಉಪ ಮಹಾನಿರೀಕ್ಷಕನು ಅಥವಾ ಯಾರೇ ನಿಯಮಿಸಿದ ಅಧಿಕಾರಿಯು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಸ್ಥಳದಲ್ಲಿ ಆತನನ್ನು ಬಂಧನದಲ್ಲಿಡುವ ಮೂಲಕ ಕಾರ್ಯಗತಗೊಳಿಸತಕ್ಕದ್ದು.

**118. ಅಪರಾಧಿಯ ತಾತ್ಕಾಲಿಕ ಅಭಿರಕ್ಷೆ.–** ಕಾರಾವಾಸದ ಶಿಕ್ಷೆಯನ್ನು ಸಿವಿಲ್ ಕಾರಾಗೃಹದಲ್ಲಿ ಅನುಭವಿಸುವಂತೆ ನಿರ್ದೇಶಿಸಿರುವಲ್ಲಿ, ಅಪರಾಧಿಯನ್ನು, ಸಿವಿಲ್ ಕಾರಾಗೃಹಕ್ಕೆ ಕಳುಹಿಸಲು ಸಾಧ್ಯವಾಗುವಂಥ ಕಾಲದವರೆಗೆ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಅಥವಾ ಯಾವುದೇ ಇತರೆ ಸೂಕ್ತ ಸ್ಥಳದಲ್ಲಿಡಬಹುದು.

**119. ವಿಶೇಷ ಸಂದರ್ಭಗಳಲ್ಲಿ ಕಾರಾವಾಸ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು.–** ಯಾರ ಕಮಾಂಡಿನಲ್ಲಿ ಅಧಿವಿಚಾರಣೆ ನಡೆಯಿತೋ ಆ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು, ಕಾರಾವಾಸದ ಯಾವುದೇ ಶಿಕ್ಷೆಯನ್ನು ಅಥವಾ ಅದರ ಭಾಗವನ್ನು ವಿಶೇಷ ಕಾರಣಗಳಿಗಾಗಿ, 117ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಭದ್ರತಾ ಪಡೆಯ ಅಭಿರಕ್ಷೆಯಲ್ಲಿ ಕಾರ್ಯಗತಗೊಳಿಸಲು ಆಗುವುದಿಲ್ಲವೆಂದು ಅಭಿಪ್ರಾಯಪಟ್ಟಾಗಲೆಲ್ಲಾ, ಅಂಥ ಅಧಿಕಾರಿಯು ಅಂಥ ಶಿಕ್ಷೆಯನ್ನು ಅಥವಾ ಶಿಕ್ಷೆಯ ಭಾಗವನ್ನು ಯಾವುದೇ ಸಿವಿಲ್ ಕಾರಾಗೃಹದಲ್ಲಿ ಅಥವಾ ಇತರೆ ಸೂಕ್ತ ಸ್ಥಳದಲ್ಲಿ ಬಂಧನದಲ್ಲಿಡುವ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

**120. ಸ್ಥಳದಿಂದ ಸ್ಥಳಕ್ಕೆ ಕೈದಿಯನ್ನು ಸಾಗಿಸುವುದು.–** ಕಾರಾವಾಸ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವಾಗ ಅಥವಾ ಹಡಗಿನಲ್ಲಿ, ವಿಮಾನದಲ್ಲಿ ಅಥವಾ ಅನ್ಯಥಾ ಅವನನ್ನು ಸಾಗಿಸುವಾಗ ಅವನನ್ನು ಜೋಪಾನವಾಗಿ ಕರೆದೊಯ್ಯಲು ಮತ್ತು ಸ್ಥಳಾಂತರಿಸಲು ಅವಶ್ಯವಿರುವಂಥ ನಿರ್ಬಂಧಗಳಿಗೊಳಪಡಿಸಿರತಕ್ಕದ್ದು.

**121. ಕೆಲವು ಆದೇಶಗಳನ್ನು ಕಾರಾಗೃಹ ಅಧಿಕಾರಿಗಳಿಗೆ ತಿಳಿಸುವುದು.–** ಯಾವ ಶಿಕ್ಷೆಯ, ಆದೇಶದ ಅಥವಾ ವಾರೆಂಟಿನ ಮೇರೆಗೆ ಯಾರೇ ವ್ಯಕ್ತಿಯನ್ನು ಸಿವಿಲ್ ಕಾರಾಗೃಹದಲ್ಲಿ ಬಂಧಿಸಿಡಲಾಗಿದೆಯೋ ಆ ಯಾವುದೇ ಶಿಕ್ಷೆಯನ್ನು, ಆದೇಶವನ್ನು ಅಥವಾ ವಾರೆಂಟನ್ನು ರದ್ದುಪಡಿಸುವ ಅಥವಾ ವ್ಯತ್ಯಾಸಗೊಳಿಸುವ ಆದೇಶವನ್ನು ಈ ಅಧಿನಿಯಮದ ಮೇರೆಗೆ ಯಥೋಚಿತವಾಗಿ ಮಾಡಿದಾಗಲೆಲ್ಲಾ, ಅಂಥ ಆದೇಶದ ಅನುಸಾರವಾಗಿ ಹೊರಡಿಸಿದ ವಾರಂಟನ್ನು ಆ ಆದೇಶವನ್ನು ಮಾಡುವ ಅಧಿಕಾರಿಯು ಅಥವಾ ಅವನ ಸಿಬ್ಬಂದಿ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ಇತರೆ ವ್ಯಕ್ತಿಯು, ಯಾವ ಕಾರಾಗೃಹದಲ್ಲಿ ಅಂಥ ವ್ಯಕ್ತಿಯನ್ನು ಬಂಧಿಸಿಡಲಾಗಿದೆಯೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸತಕ್ಕದ್ದು.

**122. ಜುಲ್ಮಾನೆಯ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು.–** 45ನೇ ಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವು ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಿದಾಗ, ಸ್ಥಿರೀಕರಿಸುವ ಅಧಿಕಾರಿಯು ಸಹಿ ಮಾಡಿದ ಮತ್ತು ಪ್ರಮಾಣೀಕರಿಸಿದ ಅಂಥ ಶಿಕ್ಷೆಯ ಆದೇಶದ ಒಂದು ಪ್ರತಿಯನ್ನು ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಿರುವಲ್ಲಿ, ಅಧಿವಿಚಾರಣೆ ನಡೆಸುವ ಅಧಿಕಾರಿಯು ಭಾರತದಲ್ಲಿನ ಯಾರೇ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು ಮತ್ತು ಆ ಮ್ಯಾಜಿಸ್ಟ್ರೇಟನು, ತದನಂತರ, ಅಂಥ ಮ್ಯಾಜಿಸ್ಟ್ರೇಟನು ವಿಧಿಸಿದ ಜುಲ್ಮಾನೆಯ ಶಿಕ್ಷೆಯಾಗಿದಿದ್ದರೆ ಹೇಗೋ ಹಾಗೆ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳ ಅನುಸಾರವಾಗಿ ದಂಡವನ್ನು ವಸೂಲಿ ಮಾಡಿಸತಕ್ಕದ್ದು.

**123. ಆದೇಶ ಅಥವಾ ವಾರಂಟಿನಲ್ಲಿನ ಅನೌಪಚಾರಿಕತೆ ಅಥವಾ ತಪ್ಪು.–** ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಾಗ ಮತ್ತು ಈ ಅಧಿನಿಯಮದ ಅನುಸಾರವಾಗಿ ಕಾನೂನುಸಮ್ಮತ ಆದೇಶದ ಅಥವಾ ವಾರಂಟಿನ ಮೇರೆಗೆ ಯಾವ ಸ್ಥಳದಲ್ಲಿ ಅಥವಾ ರೀತಿಯಲ್ಲಿ ಅವನನ್ನು ಬಂಧಿಸಿಡಬಹುದಾಗಿದೆಯೋ ಆ ಯಾವುದೇ ಸ್ಥಳದಲ್ಲಿ ಅಥವಾ ರೀತಿಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವಾಗ ಅಂಥ ವ್ಯಕ್ತಿಯ ಬಂಧನವನ್ನು, ಯಾವ ಆದೇಶದ, ವಾರೆಂಟಿನ ಅಥವಾ ಇತರ ದಸ್ತಾವೇಜಿನ ಅಥವಾ ಅಧಿಕಾರದ ಅಥವಾ ಯಾವುದರ ಅನುಸಾರವಾಗಿ ಅಂಥ ವ್ಯಕ್ತಿಯನ್ನು ಅಂಥ ಯಾವುದೇ ಸ್ಥಳಕ್ಕೆ ತರಲಾಯಿತೋ ಅಥವಾ ಆ ಸ್ಥಳದಲ್ಲಿ ಬಂಧಿಸಿಡಲಾಯಿತೋ ಆ ಯಾವುದೇ ಆದೇಶದಲ್ಲಿ,

ವಾರೆಂಟಿನಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಅಥವಾ ಪ್ರಾಧಿಕಾರಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅನೌಪಚಾರಿಕತೆ ಅಥವಾ ತಪ್ಪು ಇರುವ ಕಾರಣಮಾತ್ರದಿಂದಲೇ ಕಾನೂನು ಬಾಹಿರವಾದುದೆಂದು ಭಾವಿಸತಕ್ಕದ್ದಲ್ಲ, ಮತ್ತು ಯಾವುದೇ ಅಂಥ ಆದೇಶವನ್ನು, ವಾರಂಟನ್ನು ಅಥವಾ ದಸ್ತಾವೇಜನ್ನು ತದನುಸಾರವಾಗಿ ತಿದ್ದುಪಡಿ ಮಾಡಬಹುದು.

**124. ಕ್ಷಮೆ ಮತ್ತು ಮಾಫಿ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣಯಿಸಿದಾಗ, ಕೇಂದ್ರ ಸರ್ಕಾರವು ಅಥವಾ ಮಹಾನಿರ್ದೇಶಕನು ಅಥವಾ ಅವನು ಸ್ಥಿರೀಕರಿಸಬಹುದಾಗಿದ್ದಂಥ ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಂಥ ಶಿಕ್ಷೆಯ ಸಂದರ್ಭದಲ್ಲಿ, ಯಾರ ಕಮಾಂಡಿನೊಳಗೆ ಅಂಥ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ವ್ಯಕ್ತಿಯು ಸೇವೆ ಸಲ್ಲಿಸುತ್ತಿದ್ದನೋ ಆ ಉಪ ಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಅಥವಾ ನಿಯಮಿಸಿದ ಪ್ರಾಧಿಕಾರಿಯು,–

(ಎ) ಶಿಕ್ಷೆಗೊಳಗಾದ ವ್ಯಕ್ತಿಯು ಒಪ್ಪಿದರೆ ಷರತ್ತು ಸಹಿತ ಅಥವಾ ಷರತ್ತುಗಳಿಲ್ಲದೆಯೇ ಅವನನ್ನು ಕ್ಷಮಿಸಬಹುದು, ನೀಡಿದ ಇಡೀ ಶಿಕ್ಷೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾಫಿ ಮಾಡಬಹುದು; ಅಥವಾ

(ಬಿ) ನೀಡಲಾದ ದಂಡನೆಯನ್ನು ಕಡಿಮೆ ಮಾಡಬಹುದು; ಅಥವಾ

(ಸಿ) ಅಂಥ ದಂಡನೆಯನ್ನು, ಯಾವುದೇ ಕಡಿಮೆ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಲಾದ ದಂಡನೆಗಳಿಗೆ ತಗ್ಗಿಸಬಹುದು; ಅಥವಾ

(ಡಿ) ಶಿಕ್ಷೆಗೊಳಗಾದ ವ್ಯಕ್ತಿಯು ಷರತ್ತುಗಳ ಸಹಿತ ಅಥವಾ ಷರತ್ತುಗಳಿಲ್ಲದೆಯೇ ಒಪ್ಪಿದರೆ ಪೆರೋಲಿನ ಮೇಲೆ ಆ ವ್ಯಕ್ತಿಯನ್ನು ಬಿಡುಗಡೆ ಮಾಡಬಹುದು.

**125. ಷರತ್ತು ಪೂರ್ವಕ ಕ್ಷಮೆಯನ್ನು, ಪೆರೋಲಿನ ಮೇಲಿನ ಬಿಡುಗಡೆಯನ್ನು ಅಥವಾ ಮಾಫಿಯನ್ನು ರದ್ದುಪಡಿಸುವುದು.–** (1) ಯಾವ ಷರತ್ತಿನ ಮೇಲೆ ವ್ಯಕ್ತಿಯನ್ನು ಕ್ಷಮಿಸಲಾಗಿತ್ತೋ ಅಥವಾ ಪೆರೋಲಿನ ಮೇಲೆ ಬಿಡುಗಡೆ ಮಾಡಲಾಗಿತ್ತೋ ಅಥವಾ ಶಿಕ್ಷೆಯನ್ನು ಮಾಫಿ ಮಾಡಲಾಗಿತ್ತೋ ಆ ಷರತ್ತನ್ನು, ಆ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ಮಂಜೂರು ಮಾಡಿದ ಪ್ರಾಧಿಕಾರಿಯು ಅದನ್ನು ಈಡೇರಿಸಿಲ್ಲವೆಂದು ಅಭಿಪ್ರಾಯಪಟ್ಟರೆ, ಆ ಪ್ರಾಧಿಕಾರಿಯು ಅಂಥ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ರದ್ದುಪಡಿಸಬಹುದು ಮತ್ತು ತದನಂತರ, ಅಂಥ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ಮಂಜೂರು ಮಾಡಿದಿಲ್ಲದಿದ್ದರೆ ಹೇಗೋ ಹಾಗೆ ನ್ಯಾಯಾಲಯದ ಶಿಕ್ಷೆಯನ್ನು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಯಾರೇ ವ್ಯಕ್ತಿಯ ಕಾರಾವಾಸದ ಶಿಕ್ಷೆಯನ್ನು ಕಾರ್ಯಗತಗೊಳಿಸಲಾಯಿತೋ ಆ ವ್ಯಕ್ತಿಯು ಅವನ ಶಿಕ್ಷೆಯ ಪೂರ್ಣವಾಗದೆ ಉಳಿದ ಭಾಗವನ್ನು ಮಾತ್ರ ಅನುಭವಿಸತಕ್ಕದ್ದು.

**126. ಕಾರಾವಾಸ ಶಿಕ್ಷೆಯ ಅಮಾನತು.–** (1) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಲ್ಲಿ, ಕೇಂದ್ರ ಸರ್ಕಾರವು, ಮಹಾ ನಿರ್ದೇಶಕನು ಅಥವಾ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಅಧಿಕಾರ ಪಡೆದ ಯಾರೇ ಅಧಿಕಾರಿಯು, ಅಪರಾಧಿಯನ್ನು ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಈಗಾಗಲೇ ಒಪ್ಪಿಸಿರಲಿ ಅಥವಾ ಒಪ್ಪಿಸಿಲ್ಲದಿರಲಿ ಶಿಕ್ಷೆಯನ್ನು ಅಮಾನತುಗೊಳಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಹಾಗೆ ಶಿಕ್ಷೆಗೆ ಗುರಿಪಡಿಸಲಾದ ಅಪರಾಧಿಯ ಸಂದರ್ಭದಲ್ಲಿ, ಅಂಥ ಪ್ರಾಧಿಕಾರವು ಅಥವಾ ಅಧಿಕಾರಿಯು ಮಾಡಿದ ಆದೇಶಗಳನ್ನು ಪಡೆಯುವವರೆಗೆ ಅಪರಾಧಿಯನ್ನು ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಒಪ್ಪಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(3) ಸ್ಥಿರೀಕರಿಸಿದ, ಕಡಿಮೆ ಮಾಡಿದ ಅಥವಾ ತಗ್ಗಿಸಿದ ಯಾವುದೇ ಅಂಥ ಶಿಕ್ಷೆಯ ಸಂದರ್ಭದಲ್ಲಿ (1)ನೇ ಮತ್ತು (2)ನೇ ಉಪಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು.

**127. ಅಮಾನತು ಇತ್ಯರ್ಥದಲ್ಲಿರುವಾಗ ಆದೇಶಗಳು.–** (1) 126ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಶಿಕ್ಷೆಯನ್ನು, ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಹೊರತುಪಡಿಸಿ, ಭದ್ರತಾ ಪಡೆ ನ್ಯಾಯಾಲಯವು ವಿಧಿಸಿರುವಲ್ಲಿ ಸ್ಥಿರೀಕರಿಸುವ ಅಧಿಕಾರಿಯು, ಶಿಕ್ಷೆಯನ್ನು ಸ್ಥಿರೀಕರಿಸುವಾಗ, 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಅಥವಾ ಅಧಿಕಾರಿಯ ಆದೇಶಗಳನ್ನು ಪಡೆಯುವವರೆಗೆ ಕಾರಾವಾಸಕ್ಕೆ ಅಥವಾ ಭದ್ರತಾ ಪಡೆ ಅಭಿರಕ್ಷೆಗೆ ಅಪರಾಧಿಯನ್ನು ಒಪ್ಪಿಸಬಾರದೆಂದು ನಿರ್ದೇಶಿಸಬಹುದು.

(2) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಲ್ಲಿ, ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿರ್ದೇಶನವನ್ನು ನೀಡಬಹುದು.

**128. ಅಮಾನತ್ತಿನ ಮೇಲಿರುವಾಗ ಬಿಡುಗಡೆ.–**126ನೇ ಪ್ರಕರಣದ ಮೇರೆಗೆ ಶಿಕ್ಷೆಯನ್ನು ಅಮಾನತ್ತುಗೊಳಿಸಿರುವಲ್ಲಿ ಅಪರಾಧಿಯನ್ನು ತತ್‌ಕ್ಷಣವೇ ಅಭಿರಕ್ಷೆಯಿಂದ ಬಿಡುಗಡೆ ಮಾಡತಕ್ಕದ್ದು.

**129. ಅಮಾನತ್ತಿನ ಅವಧಿಯನ್ನು ಲೆಕ್ಕಹಾಕುವುದು.–** ಯಾವ ಅವಧಿಯಲ್ಲಿ ಶಿಕ್ಷೆಯನ್ನು ಅಮಾನತ್ತಿನಲ್ಲಿಡಲಾಯಿತೋ ಆ ಯಾವುದೇ ಅವಧಿಯನ್ನು ಅಂಥ ಶಿಕ್ಷೆಯ ಅವಧಿಯ ಭಾಗವೆಂಬುದಾಗಿ ಲೆಕ್ಕ ಹಾಕತಕ್ಕದ್ದು.

**130. ಅಮಾನತ್ತಿನ ನಂತರದ ಆದೇಶ.–** 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರಾಧಿಕಾರವು ಅಥವಾ ಅಧಿಕಾರಿಯು, ಶಿಕ್ಷೆಯನ್ನು ಅಮಾನತುಗೊಳಿಸಿರುವಾಗ ಯಾವುದೇ ಕಾಲದಲ್ಲಿ,–

(ಎ) ಆ ಅಪರಾಧಿಯು ಶಿಕ್ಷೆಯು ಪೂರ್ಣವಾಗದೆ ಉಳಿದ ಅವಧಿಯನ್ನು ಅನುಭವಿಸಲು ಅವನನ್ನು ಒಪ್ಪಿಸುವಂತೆ; ಅಥವಾ

(ಬಿ) ಶಿಕ್ಷೆಯನ್ನು ಮಾಫಿ ಮಾಡುವಂತೆ

– ಆದೇಶಿಸಬಹುದು.

**131. ಅಮಾನತ್ತಿನ ನಂತರ ಪ್ರಕರಣದ ಪುನರ್ ಪರಿಶೀಲನೆ.–** (1) ಶಿಕ್ಷೆಯನ್ನು ಅಮಾನತುಗೊಳಿಸಿರುವಲ್ಲಿ, ಪ್ರಕರಣವನ್ನು ಯಾವುದೇ ಕಾಲದಲ್ಲಿ, ಮತ್ತು ನಾಲ್ಕು ತಿಂಗಳಿಗಿಂತ ಹೆಚ್ಚಿಲ್ಲದ ಅಂತರಗಳಲ್ಲಿ, 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಅಥವಾ 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಯಥೋಚಿತವಾಗಿ ಅಧಿಕೃತಗೊಳಿಸಿದ ಉಪ ಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಯಾರೇ ಅಧಿಕಾರಿಯು ಪುನರ್ ಪರಿಶೀಲಿಸಬಹುದು.

(2) ಹಾಗೆ ಅಧಿಕೃತಗೊಂಡ ಅಧಿಕಾರಿಯು ಅಂಥ ಪುನರ್ ಪರಿಶೀಲನೆ ಮಾಡಿದ ಮೇಲೆ ಅವನಿಗೆ ಅಪರಾಧಿಯ ನಡತೆಯು ಅವನ ಅಪರಾಧ ನಿರ್ಣಯವಾದಂದಿನಿಂದ ಶಿಕ್ಷೆಯನ್ನು ಮಾಫಿ ಮಾಡುವುದನ್ನು ಸಮರ್ಥಿಸುತ್ತದೆಂದು ಕಂಡುಬಂದಲ್ಲಿ, ಅವನು ವಿಷಯವನ್ನು 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಉಲ್ಲೇಖಿಸತಕ್ಕದ್ದು.

**132. ಅಮಾನತ್ತಿನ ನಂತರ ಹೊಸ ಶಿಕ್ಷೆ.–** ಈ ಅಧಿನಿಯಮದ ಮೇರೆಗೆ ಅಪರಾಧಿಗೆ ವಿಧಿಸಿದ ಶಿಕ್ಷೆಯು ಅಮಾನತಿನಲ್ಲಿರುವಾಗ ಇತರ ಯಾವುದೇ ಅಪರಾಧಕ್ಕಾಗಿ ಅಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಿರುವಲ್ಲಿ, ಆಗ,–

(ಎ) ಈ ಅಧಿನಿಯಮದ ಮೇರೆಗೆ ಆ ಹೆಚ್ಚಿನ ಶಿಕ್ಷೆಯನ್ನೂ ಸಹ ಅಮಾನತ್ತಿನಲ್ಲಿಟ್ಟಿದ್ದರೆ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದು;

(ಬಿ) ಹೆಚ್ಚಿನ ಶಿಕ್ಷೆಯು ಮೂರು ತಿಂಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯದಾಗಿದ್ದು, ಈ ಅಧಿನಿಯಮದ ಮೇರೆಗೆ ಅಮಾನತುಗೊಳ್ಳದಿರುವಾಗ, ಹಿಂದಿನ ಶಿಕ್ಷೆಯ ಪೂರ್ಣವಾಗದೆ ಉಳಿದ ಅವಧಿಗಾಗಿ ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಅಪರಾಧಿಯನ್ನು ಒಪ್ಪಿಸತಕ್ಕದ್ದು, ಆದರೆ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದು; ಮತ್ತು

(ಸಿ) ಹೆಚ್ಚಿನ ಶಿಕ್ಷೆಯು ಮೂರು ತಿಂಗಳಿಗಿಂತ ಕಡಿಮೆ ಅವಧಿಯದಾಗಿದ್ದರೆ ಮತ್ತು ಈ ಅಧಿನಿಯಮದ ಮೇರೆಗೆ ಅಮಾನತುಗೊಳ್ಳದಿರುವಾಗ, ಅಪರಾಧಿಯನ್ನು ಆ ಶಿಕ್ಷೆಗಾಗಿ ಮಾತ್ರವೇ ಒಪ್ಪಿಸತಕ್ಕದ್ದು, ಮತ್ತು ಹಿಂದಿನ ಶಿಕ್ಷೆಯು 130ನೇ ಪ್ರಕರಣದ ಅಥವಾ 131ನೇ ಪ್ರಕರಣದ ಮೇರೆಗೆ ಹೊರಡಿಸಬಹುದಾದ ಯಾವುದೇ ಆದೇಶಕ್ಕೊಳಪಟ್ಟು ಅಮಾನತ್ತಿನಲ್ಲಿರುವುದು ಮುಂದುವರೆಯತಕ್ಕದ್ದು.

**133. ಅಮಾನತ್ತಿನಲ್ಲಿಡುವ ಅಧಿಕಾರದ ವ್ಯಾಪ್ತಿ.–** 126ನೇ ಮತ್ತು 130ನೇ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳು ಕಡಿಮೆ ಮಾಡುವ, ಮಾಫಿ ಮಾಡುವ ಮತ್ತು ತಗ್ಗಿಸುವ ಅಧಿಕಾರಗಳಿಗೆ ಪೂರಕವಾಗಿರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**134. ವಜಾ ಮಾಡಿದ ಮೇಲೆ ಅಮಾನತ್ತಿನ ಮತ್ತು ಮಾಫಿಯ ಪರಿಣಾಮ.–** (1) ಯಾವುದೇ ಇತರ ಶಿಕ್ಷೆಯ ಜೊತೆಗೆ ವಜಾಮಾಡುವ ದಂಡನೆಯನ್ನು ಭದ್ರತಾ ಪಡೆ ನ್ಯಾಯಾಲಯವು ನೀಡಿರುವಲ್ಲಿ, ಮತ್ತು ಅಂಥ ಇತರೆ ಶಿಕ್ಷೆಯನ್ನು 126ನೇ ಪ್ರಕರಣದ ಮೇರೆಗೆ ಅಮಾನತುಗೊಳಿಸಿರುವಲ್ಲಿ, ಆಗ, 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರವು ಅಥವಾ ಇತರೆ ಅಧಿಕಾರಿಯು ಅಂಥ ವಜಾ ಆದೇಶ ಮಾಡುವವರೆಗೆ ಅದು ಪರಿಣಾಮಕ್ಕೆ ಬರತಕ್ಕದ್ದಲ್ಲ.

(2) 130ನೇ ಪ್ರಕರಣದ ಮೇರೆಗೆ ಅಂಥ ಇತರೆ ಶಿಕ್ಷೆಯನ್ನು ಮಾಫಿ ಮಾಡಿರುವಲ್ಲಿ, ವಜಾ ದಂಡನೆಯನ್ನು ಸಹ ಮಾಫಿ ಮಾಡತಕ್ಕದ್ದು.

## ಅಧ್ಯಾಯ X

### ಸಂಕೀರ್ಣ

**135. ದರ್ಜೆಯ ರಚನೆ.–** (1) ಭದ್ರತಾ ಪಡೆಯ ಅಧಿಕಾರಿಗಳನ್ನು ಮತ್ತು ಇತರೆ ಸದಸ್ಯರನ್ನು ಈ ಮುಂದಿನ ಪ್ರವರ್ಗಗಳಲ್ಲಿ ಅವರವರ ದರ್ಜೆಗಳಿಗನುಸಾರವಾಗಿ ವರ್ಗೀಕರಿಸತಕ್ಕದ್ದು, ಎಂದರೆ:–

(ಎ) ಅಧಿಕಾರಿಗಳು,–

(i) ಮಹಾ ನಿರ್ದೇಶಕರು.

(ii) ಹೆಚ್ಚುವರಿ ಮಹಾ ನಿರ್ದೇಶಕರು.

(iii) ಮಹಾನಿರೀಕ್ಷಕರು.

(iv) ಉಪಮಹಾನಿರೀಕ್ಷಕರು.

(v) ಗ್ರೂಪ್ ಕಮಾಂಡರ್.

(vi) ಸ್ಕ್ವಾಡ್ರನ್ ಕಮಾಂಡರ್.

(vii) ಟೀಮ್ ಕಮಾಂಡರ್.

(ಬಿ) ಸಹಾಯಕ ಕಮಾಂಡರುಗಳು,–

(viii) ಸಹಾಯಕ ಕಮಾಂಡರ್ ದರ್ಜೆ I.

(ix) ಸಹಾಯಕ ಕಮಾಂಡರ್ ದರ್ಜೆ II.

(x) ಸಹಾಯಕ ಕಮಾಂಡರ್ ದರ್ಜೆ III.

(ಸಿ) ಅಧಿಕಾರಿಗಳು ಮತ್ತು ಸಹಾಯಕ ಕಮಾಂಡರುಗಳನ್ನು ಹೊರತುಪಡಿಸಿ ವ್ಯಕ್ತಿಗಳು,–

(xi) ರೇಂಜರ್ ದರ್ಜೆ I.

(xii) ರೇಂಜರ್ ದರ್ಜೆ II.

(xiii) ಹೋರಾಟದ ವೃತ್ತಿಗ.

(2) ಒಂದೇ ದರ್ಜೆಗೆ ಸೇರಿದ ವ್ಯಕ್ತಿಗಳ ಅವರವರೊಳಗಿನ ಜ್ಯೇಷ್ಠತೆಗೆ ಸಂಬಂಧಿಸಿದ ವಿಷಯಗಳನ್ನು ನಿಯಮಿಸಬಹುದಾದಂಥ ನಿಯಮಗಳ ಅನುಸಾರವಾಗಿ ತೀರ್ಮಾನಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಮಹಾನಿರ್ದೇಶಕನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಕೇಂದ್ರ ಸರ್ಕಾರದ ಸ್ಥಿರೀಕರಣಕ್ಕೊಳಪಟ್ಟು ಅಧಿಕಾರಿಗೆ ಅಥವಾ ಸಹಾಯಕ ಕಮಾಂಡರ್ ದರ್ಜೆ I ಇವರಿಗೆ ಭದ್ರತಾ ಪಡೆಯ ಉತ್ತಮ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದ ಅವನು ಅವಶ್ಯವೆಂದು ಭಾವಿಸಿದಾಗಲೆಲ್ಲಾ ಸ್ಥಳೀಯ ದರ್ಜೆ ಎಂಬುದಾಗಿ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಹೇಳಲಾದ ದರ್ಜೆಯನ್ನು ನೀಡಬಹುದು.

(4) ಸ್ಥಳೀಯ ದರ್ಜೆಯನ್ನು ಹೊಂದಿರುವ ಅಧಿಕಾರಿ ಅಥವಾ ಸಹಾಯಕ ಕಮಾಂಡರನು,–

(ಎ) ಆ ದರ್ಜೆಯನ್ನು ಹೊಂದಿರುವ ಒಬ್ಬ ಅಧಿಕಾರಿಯ ಕಮಾಂಡನ್ನು ಚಲಾಯಿಸತಕ್ಕದ್ದು ಮತ್ತು ಆ ಅಧಿಕಾರಗಳು ಅವನಲ್ಲಿ ನಿಹಿತವಾಗಿರತಕ್ಕದ್ದು;

(ಬಿ) ಹಾಗೆ ದರ್ಜೆ ನೀಡಿರುವುದನ್ನು ಕೇಂದ್ರ ಸರ್ಕಾರವು ಒಂದು ತಿಂಗಳೊಳಗಾಗಿ ಸ್ಥಿರೀಕರಿಸದಿದ್ದರೆ ಅಥವಾ ಮಹಾನಿರ್ದೇಶಕನು ಹಾಗೆ ಆದೇಶಿಸಿದಾಗ ಅಥವಾ ಯಾವ ನೇಮಕಕ್ಕೆ ಆ ದರ್ಜೆಯನ್ನು ನೀಡಲಾಗಿತ್ತೋ ಆ ನೇಮಕ ಹೊಂದಿರುವುದು ನಿಂತು ಹೋದಾಗ ಆ ದರ್ಜೆ ಹೊಂದಿರುವುದು ನಿಂತುಹೋಗತಕ್ಕದ್ದು;

(ಸಿ) ಅಂಥ ಸ್ಥಳೀಯ ದರ್ಜೆಯನ್ನು ಹೊಂದಿದ್ದ ಕಾರಣಮಾತ್ರದಿಂದಲೇ ಆತನು ಇತರೆ ಅಧಿಕಾರಿಗಳ ಮೇಲೆ ಯಾವುದೇ ಜ್ಯೇಷ್ಠತೆಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ; ಮತ್ತು

(ಡಿ) ಅಂಥ ದರ್ಜೆ ಹೊಂದಿರುವುದಕ್ಕಾಗಿ ಯಾವುದೇ ಹೆಚ್ಚಿನ ವೇತನ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**136. ವೇತನ ಮತ್ತು ಭತ್ಯೆಗಳಿಂದ ಕಡಿತ.–** (1) (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಕಾರಿಯ ವೇತನ ಮತ್ತು ಭತ್ಯೆಗಳಿಂದ ಈ ಮುಂದಿನ ಕಡಿತಗಳನ್ನು ಮಾಡಬಹುದು, ಎಂದರೆ:–

(ಎ) ಅನುಮತಿ ಇಲ್ಲದೆ ಗೈರುಹಾಜರಾದ ಪ್ರತಿಯೊಂದು ದಿನಕ್ಕೆ ಅವನು ತೃಪ್ತಿಕರವಾದ ವಿವರಣೆ ನೀಡಿದ ಹೊರತು ಮತ್ತು ಅವನು ತತ್ಕಾಲದಲ್ಲಿ ಯಾರ ಅಧೀನದಲ್ಲಿ ಸೇವೆ ಸಲ್ಲಿಸುತ್ತಿದ್ದಾನೋ ಆ ಮಹಾನಿರೀಕ್ಷಕನು ಅದನ್ನು ಒಪ್ಪಿಕೊಂಡಿದ್ದ ಹೊರತು, ಮತ್ತು ಕ್ರಿಮಿನಲ್ ನ್ಯಾಯಾಲಯವು ಅಥವಾ ಭದ್ರತಾ ಪಡೆ ನ್ಯಾಯಾಲಯವು ವಿಧಿಸಿದ ಕಾರಾವಾಸದ ಪ್ರತಿಯೊಂದು ದಿನಕ್ಕೆ ಅಧಿಕಾರಿಗೆ ಬರಬೇಕಾದ ಎಲ್ಲಾ ವೇತನ ಮತ್ತು ಭತ್ಯೆಗಳು;

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವೇತನವನ್ನು ಅಧಿಕಾರಿಯು ಕಾನೂನುಬಾಹಿರವಾಗಿ ಇಟ್ಟುಕೊಂಡಿದ್ದಾಗ ಅಥವಾ ಕಾನೂನುಬಾಹಿರವಾಗಿ, ಸಂದಾಯ ಮಾಡಲು ನಿರಾಕರಿಸಿದಾಗ ಆ ವೇತನವನ್ನು ತುಂಬಿಕೊಡಬೇಕಾದ ಯಾವುದೇ ಮೊತ್ತ;

(ಸಿ) ಕ್ರಿಮಿನಲ್ ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಸಂದಾಯ ಮಾಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಡಿ) ಅಧಿಕಾರಿಯು ಯಾವ ಮಹಾನಿರೀಕ್ಷಕನ ಅಧೀನದಲ್ಲಿ ತತ್ಕಾಲದಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಅಧಿಕಾರಿಯ ಅಕ್ರಮ ಕೃತ್ಯದಿಂದ ಅಥವಾ ನಿರ್ಲಕ್ಷ್ಯದಿಂದ ಸಾರ್ವಜನಿಕ ಸ್ವತ್ತಿಗೆ ಅಥವಾ ಭದ್ರತಾ ಪಡೆಗೆ ಸೇರಿದ ಸ್ವತ್ತಿಗೆ ಯಾವುದೇ ನಷ್ಟ, ಹಾನಿ ಅಥವಾ ನಾಶ ಆಗಿದೆಯೆಂದು ಯುಕ್ತ ತನಿಖೆಯ ನಂತರ ಆ ಮಹಾನಿರೀಕ್ಷಕನಿಗೆ ಕಂಡುಬಂದರೆ ಆ ಯಾವುದೇ ನಷ್ಟವನ್ನು, ಹಾನಿಯನ್ನು ಅಥವಾ ನಾಶವನ್ನು ಸರಿದೂಗಿಸಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಇ) ಅವನ ಪತ್ನಿ ಅಥವಾ ಅವನ ಔರಸ ಅಥವಾ ಔರಸನಲ್ಲದ ಮಗು ಅಥವಾ ಮಲ ಮಗುವಿನ ಜೀವನಾಂಶಕ್ಕಾಗಿ ಅಥವಾ ಸದರಿ ಪತ್ನಿ ಅಥವಾ ಮಗುವಿಗೆ ಕೇಂದ್ರ ಸರ್ಕಾರವು ನೀಡುವ ಯಾವುದೇ ಪರಿಹಾರ ವೆಚ್ಚದ ಸಂಬಂಧದಲ್ಲಿ ಸಂದಾಯ ಮಾಡಲು ಕೇಂದ್ರ ಸರ್ಕಾರದ ಆದೇಶದ ಮೂಲಕ ಅಗತ್ಯಪಡಿಸಿದ ಯಾವುದೇ ಮೊತ್ತ.

(2) (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಕಾರಿಯನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಈ ಮುಂದಿನ ಕಡಿತಗಳನ್ನು ಮಾಡಬಹುದು, ಎಂದರೆ:–

(ಎ) ತ್ಯಜಿಸಿಹೋಗಿದ್ದಕ್ಕೆ ಅಥವಾ ರಜೆ ಪಡೆಯದೆ ಹೋಗಿದ್ದಕ್ಕೆ ಗೈರುಹಾಜರಾದ ಪ್ರತಿಯೊಂದು ದಿನಕ್ಕೆ ಅವನು ತೃಪ್ತಿಕರವಾದ ವಿವರಣೆಯನ್ನು ನೀಡಿದ ಹೊರತು ಮತ್ತು ಅದನ್ನು ಕಮಾಂಡರ್‌ನು ಒಪ್ಪಿದ ಹೊರತು ಮತ್ತು ಕ್ರಿಮಿನಲ್ ನ್ಯಾಯಾಲಯವು, ಭದ್ರತಾ ಪಡೆ ನ್ಯಾಯಾಲಯವು ಅಥವಾ 51ನೇ ಪ್ರಕರಣದ ಮೇರೆಗೆ ಅಧಿಕಾರ ಚಲಾಯಿಸುವ ಅಧಿಕಾರಿಯು ವಿಧಿಸಿದ ಕಾರಾವಾಸದ ಪ್ರತಿಯೊಂದು ದಿನಕ್ಕೆ ಅವನಿಗೆ ಬರಬೇಕಾದ ಎಲ್ಲಾ ವೇತನ ಮತ್ತು ಭತ್ಯೆಗಳು;

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವೇತನವನ್ನು ಕಾನೂನುಬಾಹಿರವಾಗಿ ಉಳಿಸಿಕೊಂಡರೆ ಅಥವಾ ಕಾನೂನುಬಾಹಿರವಾಗಿ ಸಂದಾಯ ಮಾಡಲು ನಿರಾಕರಿಸಿದರೆ ಅದನ್ನು ತುಂಬಿಕೊಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಸಿ) ಅವನು ಕೇಂದ್ರ ಸರ್ಕಾರಕ್ಕೆ ಅಥವಾ ಭದ್ರತಾ ಪಡೆಯ ಯಾವುದೇ ಕಟ್ಟಡಕ್ಕೆ ಅಥವಾ ಸ್ವತ್ತಿಗೆ ಅಥವಾ ಯಾವುದೇ ಖಾಸಗಿ ನಿಧಿಗೆ ಉಂಟುಮಾಡಿದ ಯಾವುದೇ ವೆಚ್ಚಗಳಿಗಾಗಿ, ನಷ್ಟಕ್ಕಾಗಿ, ಹಾನಿಗಾಗಿ ಅಥವಾ ನಾಶಕ್ಕಾಗಿ ಅವನ ಕಮಾಂಡರನು ವಿಧಿಸಬಹುದಾದಂಥ ನಷ್ಟ ಪರಿಹಾರವನ್ನು ತುಂಬಿಕೊಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಡಿ) ಕ್ರಿಮಿನಲ್ ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಸಂದಾಯ ಮಾಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಇ) ಅವನ ಪತ್ನಿ ಅಥವಾ ಅವನ ಔರಸ ಅಥವಾ ಔರಸನಲ್ಲದ ಮಗು ಅಥವಾ ಮಲ ಮಗುವಿನ ಜೀವನಾಂಶಕ್ಕಾಗಿ ಅಥವಾ ಸದರಿ ಪತ್ನಿ ಅಥವಾ ಮಗುವಿಗೆ ಸದರಿ ಸರ್ಕಾರವು ನೀಡುವ ಯಾವುದೇ ಪರಿಹಾರ ವೆಚ್ಚದ ಸಂಬಂಧದಲ್ಲಿ ಸಂದಾಯ ಮಾಡಲು ಕೇಂದ್ರ ಸರ್ಕಾರದ ಆದೇಶದ ಮೂಲಕ ಅಗತ್ಯಪಡಿಸಿದ ಯಾವುದೇ ಮೊತ್ತ.

(3) (i) ಯಾರೇ ವ್ಯಕ್ತಿಯು ಇಡೀ ಒಂದು ದಿನದಲ್ಲಿ ಅಥವಾ ಭಾಗಶಃ ಒಂದು ದಿನದಲ್ಲಿ ಮತ್ತು ಭಾಗಶಃ ಮತ್ತೊಂದು ದಿನದಲ್ಲಿ ಸತತ ಆರು ಗಂಟೆಗಳು ಅಥವಾ ಮೇಲ್ಪಟ್ಟು ಗೈರುಹಾಜರಿ ಕಳೆದಿದ್ದ ಹೊರತು ಒಂದು ದಿವಸ ಗೈರುಹಾಜರಾಗಿರುವುದಾಗಿ ಅಥವಾ ಕಾರಾವಾಸದಲ್ಲಿರುವುದಾಗಿ ಪರಿಗಣಿಸತಕ್ಕದ್ದಲ್ಲ.

(ii) ಒಂದು ದಿನಕ್ಕಿಂತ ಕಡಿಮೆಯ ಯಾವುದೇ ಗೈರು ಹಾಜರಿಯನ್ನು ಅಥವಾ ಕಾರಾವಾಸವನ್ನು ಅಂಥ ಗೈರುಹಾಜರಿಯಿಂದಾಗಿ ಅಥವಾ ಕಾರಾವಾಸದಿಂದಾಗಿ ಯಾವ ಕರ್ತವ್ಯವನ್ನು ಬೇರೊಬ್ಬ ಸದಸ್ಯನಿಗೆ ವಹಿಸಿಕೊಟ್ಟಿರುವುದರಿಂದ ಭದ್ರತಾ ಪಡೆ ಸದಸ್ಯನಾಗಿ ಆ ಯಾವುದೇ ಕರ್ತವ್ಯವನ್ನು ನಿರ್ವಹಿಸದಂತೆ ಅದು ಗೈರುಹಾಜರಾದವನಿಗೆ ತಡೆಯುಂಟು ಮಾಡಿದ್ದರೆ ಅದನ್ನು ಒಂದು ದಿನದ ಗೈರುಹಾಜರಿಯೆಂದು ಅಥವಾ ಕಾರಾವಾಸವೆಂದು ಲೆಕ್ಕ ಹಾಕತಕ್ಕದ್ದು.

(4) (1)ನೇ ಉಪಪ್ರಕರಣದ (ಬಿ) ಯಿಂದ (ಇ) ವರೆಗಿನ ಖಂಡಗಳ ಅಥವಾ (2)ನೇ ಉಪಪ್ರಕರಣದ (ಬಿ) ಯಿಂದ (ಇ) ವರೆಗಿನ ಖಂಡಗಳ ಮೇರೆಗೆ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಮಾಡಿದ ಒಟ್ಟು ಕಡಿತಗಳು ಅವನು ವಜಾ ಶಿಕ್ಷೆಗೆ ಗುರಿಯಾಗಿದ್ದ ಹೊರತು, ಯಾವುದೇ ಒಂದು ತಿಂಗಳಲ್ಲಿ ಆ ತಿಂಗಳ ಅವನ ವೇತನದ ಮತ್ತು ಭತ್ಯೆಗಳ ಅರ್ಧದಷ್ಟನ್ನು ಮೀರತಕ್ಕದ್ದಲ್ಲ.

(5) ಯಾರೇ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಕಡಿತಗೊಳಿಸಬೇಕೆಂದು ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಮೊತ್ತವನ್ನು, ಅದನ್ನು ವಸೂಲು ಮಾಡುವ ಇತರೆ ಯಾವುದೇ ವಿಧಾನಕ್ಕೆ ಬಾಧಕವಾಗದಂತೆ ವಿಶ್ರಾಂತಿ ವೇತನವನ್ನು ಹೊರತುಪಡಿಸಿ ಅವನಿಗೆ ಬರಬೇಕಾದ ಯಾವುದೇ ಸರ್ಕಾರಿ ಹಣದಿಂದ ಕಡಿತಗೊಳಿಸಬಹುದು.

(6) ಈ ಅಧಿನಿಯಮದ ಮೇರೆಗೆ ವೇತನ ಮತ್ತು ಭತ್ಯೆಗಳಿಂದ ಕಡಿತಗೊಳಿಸಲು ಆದೇಶಿಸುವುದಕ್ಕೆ ಈ ಮುಂದಿನ ಪ್ರಾಧಿಕಾರಿಗಳು ಸಕ್ಷಮರಾಗಿರತಕ್ಕದ್ದು, ಎಂದರೆ:–

(ಎ) ಅಧಿಕಾರಿಗಳನ್ನು ಹೊರತುಪಡಿಸಿ, ಇತರೆ ವ್ಯಕ್ತಿಗಳ ಸಂದರ್ಭದಲ್ಲಿ ಗ್ರೂಪ್ ಕಮಾಂಡರುಗಳ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಕಮಾಂಡರುಗಳು;

(ಬಿ) ಅಧಿಕಾರಿಗಳ ಸಂದರ್ಭದಲ್ಲಿ ಮಹಾನಿರೀಕ್ಷಕನು.

7. ಈ ಅಧಿನಿಯಮದ ಮೇರೆಗೆ ಯಾವುದೇ ಕಡಿತವನ್ನು ಮಾಡಲು ಆದೇಶಿಸುವ ಪ್ರಾಧಿಕಾರಿಗಿಂತ ಮೇಲಿನ ಯಾವುದೇ ಪ್ರಾಧಿಕಾರವು ಸದರಿ ಕಡಿತಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಮಾಫಿ ಮಾಡಲು ಸಕ್ಷಮವಾಗಿರತಕ್ಕದ್ದು.

(8) ಅಧಿಕಾರಿಗೆ ಈ ಪ್ರಕರಣದ ಉಪಬಂಧಗಳ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಮೊದಲು ಸೂಚಿಸಿದ ಅಧಿಕಾರಿಗೆ ಕಮಾಂಡಿನಲ್ಲಿ ವರಿಷ್ಠರಾಗಿರುವ ಅಧಿಕಾರಿ ಅಥವಾ ಪ್ರಾಧಿಕಾರಿಯು ಚಲಾಯಿಸಬಹುದು.

**137. ಭದ್ರತಾ ಪಡೆ ಸದಸ್ಯರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು ಮತ್ತು ವಿಧಿಸಬಹುದಾದ ಕರ್ತವ್ಯಗಳು.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧನೆಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯಾವ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಥವಾ ಕೆಳದರ್ಜೆಯ ಅಧಿಕಾರಿಯು ಸದರಿ ಉದ್ದೇಶಗಳಿಗಾಗಿ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಚಲಾಯಿಸಲು ಅಥವಾ ನಿರ್ವಹಿಸಲು ಅಧಿಕಾರ ನೀಡಲಾಗಿದೆಯೋ ಆ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಭದ್ರತಾ ಪಡೆಯ ಯಾರೇ ಸದಸ್ಯನು ಸದರಿ ಅದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಭದ್ರತಾ ಪಡೆಯ ಯಾರೇ ಸದಸ್ಯನು ಚಲಾಯಿಸಬಹುದು ಅಥವಾ ನಿರ್ವಹಿಸಬಹುದೆಂದು ನಿರ್ದೇಶಿಸಬಹುದು.

(2) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಸಂಬಂಧಪಟ್ಟ ರಾಜ್ಯ ಸರ್ಕಾರದ ಸಮ್ಮತಿ ಪಡೆದು, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಸಂವಾದಿ ಅಥವಾ ಹೆಚ್ಚಿನ ದರ್ಜೆಯನ್ನು ಹೊಂದಿರುವ ಭದ್ರತಾ ಪಡೆ ಸದಸ್ಯರಿಗೆ ರಾಜ್ಯ ಅಧಿನಿಯಮದ ಮೇರೆಗೆ ಪೊಲೀಸ್ ಅಧಿಕಾರಿಯು ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಪ್ರದಾನ ಮಾಡಬಹುದು ಅಥವಾ ವಿಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಆದೇಶದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಆದೇಶವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**138. ಭದ್ರತಾ ಪಡೆ ಸದಸ್ಯರ ಕಾರ್ಯಗಳಿಗೆ ರಕ್ಷಣೆ.–** (1) ಸಕ್ಷಮ ಪ್ರಾಧಿಕಾರದ ವಾರಂಟಿಗೆ ಅಥವಾ ಆದೇಶಕ್ಕೆ ಅನುಸಾರವಾಗಿ ಭದ್ರತಾ ಪಡೆಯ ಯಾರೇ ಸದಸ್ಯನು ಮಾಡಿದ ಯಾವುದೇ ಕಾರ್ಯಕ್ಕಾಗಿ ಭದ್ರತಾ ಪಡೆಯ ಯಾರೇ

ಸದಸ್ಯನ ವಿರುದ್ಧ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಿದ್ದಲ್ಲಿ, ಅಂಥ ವಾರಂಟಿನ ಅಥವಾ ಆದೇಶದ ಅಧಿಕಾರದ ಮೇರೆಗೆ ಆ ಕಾರ್ಯ ಮಾಡಿದ್ದೇನೆಂದು ವಾದಿಸುವುದು ಅವನಿಗೆ ಕಾನೂನುಬದ್ಧವಾಗಿರತಕ್ಕದ್ದು.

(2) ಯಾವುದೇ ಅಂಥ ವಾದವನ್ನು, ಆ ಕಾರ್ಯಕ್ಕಾಗಿ ನಿರ್ದೇಶಿಸಿದ್ದ ವಾರಂಟನ್ನು ಅಥವಾ ಆದೇಶವನ್ನು ಹಾಜರುಪಡಿಸುವುದರ ಮೂಲಕ ರುಜುವಾತುಪಡಿಸಬಹುದು, ಮತ್ತು ಅದನ್ನು ಹಾಗೆ ರುಜುವಾತುಪಡಿಸಿದರೆ ಭದ್ರತಾ ಪಡೆ ಸದಸ್ಯನು ಅಂಥ ವಾರಂಟನ್ನು ಅಥವಾ ಆದೇಶವನ್ನು ಹೊರಡಿಸಿದ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ನ್ಯೂನ್ಯತೆ ಇದ್ದಾಗ್ಯೂ ಅವನು ಹಾಗೆ ಮಾಡಿದ ಕಾರ್ಯದ ಸಂಬಂಧದಲ್ಲಿ ಅವನನ್ನು ಹೊಣೆಗಾರಿಕೆಯಿಂದ ವಿಮೋಚನೆಗೊಳಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಥವಾ ಈ ಅಧಿನಿಯಮದ ಅಥವಾ ನಿಯಮಗಳ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಅಥವಾ ಅದರ ಮೂಲಕ ಪ್ರದತ್ತವಾದ ಅಧಿಕಾರಗಳ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಭದ್ರತಾ ಪಡೆಯ ಯಾರೇ ಸದಸ್ಯನ ವಿರುದ್ಧ ಕಾನೂನುಬದ್ಧವಾಗಿ ತರಬಹುದಾಗಿದ್ದಂಥ ಯಾವುದೇ ಕಾನೂನು ವ್ಯವಹರಣೆಯನ್ನು (ಅದು ಸಿವಿಲ್ ಆಗಿರಲಿ ಅಥವಾ ಕ್ರಿಮಿನಲ್ ಆಗಿರಲಿ) ಆ ಕಾರ್ಯವೆಸಗಿದ್ದಾನೆಂದು ದೂರುಕೊಟ್ಟ ನಂತರ ಮೂರು ತಿಂಗಳೊಳಗಾಗಿ ಪ್ರಾರಂಭಿಸತಕ್ಕದ್ದು ಮತ್ತು ಅನ್ಯಥಾ ಅಲ್ಲ, ಮತ್ತು ಅಂಥ ವ್ಯವಹರಣೆಯ ಬಗ್ಗೆ ಲಿಖಿತ ನೋಟೀಸನ್ನು ಮತ್ತು ಅದರ ಕಾರಣವನ್ನು ಅಂಥ ವ್ಯವಹರಣೆಯು ಪ್ರಾರಂಭವಾಗುವುದಕ್ಕೆ ಕನಿಷ್ಠ ಒಂದು ತಿಂಗಳು ಮುಂಚೆ ಪ್ರತಿವಾದಿಗೆ ಅಥವಾ ಅವನ ಮೇಲಧಿಕಾರಿಗೆ ನೀಡತಕ್ಕದ್ದು.

**139. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂದಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಭದ್ರತಾ ಪಡೆಯನ್ನು ಯಾವ ರೀತಿಯಲ್ಲಿ ರಚಿಸತಕ್ಕದ್ದೋ ಆ ರೀತಿ ಮತ್ತು 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅದರ ಸದಸ್ಯರ ಸೇವಾ ಷರತ್ತುಗಳು;

(ಬಿ) ಯಾವ ಪುಸ್ತಕದ ಅಥವಾ ಪತ್ರದ ಅಥವಾ ಇತರೆ ದಸ್ತಾವೇಜಿನ ಬಗ್ಗೆ 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅದನ್ನು ತಿಳಿಸುವುದು ಅಥವಾ ಪ್ರಕಟಿಸುವುದನ್ನು ನಿರ್ಬಂಧಿಸಬಾರದೋ ಆ ಪುಸ್ತಕದ ಅಥವಾ ಪತ್ರದ ಅಥವಾ ಇತರ ದಸ್ತಾವೇಜಿನ ಸ್ವರೂಪ;

(ಸಿ) ಯಾವ ರಾಜಕೀಯ ಉದ್ದೇಶಗಳಿಗಾಗಿ ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು, 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಸಭೆಯಲ್ಲಿ ಅಥವಾ ಪ್ರದರ್ಶನದಲ್ಲಿ ಭಾಗವಹಿಸತಕ್ಕದ್ದಲ್ಲವೋ ಅಥವಾ ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕದ್ದಲ್ಲವೋ ಆ ರಾಜಕೀಯ ಉದ್ದೇಶಗಳನ್ನು ಹೊರತುಪಡಿಸಿದ ಉದ್ದೇಶಗಳು;

(ಡಿ) ಯಾವ ಉದ್ದೇಶಗಳಿಗಾಗಿ ದಂಡನೆಯಾಗಿ 47ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೋ ಆ ಉದ್ದೇಶಗಳು;

(ಇ) 53ನೇ ಪ್ರಕರಣದ ಮತ್ತು 54ನೇ ಪ್ರಕರಣದ (1) ಮತ್ತು (2)ನೇ ಉಪ ಪ್ರಕರಣಗಳ ಮೇರೆಗೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ರೀತಿ;

(ಎಫ್) 56ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಯ ಅಧಿವಿಚಾರಣೆಯು ಇತ್ಯರ್ಥದಲ್ಲಿರುವಾಗ ಯಾವ ರೀತಿಯಲ್ಲಿ ಮತ್ತು ಯಾವ ಅವಧಿಗಾಗಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಬಹುದೋ ಮತ್ತು ತಡೆಹಿಡಿದಿರಿಸಬಹುದೋ ಆ ರೀತಿ ಮತ್ತು ಅವಧಿ;

(ಜಿ) ವ್ಯಕ್ತಿಯ ಗೈರು ಹಾಜರಿಯ ಬಗ್ಗೆ ವಿಚಾರಣೆ ನಡೆಸುತ್ತಿರುವ ವಿಚಾರಣಾ ನ್ಯಾಯಾಲಯವು 60ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಬೋಧಿಸುವ ರೀತಿ;

(ಹೆಚ್) 81ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದ ಸದಸ್ಯರು ನಿವೃತ್ತಿ ಹೊಂದಿದ ಮೇಲೆ ಆ ಖಾಲಿ ಸ್ಥಾನವನ್ನು ಭರ್ತಿ ಮಾಡಬಹುದಾದ ರೀತಿ;

(ಐ) 82ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯಗಳ ಸದಸ್ಯರಿಗೆ ಮತ್ತು ಜಡ್ಜ್ ಅಟಾರ್ನಿ, ಇತ್ಯಾದಿಯವರಿಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಬೋಧಿಸುವ ರೀತಿ;

(ಜೆ) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡುವ ವ್ಯಕ್ತಿಗೆ 82ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಮಾಡಿಸುವ ರೀತಿ;

(ಕೆ) ಭದ್ರತಾ ಪಡೆ ನ್ಯಾಯಾಲಯವು ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ 95ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆ ಮಾಡಬಹುದಾದ ರೀತಿ;

(ಎಲ್) ಆಪಾದಿತ ವ್ಯಕ್ತಿಯನ್ನು 96ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿಡತಕ್ಕ ರೀತಿ;

(ಎಂ) ಯಾವ ಕಾರಾಗೃಹದಲ್ಲಿ 117ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಾರಾವಾಸದ ಶಿಕ್ಷೆಯಲ್ಲಿರುವ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗುವುದೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸತಕ್ಕ ವಾರಂಟಿನ ನಮೂನೆ.

(ಎನ್) 121ನೇ ಪ್ರಕರಣದ ಮೇರೆಗೆ ಸಿವಿಲ್ ಕಾರಾಗೃಹದಲ್ಲಿ ವ್ಯಕ್ತಿಯನ್ನು ತಡೆಹಿಡಿದಿರಿಸುವುದಕ್ಕಾಗಿ ವಾರಂಟನ್ನು ಕಳುಹಿಸಿಕೊಡುವ ವ್ಯಕ್ತಿ;

(ಓ) 135ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅದೇ ದರ್ಜೆಗೆ ಸೇರಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಗೆ ಸಂಬಂಧಿಸಿದ ವಿಷಯಗಳು;

(ಪಿ) 7ನೇ ಪ್ರಕರಣ, 10ನೇ ಪ್ರಕರಣದ (2)ನೇ ಉಪಪ್ರಕರಣ, 12ನೇ ಪ್ರಕರಣದ (1)ನೇ ಉಪಪ್ರಕರಣದ, 77ನೇ ಪ್ರಕರಣದ, 97ನೇ ಪ್ರಕರಣದ, 111ನೇ ಪ್ರಕರಣದ, 113ನೇ ಪ್ರಕರಣದ (2)ನೇ ಉಪಪ್ರಕರಣದ, 117ನೇ ಪ್ರಕರಣದ (1), (2) ಮತ್ತು (4)ನೇ ಉಪಪ್ರಕರಣಗಳ ಮತ್ತು 124ನೇ ಪ್ರಕರಣದ ಮೇರೆಗೆ ನಿಯಮಿಸಬೇಕಾದ ಪ್ರಾಧಿಕಾರಿಗಳು ಅಥವಾ ಅಧಿಕಾರಿಗಳು;

(ಕ್ಯೂ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಈ ಅಧಿನಿಯಮದಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಯಾವ ಉಪಬಂಧವನ್ನು ಮಾಡಿಲ್ಲವೋ ಅಥವಾ ಮಾಡಿರುವ ಉಪಬಂಧ ಸಾಕಷ್ಟಿಲ್ಲವೋ ಆ ಯಾವುದೇ ಇತರ ವಿಷಯ. ಮತ್ತು ಅಧಿನಿಯಮದ ಸೂಕ್ತ ಜಾರಿಗಾಗಿ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಉಪಬಂಧಿಸುವುದು ಅವಶ್ಯವಾಗಿರುವ ಯಾವುದೇ ಇತರೆ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಅ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**140. ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಗೆ ಸಂಬಂಧಿಸಿದ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಯನ್ನು ಈ ಅಧಿನಿಯಮದ ಮೇರೆಗೆ ರಚಿಸಲಾದ ಭದ್ರತಾ ಪಡೆ ಎಂಬುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಯ ಸದಸ್ಯರನ್ನು ಈ ಅಧಿನಿಯಮದ ಮೇರೆಗೆ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಾಷ್ಟ್ರೀಯ ಭದ್ರತಾ ಪಡೆಯ ರಚನೆಗೆ ಸಂಬಂಧಿಸಿದಂತೆ, ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಸಂಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ಕಾರ್ಯವು ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಮೇರೆಗೆ ಅಂಥ ಕಾರ್ಯವನ್ನು ಮಾಡಿದ್ದರೆ ಅಥವಾ ಕ್ರಮವನ್ನು ಕೈಗೊಂಡಿದ್ದರೆ ಹೇಗೋ ಹಾಗೆ ಕಾನೂನಿನಲ್ಲಿ ಸಿಂಧುವಾಗತಕ್ಕದ್ದು ಮತ್ತು ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ವ್ಯಕ್ತಿಯು ಮಾಡಿದ ಅಥವಾ ಮಾಡದೇ ಬಿಟ್ಟ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯನ್ನು ಯಾವುದೇ ಅಪರಾಧದ ತಪ್ಪಿತಸ್ಥನನ್ನಾಗಿ ಮಾಡತಕ್ಕದ್ದಲ್ಲ.

*********

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016

## (2016ರ ಸಂಖ್ಯೆ 49)

[27ನೇ ಡಿಸೆಂಬರ್ 2016]

ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿ ಮಾಡಿಕೊಂಡ ವಿಶ್ವಸಂಸ್ಥೆಯ ಒಡಂಬಡಿಕೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಅಧಿನಿಯಮ.

2006ರ ಡಿಸೆಂಬರ್ 13ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿದ ಒಡಂಬಡಿಕೆಯನ್ನು ಅಂಗೀಕರಿಸಿರುವುದರಿಂದ;

ಮತ್ತು ಮೇಲ್ಕಂಡ ಒಡಂಬಡಿಕೆಯಲ್ಲಿ ಅಂಗವಿಕಲ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದಕ್ಕಾಗಿ ಈ ಕೆಳಕಂಡ ಮಾರ್ಗದರ್ಶಕ ತತ್ವಗಳನ್ನು ಪ್ರತಿಪಾದಿಸಿರುವುದರಿಂದ,–

(ಎ) ಆ ವ್ಯಕ್ತಿಗಳ ಅಂತರ್ಗತ ಘನತೆಯನ್ನು, ಅವರ ಆಯ್ಕೆಗಳನ್ನು ಅವರೇ ನಿರ್ಧರಿಸುವ ಸ್ವಾತಂತ್ರ್ಯವೂ ಸೇರಿದಂತೆ ವೈಯಕ್ತಿಕ ಸ್ವಾಯತ್ತತೆಯನ್ನು ಮತ್ತು ಅವರ ಸ್ವಾತಂತ್ರ್ಯವನ್ನು ಗೌರವಿಸುವುದು;

(ಬಿ) ತಾರತಮ್ಯ ಮಾಡದಿರುವುದು;

(ಸಿ) ಸಮಾಜದಲ್ಲಿ ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುವುದು ಮತ್ತು ಸಮ್ಮಿಳಿತಗೊಳಿಸಿಕೊಳ್ಳುವುದು;

(ಡಿ) ಮಾನವ ವೈವಿಧ್ಯತೆ ಮತ್ತು ಮಾನವ ಧರ್ಮದ ಭಾಗವಾಗಿ ಅಂಗವಿಕಲ ವ್ಯಕ್ತಿಗಳ ವಿಭಿನ್ನ ಲಕ್ಷಣಗಳನ್ನು ಗೌರವಿಸುವುದು, ಅವರನ್ನು ಮನಃಪೂರ್ವಕವಾಗಿ ನಮ್ಮವರೆಂದು ಭಾವಿಸುವುದು;

(ಇ) ಅವಕಾಶಗಳಲ್ಲಿ ಸಮಾನತೆ;

(ಎಫ್) ಪ್ರವೇಶಾವಕಾಶ ನೀಡುವುದು;

(ಜಿ) ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ;

(ಹೆಚ್) ಅಂಗವಿಕಲ ಮಕ್ಕಳಲ್ಲಿ ವಿಕಸನದ ಸಾಮರ್ಥ್ಯಗಳನ್ನು ಗೌರವಿಸುವುದು ಮತ್ತು ಅವರ ಸ್ವವ್ಯಕ್ತಿತ್ವವನ್ನು ಸಂರಕ್ಷಿಸಲು ಅಂಗವಿಕಲ ಮಕ್ಕಳ ಹಕ್ಕನ್ನು ಗೌರವಿಸುವುದು;

ಮತ್ತು ಸದರಿ ಒಡಂಬಡಿಕೆಗೆ ಭಾರತವು ಸಹಿ ಮಾಡಿರುವುದರಿಂದ; ಮತ್ತು

1ನೇ ಅಕ್ಟೋಬರ್, 2007 ರಂದು ಭಾರತವು ಸದರಿ ಒಡಂಬಡಿಕೆಯನ್ನು ಸ್ಥಿರೀಕರಿಸಿರುವುದರಿಂದ;

ಮತ್ತು ಈ ಮೇಲೆ ಹೇಳಿದ ಒಡಂಬಡಿಕೆಯನ್ನು ಅನುಷ್ಠಾನಗೊಳಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ.

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ [1]ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಪೀಲು ಪ್ರಾಧಿಕಾರ" ಎಂದರೆ, ಸಂದರ್ಭಾನುಸಾರ 14ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಥವಾ 53ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚಿಸಿದ ಅಥವಾ 59ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಗೊತ್ತುಪಡಿಸಬಹುದಾದ ಪ್ರಾಧಿಕಾರ;

(ಬಿ) "ಸಮುಚಿತ ಸರ್ಕಾರ" ಎಂದರೆ,–

(i) ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಅಧಿನಿಯಮ, 2006 (2006ರ 41)ರ ಮೇರೆಗೆ ರಚಿತವಾದ ದಂಡು ಪ್ರದೇಶ ಮಂಡಲಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರಕ್ಕೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಮಂಡಲಿಯನ್ನು ಹೊರತುಪಡಿಸಿ, ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ, ರಾಜ್ಯ ಸರ್ಕಾರ;

(ಸಿ) "ತೊಡಕು" ಎಂದರೆ ಸಮಾಜದಲ್ಲಿ ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುವುದಕ್ಕೆ ಅಡ್ಡಿಯುಂಟು ಮಾಡುವಂತಹ ಸಂವಹನಾತ್ಮಕ, ಸಾಂಸ್ಕೃತಿಕ, ಆರ್ಥಿಕ, ಪರಿಸರಾತ್ಮಕ, ಸಾಂಸ್ಥಿಕ, ರಾಜಕೀಯ, ಸಾಮಾಜಿಕ, ಮನೋಭಾವಾತ್ಮಕ ಅಥವಾ ದೈಹಿಕ ನ್ಯೂನತೆ ಅಂಶಗಳೂ ಸೇರಿದಂತೆ ಯಾವುದೇ ಅಂಶ;

(ಡಿ) "ಪಾಲನೆದಾರ" ಎಂದರೆ, ಹಣವನ್ನು ಪಡೆದು ಅಥವಾ ಪಡೆಯದೆ ಅಂಗವಿಕಲ ವ್ಯಕ್ತಿಯನ್ನು ಪಾಲನೆ ಮಾಡುವ, ಅವನಿಗೆ ಬೆಂಬಲವನ್ನು ಅಥವಾ ನೆರವನ್ನು ಒದಗಿಸುವ ಪೋಷಕರು ಮತ್ತು ಇತರ ಕುಟುಂಬದ ಸದಸ್ಯರನ್ನು ಒಳಗೊಂಡ ಯಾರೇ ವ್ಯಕ್ತಿ;

(ಇ) "ಪ್ರಮಾಣೀಕರಿಸುವ ಪ್ರಾಧಿಕಾರ" ಎಂದರೆ, 57ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಗೊತ್ತುಪಡಿಸಿದ ಒಂದು ಪ್ರಾಧಿಕಾರ;

(ಎಫ್) "ಸಂವಹನ" ಎಂಬುದರಲ್ಲಿ ಸಂವಹನ ಪ್ರಕಾರಗಳಾದ ಭಾಷೆಗಳು, ಪಠ್ಯ ಪ್ರದರ್ಶನ, ಬ್ರೈಲ್ ಲಿಪಿ, ಸ್ಪರ್ಶ ಸಂವಹನ, ಸಂಕೇತಗಳು, ದಪ್ಪ ಅಕ್ಷರದ ಮುದ್ರಣ, ಪ್ರವೇಶ ಸಾಧ್ಯವಾದ ಮಲ್ಟಿ ಮೀಡಿಯಾ, ಬರಹ, ಶ್ರವ್ಯ, ದೃಶ್ಯ, ದೃಶ್ಯ ಪ್ರದರ್ಶನಗಳು, ಸಂಜ್ಞಾ ಭಾಷೆ, ರೂಢಿಯ ಲಿಪಿ ಭಾಷೆ, ಮಾನವ–ಮನೋವಾಚನ, ವರ್ಧಿತ ಮತ್ತು ಪರ್ಯಾಯ ಸಂವಹನ ವಿಧಾನಗಳು ಮತ್ತು ಸುಲಭಲಭ್ಯ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳೂ ಸಹ ಇದರಲ್ಲಿ ಒಳಗೊಳ್ಳುತ್ತವೆ;

(ಜಿ) "ಸಕ್ಷಮ ಪ್ರಾಧಿಕಾರ" ಎಂದರೆ, 49ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ಪ್ರಾಧಿಕಾರ;

(ಹೆಚ್) ಅಂಗವಿಕಲತೆಗೆ ಸಂಬಂಧಿಸಿದಂತೆ "ತಾರತಮ್ಯ" ಎಂದರೆ, ಅಂಗವಿಕಲತೆಯ ಕಾರಣದಿಂದಾಗಿ ಅಂಥ ವ್ಯಕ್ತಿಗಳು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನಾಗರಿಕ ಅಥವಾ ಯಾವುದೇ ಇತರ ಕ್ಷೇತ್ರದಲ್ಲಿ ಇತರರೊಂದಿಗೆ ಎಲ್ಲಾ ರೀತಿಯ ಮಾನವ ಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಸಮಾನವಾಗಿ ಪಡೆಯುವ ಮೂಲಕ ಗುರುತಿಸಿಕೊಳ್ಳುವುದನ್ನು, ಅನುಕೂಲ ಹೊಂದುವುದನ್ನು ಅಥವಾ ಬಳಸುವುದನ್ನು

---

[*] ಏಪ್ರಿಲ್ 19, 2017ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ: ಎಸ್.ಓ. 1215 (ಇ) ದಿನಾಂಕ: 19ನೇ ಏಪ್ರಿಲ್ 2017, ಭಾರತ ರಾಜಪತ್ರದ ವಿಶೇಷ ಸಂಚಿಕೆ ಭಾಗ–II, ವಿಭಾಗ – 3(ii) ನೋಡಿ

ಉದ್ದೇಶಪೂರ್ವಕವಾಗಿ ಅಥವಾ ಪರಿಣಾಮಕಾರಿಯಾಗಿ ದುರ್ಬಲಗೊಳಿಸುವಂಥ ಅಥವಾ ಅನೂರ್ಜಿತಗೊಳಿಸುವಂಥ ಯಾವುದೇ ರೀತಿಯ ಭೇದಭಾವ, ಬಹಿಷ್ಕರಣ, ನಿರ್ಬಂಧ ಮತ್ತು ತಾರತಮ್ಯ ತೋರುವ ಎಲ್ಲಾ ರೀತಿಗಳು ಹಾಗೂ ಸಮಂಜಸ ಸೌಕರ್ಯವನ್ನು ನಿರಾಕರಿಸುವುದೂ ಸಹ ಇದರಲ್ಲಿ ಒಳಗೊಳ್ಳುತ್ತದೆ;

(ಐ) "ಕಾರ್ಯಸಂಸ್ಥೆ" ಎಂಬುದರಲ್ಲಿ, ಸರ್ಕಾರಿ ಕಾರ್ಯಸಂಸ್ಥೆ ಮತ್ತು ಖಾಸಗೀ ಕಾರ್ಯಸಂಸ್ಥೆಯು ಒಳಗೊಳ್ಳುತ್ತದೆ;

(ಜೆ) "ನಿಧಿ" ಎಂದರೆ, 86ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ನಿಧಿ;

(ಕೆ) "ಸರ್ಕಾರಿ ಕಾರ್ಯಸಂಸ್ಥೆ" ಎಂದರೆ, ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ನಿಗಮ ಅಥವಾ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಅವುಗಳಿಂದ ಸಹಾಯ ಧನ ಪಡೆಯುತ್ತಿರುವ ಪ್ರಾಧಿಕಾರ ಅಥವಾ ನಿಕಾಯ ಅಥವಾ ಕಂಪನಿಗಳ ಅಧಿನಿಯಮ, 2013 ರ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತಹ ಸರ್ಕಾರಿ ಕಂಪನಿ ಮತ್ತು ಇದರಲ್ಲಿ ಸರ್ಕಾರದ ಇಲಾಖೆಯು ಒಳಗೊಳ್ಳುತ್ತದೆ;

(ಎಲ್) "ಉನ್ನತ ಬೆಂಬಲ" ಎಂದರೆ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆ ಇರುವ ವ್ಯಕ್ತಿಯು ತನ್ನ ದೈನಂದಿನ ಕೆಲಸಕಾರ್ಯಗಳನ್ನು ಮಾಡಿಕೊಳ್ಳಲು, ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕಾಗಿ ಸ್ವತಂತ್ರವಾಗಿ ಮತ್ತು ಬುದ್ಧಿವಂತಿಕೆಯಿಂದ ನಿರ್ಧಾರವನ್ನು ತೆಗೆದುಕೊಳ್ಳಲು ಮತ್ತು ಶಿಕ್ಷಣ, ಉದ್ಯೋಗ, ಕುಟುಂಬ ಮತ್ತು ಸಮುದಾಯ ಜೀವನ ಸೇರಿದಂತೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮತ್ತು ತನಗೆ ಅಗತ್ಯವಾದ ಚಿಕಿತ್ಸೆಯನ್ನು ಮತ್ತು ಔಷಧೋಪಚಾರ ಪಡೆಯುವುದೂ ಸೇರಿದಂತೆ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲು ದೈಹಿಕ, ಮಾನಸಿಕ ಮತ್ತು ಇತರೆ ರೀತಿಯ ಅವಶ್ಯಕವಾದ ತೀವ್ರ ನೆರವನ್ನು ನೀಡುವುದು;

(ಎಂ) "ಸಮ್ಮಿಳಿತ ಶಿಕ್ಷಣ" ಎಂದರೆ, ಅಂಗವಿಕಲತೆ ಇರುವ ಮತ್ತು ಅಂಗವಿಕಲತೆ ಇಲ್ಲದಿರುವ ವಿದ್ಯಾರ್ಥಿಗಳು ಪರಸ್ಪರ ಜೊತೆಯಲ್ಲಿ ಒಂದಾಗಿ ಶಿಕ್ಷಣ ಪಡೆಯುವ ವ್ಯವಸ್ಥೆ ಮತ್ತು ವಿವಿಧ ಬಗೆಯ ಅಂಗವಿಕಲತೆ ಇರುವ ವಿದ್ಯಾರ್ಥಿಗಳ ಕಲಿಕೆಯ ಅಗತ್ಯಗಳನ್ನು ಈಡೇರಿಸುವ ಸಲುವಾಗಿ ಸೂಕ್ತವಾಗಿ ಅಳವಡಿಸಿಕೊಂಡಿರುವ ಶೈಕ್ಷಣಿಕ ಪದ್ಧತಿ;

(ಎನ್) "ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ" ಎಂಬುದರಲ್ಲಿ ಮಾಹಿತಿ ಮತ್ತು ಸಂಪರ್ಕಕ್ಕೆ ಸಂಬಂಧಪಟ್ಟ ಎಲ್ಲಾ ಸೇವೆಗಳು ಮತ್ತು ಆವಿಷ್ಕಾರಗಳೂ ಸೇರಿದ್ದು, ಇದರಲ್ಲಿ ದೂರಸಂಪರ್ಕ ಸೇವೆಗಳು, ವೆಬ್ ಆಧಾರಿತ ಸೇವೆಗಳು, ವಿದ್ಯುನ್ಮಾನ ಮತ್ತು ಮುದ್ರಣ ಸೇವೆಗಳು, ಅಂಕೀಯ ಮತ್ತು ವಾಸ್ತವಾಭಾಸದ ಸೇವೆಗಳು ಒಳಗೊಳ್ಳುತ್ತವೆ;

(ಒ) "ಸಂಸ್ಥೆ" ಎಂದರೆ, ಅಂಗವಿಕಲ ವ್ಯಕ್ತಿಗಳನ್ನು ಬರಮಾಡಿಕೊಳ್ಳುವ, ಅವರಿಗೆ ಸ್ಥಳವಕಾಶ ನೀಡುವ, ಅವರ ಪಾಲನೆ ಪೋಷಣೆ ಮಾಡುವ, ಅವರನ್ನು ಸಂರಕ್ಷಣೆ ಮಾಡುವ, ಅವರಿಗೆ ಶಿಕ್ಷಣ, ತರಬೇತಿ ನೀಡುವ, ಅವರಿಗೆ ಪುನರ್ವಸತಿ ಕಲ್ಪಿಸುವ ಮತ್ತು ಅವರ ಇತರ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದ ಸೇವೆಯನ್ನು ಒದಗಿಸುವ ಸಂಸ್ಥೆ;

(ಪಿ) "ಸ್ಥಳೀಯ ಪ್ರಾಧಿಕಾರ" ಎಂದರೆ, ಸಂವಿಧಾನದ 243ಪಿ ಅನುಚ್ಛೇದದ (ಇ) ಖಂಡದಲ್ಲಿ ಮತ್ತು (ಎಫ್) ಖಂಡದಲ್ಲಿ ಪರಿಭಾಷಿಸಿದಂತಹ ಪುರಸಭೆ ಅಥವಾ ಪಂಚಾಯಿತಿ; ದಂಡು ಪ್ರದೇಶಗಳ ಅಧಿನಿಯಮ, 2006 (2006ರ 41)ರ ಮೇರೆಗೆ ರಚಿತವಾದ ದಂಡು ಪ್ರದೇಶಗಳ ಮಂಡಲಿ; ಮತ್ತು ಪೌರ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ಜಾರಿಗೆ ತಂದ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಯಾವುದೇ ಇತರ ಪ್ರಾಧಿಕಾರ;

(ಕ್ಯೂ) "ಅಧಿಸೂಚನೆ" ಎಂದರೆ, ಅಧಿಕೃತ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಮತ್ತು "ಅಧಿಸೂಚಿಸು" ಅಥವಾ "ಅಧಿಸೂಚಿಸಿದ" ಎಂಬ ಪದಾವಳಿಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಆರ್) "ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿ" ಎಂದರೆ, ಮಾನದಂಡಗಳ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಅಂಗವಿಕಲತೆಯನ್ನು ಪರಿಭಾಷಿಸಿರದಿದ್ದರೆ ಶೇಕಡ ನಲವತ್ತರಷ್ಟಕ್ಕಿಂತ ಕಡಿಮೆ ಇರದ ನಿರ್ದಿಷ್ಟ ಅಂಗವಿಕಲತೆ ಹೊಂದಿರುವ ವ್ಯಕ್ತಿ ಮತ್ತು ಇದರಲ್ಲಿ ಮಾನದಂಡಗಳ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಅಂಗವಿಕಲತೆಯನ್ನು ಪರಿಭಾಷಿಸಿದ್ದರೆ ಅಂಥ ಅಂಗವಿಕಲತೆಯನ್ನು ಹೊಂದಿರುವ ಹಾಗೂ ಇದನ್ನು ಪ್ರಮಾಣೀಕೃತ ಪ್ರಾಧಿಕಾರವು ಪ್ರಮಾಣೀಕರಿಸಿದ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಎಸ್) "ಅಂಗವಿಕಲ ವ್ಯಕ್ತಿ" ಎಂದರೆ, ದೀರ್ಘಕಾಲದಿಂದ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಇಂದ್ರಿಯಗಳ ದುರ್ಬಲತೆ ಹಾಗೂ ಆತನಿಗಿರುವ ತೊಡಕುಗಳ ಪರಿಣಾಮದಿಂದಾಗಿ, ಸಮಾಜದಲ್ಲಿ ಇತರರೊಂದಿಗೆ ಸಮಾನವಾಗಿ ಸಂಪೂರ್ಣ ರೀತಿಯಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ಸಾಧ್ಯವಾಗದಂತೆ ಅಡ್ಡಿ-ಅಡಚಣೆಗೆ ಒಳಗಾಗಿರುವ ವ್ಯಕ್ತಿ;

(ಟಿ) "ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿ" ಎಂದರೆ, 58ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಯಾವ ವ್ಯಕ್ತಿಗೆ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆ ಇರುವುದರಿಂದಾಗಿ ಉನ್ನತ ಬೆಂಬಲದ ಅಗತ್ಯ ಇರುವುದೆಂದು ಪ್ರಮಾಣೀಕರಿಸಲಾಗಿದೆಯೋ ಆ ವ್ಯಕ್ತಿ;

(ಯು) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ವಿ) "ಖಾಸಗೀ ಕಾರ್ಯಸಂಸ್ಥೆ" ಎಂದರೆ, ಕಂಪನಿ, ಫರ್ಮ್, ಸಹಕಾರ ಅಥವಾ ಇತರ ಸಂಘ, ಸಂಘಗಳು, ಟ್ರಸ್ಟ್, ಏಜೆನ್ಸಿ, ಸಂಸ್ಥೆ, ಸಂಘಸಂಸ್ಥೆ, ಯೂನಿಯನ್, ಕಾರ್ಖಾನೆ ಅಥವಾ ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಕಾರ್ಯಸಂಸ್ಥೆ;

(ಡಬ್ಲ್ಯೂ) "ಸಾರ್ವಜನಿಕ ನಿರ್ಮಿತಿ" ಎಂದರೆ, ಶಿಕ್ಷಣಕ್ಕಾಗಿ ಅಥವಾ ವೃತ್ತಿ ಶಿಕ್ಷಣ ನೀಡುವ ಉದ್ದೇಶಗಳಿಗಾಗಿ, ಕಾರ್ಯ ಸ್ಥಳಕ್ಕಾಗಿ, ವಾಣಿಜ್ಯ ಚಟುವಟಿಕೆಗಳಿಗಾಗಿ, ಸಾರ್ವಜನಿಕ ಉಪಯುಕ್ತತೆಗಳಿಗಾಗಿ, ಧಾರ್ಮಿಕ, ಸಾಂಸ್ಕೃತಿಕ, ಬಿಡುವಿನ ಅಥವಾ ಮನರಂಜನೆ ಚಟುವಟಿಕೆಗಳಿಗಾಗಿ, ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳಿಗಾಗಿ, ಕಾನೂನು ಜಾರಿ ಏಜೆನ್ಸಿಗಳಿಗಾಗಿ, ಸುಧಾರಣಾಲಯಗಳಿಗಾಗಿ ಅಥವಾ ನ್ಯಾಯಿಕ ವೇದಿಕೆಗಳಿಗಾಗಿ, ರೈಲು ನಿಲ್ದಾಣಗಳು ಅಥವಾ ಪ್ಲಾಟ್‌ಫಾರ್ಮ್‌ಗಳಿಗಾಗಿ, ರಸ್ತೆ ಮಾರ್ಗಗಳಿಗಾಗಿ ಬಸ್ ನಿಲ್ದಾಣಗಳು ಅಥವಾ ಬಸ್‌ಗಳ ಆಗಮನ ಮತ್ತು ನಿರ್ಗಮನ ನಿಲ್ದಾಣಗಳಿಗಾಗಿ, ವಿಮಾನ ನಿಲ್ದಾಣಗಳು ಅಥವಾ ಜಲಮಾರ್ಗಗಳಿಗಾಗಿ ಬಳಸುತ್ತಿರುವ ನಿರ್ಮಿತಿಗಳೂ ಸೇರಿದಂತೆ ಹೆಚ್ಚು ಹೆಚ್ಚು ಸಾರ್ವಜನಿಕರು ಬಳಸುತ್ತಿರುವ ಅಥವಾ ಅವರಿಗೆ ಪ್ರವೇಶವಿರುವ ಸರ್ಕಾರಿ ಕಟ್ಟಡ ಅಥವಾ ಖಾಸಗೀ ಕಟ್ಟಡ;

(ಎಕ್ಸ್) "ಸಾರ್ವಜನಿಕ ಸೌಲಭ್ಯಗಳು ಮತ್ತು ಸೇವೆಗಳು" ಎಂಬುದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವ ಸೇವೆಗಳಲ್ಲಿ ವಸತಿ, ಶೈಕ್ಷಣಿಕ ಮತ್ತು ವೃತ್ತಿ ತರಬೇತಿ, ಉದ್ಯೋಗ ಮತ್ತು ವೃತ್ತಿಯಲ್ಲಿ ಮುನ್ನಡೆ, ಷಾಪಿಂಗ್ ಅಥವಾ ಕ್ರಯವಿಕ್ರಯ, ಧಾರ್ಮಿಕ, ಸಾಂಸ್ಕೃತಿಕ, ವಿಶ್ರಾಂತಿ ಅಥವಾ ಮನರಂಜನೆ, ವೈದ್ಯಕೀಯ, ಆರೋಗ್ಯ ಮತ್ತು ಪುನರ್ವಸತಿ, ಬ್ಯಾಂಕಿಂಗ್, ಹಣಕಾಸು ಮತ್ತು ವಿಮೆ, ಸಂಪರ್ಕ, ಅಂಚೆ ವ್ಯವಹಾರ ಮತ್ತು ಮಾಹಿತಿ ಪಡೆಯುವ, ನ್ಯಾಯವನ್ನು ಪಡೆದುಕೊಳ್ಳುವುದು, ಸಾರ್ವಜನಿಕ ಉಪಯೋಗಗಳ, ಸಂಪರ್ಕ ಸಾರಿಗೆ ಸೇರಿದಂತೆ ಹೆಚ್ಚು ಹೆಚ್ಚು ಸಾರ್ವಜನಿಕರಿಗೆ ಒದಗಿಸುವ ಎಲ್ಲ ರೀತಿಯ ಸೇವೆಗಳು ಒಳಗೊಳ್ಳುತ್ತವೆ;

(ವೈ) "ಸಮಂಜಸ ಸೌಕರ್ಯ" ಎಂದರೆ, ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ತಮ್ಮ ಹಕ್ಕುಗಳನ್ನು ಸಮಾನವಾಗಿ ಅನುಭವಿಸುವುದನ್ನು ಅಥವಾ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿರ್ದಿಷ್ಟ ಸನ್ನಿವೇಶದಲ್ಲಿ ಅಸಮ ಮತ್ತು ಅನಗತ್ಯ ಹೊರೆಯನ್ನು ವಿಧಿಸದೆ ಆವಶ್ಯಕ ಮತ್ತು ಸಮರ್ಪಕ ಮಾರ್ಪಾಡು ಮತ್ತು ಹೊಂದಾಣಿಕೆಗಳ ಸೌಕರ್ಯ;

(ಝಡ್) "ನೋಂದಾಯಿತ ಸಂಘ ಸಂಸ್ಥೆ" ಎಂದರೆ ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ಜಾರಿಗೊಳಿಸಿದ ಅಧಿನಿಯಮದ ಮೇರೆಗೆ ಸೂಕ್ತ ರೀತಿಯಲ್ಲಿ ನೋಂದಾಯಿತವಾದ ಅಂಗವಿಕಲ ವ್ಯಕ್ತಿಗಳ ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಸಂಘ ಸಂಸ್ಥೆ, ಅಂಗವಿಕಲ ವ್ಯಕ್ತಿಗಳ ಪೋಷಕರ ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಮತ್ತು ಕುಟುಂಬ ಸದಸ್ಯರ ಸಂಘ ಅಥವಾ ಸ್ವಯಂ ಸೇವಾ ಅಥವಾ ಸರ್ಕಾರೇತರ ಅಥವಾ ಧರ್ಮಾರ್ಥ ಸಂಘಸಂಸ್ಥೆ ಅಥವಾ ಟ್ರಸ್ಟ್, ಸಂಘ ಅಥವಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಲಾಭರಹಿತ ಕಂಪನಿ;

(ಝಡ್ಎ) "ಪುನರ್ ವ್ಯವಸ್ಥೆ" ಎಂಬುದು ಅಂಗವಿಕಲ ವ್ಯಕ್ತಿಗಳು ದೈಹಿಕವಾಗಿ, ಸಂವೇದನಾತ್ಮಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ, ಪರಿಸರಾತ್ಮಕವಾಗಿ ಅಥವಾ ಸಾಮಾಜಿಕ ಕಾರ್ಯದ ಉನ್ನತ ಮಟ್ಟಗಳನ್ನು ಕಾಪಾಡಿಕೊಳ್ಳಲು ಅವರಿಗೆ ಸಾಧ್ಯತೆ ಮಾಡಿಕೊಡುವ ಉದ್ದೇಶವುಳ್ಳ ಪ್ರಕ್ರಿಯೆ;

(ಝಡ್ಬಿ) "ವಿಶೇಷ ಉದ್ಯೋಗ ವಿನಿಮಯ ಕೇಂದ್ರ" ಎಂದರೆ,

(i) ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ/ನೌಕರಿಯನ್ನು ನೀಡಲು ಬಯಸುವ ವ್ಯಕ್ತಿಗಳ ಬಗ್ಗೆ;

(ii) ಉದ್ಯೋಗವನ್ನು ಬಯಸುತ್ತಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಬಗ್ಗೆ;

(iii) ಉದ್ಯೋಗವನ್ನು ಬಯಸುತ್ತಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಖಾಲಿ ಇರುವ ಯಾವ ಕೆಲಸಗಳಿಗೆ ನೇಮಕ ಮಾಡಬಹುದೋ ಆ ಕೆಲಸಗಳ ವಿವರಗಳ ಬಗ್ಗೆ

– ರಿಜಿಸ್ಟರ್‌ಗಳನ್ನು ಇಡುವುದರ ಮೂಲಕ ಅಥವಾ ಇತರೆ ರೀತಿಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಒದಗಿಸಲು ಸರ್ಕಾರವು ಸ್ಥಾಪಿಸುತ್ತಿರುವ ಮತ್ತು ಅದರ ಮೂಲಕ ನಿರ್ವಹಿಸುತ್ತಿರುವ ಯಾವುದೇ ಕಚೇರಿ ಅಥವಾ ಸ್ಥಳ;

(ಝಡ್ಸಿ) "ನಿರ್ದಿಷ್ಟಪಡಿಸಿದ ಅಂಗವಿಕಲತೆ" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಅಂಗವಿಕಲತೆಗಳ ಬಗೆ;

(ಝಡ್ಡಿ) "ಸಾರಿಗೆ ವ್ಯವಸ್ಥೆಗಳು" ಎಂಬುದರಲ್ಲಿ ರಸ್ತೆ ಸಾರಿಗೆ, ರೈಲು ಸಾರಿಗೆ, ವಿಮಾನ ಸಾರಿಗೆ, ಜಲಸಾರಿಗೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಟ್ಟಕಡೆಯಲ್ಲಿ ತಲುಪಬೇಕಾದ ಸ್ಥಳದವರೆಗೂ ತಲುಪಿಸುವ ಸಹಾಯಕ ಸಾರಿಗೆ ಸಂಪರ್ಕ ವ್ಯವಸ್ಥೆಗಳು, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಸೌಕರ್ಯಗಳು, ಇತ್ಯಾದಿಗಳು ಒಳಗೊಳ್ಳುತ್ತವೆ;

(ಝಡ್ಇ) "ಸರ್ವ ಸಾಮಾನ್ಯ ವಿನ್ಯಾಸ" ಎಂದರೆ ಅಳವಡಿಸಿಕೊಳ್ಳುವ ಅಗತ್ಯ ಇಲ್ಲದೆಯೇ ಅಥವಾ ವಿಶೇಷ ವಿನ್ಯಾಸದ ಅಗತ್ಯ ಇಲ್ಲದೆಯೇ ಸಮಾಜದ ಎಲ್ಲಾ ಜನರು ಗರಿಷ್ಠವಾಗಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಬಳಕೆ ಮಾಡಬಹುದಾದ ಉತ್ಪನ್ನಗಳ, ಪರಿಸರಗಳ, ಕಾರ್ಯಕ್ರಮಗಳ ಮತ್ತು ಸೇವೆಗಳ ವಿನ್ಯಾಸ ಮತ್ತು ಈ ವಿನ್ಯಾಸವು ಅಂಗವಿಕಲ ವ್ಯಕ್ತಿಗಳ ನಿರ್ದಿಷ್ಟ ಗುಂಪಿಗಾಗಿ ಇರುವ ಆಧುನಿಕ ತಂತ್ರಜ್ಞಾನಗಳೂ ಸೇರಿದಂತೆ ಸಹಾಯಕ ಸಾಧನೋಪಾಯಗಳಿಗೂ ಸಹ ಅನ್ವಯವಾಗತಕ್ಕದ್ದು.

## ಅಧ್ಯಾಯ II

## ಹಕ್ಕುಗಳು ಮತ್ತು ಅರ್ಹತೆಗಳು

3. **ಸಮಾನತೆ ಇರಬೇಕು ಮತ್ತು ತಾರತಮ್ಯ ತೋರಕೂಡದು.–** (1) ಅಂಗವಿಕಲ ವ್ಯಕ್ತಿಗಳು ಸಮಾನತೆಯ ಹಕ್ಕನ್ನು ಅನುಭವಿಸುವುದನ್ನು, ಘನತೆಯ ಜೀವನ ನಡೆಸುವುದನ್ನು ಮತ್ತು ಅವನ ಅಥವಾ ಅವಳ ಪ್ರಾಮಾಣಿಕತನವನ್ನು ಇತರರಂತೆಯೇ ಸಮಾನವಾಗಿ ಗೌರವಿಸುವುದನ್ನು ಸಮುಚಿತ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗೆ ಸೂಕ್ತ ಪರಿಸರವನ್ನು ಕಲ್ಪಿಸುವ ಮೂಲಕ ಅವರ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಆರೋಪಿಸಿರುವ ಕೃತ್ಯವು ಅಥವಾ ಲೋಪವು ಕಾನೂನು ಸಮ್ಮತ ಉದ್ದೇಶವನ್ನು ಸಾಧಿಸುವುದಕ್ಕೆ ಪ್ರಮಾಣಾನುಸಾರವಾದ ರೀತಿಯದಾಗಿತ್ತು ಎಂಬುದನ್ನು ತೋರಿಸಿದ ಹೊರತು, ಯಾರೇ ಅಂಗವಿಕಲ ವ್ಯಕ್ತಿಗೆ ಅವನ ಅಂಗವಿಕಲತೆಯ ಕಾರಣದ ಮೇಲೆ ತಾರತಮ್ಯ ಮಾಡತಕ್ಕದ್ದಲ್ಲ.

(4) ಯಾರೇ ವ್ಯಕ್ತಿಯು, ಕೇವಲ ಅಂಗವಿಕಲತೆಯ ಕಾರಣದ ಮೇಲೆ ಮಾತ್ರವೇ ಅವನ/ಅವಳ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳತಕ್ಕದ್ದಲ್ಲ.

(5) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗೆ ಸಮಂಜಸ ಅವಕಾಶಗಳನ್ನು ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸುವುದಕ್ಕೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

4. **ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು.–** (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಹಿಳೆಯರು ಮತ್ತು ಮಕ್ಕಳು ಸಮಾಜದಲ್ಲಿ ಇತರರೊಂದಿಗೆ ತಮ್ಮ ಹಕ್ಕುಗಳನ್ನು ಸಮವಾಗಿ ಅನುಭವಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಅಂಗವಿಕಲತೆ ಇರುವ ಎಲ್ಲಾ ಮಕ್ಕಳು ತಮಗೆ ಬಾಧಕವಾಗಿರುವ ಎಲ್ಲಾ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸಮಾನತೆಯ ಆಧಾರದ ಮೇಲೆ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರ ವಯಸ್ಸು ಮತ್ತು ಅಂಗವಿಕಲತೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸೂಕ್ತ ನೆರವು ಒದಗಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

5. **ಸಾಮುದಾಯಿಕ ಜೀವನ.–** (1) ಅಂಗವಿಕಲ ವ್ಯಕ್ತಿಗಳು ಸಮುದಾಯದಲ್ಲಿ ಎಲ್ಲರೊಂದಿಗೆ ಬೆರೆತು ಜೀವಿಸುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು.

(2) ಸಮುಚಿತ ಸರ್ಕಾರವು,–

(ಎ) ಯಾವುದೇ ನಿರ್ದಿಷ್ಟ ವ್ಯವಸ್ಥೆಯಲ್ಲಿ ಅಂಗವಿಕಲ ವ್ಯಕ್ತಿಗಳು ಜೀವಿಸಲು ಕಟ್ಟು ಬೀಳಿಸುವುದನ್ನು ತಡೆಯಲು; ಮತ್ತು

(ಬಿ) ಅಂಗವಿಕಲ ವ್ಯಕ್ತಿಯ ವಯಸ್ಸಿಗೆ ಅಥವಾ ಆ ವ್ಯಕ್ತಿಯು ಗಂಡೋ–ಹೆಣ್ಣೋ ಎಂಬುದಕ್ಕೆ ಗಮನಕೊಟ್ಟು, ಜೀವಿಸಲು ಅವಶ್ಯವಿರುವ ವೈಯಕ್ತಿಕ ಬೆಂಬಲವೂ ಸೇರಿದಂತೆ ಮನೆಯಲ್ಲಿ, ನಿವಾಸದಲ್ಲಿ ಕೊಡುವಂತಹ ಶ್ರೇಣಿಯ ಬೆಂಬಲ ಸೇವೆಗಳಿಗೆ ಮತ್ತು ಇತರ ಸಾಮುದಾಯಿಕ ಬೆಂಬಲ ಸೇವೆಗಳಿಗೆ ಅವಕಾಶ ಕಲ್ಪಿಸಲು

– ಪ್ರಯತ್ನ ಮಾಡತಕ್ಕದ್ದು.

6. **ಕ್ರೌರ್ಯ ಮತ್ತು ಅಮಾನುಷ ವರ್ತನೆಗಳಿಗೆ ಈಡಾಗದಂತೆ ರಕ್ಷಣೆ:–** (1) ಅಂಗವಿಕಲ ವ್ಯಕ್ತಿಗಳು ಚಿತ್ರಹಿಂಸೆಗೆ, ಕ್ರೌರ್ಯಕ್ಕೆ, ಅಮಾನುಷ ಅಥವಾ ಅಗೌರವದ ವರ್ತನೆಗಳಿಗೆ ಈಡಾಗದಂತೆ ಅವರನ್ನು ರಕ್ಷಿಸುವುದಕ್ಕೆ ಸಮುಚಿತ ಸರ್ಕಾರವು, ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು,–

(i) ಸೌಲಭ್ಯ ಲಭ್ಯವಿರುವ ವಿಧಾನಗಳು, ರೀತಿಗಳು ಮತ್ತು ನಿದರ್ಶನ ಸಾಧನಗಳ ಮೂಲಕ ಆತನಿಗೆ/ಆಕೆಗೆ ಮುಂಚಿತವಾಗಿ ಸಂಶೋಧನೆಗೆ ಒಳಪಡಿಸುವ ವಿಷಯವನ್ನು ತಿಳಿಸದೇ ಇದ್ದ ಹೊರತು ಮತ್ತು ಅವರ ಸ್ವಯಿಚ್ಛೆ ಅನುಮತಿಯನ್ನು ಪಡೆಯದೇ ಇದ್ದ ಹೊರತು; ಮತ್ತು

(ii) ಸಮುಚಿತ ಸರ್ಕಾರವು, ಅಂಗವಿಕಲತೆ ಕುರಿತು ಸಂಶೋಧನೆ ಉದ್ದೇಶಕ್ಕಾಗಿ ರಚಿಸಿದ ಅಂಗವಿಕಲತೆ ಕುರಿತ ಸಮಿತಿಯಿಂದ ಮುಂಚಿತವಾಗಿ ಅನುಮತಿ ಪಡೆಯದೆ ಯಾವುದೇ ಸಂಶೋಧನೆಗೆ ಒಳಪಡಿಸತಕ್ಕದ್ದಲ್ಲ. ಈ ಸಮಿತಿಯಲ್ಲಿ ಅರ್ಧದಷ್ಟು ಸದಸ್ಯರಿಗಿಂತ ಕಡಿಮೆ ಇಲ್ಲದಷ್ಟು ಅಂಗವಿಕಲ ವ್ಯಕ್ತಿಗಳು ಸದಸ್ಯರಾಗಿರತಕ್ಕದ್ದು ಅಥವಾ 2ನೇ ಪ್ರಕರಣದ (ಝಡ್) ಖಂಡದಲ್ಲಿ ಹೇಳಿರುವಂತಹ ನೋಂದಾಯಿತವಾದ ಸಂಸ್ಥೆಯ ಸದಸ್ಯರುಗಳು ಸಮಿತಿಯ ಸದಸ್ಯರಾಗಿರತಕ್ಕದ್ದು.

7. **ದುರುಪಯೋಗ, ಹಿಂಸೆ ಮತ್ತು ಶೋಷಣೆಯಾಗದಂತೆ ರಕ್ಷಣೆ.–** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ಎಲ್ಲ ರೀತಿಯ ದುರುಪಯೋಗಕ್ಕೆ, ಹಿಂಸೆಗೆ ಮತ್ತು ಶೋಷಣೆಗೆ ಒಳಗಾಗದಂತೆ ರಕ್ಷಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಇಂಥ ಘಟನೆಗಳನ್ನು ತಡೆಯುವ ನಿಟ್ಟಿನಲ್ಲಿ,–

(ಎ) ದುರುಪಯೋಗ, ಹಿಂಸೆ ಮತ್ತು ಶೋಷಣೆಯ ಘಟನೆಗಳ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ಘಟನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಕಾನೂನು ಪರಿಹಾರಗಳನ್ನು ಒದಗಿಸತಕ್ಕದ್ದು;

(ಬಿ) ಅಂಥ ಘಟನೆಗಳು ಸಂಭವಿಸದಂತೆ ಅವುಗಳನ್ನು ತಪ್ಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಇಂಥವುಗಳನ್ನು ವರದಿ ಮಾಡಲು ವಿಧಾನವನ್ನು ಗೊತ್ತುಪಡಿಸತಕ್ಕದ್ದು;

(ಸಿ) ಅಂಥ ಘಟನೆಗಳಿಗೆ ಗುರಿಯಾದವರನ್ನು ಕಾಪಾಡಲು, ರಕ್ಷಿಸಲು ಅವರಿಗೆ ಪುನರ್ವಸತಿ ಕಲ್ಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಉಂಟುಮಾಡತಕ್ಕದ್ದು ಮತ್ತು ಮಾಹಿತಿಯು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು ದುರುಪಯೋಗಕ್ಕೆ, ಹಿಂಸೆಗೆ ಅಥವಾ ಶೋಷಣೆಗೆ ಗುರಿಪಡಿಸುವ ಕೃತ್ಯ ನಡೆದಿದೆ ಎಂದು ಅಥವಾ ಕೃತ್ಯ ನಡೆಯುತ್ತಿದೆ ಎಂದು ಅಥವಾ ಕೃತ್ಯವನ್ನು ಎಸಗುವ ಸಂಭವವಿದೆ ಎಂಬುದನ್ನು ನಂಬಲು ಕಾರಣವಿರುವ ಯಾರೇ ವ್ಯಕ್ತಿಯು ಅಥವಾ ಯಾವುದೇ ನೋಂದಾಯಿತ ಸಂಸ್ಥೆಯು ಅಂಥ ಘಟನೆಗಳು ಯಾವ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರ ಅಧಿಕಾರವ್ಯಾಪ್ತಿಯುಳ್ಳ ಸ್ಥಳೀಯ ಸರಹದ್ದುಗಳ ಒಳಗೆ ಸಂಭವಿಸಿದೆಯೋ ಆ ಸಂಭವಿಸಿದ ಸ್ಥಳೀಯ ಸರಹದ್ದುಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಆ ಕುರಿತು ಮಾಹಿತಿಯನ್ನು ನೀಡಬಹುದು.

(3) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರು ಅಂಥ ಮಾಹಿತಿಯನ್ನು ಸ್ವೀಕರಿಸಿದ ನಂತರ, ಕೂಡಲೇ ಅಂಥ ಘಟನೆಗಳನ್ನು ನಿಲ್ಲಿಸುವುದಕ್ಕೆ ಅಥವಾ ತಡೆಗಟ್ಟುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಸಂದರ್ಭಾನುಸಾರ ಅಂಥ ಅಂಗವಿಕಲ ವ್ಯಕ್ತಿಯನ್ನು ರಕ್ಷಿಸುವುದಕ್ಕಾಗಿ ಸೂಕ್ತವೆಂದು ಅವರು ಭಾವಿಸುವಂತಹ ಆದೇಶವನ್ನು ಹೊರಡಿಸಬಹುದು; ಈ ಆದೇಶದಲ್ಲಿ,–

(ಎ) ಅಂಥ ಕೃತ್ಯಕ್ಕೆ ಈಡಾದವರನ್ನು ರಕ್ಷಿಸುವುದಕ್ಕೆ ಪೋಲಿಸರಿಗೆ ಅಥವಾ ಅಂಗವಿಕಲ ವ್ಯಕ್ತಿಗಳಿಗೆ ಸುರಕ್ಷಿತ ಅಭಿರಕ್ಷೆ ಅಥವಾ ಪುನರ್ವಸತಿ ಕಲ್ಪಿಸಲು ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಂಸ್ಥೆಗೆ ಅಥವಾ ಸಂದರ್ಭಾನುಸಾರ ಇವೆರಡಕ್ಕೂ ಅಧಿಕಾರ ನೀಡುವುದನ್ನು;

(ಬಿ) ಅಂಗವಿಕಲ ವ್ಯಕ್ತಿಯು ತನಗೆ ರಕ್ಷಣಾ ಅಭಿರಕ್ಷೆ ಕಲ್ಪಿಸಬೇಕೆಂದು ಅಪೇಕ್ಷಿಸಿದರೆ ಅವನಿಗೆ ರಕ್ಷಣಾ ಅಭಿರಕ್ಷೆ ಕಲ್ಪಿಸುವುದನ್ನು;

(ಸಿ) ಅಂಥ ಅಂಗವಿಕಲ ವ್ಯಕ್ತಿಗೆ ಜೀವನಾಧಾರ ಒದಗಿಸುವುದನ್ನು

– ಒಳಗೊಂಡಿರತಕ್ಕದ್ದು.

(4) ಯಾರೇ ಪೊಲೀಸ್ ಅಧಿಕಾರಿಗೆ ಯಾರೇ ಅಂಗವಿಕಲ ವ್ಯಕ್ತಿಯು ದುರುಪಯೋಗಕ್ಕೆ, ಹಿಂಸೆಗೆ ಅಥವಾ ಶೋಷಣೆಗೆ ಗುರಿಯಾಗಿದ್ದಾನೆ ಎಂಬ ದೂರು ಬಂದರೆ ಅಥವಾ ಅದಾಗಿದೆಯೆಂದು ಬೇರೆ ರೀತಿಯಲ್ಲಿ ಗೊತ್ತಾದರೆ ಆ ಪೊಲೀಸ್ ಅಧಿಕಾರಿಯು ಅಂಥ ಬಾಧಿತ ವ್ಯಕ್ತಿಗೆ,–

(ಎ) ಉಪ–ಪ್ರಕರಣ (2)ರ ಮೇರೆಗೆ ರಕ್ಷಣೆಗಾಗಿ ಅವನು ಅಥವಾ ಅವಳು ಸ್ಥಳೀಯ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರ ಬಳಿ ನೆರವನ್ನು ಕೋರುವ ಹಕ್ಕು ಇದೆ ಎಂಬ ಬಗ್ಗೆ;

(ಬಿ) ಅಂಗವಿಕಲ ವ್ಯಕ್ತಿಗಳ ಪುನರ್‌ವಸತಿಗಾಗಿ ಕೆಲಸ ಮಾಡುತ್ತಿರುವ ಹತ್ತಿರದ ಸಂಸ್ಥೆಯ ಅಥವಾ ಸಂಘಸಂಸ್ಥೆಯ ವಿವರಗಳನ್ನು ನೀಡುವ ಬಗ್ಗೆ;

(ಸಿ) ಉಚಿತ ಕಾನೂನು ನೆರವು ಪಡೆಯಲು ಇರುವ ಹಕ್ಕಿನ ಬಗ್ಗೆ; ಮತ್ತು

(ಡಿ) ಅಂಥ ಅಪರಾಧದ ಬಗ್ಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅಂಥ ಅಪರಾಧಗಳಿಗೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ದೂರನ್ನು ದಾಖಲಿಸುವುದಕ್ಕೆ ಇರುವ ಹಕ್ಕಿನ ಬಗ್ಗೆ

– ಮಾಹಿತಿಯನ್ನು ನೀಡತಕ್ಕದ್ದು:

ಪರಂತು, ಸಂಜ್ಞೇಯ ಅಪರಾಧವನ್ನು ಮಾಡಿರುವುದರ ಬಗ್ಗೆ ಪೊಲೀಸ್ ಅಧಿಕಾರಿಯು ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಕಾನೂನಿಗೆ ಅನುಸಾರವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದನ್ನು ತಡೆಯುತ್ತದೆಂದು ಈ ಪ್ರಕರಣದಲ್ಲಿರುವ ಯಾವುದನ್ನೂ ಪೊಲೀಸ್ ಅಧಿಕಾರಿಯು ಯಾವುದೇ ರೀತಿಯಲ್ಲೂ ಅರ್ಥೈಸತಕ್ಕದ್ದಲ್ಲ.

(5) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ, ಆರೋಪಿತ ಕೃತ್ಯವು ಅಥವಾ ವರ್ತನೆಯು ಭಾರತ ದಂಡ ಸಂಹಿತೆ, 1860 (1860ರ 45)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಪರಾಧವೆಂದು ಕಂಡು ಬಂದರೆ, ಅವರು, ಈ ವಿಷಯದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರಿಗೆ ಅಥವಾ ಸಂದರ್ಭಾನುಸಾರ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ರವರಿಗೆ ದೂರನ್ನು ರವಾನಿಸಬಹುದು.

8. **ರಕ್ಷಣೆ ಮತ್ತು ಸುರಕ್ಷತೆ.–** (1) ಯಾವುದೇ ಅಪಾಯ ಸಂಭವದ, ಸಶಸ್ತ್ರ ಸಂಘರ್ಷದ, ಜನೋಪಕಾರದ ತುರ್ತು ಸಂದರ್ಭ ಸನ್ನಿವೇಶಗಳಲ್ಲಿ ಮತ್ತು ನೈಸರ್ಗಿಕ ವಿಕೋಪಗಳಂತಹ ಸನ್ನಿವೇಶಗಳಲ್ಲಿ ಅಂಗವಿಕಲ ವ್ಯಕ್ತಿಗಳು ಇತರರಂತೆಯೇ ಸಮಾನವಾದ ರಕ್ಷಣೆಯನ್ನು ಮತ್ತು ಸುರಕ್ಷತೆಯನ್ನು ಹೊಂದಿರತಕ್ಕದ್ದು.

(2) ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರವು ಮತ್ತು ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರವು, ಅಂಗವಿಕಲ ವ್ಯಕ್ತಿಗಳ ಸುರಕ್ಷತೆ ಮತ್ತು ರಕ್ಷಣೆಗಾಗಿ ವಿಪತ್ತು ನಿರ್ವಹಣೆ ಅಧಿನಿಯಮ, 2005 (2005ರ 53) ರ 2ನೇ ಪ್ರಕರಣದ (ಇ) ಖಂಡದಲ್ಲಿ ಹೇಳಿರುವಂತೆ ತಮ್ಮ ವಿಪತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ಅಂಗವಿಕಲ ವ್ಯಕ್ತಿಗಳು ಭಾಗಿಯಾಗುವುದನ್ನು ಖಚಿತಪಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ವಿಪತ್ತು ನಿರ್ವಹಣಾ ಅಧಿನಿಯಮ, 2005ರ 25ನೇ ಪ್ರಕರಣದ ಮೇರೆಗೆ ರಚಿತವಾದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜಿಲ್ಲೆಯಲ್ಲಿ ಇರುವ ಅಂಗವಿಕಲ ವ್ಯಕ್ತಿಗಳ ವಿವರಗಳ ದಾಖಲೆಯನ್ನು ಇಡತಕ್ಕದ್ದು ಮತ್ತು ಅಂಥ ವ್ಯಕ್ತಿಗಳು ಯಾವುದೇ ಅಪಾಯದ ಸನ್ನಿವೇಶಗಳಲ್ಲಿ ಅವುಗಳನ್ನು ಎದುರಿಸಿ ನಿಲ್ಲಲು ಯಾವ ರೀತಿ ಸಿದ್ಧರಾಗಿರಬೇಕು ಎಂಬ ಮಾಹಿತಿಯನ್ನು ತಿಳಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(4) ಯಾವುದೇ ಅಪಾಯ ಸಂಭವ, ಸಶಸ್ತ್ರ ಸಂಘರ್ಷ ಅಥವಾ ನೈಸರ್ಗಿಕ ವಿಪತ್ತಿನಂತಹ ಯಾವುದೇ ಸನ್ನಿವೇಶಗಳ ನಂತರದ ಪುನರ್‌ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಕೊಂಡ ಪ್ರಾಧಿಕಾರಗಳು ಈ ಬಗ್ಗೆ ಸಂಬಂಧಪಟ್ಟ ರಾಜ್ಯ ಅಂಗವಿಕಲರ ಆಯುಕ್ತರೊಂದಿಗೆ ಸಮಾಲೋಚಿಸಿ ಅಂಗವಿಕಲರಿಗೆ ಸುಲಭ ಸಾಧ್ಯವಾಗಬಹುದಾದ ಅಡಚಣೆರಹಿತವಾದ ಸೌಕರ್ಯಗಳನ್ನು ಒದಗಿಸುವಂಥ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

**9. ಮನೆ ಮತ್ತು ಕುಟುಂಬ.–** (1) ಅಂಗವಿಕಲ ಮಗುವಿನ ಸಂಪೂರ್ಣ ಒಳಿತಿಗಾಗಿ, ಅಗತ್ಯವೆನಿಸಿದರೆ, ಸಕ್ಷಮ ನ್ಯಾಯಾಲಯದ ಆದೇಶದ ಹೊರತು, ಅಂಗವಿಕಲತೆಯ ಆಧಾರದ ಮೇಲೆ ಆ ಮಗುವನ್ನು ಅದರ ಪೋಷಕರಿಂದ ಪ್ರತ್ಯೇಕಿಸತಕ್ಕದ್ದಲ್ಲ.

(2) ಅಂಗವಿಕಲ ಮಗುವನ್ನು ಪಾಲನೆ ಪೋಷಣೆ ಮಾಡುವುದಕ್ಕೆ ಪೋಷಕರಿಗೆ ಸಾಧ್ಯವಾಗದಿದ್ದರೆ, ಸಕ್ಷಮ ನ್ಯಾಯಾಲಯವು ಅಂಥ ಮಗುವನ್ನು ಅದರ ಹತ್ತಿರದ ಸಂಬಂಧಿಗಳೊಂದಿಗೆ ಇರಬೇಕೆಂದು ಆದೇಶಿಸಬಹುದು. ಅದಾಗದಿದ್ದರೆ, ಆ ಮಗುವಿನ ಸಮುದಾಯದ ಕೌಟುಂಬಿಕ ವಾತಾವರಣದಲ್ಲಿ ಇರಬೇಕೆಂದು ಆದೇಶಿಸಬಹುದು. ಅಂಗವಿಕಲ ಮಗುವನ್ನು ಪಾಲನೆ ಪೋಷಣೆ ಮಾಡಲು ಸಾಧ್ಯವಾಗದಿರುವ ಅಸಾಧಾರಣ ಪ್ರಕರಣಗಳಲ್ಲಿ ಸರ್ಕಾರವು ಅಥವಾ ಸರ್ಕಾರೇತರ ಸಂಘವು ನಡೆಸುವ ಆಶ್ರಯ ಮನೆಯಲ್ಲಿ ಇರಬೇಕೆಂದು ಆದೇಶಿಸಬಹುದು.

**10. ಸಂತಾನೋತ್ಪತ್ತಿ ಹಕ್ಕುಗಳು.–** (1) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳು ಸಂತಾನೋತ್ಪತ್ತಿ ಮತ್ತು ಕುಟುಂಬ ಯೋಜನೆಗೆ ಸಂಬಂಧಿಸಿದ ಸಮರ್ಪಕ ಮಾಹಿತಿಯು ಸುಲಭವಾಗಿ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಯಾರೇ ಅಂಗವಿಕಲ ವ್ಯಕ್ತಿಯನ್ನು, ಆತನು ಅಥವಾ ಆಕೆಯು ಮುಕ್ತವಾದ ಸಮ್ಮತಿ ನೀಡದ ಹೊರತು, ಆತನನ್ನು/ಆಕೆಯನ್ನು ಬಂಜೆತನಕ್ಕೆ ಅವಕಾಶ ನೀಡುವ ಆ ಯಾವುದೇ ವೈದ್ಯಕೀಯ ಪ್ರಕ್ರಿಯೆಗೆ ಒಳಪಡಿಸತಕ್ಕದ್ದಲ್ಲ.

**11. ಮತದಾನವನ್ನು ಮಾಡಲು ಸುಲಭ ಸಾಧ್ಯಗೊಳಿಸುವುದು.–** (1) ಭಾರತದ ಚುನಾವಣಾ ಆಯೋಗವು ಮತ್ತು ರಾಜ್ಯ ಚುನಾವಣಾ ಆಯೋಗಗಳು, ಅಂಗವಿಕಲ ವ್ಯಕ್ತಿಗಳು ಎಲ್ಲ ಮತದಾನ ಕೇಂದ್ರಗಳಿಗೆ ಸುಲಭವಾಗಿ ಪ್ರವೇಶಿಸುವುದಕ್ಕೆ ಮತ್ತು ಅವರು ಮತದಾನ ಪ್ರಕ್ರಿಯೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಎಲ್ಲ ಸಾಮಗ್ರಿಗಳು/ ಪರಿಕರಗಳು ಅವರಿಗೆ ಸುಲಭವಾಗಿ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**12. ನ್ಯಾಯಕ್ಕೆ ಮುಕ್ತ ಅವಕಾಶ.–** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ಅಂಗವಿಕಲತೆಯ ಕಾರಣದಿಂದ ತಾರತಮ್ಯಕ್ಕೆ ಒಳಗಾಗದೆ ಯಾವುದೇ ನ್ಯಾಯಾಲಯಕ್ಕೆ, ನ್ಯಾಯಾಧಿಕರಣಕ್ಕೆ, ಪ್ರಾಧಿಕಾರಕ್ಕೆ, ಆಯೋಗಕ್ಕೆ ಅಥವಾ ನ್ಯಾಯಿಕ ಅಥವಾ ಅರೆ–ನ್ಯಾಯಿಕ ತನಿಖಾ ಅಧಿಕಾರ ಹೊಂದಿರುವ ಯಾವುದೇ ಇತರ ನಿಕಾಯಕ್ಕೆ ಹೋಗಿ ನ್ಯಾಯ ಪಡೆಯಲು ತನಗಿರುವ ಮುಕ್ತ ಅವಕಾಶದ ಹಕ್ಕನ್ನು ಚಲಾಯಿಸಲು ಸಮರ್ಥರಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ವಿಶೇಷವಾಗಿ ಕುಟುಂಬದಿಂದ ಬೇರೆಯಾಗಿ ಜೀವಿಸುತ್ತಿರುವ ಮತ್ತು ಉನ್ನತ ಮಟ್ಟದ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳು ತಮ್ಮ ಕಾನೂನುಬದ್ಧ ಹಕ್ಕುಗಳನ್ನು ಚಲಾಯಿಸಲು ಸೂಕ್ತ ಬೆಂಬಲವನ್ನು ಒದಗಿಸುವ ಕ್ರಮಗಳನ್ನು ತರಲು ಸಮುಚಿತ ಸರ್ಕಾರವು, ಅಗತ್ಯಕ್ರಮ ಕೈಗೊಳ್ಳತಕ್ಕದ್ದು.

(3) ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರ ಮೇರೆಗೆ ರಚಿತವಾದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳು, ತಾವು ಒದಗಿಸುವ ಯಾವುದೇ ಯೋಜನೆಯ ಕಾರ್ಯಕ್ರಮದ, ಸೌಲಭ್ಯದ ಸೇವೆಯ ಪ್ರಯೋಜನವನ್ನು ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ಸಮಾನವಾಗಿ ಪಡೆಯಲು ಸಮಂಜಸ ಹೊಂದಾಣಿಕೆ ಮಾಡುವುದೂ ಸೇರಿದಂತೆ ಈ ಬಗ್ಗೆ ಅಗತ್ಯ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(4) ಸಮುಚಿತ ಸರ್ಕಾರವು,–

(ಎ) ತನ್ನ ಎಲ್ಲಾ ಸಾರ್ವಜನಿಕ ದಸ್ತಾವೇಜುಗಳು ಅಂಗವಿಕಲರಿಗೆ ಸುಲಭಲಭ್ಯ ನಮೂನೆಗಳಲ್ಲಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು;

(ಬಿ) ಕಡತಗಳ ದಾಖಲೆ ವಿಭಾಗಗಳಿಗೆ ಅಥವಾ ದಾಖಲೆಗಳನ್ನು ನೋಂದಾಯಿಸಿಕೊಳ್ಳುವ ಕಛೇರಿಗೆ ಅಥವಾ ಯಾವುದೇ ಕಛೇರಿಗೆ ಕಡತಗಳ ಜೋಡಣೆಗೆ, ಸಂಗ್ರಹಣೆಗೆ ಮತ್ತು ದಸ್ತಾವೇಜುಗಳನ್ನು ಹಾಗೂ ಸಾಕ್ಷ್ಯವನ್ನು ಸುಲಭಲಭ್ಯ ನಮೂನೆಗಳಲ್ಲಿ ಉಲ್ಲೇಖಿಸುವುದಕ್ಕೆ ಸಾಧ್ಯವಾಗುವಂತಹ ಆವಶ್ಯಕ ಸಲಕರಣೆಯನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು; ಮತ್ತು

(ಸಿ) ಅಂಗವಿಕಲ ವ್ಯಕ್ತಿಗಳು ಪ್ರಮಾಣದ ಮೇಲೆ ಕೊಟ್ಟ ಯಾವುದೇ ಹೇಳಿಕೆಗಳನ್ನು, ವಾದ ಮಂಡನೆಗಳನ್ನು ಅಥವಾ ಅಭಿಪ್ರಾಯಗಳನ್ನು ಅವರು ಇಚ್ಛಿಸುವ ಸಂವಹನ ಭಾಷೆಯಲ್ಲಿ, ರೀತಿಯಲ್ಲಿ ದಾಖಲಿಸಲು ಅನುವು ಮಾಡಿಕೊಡುವಂತಹ ಎಲ್ಲ ಆವಶ್ಯಕ ಸೌಲಭ್ಯಗಳನ್ನು ಅಥವಾ ಸಲಕರಣೆ ಲಭ್ಯವಾಗುವಂತೆ ಮಾಡಲು

– ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**13. ಕಾನೂನು ಪ್ರಕಾರ ಅರ್ಹತೆ.–** (1) ಅಂಗವಿಕಲ ವ್ಯಕ್ತಿಗಳು ಇತರರಂತೆಯೇ ಸಮಾನವಾದ ರೀತಿಯಲ್ಲಿ ಚರ ಅಥವಾ ಸ್ಥಿರ ಸ್ವತ್ತಿನ ಮಾಲೀಕರಾಗುವುದಕ್ಕೆ ಅಥವಾ ವಂಶಪಾರಂಪರ್ಯವಾಗಿ ಹೊಂದುವುದಕ್ಕೆ, ತಮ್ಮ ಹಣಕಾಸು ವ್ಯವಹಾರಗಳನ್ನು ನಿಯಂತ್ರಿಸುವುದಕ್ಕೆ ಹಾಗೂ ಬ್ಯಾಂಕುಗಳಿಂದ ಸಾಲಗಳನ್ನು ಪಡೆಯುವುದಕ್ಕೆ, ಅಡಮಾನಗಳನ್ನು ಮಾಡುವುದನ್ನು ಅಥವಾ ಪಡೆಯುವುದನ್ನು ಮತ್ತು ಬೇರೆ ರೀತಿಯ ಹಣಕಾಸು ಸಾಲ ಪಡೆಯುವುದನ್ನು ಸಮುಚಿತ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳು ತಮ್ಮ ಜೀವನದ ಎಲ್ಲ ವಿಷಯಗಳಲ್ಲೂ ಇತರರೊಂದಿಗೆ ಸಮಾನ ಆಧಾರದ ಮೇಲೆ ಕಾನೂನು ಪ್ರಕಾರ ಅರ್ಹತೆಯನ್ನು ಹೊಂದಿರುವುದನ್ನು ಮತ್ತು ಎಲ್ಲ ಕಡೆಯೂ ಕಾನೂನಿನ ಮುಂದೆ ಯಾರೇ ಇತರ ವ್ಯಕ್ತಿಯಂತೆಯೇ ಸಮಾನ ಮಾನ್ಯತೆಯ ಹಕ್ಕು ಹೊಂದಿರುವುದನ್ನು ಸಮುಚಿತ ಸರ್ಕಾರವು, ಖಚಿತಪಡಿಸಿಕೊಳ್ಳತಕ್ಕದ್ದು.

(3) ನಿರ್ದಿಷ್ಟ ಹಣಕಾಸಿನ, ಸ್ವತ್ತಿನ ಅಥವಾ ಇತರ ಆರ್ಥಿಕ ವ್ಯವಹಾರದಲ್ಲಿ ಅಂಗವಿಕಲ ವ್ಯಕ್ತಿಯೊಂದಿಗೆ ಬೆಂಬಲ ಒದಗಿಸಿದ ಮತ್ತು ಅಂಗವಿಕಲ ವ್ಯಕ್ತಿಯ ನಡುವಣ ಹಿತಾಸಕ್ತಿ ಬಗ್ಗೆ ಸಂಘರ್ಷ ಉಂಟಾದಾಗ, ಅಂಥ ಬೆಂಬಲ ನೀಡಿದ ವ್ಯಕ್ತಿಯು, ಅಂತಹ ವ್ಯವಹಾರದಲ್ಲಿ ಅಂಗವಿಕಲ ವ್ಯಕ್ತಿಗೆ ಬೆಂಬಲ ಒದಗಿಸುವುದನ್ನು ನಿಲ್ಲಿಸತಕ್ಕದ್ದು:

ಪರಂತು, ಅಂಗವಿಕಲ ವ್ಯಕ್ತಿಗೆ ಬೆಂಬಲ ನೀಡುವ ವ್ಯಕ್ತಿಯು ರಕ್ತಸಂಬಂಧದಿಂದ, ವಿವಾಹ ಸಂಬಂಧದಿಂದ ಅಥವಾ ದತ್ತು ತೆಗೆದುಕೊಂಡಿದ್ದರಿಂದಾದ ಸಂಬಂಧದಿಂದ ಸಂಬಂಧಿ ಎಂಬ ಆಧಾರದ ಮೇಲೆ ಮಾತ್ರವೇ ಹಿತಾಸಕ್ತಿಯಲ್ಲಿ ಸರಿ ಹೊಂದಾಣಿಕೆ ಆಗದ್ದು ಎಂದು ಪೂರ್ವಭಾವನೆ ಮಾಡತಕ್ಕದ್ದಲ್ಲ.

(4) ಅಂಗವಿಕಲ ವ್ಯಕ್ತಿಯು ಯಾವುದೇ ಬೆಂಬಲದ ಏರ್ಪಾಡುಗಳನ್ನು ಬದಲಾಯಿಸಬಹುದು, ಮಾರ್ಪಾಡು ಮಾಡಬಹುದು ಮತ್ತು ತೆಗೆದು ಹಾಕಬಹುದು ಹಾಗೂ ಮತ್ತೊಬ್ಬರ ಬೆಂಬಲವನ್ನು ಪಡೆದುಕೊಳ್ಳಬಹುದು:

ಪರಂತು, ಅಂಥ ಬದಲಾವಣೆ, ಮಾರ್ಪಾಡು ಮಾಡುವುದನ್ನು ಮತ್ತು ತೆಗೆದು ಹಾಕುವುದನ್ನು ಇನ್ನು ಮುಂದೆ ಮಾಡಿಕೊಳ್ಳತಕ್ಕದ್ದು ಮತ್ತು ಮೇಲೆ ಹೇಳಿದ ಬೆಂಬಲ ವ್ಯವಸ್ಥೆ ಬಗ್ಗೆ ಅಂಗವಿಕಲ ವ್ಯಕ್ತಿಯು ಯಾರೇ ಮೂರನೇ ಪಕ್ಷಕಾರರೊಂದಿಗೆ ಮಾಡಿಕೊಂಡಿರುವ ವ್ಯವಹಾರಗಳು ಆ ನಿಮಿತ್ತ ಅನೂರ್ಜಿತವಾಗತಕ್ಕದ್ದಲ್ಲ.

(5) ಅಂಗವಿಕಲ ವ್ಯಕ್ತಿಗೆ ಬೆಂಬಲವನ್ನು ಒದಗಿಸುವ ಯಾರೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಯ ಮೇಲೆ ಅನುಚಿತ ಪ್ರಭಾವವನ್ನು ಬೀರತಕ್ಕದ್ದಲ್ಲ ಮತ್ತು ಅವನ ಅಥವಾ ಅವಳ ಇಚ್ಛಾ ಸ್ವಾತಂತ್ರ್ಯವನ್ನು, ಘನತೆಯನ್ನು ಮತ್ತು ಗೌಪ್ಯತೆಯನ್ನು ಗೌರವಿಸತಕ್ಕದ್ದು.

**14. ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಿಂದ ಬೆಂಬಲಕ್ಕೆ ಅವಕಾಶ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ, ರಾಜ್ಯಸರ್ಕಾರವು ಅಧಿಸೂಚಿಸಿದ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಯಾವುದೇ ಗೊತ್ತುಪಡಿಸಿದ ಪ್ರಾಧಿಕಾರಕ್ಕೆ, ಸಾಕಷ್ಟು ಮತ್ತು ಸಮರ್ಪಕ ಬೆಂಬಲವನ್ನು ಯಾವ ಅಂಗವಿಕಲ ವ್ಯಕ್ತಿಗೆ ಒದಗಿಸಲಾಗಿದೆಯೋ ಆ ಅಂಗವಿಕಲ ವ್ಯಕ್ತಿಯು, ಕಾನೂನುಸಮ್ಮತ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಅಸಮರ್ಥನಾಗಿರುವನೆಂದು ಕಂಡುಬಂದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ವ್ಯಕ್ತಿಯೊಂದಿಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ, ಸಮಾಲೋಚಿಸಿ ಅಂಥ ಅಂಗವಿಕಲ ವ್ಯಕ್ತಿಯ ಪರವಾಗಿ ಕಾನೂನುಸಮ್ಮತ ನಿರ್ಣಯಗಳನ್ನು ತೆಗೆದುಕೊಳ್ಳುವ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯು ಪರಿಮಿತ ಪಾಲಕತ್ವದ ಇನ್ನಷ್ಟು ಬೆಂಬಲ ನೀಡುವುದಕ್ಕೆ ಅವಕಾಶ ಕಲ್ಪಿಸುವ ಆದೇಶ ಹೊರಡಿಸಬಹುದು:

ಪರಂತು, ಜಿಲ್ಲಾ ನ್ಯಾಯಾಲಯ ಅಥವಾ ಸಂದರ್ಭಾನುಸಾರ ಗೊತ್ತುಪಡಿಸಿದ ಪ್ರಾಧಿಕಾರವು, ಅಂಥ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗೆ ಸಂಪೂರ್ಣ ಬೆಂಬಲವನ್ನು ನೀಡಬಹುದು ಅಥವಾ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯು ಬೆಂಬಲಕ್ಕೆ ಆದೇಶವನ್ನು ಆಗಾಗ ನೀಡಬೇಕಾಗಿದ್ದರೆ, ಆ ಯಾವುದೇ ಸಂದರ್ಭದಲ್ಲಿ, ಆ ಬೆಂಬಲವನ್ನು ನೀಡುವ ಬಗೆಗಿನ

ತೀರ್ಮಾನವನ್ನು ಸಂದರ್ಭಾನುಸಾರ, ನ್ಯಾಯಾಲಯವು ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ಪುನರ್ ಪುನರಾವಲೋಕನ ಮಾಡತಕ್ಕದ್ದು ಹಾಗೂ ಒದಗಿಸಬೇಕಾದ ಬೆಂಬಲದ ಬಗೆಯನ್ನು ಮತ್ತು ವಿಧಾನವನ್ನು ನಿರ್ಧರಿಸತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಿಂದ ಬೆಂಬಲಕ್ಕೆ ವ್ಯವಸ್ಥೆ" ಎಂದರೆ, ಅಂಥ ವ್ಯಕ್ತಿಯ ಮತ್ತು ಅಂಗವಿಕಲ ವ್ಯಕ್ತಿಯ ನಡುವಣ ಪರಸ್ಪರ ಹೊಂದಾಣಿಕೆಯಿಂದ ಮತ್ತು ನಂಬಿಕೆಯಿಂದ ಜಂಟಿಯಾಗಿ ನಿರ್ಣಯ ತೆಗೆದುಕೊಳ್ಳುವ ವ್ಯವಸ್ಥೆ, ಇಂಥ ವ್ಯವಸ್ಥೆಯು ನಿರ್ದಿಷ್ಟ ಅವಧಿಗೆ ಮತ್ತು ನಿರ್ದಿಷ್ಟ ನಿರ್ಣಯಕ್ಕೆ ಮತ್ತು ಸನ್ನಿವೇಶಕ್ಕೆ ಸೀಮಿತವಾಗಿರತಕ್ಕದ್ದು ಮತ್ತು ಜಂಟಿ ನಿರ್ಣಯವನ್ನು ಅಂಗವಿಕಲ ವ್ಯಕ್ತಿಯ ಇಚ್ಛೆಗೆ ಅನುಸಾರವಾಗಿ ಕಾರ್ಯಗತಗೊಳಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಯಾವುದೇ ಉಪಬಂಧದ ಮೇರೆಗೆ ಅಂಗವಿಕಲ ವ್ಯಕ್ತಿಯ ಬೆಂಬಲಕ್ಕೆಂದು ನೇಮಕಗೊಂಡ ಪ್ರತಿಯೊಬ್ಬ ಜವಾಬ್ದಾರಿಯುಳ್ಳ ಅಂಥ ವ್ಯಕ್ತಿಯು ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಾನೆಂದು ಭಾವಿಸತಕ್ಕದ್ದು.

(3) ಗೊತ್ತುಪಡಿಸಿದ ಪ್ರಾಧಿಕಾರವು ಕಾನೂನಿನ ಅನ್ವಯ ಸೀಮಿತ ಜವಾಬ್ದಾರಿಯುಳ್ಳ ವ್ಯಕ್ತಿಯನ್ನು ನೇಮಕ ಮಾಡಿರುವ ನಿರ್ಣಯದಿಂದ ಬಾಧಿತನಾದ ಯಾರೇ ಅಂಗವಿಕಲ ವ್ಯಕ್ತಿಯು, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿರಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

**15. ಬೆಂಬಲ ನೀಡಲು ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು.–** (1) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ತಮಗೆ ಕಾನೂನು ಪ್ರಕಾರ ಇರುವ ಅರ್ಹತೆ ಹಕ್ಕನ್ನು ಚಲಾಯಿಸಲು ನೆರವಾಗುವುದಕ್ಕಾಗಿ ಸಮುದಾಯವನ್ನು ಸಂಘಟಿಸಲು ಮತ್ತು ಸಾಮಾಜಿಕ ಅರಿವನ್ನುಂಟು ಮಾಡಲು ಒಂದು ಅಥವಾ ಒಂದಕ್ಕಿಂಥ ಹೆಚ್ಚಿನ ಪ್ರಾಧಿಕಾರಿಗಳನ್ನು ಗೊತ್ತುಪಡಿಸತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ಗೊತ್ತುಪಡಿಸಿದ ಪ್ರಾಧಿಕಾರವು ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಂಗವಿಕಲ ವ್ಯಕ್ತಿಗಳು ಕಾನೂನು ಪ್ರಕಾರ ತಮಗಿರುವ ಅರ್ಹತೆ ಹಕ್ಕನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಬೆಂಬಲದ ಏರ್ಪಾಡುಗಳನ್ನು ಮಾಡುವುದಕ್ಕೆ ಮತ್ತು ಅವರಿಗೆ ಅಗತ್ಯವಿರಬಹುದಾದ ಹೆಚ್ಚಿನ ಬೆಂಬಲಗಳನ್ನು ಒದಗಿಸುವುದಕ್ಕೆ ಯಾವುದೇ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ III

### ಶಿಕ್ಷಣ

**16. ಶಿಕ್ಷಣ ಸಂಸ್ಥೆಗಳ ಕರ್ತವ್ಯ.–** ಸಮುಚಿತ ಸರ್ಕಾರದಿಂದ ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ಧನಸಹಾಯವನ್ನು ಅಥವಾ ಮಾನ್ಯತೆಯನ್ನು ಪಡೆದಿರುವ ಎಲ್ಲ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ಮಕ್ಕಳಿಗೆ ಸಮ್ಮಿಳಿತ ಶಿಕ್ಷಣ ನೀಡುವುದಕ್ಕೆ ಪ್ರಯತ್ನಿಸತಕ್ಕದ್ದು ಮತ್ತು ಆ ನಿಟ್ಟಿನಲ್ಲಿ,–

(i) ಅಂಗವಿಕಲ ಮಕ್ಕಳೆಂದು ತಾರತಮ್ಯ ಮಾಡದೇ ಅವರಿಗೆ ಶಾಲೆಗೆ ಪ್ರವೇಶ ನೀಡತಕ್ಕದ್ದು ಮತ್ತು ಅವರು ಇತರ ಮಕ್ಕಳೊಂದಿಗೆ ಸಮಾನವಾಗಿ ಶಿಕ್ಷಣ ಪಡೆಯಲು ಹಾಗೂ ಕ್ರೀಡೆ ಮತ್ತು ಮನರಂಜನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸತಕ್ಕದ್ದು;

(ii) ಕಟ್ಟಡವನ್ನು, ಕ್ಯಾಂಪಸ್‌ನ್ನು ನಿರ್ಮಿಸತಕ್ಕದ್ದು ಮತ್ತು ಅವರಿಗೆ ವಿವಿಧ ಸೌಲಭ್ಯಗಳು ಲಭ್ಯವಾಗುವಂತೆ ಮಾಡತಕ್ಕದ್ದು;

(iii) ಆಯಾ ಮಕ್ಕಳ ಅಗತ್ಯಗಳಿಗೆ ಅನುಸಾರವಾಗಿ ಸಮಂಜಸ ಹೊಂದಾಣಿಕೆ ಕಲ್ಪಿಸತಕ್ಕದ್ದು;

(iv) ಮಕ್ಕಳು ವೈಯಕ್ತಿಕವಾಗಿ ಇತರರೊಡನೆ ಸಂಪೂರ್ಣವಾಗಿ ಬೆರೆಯುವ ಗುರಿಗೆ ಸುಸಂಗತವಾದ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಡುವಂಥ ಪರಿಸರದಲ್ಲಿ ವ್ಯಕ್ತಿಗತ ಅಥವಾ ಅನ್ಯಥಾ ಮತ್ತು ಅವಶ್ಯಕ ಬೆಂಬಲವನ್ನು ಒದಗಿಸತಕ್ಕದ್ದು;

(v) ಕುರುಡು ಅಥವಾ ಕಿವುಡು ಅಥವಾ ಇವೆರಡೂ ವಿಕಲತೆ ಇರುವ ವ್ಯಕ್ತಿಗಳಿಗೆ ಶಿಕ್ಷಣವನ್ನು ಅತ್ಯಂತ ಸಮುಚಿತವಾದ ಭಾಷೆಗಳಲ್ಲಿ ಮತ್ತು ವಿಧಾನಗಳಲ್ಲಿ ಮತ್ತು ಸಂವಹನ ಸಾಧನಗಳಲ್ಲಿ ಕೊಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(vi) ಸಾಧ್ಯವಾದಷ್ಟು ಬೇಗನೆ ಮಕ್ಕಳಲ್ಲಿ ಇರುವ ನಿರ್ದಿಷ್ಟ ಕಲಿಕಾ ಅಸಮರ್ಥತೆಗಳನ್ನು ಪತ್ತೆ ಮಾಡತಕ್ಕದ್ದು ಮತ್ತು ಅವುಗಳನ್ನು ನಿವಾರಿಸಲು ಸೂಕ್ತ ಬೋಧನೆ ಮತ್ತು ಇತರ ಕ್ರಮಗಳ ಸಹಿತ ಕೈಗೊಳ್ಳತಕ್ಕದ್ದು;

(vii) ಪ್ರತಿಯೊಬ್ಬ ಅಂಗವಿಕಲ ವಿದ್ಯಾರ್ಥಿಯು ಶಿಕ್ಷಣದಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ, ಅದರಲ್ಲಿನ ಸಾಧನೆಯ ಘಟ್ಟಗಳ ಬಗ್ಗೆ ಮತ್ತು ಶಿಕ್ಷಣವನ್ನು ಪೂರ್ಣಪ್ರಮಾಣದಲ್ಲಿ ಮುಗಿಸುವುದರ ಸಂಬಂಧವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು;

(viii) ಅಂಗವಿಕಲ ಮಕ್ಕಳಿಗೆ ಮತ್ತು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ಮಕ್ಕಳ ಪರಿಚಾರಕನಿಗೆ ಕೂಡ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

**17. ಸಮ್ಮಿಳಿತ ಶಿಕ್ಷಣಕ್ಕೆ ಉತ್ತೇಜಿಸಲು ಮತ್ತು ಅದಕ್ಕೆ ಅನುಕೂಲ ಕಲ್ಪಿಸಲು ನಿರ್ದಿಷ್ಟ ಕ್ರಮಗಳು.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು 16ನೇ ಪ್ರಕರಣದ ಉದ್ದೇಶಕ್ಕಾಗಿ ಈ ಕೆಳಕಂಡ ಕ್ರಮಗಳನ್ನು, ಎಂದರೆ:–

(ಎ) ಅಂಗವಿಕಲ ಮಕ್ಕಳನ್ನು ಗುರುತಿಸುವುದಕ್ಕಾಗಿ, ಶಾಲೆಗೆ ಹೋಗುವ ಮಕ್ಕಳ ಸಮೀಕ್ಷೆಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನಡೆಸತಕ್ಕದ್ದು ಹಾಗೂ ಅವರ ವಿಶೇಷ ಅಗತ್ಯತೆಗಳನ್ನು ಕಂಡುಕೊಳ್ಳುವುದಕ್ಕಾಗಿ ಮತ್ತು ಅವುಗಳನ್ನು ಎಷ್ಟರಮಟ್ಟಿಗೆ ಪೂರೈಸಬಹುದೆಂಬ ಬಗ್ಗೆ:

ಪರಂತು, ಮೊದಲ ಸಮೀಕ್ಷೆಯನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ನಡೆಸುವ ಬಗ್ಗೆ;

(ಬಿ) ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸ್ಥಾಪಿಸುವ ಬಗ್ಗೆ;

(ಸಿ) ಸಂಜ್ಞೆ ಭಾಷೆಯಲ್ಲಿ ಮತ್ತು ಬ್ರೈಲ್ ಲಿಪಿಯಲ್ಲಿ ವಿದ್ಯಾರ್ಹತೆ ಹೊಂದಿರುವ ಅಂಗವಿಕಲ ಶಿಕ್ಷಕರನ್ನು ಮತ್ತು ಬೌದ್ಧಿಕ ಅಂಗವಿಕಲತೆಯ ಮಕ್ಕಳಿಗೆ ಬೋಧಿಸಲು ತರಬೇತಿ ಹೊಂದಿರುವ ಶಿಕ್ಷಕರ ಸಹ ಒಳಗೊಂಡಂತೆ ಅಂಥ ಶಿಕ್ಷಕರನ್ನು ತರಬೇತಿಗೊಳಿಸುವ ಬಗ್ಗೆ ಮತ್ತು ನಿಯೋಜಿಸುವ ಬಗ್ಗೆ;

(ಡಿ) ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ಸಮ್ಮಿಳಿತ ಶಿಕ್ಷಣಕ್ಕೆ ನೆರವಾಗಲು ವೃತ್ತಿ ನಿರತರಿಗೆ ಮತ್ತು ಸಿಬ್ಬಂದಿಗೆ ತರಬೇತಿ ನೀಡುವ ಬಗ್ಗೆ;

(ಇ) ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ನೆರವಾಗಲು ಸಾಕಷ್ಟು ಸಂಖ್ಯೆಯಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ;

(ಎಫ್) ಮಾತನಾಡುವುದರಲ್ಲಿ, ಸಂವಹನದಲ್ಲಿ ಅಥವಾ ಭಾಷೆಯ ಬಳಕೆಯಲ್ಲಿ ದೌರ್ಬಲ್ಯ ಇರುವ ವ್ಯಕ್ತಿಗಳು ತಮ್ಮ ದಿನನಿತ್ಯದ ಸಂವಹನದ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಮತ್ತು ಅವರು ತಮ್ಮ ಸಮುದಾಯ ಹಾಗೂ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮದೇ ಆದ ಕೊಡುಗೆಯನ್ನು ನೀಡುವುದು ಅವರಿಗೆ ಸಾಧ್ಯವಾಗುವಂತೆ ಮಾಡಲು ಅವರಾಡುವ ಮಾತುಗಳ ಬಳಕೆಗೆ ಇಂಬು ಕೊಡುವಂತಹ ಸಂಪರ್ಕ ಸಾಧನಗಳು ಮತ್ತು ಸಾಧನಗಳು, ಬ್ರೈಲ್ ಮತ್ತು ಸಂಜ್ಞೆ ಭಾಷೆ ಸೇರಿದಂತೆ ವರ್ಧಿಸುವ ಮತ್ತು ಪರ್ಯಾಯವಾದ ಸಮರ್ಪಕ ವಿಧಾನಗಳ ಬಳಕೆಗೆ ಉತ್ತೇಜನ ನೀಡುವ ಬಗ್ಗೆ;

(ಜಿ) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಗಳಿರುವ ವಿದ್ಯಾರ್ಥಿಗಳಿಗೆ ಹದಿನೆಂಟು ವರ್ಷ ವಯಸ್ಸಿನವರೆಗೆ ಉಚಿತವಾಗಿ ಪುಸ್ತಕಗಳನ್ನು, ಇತರ ಕಲಿಕಾ ಸಾಮಗ್ರಿಗಳನ್ನು ಮತ್ತು ಸೂಕ್ತ ರೀತಿಯ ಸಹಾಯಕ ಸಾಧನೋಪಾಯಗಳನ್ನು ಒದಗಿಸುವ ಬಗ್ಗೆ;

(ಹೆಚ್) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯಿರುವ ವಿದ್ಯಾರ್ಥಿಗಳಿಗೆ ಅರ್ಹ ಪ್ರಕರಣಗಳಲ್ಲಿ ವಿದ್ಯಾರ್ಥಿವೇತನಗಳನ್ನು ನೀಡುವ ಬಗ್ಗೆ;

(ಐ) ಅಂಗವಿಕಲ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ, ಅವರು ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಯನ್ನು ಬರೆದು ಪೂರ್ಣಗೊಳಿಸುವುದಕ್ಕಾಗಿ ಅವಶ್ಯವಿರುವಂಥ ಹೆಚ್ಚಿನ ಸಮಯವನ್ನು ಅವರಿಗೆ ನೀಡುವುದು, ದೃಷ್ಟಿ ಮಾಂದ್ಯರಿಗೆ ಪರೀಕ್ಷೆ ಬರೆಯಲು ಬರಹಗಾರನ ಅಥವಾ ಲಿಪಿಕಾರನ ಸೌಲಭ್ಯವನ್ನು ಒದಗಿಸುವುದು, ಪಠ್ಯಕ್ರಮದಲ್ಲಿ ದ್ವಿತೀಯ ಮತ್ತು ತೃತೀಯ ಭಾಷೆ ವ್ಯಾಸಂಗಗಳಿಗೆ ವಿನಾಯಿತಿ ನೀಡುವುದು ಮುಂತಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡುವ ಬಗ್ಗೆ;

(ಜೆ) ಕಲಿಕೆಯಲ್ಲಿ ಸುಧಾರಣೆ ತಂದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸಂಶೋಧನೆಗೆ ಉತ್ತೇಜನ ನೀಡುವ ಬಗ್ಗೆ; ಮತ್ತು

(ಕೆ) ಅಗತ್ಯವಿರಬಹುದಾದ ಯಾವುದೇ ಇತರ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ

– ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

18. **ವಯಸ್ಕರ ಶಿಕ್ಷಣ.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ವಯಸ್ಕರ ಶಿಕ್ಷಣ ಮತ್ತು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮಗಳಲ್ಲಿ ಇತರರೊಂದಿಗೆ ಅವರೂ ಕೂಡ ಸಮಾನವಾಗಿ ಭಾಗವಹಿಸುವುದನ್ನು ಉತ್ತೇಜಿಸುವುದಕ್ಕೆ, ರಕ್ಷಿಸುವುದಕ್ಕೆ ಮತ್ತು ಖಚಿತಪಡಿಸಿಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ IV

## ಕೌಶಲ್ಯ ಸಂವರ್ಧನೆ ಮತ್ತು ಉದ್ಯೋಗ

19. **ವೃತ್ತಿ ತರಬೇತಿ ಮತ್ತು ಸ್ವಯಂ ಉದ್ಯೋಗ.–** (1) ಸಮುಚಿತ ಸರ್ಕಾರವು ವಿಶೇಷವಾಗಿ ಅಂಗವಿಕಲ ವ್ಯಕ್ತಿಗಳಿಗೆ ವೃತ್ತಿಪರ ತರಬೇತಿ ಮತ್ತು ಸ್ವಯಂ ಉದ್ಯೋಗ ನೀಡುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಉದ್ಯೋಗಕ್ಕೆ ಅನುಕೂಲ ಕಲ್ಪಿಸಲು ಬೆಂಬಲ ನೀಡಲು ರಿಯಾಯಿತಿ ದರಗಳಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(2) ಉಪ ಪ್ರಕರಣ (1)ರಲ್ಲಿ ತಿಳಿಸಿದಂತೆ ರೂಪಿಸಿದ ಯೋಜನೆಗಳು ಮತ್ತು ಕಾರ್ಯಕ್ರಮಗಳು,–

(ಎ) ಎಲ್ಲ ಪ್ರಚಲಿತ ವಿದ್ಯುಕ್ತ ಮತ್ತು ವಿದ್ಯುಕ್ತವಲ್ಲದ ವೃತ್ತಿಪರ ತರಬೇತಿ ಮತ್ತು ಕೌಶಲ ತರಬೇತಿ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಅಂಗವಿಕಲ ವ್ಯಕ್ತಿಗಳೂ ಒಳಗೊಳ್ಳುವುದಕ್ಕೆ;

(ಬಿ) ಅಂಗವಿಕಲ ವ್ಯಕ್ತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ತರಬೇತಿ ಪಡೆದುಕೊಳ್ಳುವುದಕ್ಕೆ ಸಾಕಷ್ಟು ಬೆಂಬಲ ಮತ್ತು ಅನುಕೂಲಗಳೂ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ;

(ಸಿ) ವಿಕಸನದಲ್ಲಿ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಕುಂಠಿತವಾದವರು, ಬಹುವಿಧ ಅಂಗವಿಕಲತೆ ಇರುವವರು ಮತ್ತು ಆಟಿಸಂ ಪೀಡಿತ ಅಂಗವಿಕಲರಿಗೆ ಮಾರುಕಟ್ಟೆಯೊಂದಿಗೆ ಸಕ್ರಿಯ ಸಂಪರ್ಕಗಳನ್ನು ಒದಗಿಸುವಂತಹ ಪ್ರತ್ಯೇಕವಾದ ಕೌಶಲ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕೆ;

(ಡಿ) ರಿಯಾಯಿತಿ ದರಗಳಲ್ಲಿ ಸಣ್ಣ ಸಾಲಗಳು ಮತ್ತು ಕಿರು ಸಾಲಗಳನ್ನು ನೀಡುವುದಕ್ಕೆ;

(ಇ) ಅಂಗವಿಕಲ ವ್ಯಕ್ತಿಗಳು ತಯಾರು ಮಾಡಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡುವುದಕ್ಕೆ; ಮತ್ತು

(ಎಫ್) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ದತ್ತಾಂಶ ಸೇರಿದಂತೆ ಕೌಶಲ್ಯ ತರಬೇತಿಯಲ್ಲಿ ಮತ್ತು ಸ್ವಯಂ ಉದ್ಯೋಗದಲ್ಲಿ ಆಗಿರುವ ಪ್ರಗತಿಯ ಒಟ್ಟುಗೂಡಿಸದ ದತ್ತಾಂಶವನ್ನು ನಿರ್ವಹಿಸುವುದಕ್ಕೆ

– ಅವಕಾಶ ಕಲ್ಪಿಸತಕ್ಕದ್ದು.

**20. ಉದ್ಯೋಗದಲ್ಲಿ ತಾರತಮ್ಯ ಮಾಡಕೂಡದು.–** (1) ಯಾವುದೇ ಸರ್ಕಾರಿ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಯಾರೇ ಅಂಗವಿಕಲ ವ್ಯಕ್ತಿಗೆ ತಾರತಮ್ಯ ಮಾಡತಕ್ಕದ್ದಲ್ಲ :

ಪರಂತು, ಸಮುಚಿತ ಸರ್ಕಾರವು ಯಾವುದೇ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು ಅಧಿಸೂಚನೆ ಮೂಲಕ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಈ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಯಾವುದೇ ಸಂಸ್ಥೆಗೆ ವಿನಾಯಿತಿ ನೀಡಬಹುದು.

(2) ಪ್ರತಿಯೊಂದು ಸರ್ಕಾರಿ ಸಂಸ್ಥೆಯು ಅಂಗವಿಕಲ ನೌಕರರಿಗೆ ಸೂಕ್ತ ಸೌಕರ್ಯವನ್ನು ಒದಗಿಸತಕ್ಕದ್ದು ಹಾಗೂ ತೊಡಕುಗಳಿಲ್ಲದ ಸಮರ್ಪಕವಾದ ಮತ್ತು ಅನುಕೂಲಕರ ಪರಿಸರ ಇರುವಂತೆ ಮಾಡತಕ್ಕದ್ದು.

(3) ವ್ಯಕ್ತಿಯ ಅಂಗವಿಕಲತೆಯ ಕಾರಣದಿಂದ ಮಾತ್ರವೇ ಆ ವ್ಯಕ್ತಿಯನ್ನು ದರ್ಜೆಯಿಂದ ಬಿಡುಗಡೆ ಮಾಡತಕ್ಕದ್ದಲ್ಲ ಅಥವಾ ದರ್ಜೆಯಿಂದ ಕೆಳಗಿಳಿಸತಕ್ಕದ್ದಲ್ಲ.

(4) ಯಾವುದೇ ಸರ್ಕಾರಿ ಸಂಸ್ಥೆಯು, ಯಾರೇ ನೌಕರನಿಗೆ ಅಥವಾ ನೌಕರಳಿಗೆ ಆತನ ಅಥವಾ ಆಕೆಯ ಸೇವಾವಧಿಯಲ್ಲಿ ಯಾವುದೇ ರೀತಿಯ ಅಂಗವಿಕಲತೆ ಬಂದರೆ ಅಂಥ ನೌಕರನನ್ನು ಅಥವಾ ನೌಕರಳನ್ನು ದರ್ಜೆಯಿಂದ ಬಿಡುಗಡೆ ಮಾಡತಕ್ಕದ್ದಲ್ಲ ಅಥವಾ ದರ್ಜೆಯಿಂದ ಕೆಳಗಿಳಿಸತಕ್ಕದ್ದಲ್ಲ:

ಪರಂತು, ನೌಕರನು ಹೊಂದಿದ್ದ ಹುದ್ದೆಯ ಕರ್ತವ್ಯವನ್ನು ಆ ನೌಕರನಿಗೆ ಅಂಗವಿಕಲತೆ ಬಂದ ನಂತರ ನಿರ್ವಹಿಸಲು ಅರ್ಹನಾಗಿಲ್ಲದಿದ್ದರೆ ಆತನನ್ನು ಅದೇ ವೇತನ ಶ್ರೇಣಿಯಲ್ಲಿ ಮತ್ತು ಸೇವಾ ಪ್ರಯೋಜನಗಳೊಂದಿಗೆ ಇತರ ಹುದ್ದೆಗೆ ವರ್ಗಾಯಿಸತಕ್ಕದ್ದು:

ಮತ್ತು ಪರಂತು, ಅಂಥ ನೌಕರನನ್ನು ಯಾವುದೇ ಹುದ್ದೆಗೆ ನಿಯುಕ್ತಿ ಮಾಡಲು ಸಾಧ್ಯವಾಗದಿದ್ದರೆ, ಆತನನ್ನು ಸೂಕ್ತವಾದ ಹುದ್ದೆ ಲಭ್ಯವಾಗುವವರೆಗೆ ಅಥವಾ ಆತನಿಗೆ ವಯೋನಿವೃತ್ತಿ ವಯಸ್ಸು ತುಂಬುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ಇರಿಸತಕ್ಕದ್ದು.

(5) ಸಮುಚಿತ ಸರ್ಕಾರವು ಅಂಗವಿಕಲ ನೌಕರರಿಗೆ ಸ್ಥಳ ನಿಯುಕ್ತಿ ಮತ್ತು ವರ್ಗಾವಣೆಗಾಗಿ ಕಾರ್ಯನೀತಿಗಳನ್ನು ರೂಪಿಸಬಹುದು.

**21. ಸಮಾನ ಅವಕಾಶ ಕಾರ್ಯನೀತಿ.–** (1) ಪ್ರತಿಯೊಂದು ಸಂಸ್ಥೆಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಈ ಅಧ್ಯಾಯದ ಉಪಬಂಧಗಳನ್ನು ಅನುಸರಿಸುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲು ಉದ್ದೇಶಿಸಿದ ವಿವರವಾದ ಕ್ರಮಗಳನ್ನು ಕುರಿತ ಸಮಾನ ಅವಕಾಶ ಕಾರ್ಯನೀತಿಯನ್ನು ಅಧಿಸೂಚಿಸತಕ್ಕದ್ದು.

(2) ಪ್ರತಿಯೊಂದು ಸಂಸ್ಥೆಯು, ಸದರಿ ಕಾರ್ಯನೀತಿಯ ಪ್ರತಿಯನ್ನು ಸಂದರ್ಭಾನುಸಾರ ಚೀಫ್ ಕಮಿಷನರ್ ಅಥವಾ ಸ್ಟೇಟ್ ಕಮಿಷನರ್‌ರಲ್ಲಿ ದಾಖಲ್ಮಾಡಿಸತಕ್ಕದ್ದು.

**22. ದಾಖಲೆಗಳ ನಿರ್ವಹಣೆ.–** (1) ಪ್ರತಿಯೊಂದು ಸಂಸ್ಥೆಯು, ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ, ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಉದ್ಯೋಗದ ವಿಷಯಕ್ಕೆ ಕಲ್ಪಿಸಿದ ಸೌಲಭ್ಯಗಳಿಗೆ ಮತ್ತು ಇತರ ಅವಶ್ಯಕ ಮಾಹಿತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ಪ್ರತಿಯೊಂದು ಉದ್ಯೋಗ ವಿನಿಮಯ ಕಚೇರಿಯು, ಉದ್ಯೋಗ ಬಯಸಿರುವ ಅಂಗವಿಕಲ ವ್ಯಕ್ತಿಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(3) ಉಪ ಪ್ರಕರಣದ (1)ರ ಮೇರೆಗೆ ಇಟ್ಟಿರುವ ದಾಖಲೆಗಳನ್ನು ಸಮುಚಿತ ಸರ್ಕಾರವು ಈ ಸಂಬಂಧ ಅಧಿಕೃತಗೊಳಿಸಬಹುದಾದಂಥ ವ್ಯಕ್ತಿಗಳು ಎಲ್ಲ ಯುಕ್ತ ಸಮಯಗಳಲ್ಲಿ ಪರಿಶೀಲನೆ ಮಾಡುವುದಕ್ಕೆ ಮುಕ್ತವಾಗಿರಿಸತಕ್ಕದ್ದು.

**23. ಕುಂದುಕೊರತೆಗಳ ನಿವಾರಣಾಧಿಕಾರಿಯ ನೇಮಕ.–** (1) ಸರ್ಕಾರದ ಪ್ರತಿಯೊಂದು ಸಂಸ್ಥೆಯು, 19ನೇ ಪ್ರಕರಣದ ಉದ್ದೇಶಕ್ಕಾಗಿ ಒಬ್ಬರು ಕುಂದುಕೊರತೆಗಳ ನಿವಾರಣಾಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಯ ನೇಮಕದ ಬಗ್ಗೆ ಸಂದರ್ಭಾನುಸಾರ ಚೀಫ್ ಕಮಿಷನರ್‌ರಿಗೆ ಅಥವಾ ಸ್ಟೇಟ್ ಕಮಿಷನರ್‌ರಿಗೆ ತಿಳಿಸತಕ್ಕದ್ದು.

(2) 20ನೇ ಪ್ರಕರಣದ ಉಪಬಂಧಗಳನ್ನು ಪಾಲನೆ ಮಾಡದಿರುವುದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕುಂದುಕೊರತೆ ನಿವಾರಣಾಧಿಕಾರಿಗೆ ಆ ಬಗ್ಗೆ ದೂರನ್ನು ದಾಖಲಿಸಬಹುದು. ಅದನ್ನು ದಾಖಲಿಸಿಕೊಂಡ ಕುಂದುಕೊರತೆ ನಿವಾರಣಾಧಿಕಾರಿಯು ಆ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಆ ವಿಷಯವನ್ನು ಸರಿಪಡಿಸುವುದಕ್ಕಾಗಿ ಸಂಸ್ಥೆಯೊಂದಿಗೆ ಪರ್ಯಾಲೋಚಿಸತಕ್ಕದ್ದು.

(3) ಕುಂದುಕೊರತೆ ನಿವಾರಣಾಧಿಕಾರಿಯು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ದೂರಗಳ ಒಂದು ನೋಂದಣಿ ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು ಮತ್ತು ಪ್ರತಿಯೊಂದು ದೂರನ್ನು ಅದು ನೋಂದಣಿಯಾದ ಎರಡು ವಾರಗಳ ಒಳಗಾಗಿ ವಿಚಾರಣೆಯನ್ನು ನಡೆಸತಕ್ಕದ್ದು.

(4) ಬಾಧಿತ ವ್ಯಕ್ತಿಯು ದಾಖಲಿಸಿದ ದೂರಿನ ಸಂಬಂಧದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಆತನಿಗೆ ಅಥವಾ ಆಕೆಗೆ ತೃಪ್ತಿಕರವಾಗದಿದ್ದರೆ, ಆತನು ಅಥವಾ ಆಕೆಯು ಅಂಗವಿಕಲತೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಸಮಿತಿಗೆ ತನ್ನ ದೂರನ್ನು ಸಲ್ಲಿಸಬಹುದು.

## ಅಧ್ಯಾಯ V

## ಸಾಮಾಜಿಕ ಭದ್ರತೆ, ಆರೋಗ್ಯ, ಪುನರ್ ವ್ಯವಸ್ಥೆ ಮತ್ತು ಮನರಂಜನೆ

**24. ಸಾಮಾಜಿಕ ಭದ್ರತೆ.–** (1) ಸಮುಚಿತ ಸರ್ಕಾರವು ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಆರ್ಥಿಕ ಅಭಿವೃದ್ಧಿ ಮಿತಿಯೊಳಗೆ ಅಂಗವಿಕಲ ವ್ಯಕ್ತಿಗಳು ಸ್ವತಂತ್ರವಾಗಿ ಅಥವಾ ಸಮುದಾಯದಲ್ಲಿ ಒಂದಾಗಿ ಜೀವಿಸಲು ಸಾಧ್ಯವಾಗುವಂತೆ ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸಿ ಅವರ ಹಕ್ಕನ್ನು ಸಂರಕ್ಷಿಸುವುದಕ್ಕೆ ಮತ್ತು ಉತ್ತೇಜಿಸುವುದಕ್ಕೆ ಅವಶ್ಯಕವಾದ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು :

ಪರಂತು, ಅಂಥ ಯೋಜನೆಗಳ ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ನೀಡುವ ನೆರವಿನ ಪ್ರಮಾಣವು ಇತರ ವ್ಯಕಿಗಳಿಗೆ ಅನ್ವಯವಾಗುವ ಅದೇ ರೀತಿಯ ಯೋಜನೆಗಳಿಗಿಂತಲೂ ಕಡೇಪಕ್ಷ ಶೇಕಡ ಇಪ್ಪತ್ತೈದರಷ್ಟು ಹೆಚ್ಚು ಇರತಕ್ಕದ್ದು.

(2) ಸಮುಚಿತ ಸರ್ಕಾರವು ಈ ರೀತಿಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಾಗ ಅಂಗವಿಕಲತೆಯ ಭಿನ್ನ ಭಿನ್ನ ಬಗೆಯನ್ನು, ಲಿಂಗ, ವಯಸ್ಸು ಮತ್ತು ಸಾಮಾಜಿಕ–ಆರ್ಥಿಕ ಸ್ಥಾನಮಾನವನ್ನು ಸೂಕ್ತವಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗಿನ ಯೋಜನೆಗಳಲ್ಲಿ,–

(ಎ) ಉತ್ತಮ ಜೀವನ ನಡೆಸಲು ಅಗತ್ಯವಾದ ಸುರಕ್ಷತೆ, ನೈರ್ಮಲ್ಯ, ಆರೋಗ್ಯ ಪಾಲನೆ ಮತ್ತು ಆಪ್ತ ಸಲಹಾಸೇವೆಗಳು ಲಭ್ಯವಿರುವ ಸಮುದಾಯ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ;

(ಬಿ) ಅನಾಥ ಅಥವಾ ಪರಿತ್ಯಕ್ತ ಅಥವಾ ಮನೆ ಅಥವಾ ಜೀವನೋಪಾಯ ಇಲ್ಲದಿರುವ ಅಂಗವಿಕಲ ಮಕ್ಕಳು ಸೇರಿದಂತೆ ಅನಾಥ ಅಂಗವಿಕಲ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ;

(ಸಿ) ನೈಸರ್ಗಿಕವಾದ ಅಥವಾ ಮನುಷ್ಯರಿಂದಾದ ವಿಪತ್ತುಗಳ ಸಂದರ್ಭದಲ್ಲಿ ಮತ್ತು ಗಲಭೆಯುಂಟಾದ ಪ್ರದೇಶದಲ್ಲಿ ನೆರವನ್ನು ಒದಗಿಸುವುದಕ್ಕೆ;

(ಡಿ) ಅಂಗವಿಕಲ ಮಹಿಳೆಯರ ಜೀವನೋಪಾಯಕ್ಕಾಗಿ ಮತ್ತು ಅವರು ತಮ್ಮ ಮಕ್ಕಳನ್ನು ಚೆನ್ನಾಗಿ ಬೆಳೆಸುವುದಕ್ಕಾಗಿ ನೆರವಿಗೆ;

(ಇ) ವಿಶೇಷವಾಗಿ ನಗರದ ಕೊಳಗೇರಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಮತ್ತು ಯುಕ್ತ ಹಾಗೂ ಸುಲಭಲಭ್ಯ ಶೌಚಾಲಯ ವ್ಯವಸ್ಥೆಗಳಿಗೆ;

(ಎಫ್) ಅಧಿಸೂಚನೆಯಲ್ಲಿ ತಿಳಿಸಿರಬಹುದಾದಂಥ ಆದಾಯದ ಮಿತಿಯೊಳಗಿರುವ ಅಂಗವಿಕಲ ವ್ಯಕ್ತಿಗಳಿಗೆ ಉಚಿತವಾಗಿ ಸಾಧನ ಸಲಕರಣೆಗಳನ್ನು, ಔಷಧಿಗಳನ್ನು ಮತ್ತು ರೋಗ ಪತ್ತೆ ಸೇವೆಗಳನ್ನು ಒದಗಿಸಲು ಮತ್ತು ಅಂಗವಿಕಲತೆಯನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆಗೆ;

(ಜಿ) ಅಧಿಸೂಚನೆಯಲ್ಲಿ ತಿಳಿಸಿರಬಹುದಾದಂಥ ಆದಾಯ ಮಿತಿಗೆ ಒಳಪಟ್ಟು ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲ ಪಿಂಚಣಿಗೆ;

(ಹೆಚ್) ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಿ ಎರಡು ವರ್ಷಗಳ ನಂತರವೂ ಯಾವುದೇ ಸಂಪಾದನೆಯ ಕೆಲಸ ದೊರೆಯದಿರುವ ಅಂಗವಿಕಲ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆಗೆ;

(ಐ) ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳ ಪಾಲನೆದಾರನಿಗೆ ಪೋಷಣಾ ಭತ್ಯೆಗೆ;

(ಜೆ) ನೌಕರರ ರಾಜ್ಯ ವಿಮಾ ಯೋಜನೆಗಳ ಅಥವಾ ಯಾವುದೇ ಇತರ ಶಾಸನಬದ್ಧ ಅಥವಾ ಸರ್ಕಾರದ ಪ್ರಾಯೋಜಿತ ವಿಮಾ ಯೋಜನೆಗಳ ವ್ಯಾಪ್ತಿಗೆ ಒಳಪಡದಿರುವ ಅಂಗವಿಕಲ ವ್ಯಕ್ತಿಗಳಿಗೆ ಸಮಗ್ರ ವಿಮಾ ಯೋಜನೆಗೆ;

(ಕೆ) ಸೂಕ್ತವೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಡುವಂತಹ ಯಾವುದೇ ಇತರ ವಿಷಯಗಳಿಗೆ

– ಅವಕಾಶ ಕಲ್ಪಿಸತಕ್ಕದ್ದು.

25. **ಆರೋಗ್ಯ ಪಾಲನೆ,–** (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಈ ಕೆಳಕಂಡ ಸೇವೆಗಳನ್ನು ಒದಗಿಸಲು ಎಂದರೆ,–

(ಎ) ಅಧಿಸೂಚಿಸಬಹುದಾದಂಥ ಕುಟುಂಬದ ಆದಾಯಕ್ಕೆ ಒಳಪಟ್ಟು, ವಿಶೇಷವಾಗಿ ಗ್ರಾಮೀಣ ಪ್ರದೇಶಕ್ಕೆ ಹತ್ತಿರದಲ್ಲಿ ವಾಸಿಸುವವರಿಗೆ ಉಚಿತ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ;

(ಬಿ) ಸರ್ಕಾರದ ಮತ್ತು ಖಾಸಗೀ ಆಸ್ಪತ್ರೆಗಳು ಹಾಗೂ ಇತರ ಆರೋಗ್ಯ ಪಾಲನಾ ಸಂಸ್ಥೆಗಳು ಮತ್ತು ಕೇಂದ್ರಗಳಲ್ಲಿ ಅಂಗವಿಕಲರಿಗೆ ಅಡೆತಡೆ ಮುಕ್ತ ಪ್ರವೇಶಕ್ಕೆ ವ್ಯವಸ್ಥೆ;

(ಸಿ) ವೈದ್ಯೋಪಚಾರ ಮತ್ತು ಚಿಕಿತ್ಸೆಯಲ್ಲಿ ಆದ್ಯತೆ ನೀಡುವುದಕ್ಕೆ

– ಅವಶ್ಯಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲತೆಗೆ ಸಂಬಂಧಿಸಿದ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ ಮತ್ತು ಅಂಗವಿಕಲತೆ ಬರದಂತೆ ತಡೆಯುವುದಕ್ಕೆ ಅಗತ್ಯ ಯೋಜನೆಗಳನ್ನು ಅಥವಾ ಕಾರ್ಯಕ್ರಮಗಳನ್ನು ರೂಪಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಸದರಿ ಉದ್ದೇಶಕ್ಕಾಗಿ.–

(ಎ) ಅಂಗವಿಕಲತೆ ಉಂಟಾಗುವುದಕ್ಕೆ ಕಾರಣಗಳ ಬಗ್ಗೆ ಸಮೀಕ್ಷೆಗಳು, ತಪಾಸಣೆಗಳು ಮತ್ತು ಸಂಶೋಧನೆಗಳನ್ನು ನಡೆಸತಕ್ಕದ್ದು ಅಥವಾ ನಡೆಸುವಂತೆ ಮಾಡತಕ್ಕದ್ದು;

(ಬಿ) ಅಂಗವಿಕಲತೆಗಳು ಉಂಟಾಗದಂತೆ ತಡೆಗಟ್ಟುವುದಕ್ಕಾಗಿ ವಿವಿಧ ವಿಧಾನಗಳಿಗೆ ಉತ್ತೇಜನ ನೀಡತಕ್ಕದ್ದು;

(ಸಿ) "ಅಪಾಯ ಸಂಭವನೀಯ" ಪ್ರಕರಣಗಳನ್ನು ಗುರುತಿಸುವ ಉದ್ದೇಶಕ್ಕಾಗಿ ವರ್ಷದಲ್ಲಿ ಕನಿಷ್ಠಪಕ್ಷ ಒಂದು ಬಾರಿಯಾದರೂ ಎಲ್ಲ ಮಕ್ಕಳನ್ನು ಪರೀಕ್ಷಿಸತಕ್ಕದ್ದು;

(ಡಿ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸಿಬ್ಬಂದಿಗೆ ಈ ಬಗ್ಗೆ ತರಬೇತಿ ನೀಡುವುದಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(ಇ) ಜನರಲ್ಲಿ ಸಾಮಾನ್ಯ ಶುಚಿತ್ವ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳಿವಳಿಕೆಗಾಗಿ ಮಾಹಿತಿ ನೀಡಲು ಅಥವಾ ನೀಡುವಂತೆ ಮಾಡಲು ಜಾಗೃತಿ ಶಿಬಿರಗಳನ್ನು ಏರ್ಪಡಿಸತಕ್ಕದ್ದು ಅಥವಾ ಅವುಗಳನ್ನು ಏರ್ಪಡಿಸುವಂತೆ ಮಾಡತಕ್ಕದ್ದು;

(ಎಫ್) ಹೆರಿಗೆಗೆ ಮುಂಚಿನ, ಹೆರಿಗೆ ನಂತರದ ಕಾಲದಲ್ಲಿ ಮತ್ತು ಬಾಣಂತಿ ಸಮಯದಲ್ಲಿ ತಾಯಿ ಮತ್ತು ಮಗುವಿನ ಪಾಲನೆಗಾಗಿ ಆರೋಗ್ಯ ರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಜಿ) ಶಾಲಾ ಪೂರ್ವ ಶಿಶುಮಂದಿರಗಳ, ಶಾಲೆಗಳ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಹಾಗೂ ಗ್ರಾಮಮಟ್ಟದ ಕಾರ್ಯಕರ್ತರುಗಳ ಮತ್ತು ಅಂಗನವಾಡಿ ಕಾರ್ಯಕರ್ತರುಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸತಕ್ಕದ್ದು;

(ಹೆಚ್) ಅಂಗವಿಕಲತೆಗೆ ಮೂಲ ಕಾರಣಗಳ ಬಗ್ಗೆ ಮತ್ತು ಅವುಗಳನ್ನು ತಡೆಗಟ್ಟಲು ಅಳವಡಿಸಿಕೊಳ್ಳಬೇಕಾದ ಕ್ರಮಗಳ ಬಗ್ಗೆ ದೂರದರ್ಶನ, ರೇಡಿಯೋ ಮತ್ತು ಇತರ ಸಮೂಹ ಮಾಧ್ಯಮಗಳ ಮೂಲಕ ಜನರಲ್ಲಿ ಸಮೂಹ ಜಾಗೃತಿಯನ್ನು ಮೂಡಿಸತಕ್ಕದ್ದು;

(ಐ) ನೈಸರ್ಗಿಕ ವಿಪತ್ತುಗಳು ಸಂಭವಿಸಿದ ಸಮಯದಲ್ಲಿ ಮತ್ತು ಇತರ ಅಪಾಯದ ಸನ್ನಿವೇಶ ಸಂದರ್ಭಗಳಲ್ಲಿ ಅವರಿಗೆ ಆರೋಗ್ಯ ರಕ್ಷಣೆ ನೀಡತಕ್ಕದ್ದು;

(ಜೆ) ಜೀವರಕ್ಷಣೆ ಸಂದರ್ಭ ಸನ್ನಿವೇಶದಲ್ಲಿ ತುರ್ತುಚಿಕಿತ್ಸೆ ನೀಡಲು ಅಗತ್ಯವಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸತಕ್ಕದ್ದು; ಮತ್ತು

(ಕೆ) ವಿಶೇಷವಾಗಿ ಅಂಗವಿಕಲ ಮಹಿಳೆಯರಿಗೆ ಲೈಂಗಿಕ ಮತ್ತು ಸಂತಾನೋತ್ಪತ್ತಿಯ ವಿಷಯಗಳಲ್ಲಿ ಆರೋಗ್ಯ ಪಾಲನೆ ಬಗ್ಗೆ ತಿಳಿವಳಿಕೆ ನೀಡತಕ್ಕದ್ದು.

**26. ವಿಮಾ ಯೋಜನೆಗಳು.–** ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಅಂಗವಿಕಲ ನೌಕರರಿಗಾಗಿ ವಿಮಾ ಯೋಜನೆಗಳನ್ನು ರೂಪಿಸತಕ್ಕದ್ದು.

**27. ಪುನರ್ ವ್ಯವಸ್ಥೆ.–** (1) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಆರ್ಥಿಕ ಸಾಮರ್ಥ್ಯದ ಮತ್ತು ಆರ್ಥಿಕ ಅಭಿವೃದ್ಧಿ ಮಿತಿಯೊಳಗೆ ಎಲ್ಲ ಅಂಗವಿಕಲ ವ್ಯಕ್ತಿಗಳಿಗೆ ಪುನರ್ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ವಿಶೇಷವಾಗಿ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಸೇವಾ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅವುಗಳನ್ನು ಕೈಗೊಳ್ಳುವಂತೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಸರ್ಕಾರೇತರ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಬಹುದು.

(3) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್ ವ್ಯವಸ್ಥೆಗೆ ಎಲ್ಲ ಕಾರ್ಯನೀತಿಗಳನ್ನು ರೂಪಿಸುವಾಗ ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸತಕ್ಕದ್ದು.

**28. ಸಂಶೋಧನೆ ಮತ್ತು ಅಭಿವೃದ್ಧಿ.–** ಸಮುಚಿತ ಸರ್ಕಾರವು, ಯಾವ ವಿಷಯಗಳಿಂದ ಅಂಗವಿಕಲ ವ್ಯಕ್ತಿಗಳ ವ್ಯವಸ್ಥೆಯಲ್ಲಿ ಅಥವಾ ಪುನರ್ ವ್ಯವಸ್ಥೆಯಲ್ಲಿ ಹೆಚ್ಚಳ ಆಗುತ್ತದೋ ಆ ವಿಷಯಗಳ ಬಗ್ಗೆ ಮತ್ತು ಅವರಿಗೆ ಪುನರ್ ವ್ಯವಸ್ಥೆ ಕಲ್ಪಿಸುವ ಹಾಗೂ ಯಾವ ವಿಷಯಗಳು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಆವಶ್ಯಕವೋ ಆ ಇತರೆ ವಿಷಯಗಳ ಬಗ್ಗೆ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಮೂಲಕ ಸಂಶೋಧನೆ ನಡೆಸುವುದಕ್ಕೆ, ಅಭಿವೃದ್ಧಿಪಡಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಅಥವಾ ಆ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುವಂತೆ ಮಾಡತಕ್ಕದ್ದು.

**29. ಸಂಸ್ಕೃತಿ ಮತ್ತು ಮನರಂಜನೆ.–** ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ಇತರರೊಂದಿಗೆ ಸಮಾನವಾಗಿ ಸಾಂಸ್ಕೃತಿಕ ಬದುಕನ್ನು ಹೊಂದುವುದಕ್ಕೆ ಮತ್ತು ಮನರಂಜನಾ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಅವರ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಸಂರಕ್ಷಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಈ ನಿಟ್ಟಿನಲ್ಲಿ,–

(ಎ) ಅಂಗವಿಕಲ ಕಲಾವಿದರನ್ನು ಮತ್ತು ಲೇಖಕರನ್ನು ಗುರುತಿಸಿ ಅವರ ಆಸಕ್ತಿಗಳನ್ನು ಮತ್ತು ಪ್ರತಿಭೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಸೌಲಭ್ಯಗಳನ್ನು, ಅಗತ್ಯ ನೆರವನ್ನು ಮತ್ತು ಪ್ರಾಯೋಜಕತ್ವವನ್ನು ಒದಗಿಸತಕ್ಕದ್ದು;

(ಬಿ) ಅಂಗವಿಕಲ ವ್ಯಕ್ತಿಗಳ ಇತಿಹಾಸದ ಬಗ್ಗೆ ಕಾಲಾನುಕ್ರಮಣಿಕೆ ದಾಖಲೆ ಇಟ್ಟಿರುವ ಮತ್ತು ಕಾಲಾನುಕ್ರಮದಲ್ಲಿ ಅಂಗವಿಕಲ ವ್ಯಕ್ತಿಗಳು ಗಳಿಸಿದ ಅನುಭವಗಳ ವ್ಯಾಖ್ಯಾನಗಳನ್ನು ಇಟ್ಟಿರುವ ಅಂಗವಿಕಲತೆ ಇತಿಹಾಸ ಸಂಗ್ರಹಾಲಯದ ಸ್ಥಾಪನೆ ಮಾಡತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಕಲಾ ಪ್ರಕಾರವು ಲಭ್ಯವಾಗುವಂತೆ ಮಾಡತಕ್ಕದ್ದು;

(ಡಿ) ಮನರಂಜನಾ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಇತರ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸಲು ಅವರಿಗೆ ಉತ್ತೇಜನ ನೀಡತಕ್ಕದ್ದು;

(ಇ) ಸ್ಕೌಟಿಂಗ್, ನೃತ್ಯ, ಕಲಾ ತರಗತಿಗಳಲ್ಲಿ, ಹೊರಾಂಗಣ ಶಿಬಿರಗಳಲ್ಲಿ ಮತ್ತು ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಲು ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಾಂಸ್ಕೃತಿಕ ಮತ್ತು ಕಲಾ ವಿಷಯಗಳಲ್ಲಿ ಪಾಲ್ಗೊಳ್ಳಲು ಮತ್ತು ಪ್ರವೇಶ ಪಡೆಯಲು ಸಾಧ್ಯವಾಗುವಂತೆ ಅವುಗಳ ಪಠ್ಯ ಕ್ರಮಗಳನ್ನು ಮರು ವಿನ್ಯಾಸಗೊಳಿಸತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳು ಮನರಂಜನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಮತ್ತು ಸಮ್ಮಿಳಿತವಾಗುವುದಕ್ಕೆ ಅನುವು ಮಾಡಿಕೊಡಲು ಅಭಿವೃದ್ಧಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸತಕ್ಕದ್ದು, ಸಹಾಯಕ ಸಾಧನೋಪಾಯಗಳನ್ನು ಮತ್ತು ಸಲಕರಣೆಗಳನ್ನು ರೂಪಿಸತಕ್ಕದ್ದು;

(ಹೆಚ್) ಶ್ರವಣ ದೋಷವುಳ್ಳ ವ್ಯಕ್ತಿಗಳು, ಸಂಜ್ಞಾ ಭಾಷೆಯ ನೆರವಿನಿಂದ ದೃಶ್ಯ ವಿವರಣೆ ಅಥವಾ ಸಂಜ್ಞಾ ಭಾಷೆಯಲ್ಲಿ ಉಪ–ಶೀರ್ಷಿಕೆಗಳ ಸಹಿತ ದೂರದರ್ಶನ ಕಾರ್ಯಕ್ರಮಗಳನ್ನು ನೋಡಲು ಅವಕಾಶ ಕಲ್ಪಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**30. ಕ್ರೀಡಾ ಚಟುವಟಿಕೆಗಳು.–** (1) ಸಮುಚಿತ ಸರ್ಕಾರವು ಅಂಗವಿಕಲ ವ್ಯಕ್ತಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಕ್ರೀಡಾ ಪ್ರಾಧಿಕಾರಗಳು, ಅಂಗವಿಕಲ ವ್ಯಕ್ತಿಗಳು ಇತರರಂತೆ ಕ್ರೀಡೆಗಳಲ್ಲಿ ಭಾಗವಹಿಸುವ ಹಕ್ಕಿಗೆ ಯುಕ್ತ ಮನ್ನಣೆ ನೀಡತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಕ್ರೀಡೆಯಲ್ಲಿ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸುವುದಕ್ಕಾಗಿ ಮತ್ತು ಆ ಪ್ರತಿಭೆಗಳಿಗೆ ಅಗತ್ಯ ನೆರವು ನೀಡುವುಕ್ಕಾಗಿ ತಮ್ಮ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಯುಕ್ತ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಮತ್ತು (2)ರಲ್ಲಿ ಹೇಳಿರುವವುಗಳಿಗೆ ಬಾಧಕವಾಗದಂತೆ, ಸಮುಚಿತ ಸರ್ಕಾರವು ಮತ್ತು ಕ್ರೀಡಾ ಪ್ರಾಧಿಕಾರಗಳು,–

(ಎ) ಅಂಗವಿಕಲ ವ್ಯಕ್ತಿಗಳಿಗೆ ಎಲ್ಲಾ ಕ್ರೀಡಾ ಚಟುವಟಿಕೆಗಳಲ್ಲಿ ಅವಕಾಶ ಕಲ್ಪಿಸಿರುವುದನ್ನು ಮತ್ತು ಅವರು ಸಮ್ಮಿಳಿತವಾಗುವುದನ್ನು ಖಚಿತಪಡಿಸಿಕೊಳ್ಳಲು ಕೋರ್ಸ್‌ಗಳನ್ನು ಮತ್ತು ಕಾರ್ಯಕ್ರಮಗಳನ್ನು ಪುನರ್‌ರಚಿಸುವುದಕ್ಕೆ;

(ಬಿ) ಅಂಗವಿಕಲ ವ್ಯಕ್ತಿಗಳು ಇತರರಂತೆ ಎಲ್ಲ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುವಂತೆ ಕೋರ್ಸ್‌ಗಳನ್ನು ಮರುವಿನ್ಯಾಸಗೊಳಿಸುವುದಕ್ಕೆ ಮತ್ತು ಕ್ರೀಡಾ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕೆ ;

(ಸಿ) ಎಲ್ಲ ಅಂಗವಿಕಲ ವ್ಯಕ್ತಿಗಳು ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮ ಕ್ರೀಡಾಕ್ಷಮತೆಯನ್ನು, ಪ್ರತಿಭೆಯನ್ನು, ಸಾಮರ್ಥ್ಯವನ್ನು ಮತ್ತು ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದಕ್ಕೆ;

(ಡಿ) ಎಲ್ಲ ಅಂಗವಿಕಲ ವ್ಯಕ್ತಿಗಳು ಎಲ್ಲ ತರಹದ ಕ್ರೀಡಾ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಅಗತ್ಯವಾದ ಬಹು–ಸಂವೇದಿ ಸಾಧನಗಳನ್ನು ಮತ್ತು ಸಲಕರಣೆಗಳನ್ನು ಒದಗಿಸುವುದಕ್ಕೆ;

(ಇ) ಅಂಗವಿಕಲ ವ್ಯಕ್ತಿಗಳ ತರಬೇತಿಗಾಗಿ ಅತಿ ನವೀನ ಕಲೆ–ಕ್ರೀಡಾ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ನಿಧಿಗಳನ್ನು ಹಂಚಿಕೆ ಮಾಡುವುದಕ್ಕೆ;

(ಎಫ್) ಅಂಗವಿಕಲ ವ್ಯಕ್ತಿಗಳಿಗೆ, ಅಂಗವಿಕಲತೆಯ ನಿರ್ದಿಷ್ಟ ಕ್ರೀಡಾ ಕೂಟಗಳಿಗೆ ಉತ್ತೇಜನ ನೀಡುವುದಕ್ಕೆ ಮತ್ತು ಸಂಘಟಿಸುವುದಕ್ಕೆ ಮತ್ತು ಅಂಥ ಕ್ರೀಡಾ ಕೂಟಗಳಲ್ಲಿ ವಿಜೇತರಾದವರಿಗೆ ಮತ್ತು ಭಾಗವಹಿಸಿದ ಇತರರಿಗೆ ಪ್ರಶಸ್ತಿ–ಪುರಸ್ಕಾರಗಳನ್ನು ನೀಡುವುದಕ್ಕೆ

– ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ VI

### ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ವಿಶೇಷ ಉಪಬಂಧಗಳು

**31. ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಗಳು ಇರುವ ಮಕ್ಕಳಿಗೆ ಉಚಿತ ಶಿಕ್ಷಣ.–** ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕುಗಳ ಅಧಿನಿಯಮ, 2009 (2009ರ 35) ರಲ್ಲಿ ಏನೇ ಒಳಗೊಂಡಿದ್ದರೂ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಆರು ವರ್ಷಗಳಿಂದ ಹದಿನೆಂಟು ವರ್ಷಗಳ ನಡುವಣ ವಯಸ್ಸಿನ ಪ್ರತಿಯೊಂದು ಮಗುವು ತಾನು ಇಚ್ಛಿಸುವ ತನಗೆ ಹತ್ತಿರದಲ್ಲಿರುವ ಶಾಲೆಯಲ್ಲಿ ಅಥವಾ ವಿಶೇಷ ಶಾಲೆಯಲ್ಲಿ ಉಚಿತ ಶಿಕ್ಷಣ ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದು.

(2) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಪ್ರತಿಯೊಂದು ಮಗುವಿಗೆ ಅದಕ್ಕೆ ಹದಿನೆಂಟು ವರ್ಷಗಳ ವಯಸ್ಸು ತುಂಬುವವರೆಗೂ ಯುಕ್ತ ಪರಿಸರದಲ್ಲಿ ಉಚಿತ ಶಿಕ್ಷಣ ದೊರೆಯುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**32. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ.–** (1) ಉನ್ನತ ಶಿಕ್ಷಣ ನೀಡುವ ಎಲ್ಲ ಸರ್ಕಾರಿ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಶೇಕಡ ಐದಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮೀಸಲಿಡತಕ್ಕದ್ದು.

(2) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಅವರ ವಯೋಮಿತಿಯಲ್ಲಿ ಐದು ವರ್ಷಗಳ ವಿನಾಯಿತಿ ನೀಡತಕ್ಕದ್ದು.

**33. ಮೀಸಲಾತಿಗಾಗಿ ಹುದ್ದೆಗಳನ್ನು ಗುರುತಿಸುವುದು.–** ಸಮುಚಿತ ಸರ್ಕಾರವು,–

(i) 34ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮೀಸಲಿಟ್ಟಿರುವ ಖಾಲಿ ಸ್ಥಾನಗಳಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲ ವ್ಯಕ್ತಿಗಳ ಆಯಾಯ ಪ್ರವರ್ಗದವರು ಸಂಸ್ಥೆಗಳಲ್ಲಿ ಧಾರಣ ಮಾಡಬಹುದಾದ ಹುದ್ದೆಗಳನ್ನು ಗುರುತಿಸತಕ್ಕದ್ದು.

(ii) ಅಂಥ ಹುದ್ದೆಗಳನ್ನು ಗುರುತಿಸುವುದಕ್ಕಾಗಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರತಿನಿಧಿ ಸಹಿತ ಒಂದು ತಜ್ಞ ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(iii) ಗುರುತಿಸಿದ ಹುದ್ದೆಗಳ ಬಗ್ಗೆ ಮೂರು ವರ್ಷಗಳನ್ನು ಮೀರದ ಮಧ್ಯಂತರ ಅವಧಿಯಲ್ಲಿ ನಿಯತ ಪುನರಾವಲೋಕನ ನಡೆಸತಕ್ಕದ್ದು.

**34. ಮೀಸಲಾತಿ.–** (1) ಪ್ರತಿಯೊಂದು ಸಮುಚಿತ ಸರ್ಕಾರವು, ಪ್ರತಿಯೊಂದು ಸರ್ಕಾರಿ ಸಂಸ್ಥೆಯಲ್ಲಿ, ಹುದ್ದೆಗಳ ಪ್ರತಿಯೊಂದು ಗುಂಪಿನಲ್ಲಿನ ಕೇಡರ್ ಸಂಖ್ಯಾಬಲದಲ್ಲಿ ಇರುವ ಖಾಲಿಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ ನಾಲ್ಕರಷ್ಟಕ್ಕಿಂತ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲ ವ್ಯಕ್ತಿಗಳಿಂದ ತುಂಬಲು ಗೊತ್ತುಪಡಿಸತಕ್ಕದ್ದು ಹಾಗೂ ಈ ಶೇಕಡ ನಾಲ್ಕರಷ್ಟು ಹುದ್ದೆಗಳಲ್ಲಿ ಶೇ.1ರಷ್ಟು ಹುದ್ದೆಗಳನ್ನು (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ಹೇಳಿರುವ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಹಾಗೂ ಶೇ.1ರಷ್ಟು ಹುದ್ದೆಗಳನ್ನು (ಡಿ) ಮತ್ತು (ಇ) ಖಂಡಗಳಲ್ಲಿ ಹೇಳಿರುವಂತಹ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ, ಎಂದರೆ,–

(ಎ) ಅಂಧತ್ವ ಅಥವಾ ಮಂದ ದೃಷ್ಟಿ ಇರುವ ವ್ಯಕ್ತಿಗಳಿಗೆ;

(ಬಿ) ಕಿವುಡರು ಮತ್ತು ಕರ್ಕಶ ಶ್ರವಣತೆಯುಳ್ಳ ವ್ಯಕ್ತಿಗಳಿಗೆ;

(ಸಿ) ಮಿದುಳಿನ ಪಾರ್ಶ್ವವಾಯುವುಳ್ಳ, ವಾಸಿಯಾಗಿರುವ ಕುಷ್ಠ ರೋಗದ, ಕುಬ್ಜತೆಯುಳ್ಳ, ಆ್ಯಸಿಡ್ ದಾಳಿಯ ಸಂತ್ರಸ್ತರು ಮತ್ತು ಸ್ನಾಯು ಕ್ಷಯರೋಗ ಇರುವ ವ್ಯಕ್ತಿಗಳೂ ಸೇರಿದಂತೆ ಚಲನ ಸಂಬಂಧಿ ಅಂಗವಿಕಲತೆಯುಳ್ಳವರಿಗೆ;

(ಡಿ) ಆಟಿಸಂ, ಬೌದ್ಧಿಕ ಅಭಾವತೆ, ನಿರ್ದಿಷ್ಟ ಕಲಿಕಾ ಅಸಮರ್ಥತೆ ಮತ್ತು ಮಾನಸಿಕ ಅಸ್ವಸ್ಥತೆಯುಳ್ಳ ವ್ಯಕ್ತಿಗಳಿಗೆ;

(ಇ) ಪ್ರತಿಯೊಂದು ಅಂಗವಿಕಲತೆಗಾಗಿ ಗುರುತಿಸಲ್ಪಟ್ಟ ಹುದ್ದೆಗಳಲ್ಲಿ ಕಿವುಡ '– ಅಂಧತ್ವವೂ ಒಳಗೊಂಡಂತೆ (ಎ) ಯಿಂದ (ಡಿ) ವರೆಗಿನ ಖಂಡಗಳ ಅಡಿಯಲ್ಲಿ ಬರುವ ವ್ಯಕ್ತಿಗಳ ಪೈಕಿ ಬಹುವಿಧದ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ

– ಮೀಸಲಿರಿಸತಕ್ಕದ್ದು:

ಪರಂತು, ಬಡ್ತಿಯಲ್ಲಿ ನೀಡುವ ಮೀಸಲಾತಿಯು ಸಮುಚಿತ ಸರ್ಕಾರವು ಕಾಲಕಾಲಕ್ಕೆ ಹೊರಡಿಸಬಹುದಾದಂಥ ಸೂಚನೆಗಳಿಗೆ ಅನುಸಾರವಾಗಿ ಇರತಕ್ಕದ್ದು:

ಮತ್ತು ಪರಂತು, ಸಮುಚಿತ ಸರ್ಕಾರವು, ಚೀಫ್ ಕಮಿಷನರ್ ಅಥವಾ ಸಂದರ್ಭಾನುಸಾರ ಸ್ಟೇಟ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಯಾವುದೇ ಸರ್ಕಾರಿ ಸಂಸ್ಥೆಯಲ್ಲಿ ನಿರ್ವಹಿಸುತ್ತಿರುವ ಕೆಲಸದ ವಿಧಗಳನ್ನು ಗಮನಿಸಿ ಅಧಿಸೂಚನೆ ಮೂಲಕ ಹಾಗೂ ಅಂಥ ಅಧಿಸೂಚನೆಗಳಲ್ಲಿ ಷರತ್ತುಗಳನ್ನೇನಾದರೂ ನಿರ್ದಿಷ್ಟಪಡಿಸುವುದಿದ್ದರೆ ಅಂಥ ಷರತ್ತುಗಳಿಗೊಳಪಟ್ಟು, ಈ ಪ್ರಕರಣದ ಉಪಬಂಧಗಳು ಯಾವುದೇ ಸರ್ಕಾರಿ ಸಂಸ್ಥೆಗೆ ಅನ್ವಯವಾಗದಂತೆ ವಿನಾಯಿತಿ ನೀಡಬಹುದು.

(2) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಯುಕ್ತ ವ್ಯಕ್ತಿಗಳು ಯಾವುದೇ ನೇಮಕಾತಿ ವರ್ಷದಲ್ಲಿ ಲಭ್ಯವಿಲ್ಲದ್ದರಿಂದ ಅಥವಾ ಯಾವುವೇ ಇತರ ಸಾಕಷ್ಟು ಕಾರಣಗಳಿಗಾಗಿ ಯಾವುದೇ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸಾಧ್ಯವಾಗದಿದ್ದರೆ, ಅಂಥ ಖಾಲಿ ಹುದ್ದೆಯನ್ನು ಮುಂದಿನ ನೇಮಕಾತಿ ವರ್ಷಕ್ಕೆ ಮುಂದುವರಿಸಿಕೊಂಡು

ಹೋಗತಕ್ಕದ್ದು ಮತ್ತು ಒಂದು ವೇಳೆ ನಂತರದ ನೇಮಕಾತಿ ವರ್ಷದಲ್ಲೂ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಸೂಕ್ತ ವ್ಯಕ್ತಿ ಲಭ್ಯವಿಲ್ಲದಿದ್ದರೆ, ಮೇಲ್ಕಂಡ ಐದು ಪ್ರವರ್ಗಗಳ ಪೈಕಿಯಿಂದಲೇ ಆಂತರಿಕ ಬದಲಾವಣೆಯ ಮೂಲಕ ಆ ಹುದ್ದೆಯನ್ನು ಭರ್ತಿಮಾಡಬಹುದು ಮತ್ತು ಆ ತರುವಾಯದ ವರ್ಷವೂ ಸಹ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಅಂಥ ವ್ಯಕ್ತಿಗಳು ಲಭ್ಯವಾಗದಿದ್ದಾಗ, ನಿಯೋಜಕನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಯಲ್ಲದ ಇತರೆ ಯಾರೇ ವ್ಯಕ್ತಿಯನ್ನು ಆ ಖಾಲಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳತಕ್ಕದ್ದು:

ಪರಂತು, ಕಾರ್ಯಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಸ್ವರೂಪದ ಕೆಲಸಕ್ಕೆ ಅಂಥ ಪ್ರವರ್ಗದ ವ್ಯಕ್ತಿಯನ್ನು ನಿಯೋಜಿಸಿಕೊಳ್ಳಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಅಂಥ ಖಾಲಿ ಹುದ್ದೆಗಳನ್ನು ಸಮುಚಿತ ಸರ್ಕಾರದಿಂದ ಮುಂಚಿತವಾಗಿಯೇ ಅನುಮತಿಯನ್ನು ಪಡೆದು ಮೇಲ್ಕಂಡ ಐದು ಪ್ರವರ್ಗಗಳ ಪೈಕಿಯಿಂದ ಆಂತರಿಕ ಬದಲಾವಣೆ ಮೂಲಕ ಭರ್ತಿಮಾಡಬಹುದು.

(3) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಅದು ಪರಿಗಣಿಸಬಹುದಾದಂಥ ರೀತಿಯಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಉದ್ಯೋಗಕ್ಕಾಗಿ ವಯೋಮಿತಿಯಲ್ಲಿ ವಿನಾಯಿತಿಯನ್ನು ನೀಡಬಹುದು.

**35. ಖಾಸಗೀ ವಲಯದಲ್ಲಿನ ಉದ್ಯೋಗದಾತರಿಗೆ ಪ್ರೋತ್ಸಾಹಕಗಳು.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ತಮ್ಮ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಯೊಳಗೆ, ಖಾಸಗಿ ವಲಯದಲ್ಲಿನ ಉದ್ಯೋಗದಾತರು ಅವರಲ್ಲಿರುವ ಕೆಲಸಗಾರರ ಪೈಕಿ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಕೊನೆಪಕ್ಷ ಶೇಕಡ ಐದರಷ್ಟು ವ್ಯಕ್ತಿಗಳು ಇರುವುದನ್ನು ಖಚಿತಪಡಿಸಿಕೊಂಡು, ಅಂಥ ಉದ್ಯೋಗದಾತರಿಗೆ ಪ್ರೋತ್ಸಾಹಕಗಳನ್ನು ನೀಡತಕ್ಕದ್ದು.

**36. ವಿಶೇಷ ಉದ್ಯೋಗ ವಿನಿಮಯ ಕೇಂದ್ರ.–** ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿಗದಿಪಡಿಸಿದಂಥ ದಿನಾಂಕದಿಂದ ಪ್ರತಿಯೊಂದು ಸಂಸ್ಥೆಯ ಉದ್ಯೋಗದಾತನು ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಗೊತ್ತುಪಡಿಸಿದ ಖಾಲಿ ಸ್ಥಾನಗಳನ್ನು ಅಥವಾ ಖಾಲಿ ಆಗಲಿರುವ ಸ್ಥಾನಗಳನ್ನು, ಆ ಸಂಸ್ಥೆಯಲ್ಲಿ ಖಾಲಿ ಇರುವ ಸ್ಥಾನಗಳು ಕೇಂದ್ರ ಸರ್ಕಾರವು ನಿಯಮಿಸಿದಂಥ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಯನ್ನು ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಿಳಿಸುವಂತೆ ಅಗತ್ಯಪಡಿಸತಕ್ಕದ್ದು ಹಾಗೂ ಆ ಸಂಸ್ಥೆಯು ಆ ತರುವಾಯ ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

**37. ವಿಶೇಷ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು.–** ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ, ಅಧಿಸೂಚನೆ ಮೂಲಕ:–

(ಎ) ಸಂಬಂಧಪಟ್ಟ ಎಲ್ಲ ಯೋಜನೆಗಳಲ್ಲಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೃಷಿಭೂಮಿ ಮತ್ತು ವಸತಿ ಹಂಚಿಕೆಯಲ್ಲಿ, ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಮಹಿಳೆಯರಿಗೆ ಯುಕ್ತ ಆದ್ಯತೆ ಸಹಿತ ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು;

(ಬಿ) ಎಲ್ಲಾ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಮಹಿಳೆಯರಿಗೆ ಯುಕ್ತ ಆದ್ಯತೆ ಸಹಿತ ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು;

(ಸಿ) ವಸತಿ, ಆಶ್ರಯ, ವೃತ್ತಿ, ವ್ಯವಹಾರ, ಉದ್ಯಮ, ಮನರಂಜನೆ ಕೇಂದ್ರಗಳು ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕೆ ಉತ್ತೇಜನ ನೀಡುವ ಸಲುವಾಗಿ ಭೂಮಿಯನ್ನು ಬಳಕೆ ಮಾಡುವುದಿದ್ದರೆ ರಿಯಾಯಿತಿ ದರದಲ್ಲಿ ಭೂಮಿಯನ್ನು ಹಂಚಿಕೆ ಮಾಡಲು ಶೇಕಡ ಐದರಷ್ಟು ಮೀಸಲಾತಿಯನ್ನು ಒದಗಿಸತಕ್ಕದ್ದು.

## ಅಧ್ಯಾಯ VII

### ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು

**38. ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧಗಳು.–** (1) ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ಯಾರೇ ವ್ಯಕ್ತಿಯು, ತನಗೆ ಉನ್ನತ ಬೆಂಬಲದ ಅಗತ್ಯವಿದೆ ಎಂದೆನಿಸಿದರೆ, ಆತನು ಅಥವಾ ಆತನ ಅಥವಾ ಆಕೆಯ ಪರವಾಗಿ ಯಾರೇ ವ್ಯಕ್ತಿಯು ಅಥವಾ ಸಂಘಟನೆಯು ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದ ಪ್ರಾಧಿಕಾರಕ್ಕೆ ಉನ್ನತ ಬೆಂಬಲ ಕೋರಿ ಅರ್ಜಿಯನ್ನು ಸಲ್ಲಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಸದಸ್ಯರನ್ನು ಒಳಗೊಂಡಿರುವ ನಿರ್ಧರಣೆ ಮಂಡಳಿಗೆ ಅದನ್ನು ಕಳುಹಿಸತಕ್ಕದ್ದು.

(3) ನಿರ್ಧರಣೆ ಮಂಡಳಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ (1)ನೇ ಉಪ ಪ್ರಕರಣದ ಮೇರೆಗೆ ತನಗೆ ಬಂದ ಅರ್ಜಿ ಬಗ್ಗೆ ನಿರ್ಧರಣೆ ಮಾಡತಕ್ಕದ್ದು ಮತ್ತು ಉನ್ನತ ಬೆಂಬಲದ ಅಗತ್ಯತೆಯನ್ನು ಮತ್ತು ಅದರ ಸ್ವರೂಪವನ್ನು ಪ್ರಮಾಣೀಕರಿಸಿ ಆ ಪ್ರಾಧಿಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಆ ಪ್ರಾಧಿಕಾರವು ಆ ವರದಿಗೆ ಅನುಸಾರವಾಗಿ ಮತ್ತು ಸಂಬಂಧಿಸಿದ ಯೋಜನೆಗಳು ಮತ್ತು ಈ ಸಂಬಂಧ ಸಮುಚಿತ ಸರ್ಕಾರದ ಆದೇಶಗಳಿಗೆ ಒಳಪಟ್ಟು ಅಂಥ ಬೆಂಬಲವನ್ನು ಒದಗಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ VIII

### ಸಮುಚಿತ ಸರ್ಕಾರಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು

**39. ಜಾಗೃತಿ ಶಿಬಿರಗಳು.–** (1) ಸಮುಚಿತ ಸರ್ಕಾರವು, ಚೀಫ್ ಕಮಿಷನರ್ ಅಥವಾ ಸಂದರ್ಭಾನುಸಾರ ಸ್ಟೇಟ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗೆ ಕೊಟ್ಟಿರುವ ಹಕ್ಕುಗಳನ್ನು ಸಂರಕ್ಷಿಸಲಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಜಾಗೃತಿ ಶಿಬಿರಗಳನ್ನು ಮತ್ತು ಸಂವೇದನಾಶೀಲತೆ ಕಾರ್ಯಕ್ರಮಗಳನ್ನು ಏರ್ಪಡಿಸತಕ್ಕದ್ದು ಮತ್ತು ಅವುಗಳಿಗೆ ಪ್ರೋತ್ಸಾಹ, ಬೆಂಬಲ ಅಥವಾ ಉತ್ತೇಜನವನ್ನು ನೀಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ನಿರ್ದಿಷ್ಟಪಡಿಸಿದ ಕಾರ್ಯಕ್ರಮಗಳು ಮತ್ತು ಶಿಬಿರಗಳು,–

(ಎ) ಸಮ್ಮಿಳಿತ, ಸಹನೆ, ಸಹಾನುಭೂತಿ ಗುಣಗಳಿಗೆ ಉತ್ತೇಜನ ನೀಡತಕ್ಕದ್ದು ಮತ್ತು ವ್ಯಕ್ತಿ ವೈವಿಧ್ಯತೆಯನ್ನು ಗೌರವಿಸತಕ್ಕದ್ದು;

(ಬಿ) ಅಂಗವಿಕಲ ವ್ಯಕ್ತಿಗಳ ಕೌಶಲ್ಯಗಳನ್ನು, ಗುಣಗಳನ್ನು ಮತ್ತು ಅವರಲ್ಲಿರುವ ಸಾಮರ್ಥ್ಯಗಳನ್ನು ಮತ್ತು ಕಾರ್ಯ ಬಲಕ್ಕೆ, ದುಡಿಮೆ ಕ್ಷೇತ್ರಕ್ಕೆ ಮತ್ತು ವೃತ್ತಿಗೆ ತಕ್ಕ ಶುಲ್ಕಕ್ಕೆ ಅವರ ಕೊಡುಗೆಗಳನ್ನು ಮುಂಚಿತವಾಗಿಯೇ ಕಂಡುಕೊಳ್ಳತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳು ತಮ್ಮ ಕೌಟುಂಬಿಕ ಜೀವನ, ಸಂಬಂಧಗಳು, ಸಂತಾನೋತ್ಪತ್ತಿ ಮತ್ತು ಮಕ್ಕಳನ್ನು ಬೆಳೆಸುವ ಬಗ್ಗೆ ಅವರು ತೆಗೆದುಕೊಳ್ಳುವ ನಿರ್ಧಾರಗಳನ್ನು ಗೌರವಿಸುವುದಕ್ಕೆ ಉತ್ತೇಜನ ನೀಡತಕ್ಕದ್ದು;

(ಡಿ) ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ ಮತ್ತು ವೃತ್ತಿಪರ ತರಬೇತಿ ಹಂತಗಳಲ್ಲಿ, ಮಾನವ ಅಂಗವಿಕಲತೆಯ ಮಾನವೀಯ ಸ್ಥಿತಿ ಬಗ್ಗೆ ಮತ್ತು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಬಗ್ಗೆ ಪರಿಚಯ ಮಾಡಿಕೊಡತಕ್ಕದ್ದು ಮತ್ತು ಸಂವೇದನಾಶೀಲತೆಯನ್ನು ಮೂಡಿಸತಕ್ಕದ್ದು;

(ಇ) ಅಂಗವಿಕಲರನ್ನು ಅಶಕ್ತರನ್ನಾಗಿಸಿರುವ ಪರಿಸ್ಥಿತಿಗಳ ಮತ್ತು ಅವರ ಹಕ್ಕುಗಳ ಬಗ್ಗೆ ಉದ್ಯೋಗದಾತರಿಗೆ, ಆಡಳಿತಗಾರರಿಗೆ ಮತ್ತು ಸಹೋದ್ಯೋಗಿ ಕೆಲಸಗಾರರಿಗೆ ಪರಿಚಯ ಮಾಡಿಕೊಡತಕ್ಕದ್ದು, ತಿಳಿವಳಿಕೆ ಮತ್ತು ಸಂವೇದನಾಶೀಲತೆಯನ್ನು ಮೂಡಿಸತಕ್ಕದ್ದು;

(ಎಫ್) ವಿಶ್ವವಿದ್ಯಾನಿಲಯಗಳ, ಕಾಲೇಜುಗಳ ಮತ್ತು ಶಾಲೆಗಳ ಪಠ್ಯಕ್ರಮಗಳಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳು ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**40. ಸುಲಭ ಲಭ್ಯತೆ.–** ಕೇಂದ್ರ ಸರ್ಕಾರವು, ಚೀಫ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಸಮರ್ಪಕ ತಂತ್ರಜ್ಞಾನಗಳು ಮತ್ತು ಸಿಸ್ಟಂಗಳೂ ಸೇರಿದಂತೆ ಅಂಗವಿಕಲ ವ್ಯಕ್ತಿಗಳಿಗೆ ಭೌತಿಕ ಪರಿಸರ, ಸಾರಿಗೆ, ಮಾಹಿತಿ ಮತ್ತು ಸಂಪರ್ಕಗಳು ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಸಾರ್ವಜನಿಕರಿಗೆ ಒದಗಿಸಿರುವ ಇತರ ಸೌಲಭ್ಯಗಳು ಮತ್ತು ಸೇವೆಗಳು ಸುಲಭವಾಗಿ ಲಭ್ಯವಾಗುವುದಕ್ಕೆ ಮಾನದಂಡಗಳನ್ನು ಗೊತ್ತುಪಡಿಸಿರುವ ನಿಯಮಗಳನ್ನು ರೂಪಿಸತಕ್ಕದ್ದು.

**41. ಸುಲಭ ಸಾರಿಗೆ ಸಂಪರ್ಕ ವ್ಯವಸ್ಥೆ.–** (1) ಸಮುಚಿತ ಸರ್ಕಾರವು,–

(ಎ) ಅಂಗವಿಕಲ ವ್ಯಕ್ತಿಗಳಿಗೆ ವಾಹನ ನಿಲುಗಡೆ ಸ್ಥಳಗಳ, ಶೌಚಾಲಯಗಳ, ಟಿಕೇಟ್ ನೀಡಿಕೆ ಕೌಂಟರ್‌ಗಳಲ್ಲಿ ಮತ್ತು ಟಿಕೇಟ್ ನೀಡಿಕೆ ಯಂತ್ರಗಳು ಸುಲಭವಾಗಿ ಲಭ್ಯವಾಗುವಂತೆ ರೂಪಿಸಿರುವ ಮಾನದಂಡಗಳಿಗೆ ಅನುಸಾರವಾಗಿ ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಮತ್ತು ವಿಮಾನ ನಿಲ್ದಾಣಗಳಲ್ಲಿ ಸೌಕರ್ಯಗಳನ್ನು ಒದಗಿಸಲು;

(ಬಿ) ಅಂಗವಿಕಲ ವ್ಯಕ್ತಿಗಳಿಗಾಗಿ, ತಾಂತ್ರಿಕವಾಗಿ ಎಲ್ಲೆಲ್ಲಿ ಅನುಕೂಲಕರವೋ ಮತ್ತು ಸುರಕ್ಷಿತವೋ ಅಲ್ಲೆಲ್ಲಾ ಆರ್ಥಿಕ ಯೋಗ್ಯ ಮತ್ತು ವಿನ್ಯಾಸದಲ್ಲಿ ರಚನೆಗೆ ಸಂಬಂಧಿಸಿದಂತೆ ಭಾರೀ ಬದಲಾವಣೆಗಳಿಗೆ ಒಳಗಾಗದಂತೆ ಸಾರಿಗೆ ವ್ಯವಸ್ಥೆಯ ಎಲ್ಲ ಬಗೆಯ ಹಳೆಯ ವಿನ್ಯಾಸಗಳೂ ಸೇರಿದಂತೆ ವಿನ್ಯಾಸದ ಮಾನದಂಡಗಳಿಗೆ ಅನುಗುಣವಾಗಿರುವ ಎಲ್ಲ ಬಗೆಯ ಸಾರಿಗೆಯ ಹಳೆಯ ಬಗೆಗಳನ್ನು ಮರು ಮಾರ್ಪಾಡು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಲು;

(ಸಿ) ಅಂಗವಿಕಲ ವ್ಯಕ್ತಿಗಳು ರಸ್ತೆಗಳಲ್ಲಿ ಸುಗಮವಾಗಿ ಸಂಚರಿಸಲು ಅನುಕೂಲಕರವಾದ ಸುಲಭ ಲಭ್ಯ ರಸ್ತೆಗಳನ್ನು ಒದಗಿಸಲು

– ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳು ತಮಗೆ ಕೈಗೆಟಕುವ ದರಗಳಲ್ಲಿ ಖುದ್ದಾಗಿ ಸಂಚರಿಸುವುದನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅವರಿಗೆ,–

(ಎ) ಪ್ರೋತ್ಸಾಹಕಗಳನ್ನು ಮತ್ತು ರಿಯಾಯಿತಿಗಳನ್ನು ನೀಡಲು;

(ಬಿ) ವಾಹನಗಳನ್ನು ಪುನರ್ ಮಾರ್ಪಡಿಸಲು; ಮತ್ತು

(ಸಿ) ಖುದ್ದು ಸಂಚಾರಕ್ಕೆ ನೆರವನ್ನು ಒದಗಿಸಲು

– ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

**42. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಪಡೆದುಕೊಳ್ಳಲು ಅವಕಾಶ.–** ಸಮುಚಿತ ಸರ್ಕಾರವು,– ಅಂಗವಿಕಲರಿಗೆ –

(i) ಶ್ರವಣ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಲಭ್ಯವಿರುವ ಎಲ್ಲ ವಿಷಯ ವಸ್ತುಗಳು ಸುಲಭಲಭ್ಯ ರೀತಿಯಲ್ಲಿ ದೊರೆಯುವಂತೆ ಮಾಡಲು;

(ii) ಶ್ರವ್ಯ ವರ್ಣನೆ, ಸಂಜ್ಞಾ ಭಾಷೆಯಲ್ಲಿ ಅರ್ಥವಿವರಣೆ ಮತ್ತು ತದ್ವತ್ ಶೀರ್ಷಿಕೆಗಳು ಅಂಗವಿಕಲ ವ್ಯಕ್ತಿಗಳಿಗೆ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಸುಲಭ ರೀತಿಯಲ್ಲಿ ದೊರೆಯುವಂತೆ ಮಾಡಲು;

(iii) ದಿನನಿತ್ಯ ಬಳಕೆ ಮಾಡಲಾಗುವ ವಿದ್ಯುನ್ಮಾನ ವಸ್ತುಗಳು ಮತ್ತು ಸಲಕರಣೆಗಳು ಸಾರ್ವತ್ರಿಕ ವಿನ್ಯಾಸದಲ್ಲಿ ಲಭ್ಯವಾಗುವಂತೆ ಮಾಡಲು

– ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**43. ಗ್ರಾಹಕ ಸರಕುಗಳು.–** ಸಮುಚಿತ ಸರ್ಕಾರವು, ಅಂಗವಿಕಲ ವ್ಯಕ್ತಿಗಳ ಸಾಮಾನ್ಯ ಬಳಕೆಗಾಗಿ ಎಲ್ಲರಿಗೂ ಸಾರ್ವತ್ರಿಕ ವಿನ್ಯಾಸದ ಗ್ರಾಹಕ ಉತ್ಪನ್ನಗಳ ಉತ್ಪಾದನೆಗೆ ಮತ್ತು ವಿತರಣೆಗೆ ಉತ್ತೇಜನ ನೀಡಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**44. ಸುಗಮ ಪ್ರವೇಶದ ನಿಬಂಧನೆಗಳ ಕಡ್ಡಾಯ ಪಾಲನೆ .–** (1) ಯಾವುದೇ ಸಂಸ್ಥೆಗೆ, ಕಟ್ಟಡದ ನಕ್ಷೆಯು 40ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಗುಣವಾಗಿಲ್ಲದಿದ್ದರೆ ಆ ಯಾವುದೇ ನಿರ್ಮಿತಿಗೆ ಅನುಮತಿಯನ್ನು ನೀಡತಕ್ಕದ್ದಲ್ಲ.

(2) ಯಾವುದೇ ಸಂಸ್ಥೆಗೆ, ಕಟ್ಟಡವು ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಗುಣವಾಗಿಲ್ಲದ ಹೊರತು ಕಟ್ಟಡವು ಪೂರ್ಣಗೊಂಡಿರುವುದಕ್ಕೆ ಪ್ರಮಾಣ ಪತ್ರವನ್ನು ನೀಡತಕ್ಕದ್ದಲ್ಲ ಅಥವಾ ವಾಸಕ್ಕಾಗಿ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದಕ್ಕೆ ಅನುಮತಿ ಕೊಡತಕ್ಕದ್ದಲ್ಲ.

**45. ಈಗ ಇರುವ ಮೂಲ ಸೌಲಭ್ಯಗಳು ಮತ್ತು ಆವರಣಗಳು ಸುಲಭ ಲಭ್ಯವಾಗುವಂತೆ ಮಾಡಲು ಹಾಗೂ ಈ ಉದ್ದೇಶಕ್ಕಾಗಿ ಕ್ರಮಕೈಗೊಳ್ಳಲು ಕಾಲಮಿತಿ.–** (1) ಈಗ ಇರುವ ಎಲ್ಲ ಸಾರ್ವಜನಿಕ ಕಟ್ಟಡಗಳು, ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗೆ ಅನುಸಾರವಾಗಿ ಹಾಗೂ ಅಂಥ ನಿಯಮಗಳಲ್ಲಿ ತಿಳಿಸಿದ ದಿನಾಂಕದಿಂದ ಐದು ವರ್ಷಗಳು ಮೀರದ ಅವಧಿಯೊಳಗಾಗಿ ಅವುಗಳು ಅಂಗವಿಕಲರಿಗೆ ಸುಲಭ ಲಭ್ಯವಾಗುವಂತೆ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ರಾಜ್ಯಗಳಿಗೆ ಈ ಬಗ್ಗೆ ಅವುಗಳ ಸಿದ್ಧತೆ ಮತ್ತು ಇತರ ಸಂಬಂಧಿತ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡು ಪ್ರಕರಣವಾರು ಆಧಾರದ ಮೇಲೆ ರಾಜ್ಯಗಳಿಗೆ ಕಾಲಮಿತಿಯನ್ನು ವಿಸ್ತರಿಸಲು ಅನುಮತಿ ನೀಡಬಹುದು.

(2) ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು, ತಮ್ಮ ವ್ಯಾಪ್ತಿಯಲ್ಲಿ ಅವಶ್ಯಕ ಸೇವೆಗಳನ್ನು ಒದಗಿಸುವಂಥ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ನಿರ್ಮಿಸುವಂಥ ಕಟ್ಟಡಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಪ್ರವೇಶಾವಕಾಶವನ್ನು ಸುಲಭ ಲಭ್ಯಗೊಳಿಸುವುದಕ್ಕಾಗಿ ಆದ್ಯತೆಯ ಮೇರೆಗೆ ಕ್ರಿಯಾಯೋಜನೆಯನ್ನು ರೂಪಿಸತಕ್ಕದ್ದು ಮತ್ತು ಅದನ್ನು ಪ್ರಕಟಿಸತಕ್ಕದ್ದು.

**46. ಸುಲಭ ಲಭ್ಯ ಸೇವೆಯನ್ನು ಒದಗಿಸುವವರಿಗೆ ಕಾಲಮಿತಿ.–** ಸೇವೆಯನ್ನು ಒದಗಿಸುವವರು, ಅದು ಸರ್ಕಾರವಾಗಿರಲೀ ಅಥವಾ ಅವರು ಖಾಸಗಿಯವರಾಗಿರಲೀ, 40ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರೂಪಿಸಿದ ಸುಲಭಲಭ್ಯ ನಿಯಮಗಳಿಗೆ ಅನುಸಾರವಾಗಿ, ಅಂಥ ನಿಯಮಗಳಲ್ಲಿ ತಿಳಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗಾಗಿ ಅಂಥ ಸೇವೆಗಳನ್ನು ಒದಗಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಚೀಫ್ ಕಮಿಷನರ್‌ರೊಂದಿಗೆ ಸಮಾಲೋಚಿಸಿ, ಸದರಿ ನಿಯಮಗಳಿಗೆ ಅನುಸಾರವಾಗಿ ನಿರ್ದಿಷ್ಟ ಪ್ರವರ್ಗದ ಸೇವೆಗಳನ್ನು ಕಲ್ಪಿಸುವುದಕ್ಕಾಗಿ ಇರುವ ಕಾಲಾವಕಾಶವನ್ನು ವಿಸ್ತರಿಸಿ ಅನುಮೋದಿಸಬಹುದು.

**47. ಮಾನವ ಸಂಪನ್ಮೂಲ ಅಭಿವೃದ್ಧಿ.–** (1) ಭಾರತ ಪುನರ್ವಸತಿ ಪರಿಷತ್ ಅಧಿನಿಯಮ, 1992 (1992ರ 34) ರ ಮೇರೆಗೆ ರಚಿತವಾದ ಭಾರತ ಪುನರ್ವಸತಿ ಪರಿಷತ್ತಿನ ಯಾವುದೇ ಕರ್ತವ್ಯಕ್ಕೆ ಮತ್ತು ಅಧಿಕಾರಕ್ಕೆ ಬಾಧಕವಾಗದಂತೆ, ಸಮುಚಿತ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪ್ರಯತ್ನಿಸತಕ್ಕದ್ದು ಮತ್ತು,–

(ಎ) ಅಂಗವಿಕಲರ ಹಕ್ಕುಗಳ ಮಾಹಿತಿಯನ್ನು ಪಂಚಾಯತ್ ರಾಜ್ ಸದಸ್ಯರು, ವಿಧಾನಮಂಡಲದ ಸದಸ್ಯರು, ಆಡಳಿತಗಾರರು, ಪೊಲೀಸ್ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ವಕೀಲರುಗಳ ತರಬೇತಿಗಾಗಿ ಇರುವ ಎಲ್ಲ ಪಠ್ಯಕ್ರಮಗಳಲ್ಲಿ ಸೇರಿಸಿ ಆ ಬಗ್ಗೆ ತರಬೇತಿ ನೀಡುವುದು ಕಡ್ಡಾಯವಾಗಿರತಕ್ಕದ್ದು;

(ಬಿ) ಶಾಲೆಗಳ, ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯ ಬೋಧಕರ, ವೈದ್ಯರ, ಶುಶ್ರೂಷಕರ, ಅರೆ–ವೈದ್ಯಕೀಯ ಸಿಬ್ಬಂದಿಗಳ, ಸಮಾಜ ಕಲ್ಯಾಣ ಅಧಿಕಾರಿಗಳ, ಗ್ರಾಮೀಣಾಭಿವೃದ್ಧಿ ಅಧಿಕಾರಿಗಳ, ಆಶಾ ಕಾರ್ಯಕರ್ತರ, ಅಂಗನವಾಡಿ ಕಾರ್ಯಕರ್ತರ, ಇಂಜಿನಿಯರ್‌ಗಳ, ವಾಸ್ತುಶಿಲ್ಪಿಗಳ, ಇತರ ವೃತ್ತಿನಿರತರ ಮತ್ತು ಸಮುದಾಯ ಕಾರ್ಯಕರ್ತರುಗಳ ಎಲ್ಲ ಶೈಕ್ಷಣಿಕ ಪಠ್ಯಕ್ರಮಗಳಲ್ಲಿ ಅಂಗವಿಕಲತೆಯು ಒಂದು ಘಟಕವಾಗಿ ಇರುವಂತೆ ಸೇರಿಸತಕ್ಕದ್ದು;

(ಸಿ) ಅಂಗವಿಕಲರಿಗೆ ಪಾಲನೆ ಪೋಷಣೆ ಮಾಡುವುದಕ್ಕೆ ಮತ್ತು ಅವರಿಗೆ ಬೆಂಬಲ ನೀಡುವುದಕ್ಕೆ ಸಂಬಂಧಿಸಿದಂತೆ ಕುಟುಂಬಗಳಿಗೆ, ಸಮುದಾಯ ಸದಸ್ಯರುಗಳಿಗೆ ಮತ್ತು ಇತರ ಆಸಕ್ತದಾರರಿಗೆ ಮತ್ತು ಪಾಲನೆ ಪೋಷಣೆ ಒದಗಿಸುವವರಿಗೆ ಅಂಗವಿಕಲರು ಸ್ವತಂತ್ರ ಜೀವನ ನಡೆಸುವ ಬಗ್ಗೆ, ಸಮುದಾಯ ಬಾಂಧವ್ಯದ ಬಗ್ಗೆ ತರಬೇತಿ ನೀಡುವುದೂ ಸೇರಿದಂತೆ ಅವರಿಗೆ ಸಾಮರ್ಥ್ಯವರ್ಧನಾ ಕಾರ್ಯಕ್ರಮಗಳನ್ನು ಪ್ರಾರಂಭಿಸತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ಸ್ವತಂತ್ರವಾಗಿ ಇತರರೊಂದಿಗೆ ಸಕ್ರಿಯವಾಗಿ ಪಾಲ್ಗೊಳ್ಳುವ ಮತ್ತು ಪರಸ್ಪರ ಕೊಡುಗೆ ಗೌರವ ನೀಡಿಕೆ ಬಗ್ಗೆ ಸಮುದಾಯ ಸಂಬಂಧಗಳನ್ನು ವರ್ಧಿಸುವುದಕ್ಕಾಗಿ ಸ್ವತಂತ್ರ ತರಬೇತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಇ) ಕ್ರೀಡೆಗಳು, ಆಟಗಳು, ಸಾಹಸ ಚಟುವಟಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ರೀಡಾ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸತಕ್ಕದ್ದು;

(ಎಫ್) ಅಗತ್ಯವಾಗಬಹುದಾದ ಯಾವುದೇ ಇತರ ಸಾಮರ್ಥ್ಯಾಭಿವೃದ್ಧಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಎಲ್ಲ ವಿಶ್ವವಿದ್ಯಾನಿಲಯಗಳು ಅಂಗವೈಕಲ್ಯತೆ ಕುರಿತ ಅಧ್ಯಯನಗಳಿಗಾಗಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದೂ ಸೇರಿದಂತೆ, ಅಂಥ ಅಧ್ಯಯನಗಳಲ್ಲಿ ಬೋಧನೆಗೆ ಮತ್ತು ಸಂಶೋಧನೆಗೆ ಉತ್ತೇಜನ ನೀಡತಕ್ಕದ್ದು.

(3) ಉಪ-ಪ್ರಕರಣ (1)ರಲ್ಲಿ ಹೇಳಲಾದ ಬಾಧ್ಯತೆಯನ್ನು ಈಡೇರಿಸುವ ಸಲುವಾಗಿ, ಸಮುಚಿತ ಸರ್ಕಾರವು, ಪ್ರತಿ ಐದು ವರ್ಷಕ್ಕೊಮ್ಮೆ ಅಗತ್ಯಾಧಾರಿತ ವಿಶ್ಲೇಷಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ವಿವಿಧ ಹೊಣೆಗಾರಿಕೆಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಸೂಕ್ತ ಸಿಬ್ಬಂದಿಯ ನೇಮಕಾತಿ, ನೇಮಕ, ಸಂವೇದನಾಶೀಲತೆ, ಪರಿಚಯ ಮತ್ತು ತರಬೇತಿಗಾಗಿ ಯೋಜನೆಗಳನ್ನು ರೂಪಿಸತಕ್ಕದ್ದು.

**48. ಸಾಮಾಜಿಕ ಪರಿಶೋಧನೆ.–** ಸಮುಚಿತ ಸರ್ಕಾರವು, ಅಂಗವಿಕಲರಿಗೆ ಸಂಬಂಧಪಡುವ ಯೋಜನೆ ಮತ್ತು ಕಾರ್ಯಕ್ರಮಗಳು ಆ ವ್ಯಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರ ಅಗತ್ಯತೆಗಳನ್ನು ಮತ್ತು ಕಾಳಜಿಗಳನ್ನು ಪರಿಗಣನೆಗೆ ತೆಗೆದುಕೊಂಡು ಅವರಿಗಾಗಿ ರೂಪಿಸಿದ ಎಲ್ಲ ಸಾಮಾನ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸಾಮಾಜಿಕ ಪರಿಶೋಧನೆಯನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ IX

### ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಗಳ ನೋಂದಣಿ ಮತ್ತು ಅಂಥ ಸಂಸ್ಥೆಗಳಿಗೆ ಅನುದಾನಗಳು

**49. ಸಕ್ಷಮ ಪ್ರಾಧಿಕಾರ.–** ರಾಜ್ಯ ಸರ್ಕಾರವು ಈ ಅಧ್ಯಾಯದ ಉದ್ದೇಶಗಳಿಗಾಗಿ ಸೂಕ್ತವೆಂದು ಅದು ಭಾವಿಸಬಹುದಾದಂತಹ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರವೆಂದು ನೇಮಕ ಮಾಡತಕ್ಕದ್ದು.

**50. ನೋಂದಣಿ.–** ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾರೇ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ಈ ಸಂಬಂಧವಾಗಿ ನೀಡಿದ ನೋಂದಣಿ ಪ್ರಮಾಣಪತ್ರದ ಅನುಸಾರವಾಗಿ ಹೊರತು, ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ :

ಪರಂತು, ಮಾನಸಿಕ ಅಸ್ವಸ್ಥ ವ್ಯಕ್ತಿಗಳ ಪಾಲನೆಗಾಗಿ ಮಾನಸಿಕ ಆರೋಗ್ಯ ಅಧಿನಿಯಮ, 1987ರ (1987ರ 14) 8ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಮೇರೆಗೆ ಸಿಂಧುವಾದ ಲೈಸೆನ್ಸ್ ಅನ್ನು ಹೊಂದಿರುವ ಸಂಸ್ಥೆಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

**51. ನೋಂದಣಿ ಪ್ರಮಾಣಪತ್ರದ ಅರ್ಜಿ ಮತ್ತು ನೀಡಿಕೆ. –** (1) ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾಂಥ ನಮೂನೆ ಮತ್ತು ಅಂಥ ರೀತಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸಕ್ಷಮ ಪ್ರಾಧಿಕಾರವು, ಅರ್ಜಿದಾರನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ್ದಾನೆಂದು

ಮನದಟ್ಟು ಮಾಡಿಕೊಳ್ಳುವ ಸಂಬಂಧ ಅದು ವಿಹಿತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ನಡೆಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಸ್ವೀಕರಿಸಿದ ತೊಂಭತ್ತು ದಿನಗಳ ಅವಧಿಯೊಳಗಾಗಿ ಅರ್ಜಿದಾರನಿಗೆ ಅಂಥ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಆ ಬಗ್ಗೆ ಮನದಟ್ಟಾಗದಿದ್ದರೆ ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ ಅಂಥ ಅರ್ಜಿಯನ್ನು ಆದೇಶದ ಮೂಲಕ ತಿರಸ್ಕರಿಸತಕ್ಕದ್ದು:

ಪರಂತು, ಪ್ರಮಾಣಪತ್ರ ನೀಡಲು ನಿರಾಕರಿಸುವ ಆದೇಶ ಹೊರಡಿಸುವುದಕ್ಕೆ ಮುಂಚೆ, ಸಕ್ಷಮ ಪ್ರಾಧಿಕಾರವು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶ ನೀಡತಕ್ಕದ್ದು ಮತ್ತು ಪ್ರಮಾಣಪತ್ರ ನೀಡಲು ನಿರಾಕರಿಸಿದ ಪ್ರತಿಯೊಂದು ಆದೇಶವನ್ನು ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

(3) ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಸಂಸ್ಥೆಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸೌಲಭ್ಯಗಳನ್ನು ನೀಡುವ ಮತ್ತು ಮಾನದಂಡಗಳನ್ನು ಈಡೇರಿಸುವ ಸ್ಥಿತಿಯಲ್ಲಿ ಇದ್ದ ಹೊರತು, ಅಂಥ ಸಂಸ್ಥೆಗೆ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ನೋಂದಣಿ ಪ್ರಮಾಣಪತ್ರ ನೀಡತಕ್ಕದ್ದಲ್ಲ.

(4) ಉಪಪ್ರಕರಣ (2)ರ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರವನ್ನು,–

(ಎ) ಪ್ರಕರಣ 52ರ ಮೇರೆಗೆ ರದ್ದುಗೊಳಿಸಿದ್ದ ಹೊರತು, ಅದು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯವರೆಗೂ ಜಾರಿಯಲ್ಲಿರತಕ್ಕದ್ದು;

(ಬಿ) ಕಾಲಕಾಲಕ್ಕೆ ಅಂಥ ಅವಧಿಗಾಗಿ ನವೀಕರಿಸಬಹುದು; ಮತ್ತು

(ಸಿ) ಅದು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(5) ನೋಂದಣಿ ಪ್ರಮಾಣಪತ್ರದ ನವೀಕರಣಕ್ಕಾಗಿ ಅರ್ಜಿಯನ್ನು, ಅದರ ಸಿಂಧುತ್ವದ ಅವಧಿ ಮುಕ್ತಾಯವಾಗುವುದಕ್ಕೂ ಮುಂಚೆ ಅರವತ್ತು ದಿನಗಳಿಗಿಂತ ಕಡಿಮೆ ಇಲ್ಲದ ಅವಧಿಯೊಳಗೆ ಸಲ್ಲಿಸತಕ್ಕದ್ದು.

(6) ನೋಂದಣಿ ಪ್ರಮಾಣಪತ್ರದ ಪ್ರತಿಯನ್ನು ಆ ಸಂಸ್ಥೆಯ ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

(7) ಉಪ–ಪ್ರಕರಣ (1)ರ ಅಥವಾ ಉಪ–ಪ್ರಕರಣ (5)ರ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು, ಸಕ್ಷಮ ಪ್ರಾಧಿಕಾರವು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯೊಳಗೆ ವಿಲೇ ಮಾಡತಕ್ಕದ್ದು.

**52. ನೋಂದಣಿಯ ರದ್ಧತಿ.**– (1) ಪ್ರಕರಣ 51ರ (2)ನೇ ಉಪ–ಪ್ರಕರಣದ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಯು,–

(ಎ) ಪ್ರಮಾಣಪತ್ರ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿಗೆ ಸಂಬಂಧಪಟ್ಟಂತೆ ಕೊಟ್ಟ ಮುಖ್ಯ ವಿವರಗಳು ಸರಿಯಾಗಿಲ್ಲವೆಂದು ಅಥವಾ ಸುಳ್ಳಾಗಿವೆಯೆಂದು; ಅಥವಾ

(ಬಿ) ಪ್ರಮಾಣಪತ್ರವನ್ನು ಯಾವ ನಿಯಮಗಳಿಗೆ ಅಥವಾ ಷರತ್ತುಗಳಿಗೆ ಒಳಪಟ್ಟು ನೀಡಲಾಗಿತ್ತೋ ಅವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದಾನೆಂದು ಅಥವಾ ಉಲ್ಲಂಘಿಸುವಂತೆ ಮಾಡಲು ಕಾರಣನಾಗಿದ್ದಾನೆಂದು

– ಸಕ್ಷಮ ಪ್ರಾಧಿಕಾರಕ್ಕೆ ನಂಬಲು ಕಾರಣ ಇದ್ದರೆ, ಅದು, ಸೂಕ್ತವೆಂದು ತಾನು ಭಾವಿಸುವಂಥ ರೀತಿಯಲ್ಲಿ ವಿಚಾರಣೆ ಮಾಡಿದ ನಂತರ, ಆ ಬಗ್ಗೆ ಆದೇಶವನ್ನು ಹೊರಡಿಸುವ ಮೂಲಕ ಪ್ರಮಾಣಪತ್ರವನ್ನು ರದ್ದುಪಡಿಸಬಹುದು:

ಪರಂತು, ಅರ್ಜಿದಾರನಿಗೆ ನಿಮ್ಮ ಪ್ರಮಾಣಪತ್ರವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ಕೇಳಿ ನೋಟೀಸ್ ನೀಡಿದ್ದ ಹೊರತು, ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಯಾವುದೇ ಸಂಸ್ಥೆಗೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರವನ್ನು (1)ನೇ ಉಪ–ಪ್ರಕರಣದ ಮೇರೆಗೆ ರದ್ದುಗೊಳಿಸಲಾಗಿದ್ದರೆ, ಅಂಥ ಸಂಸ್ಥೆಯು ಆ ರದ್ದತಿಯ ದಿನದಿಂದ ಆ ಬಗ್ಗೆ ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು:

ಪರಂತು, ರದ್ದತಿಯ ಆದೇಶದ ವಿರುದ್ಧ 53ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲು ಅವಕಾಶ ಇದ್ದರೆ, ಅಂಥ ಸಂಸ್ಥೆಯು,–

(ಎ) ಅಂಥ ಅಪೀಲನ್ನು ಸಲ್ಲಿಸಲು ಗೊತ್ತುಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೇ ಅದು ಯಾವುದೇ ಅಪೀಲನ್ನು ಸಲ್ಲಿಸದಿದ್ದರೆ; ಅಥವಾ

(ಬಿ) ಅಂಥ ಅಪೀಲನ್ನು ಸಲ್ಲಿಸಲಾಗಿದ್ದು, ಆದರೆ, ಅಪೀಲಿನಲ್ಲಾದ ಆದೇಶದ ದಿನಾಂಕದಿಂದ ರದ್ದತಿ ಆದೇಶವನ್ನು ಎತ್ತಿ ಹಿಡಿದಿದ್ದರೆ

– ಅಂಥ ಸಂಸ್ಥೆಯ ಕಾರ್ಯನಿರ್ವಹಣೆಯು ನಿಂತುಹೋಗತಕ್ಕದ್ದು.

(3) ಸಂಸ್ಥೆಗೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸಿದ ತರುವಾಯ, ಅಂಥ ರದ್ದತಿಯ ದಿನಾಂಕದಂದು ಅಂಥ ಸಂಸ್ಥೆಯ ನಿವಾಸಿಯಾಗಿರುವ ಯಾರೇ ಅಂಗವಿಕಲ ವ್ಯಕ್ತಿಯನ್ನು,–

(ಎ) ಆತನ ಅಥವಾ ಆಕೆಯ ಪೋಷಕರ ಅಥವಾ ಗಂಡನ ಅಥವಾ ಹೆಂಡತಿಯ ಅಥವಾ ಸಂದರ್ಭಾನುಸಾರ ಕಾನೂನುಸಮ್ಮತ ಪಾಲಕರ ವಶಕ್ಕೆ ಒಪ್ಪಿಸತಕ್ಕದ್ದೆಂದು; ಅಥವಾ

(ಬಿ) ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು

– ಸಕ್ಷಮ ಪ್ರಾಧಿಕಾರವು ಅಂಥ ಸಂಸ್ಥೆಗೆ ನಿರ್ದೇಶನ ನೀಡಬಹುದು.

(4) ಈ ಪ್ರಕರಣದ ಮೇರೆಗೆ ರದ್ದುಪಡಿಸಿರುವ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವ ಪ್ರತಿಯೊಂದು ಸಂಸ್ಥೆಯು ಅಂಥ ರದ್ದತಿಯ ತರುವಾಯ ಕೂಡಲೇ ಅಂಥ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು.

**53. ಅಪೀಲು.–** (1) ನೋಂದಣಿ ಪ್ರಮಾಣಪತ್ರ ನೀಡಿಕೆಯನ್ನು ತಿರಸ್ಕರಿಸುವ ಅಥವಾ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸುವ ಸಕ್ಷಮ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಅಂಥ ತಿರಸ್ಕರಣೆಯ ಅಥವಾ ರದ್ದುಗೊಳಿಸುವ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಅಪೀಲಿನ ಸಂಬಂಧ ರಾಜ್ಯ ಸರ್ಕಾರ ನೀಡುವ ಆದೇಶವು ಅಂತಿಮವಾದುದಾಗಿರತಕ್ಕದ್ದು.

**54. ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇವುಗಳ ನಿರ್ವಹಣೆಯಲ್ಲಿರುವ ಸಂಸ್ಥೆಗಳಿಗೆ ಅಧಿನಿಯಮವು ಅನ್ವಯವಾಗದಿರುವುದು.–** ಈ ಅಧ್ಯಾಯದಲ್ಲಿ ಒಳಗೊಂಡಿರುವುದು ಯಾವುದೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇವುಗಳು ನಿರ್ವಹಿಸುತ್ತಿರುವ ಅಂಗವಿಕಲ ವ್ಯಕ್ತಿಗಳ ಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

**55. ನೋಂದಾಯಿತ ಸಂಸ್ಥೆಗಳಿಗೆ ನೆರವು.–** ಸಮುಚಿತ ಸರ್ಕಾರವು, ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ ನೋಂದಾಯಿತ ಸಂಸ್ಥೆಗಳು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮತ್ತು ಸೇವೆಗಳನ್ನು ಒದಗಿಸುವುದಕ್ಕೆ ಹಣಕಾಸು ನೆರವನ್ನು ನೀಡಬಹುದು.

## ಅಧ್ಯಾಯ X

## ನಿರ್ದಿಷ್ಟ ಅಂಗವಿಕಲತೆಗಳ ಪ್ರಮಾಣೀಕರಣ

**56. ನಿರ್ದಿಷ್ಟ ಅಂಗವಿಕಲತೆಗಳನ್ನು ನಿರ್ಧರಿಸುವುದಕ್ಕಾಗಿ ಮಾರ್ಗಸೂಚಿಗಳು.–** ಕೇಂದ್ರ ಸರ್ಕಾರವು ವ್ಯಕ್ತಿಯ ನಿರ್ದಿಷ್ಟ ಅಂಗವಿಕಲತೆಯ ಪ್ರಮಾಣವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮಾರ್ಗಸೂಚಿಗಳನ್ನು ಅಧಿಸೂಚಿಸತಕ್ಕದ್ದು.

**57. ಪ್ರಮಾಣೀಕರಿಸುವ ಪ್ರಾಧಿಕಾರಿಗಳನ್ನು ಗೊತ್ತುಪಡಿಸುವುದು.–** (1) ಸಮುಚಿತ ಸರ್ಕಾರವು ಅಗತ್ಯ ವಿದ್ಯಾರ್ಹತೆಗಳು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳನ್ನು ಪ್ರಮಾಣೀಕರಿಸುವ ಪ್ರಾಧಿಕಾರಿಗಳನ್ನಾಗಿ ಗೊತ್ತುಪಡಿಸತಕ್ಕದ್ದು, ಅವರು ಅಂಗವಿಕಲತೆಯ ಪ್ರಮಾಣಪತ್ರವನ್ನು ನೀಡುವುದಕ್ಕೆ ಸಕ್ಷಮವಾಗಿರತಕ್ಕದ್ದು.

(2) ಸಮುಚಿತ ಸರ್ಕಾರವು, ಪ್ರಮಾಣೀಕರಿಸುವ ಪ್ರಾಧಿಕಾರಿಯು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ತನ್ನ ಅಧಿಕಾರವ್ಯಾಪ್ತಿಯೊಳಗೆ ಪ್ರಮಾಣೀಕರಣದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಎಂಬುದನ್ನು ಸಹ ಅಧಿಸೂಚಿಸತಕ್ಕದ್ದು.

**58. ಪ್ರಮಾಣೀಕರಣದ ಕಾರ್ಯವಿಧಾನ .–** (1) ನಿರ್ದಿಷ್ಟ ಅಂಗವಿಕಲತೆ ಇರುವ ಯಾರೇ ವ್ಯಕ್ತಿಯು, ಅಂಗವಿಕಲತೆಯ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದಕ್ಕಾಗಿ, ಆ ಬಗ್ಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪ್ರಮಾಣೀಕರಣ ಪ್ರಾಧಿಕಾರಕ್ಕೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಉಪ–ಪ್ರಕರಣ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಪ್ರಮಾಣೀಕರಣ ಪ್ರಾಧಿಕಾರವು, 56ನೇ ಪ್ರಕರಣದ ಮೇರೆಗೆ ಅಧಿಸೂಚಿತವಾದ ಯುಕ್ತ ಮಾರ್ಗಸೂಚಿಗಳಿಗೆ ಅನುಸಾರವಾಗಿ ಸಂಬಂಧಪಟ್ಟ ವ್ಯಕ್ತಿಯ ಅಂಗವಿಕಲತೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ನಿರ್ಧರಣೆಯ ನಂತರ, ಸಂದರ್ಭಾನುಸಾರ,–

(ಎ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವ್ಯಕ್ತಿಗೆ ಅಂಗವಿಕಲತೆಯ ಪ್ರಮಾಣಪತ್ರವನ್ನು ನೀಡತಕ್ಕದ್ದು;

(ಬಿ) ಅಂಥ ವ್ಯಕ್ತಿಯು ನಿರ್ದಿಷ್ಟ ಅಂಗವಿಕಲತೆ ಹೊಂದಿಲ್ಲದಿರುವ ಬಗ್ಗೆ ಲಿಖಿತದಲ್ಲಿ ಆತನಿಗೆ ತಿಳಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಿದ ಅಂಗವಿಕಲತೆಯ ಪ್ರಮಾಣಪತ್ರವು ಇಡೀ ದೇಶದಾದ್ಯಂತ ಸಿಂಧುವಾದುದಾಗಿರತಕ್ಕದ್ದು.

**59. ಪ್ರಮಾಣೀಕರಣ ಪ್ರಾಧಿಕಾರದ ನಿರ್ಣಯದ ವಿರುದ್ಧ ಅಪೀಲು.–** (1) ಪ್ರಮಾಣೀಕರಿಸುವ ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸಮಯದೊಳಗಾಗಿ ಮತ್ತು ಅಂಥ ರೀತಿಯಲ್ಲಿ ಅಂಥ ನಿರ್ಣಯದ ವಿರುದ್ಧ ಅಪೀಲು ಸಲ್ಲಿಸಬಹುದು.

(2) ಅಪೀಲನ್ನು ಸ್ವೀಕರಿಸಿದ ತರುವಾಯ, ಅಪೀಲು ಪ್ರಾಧಿಕಾರವು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಪೀಲನ್ನು ನಿರ್ಣಯಿಸತಕ್ಕದ್ದು.

## ಅಧ್ಯಾಯ XI

## ಅಂಗವಿಕಲತೆ ಕುರಿತ ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಳಿಗಳು ಮತ್ತು ಜಿಲ್ಲಾ ಮಟ್ಟದ ಸಮಿತಿ

**60. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ರಚನೆ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, 'ಕೇಂದ್ರ ಸಲಹಾ ಮಂಡಲಿ' ಎಂಬ ಒಂದು ನಿಕಾಯವನ್ನು, ಅಂಗವಿಕಲತೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ರಚಿಸತಕ್ಕದ್ದು.

(2) ಕೇಂದ್ರ ಸಲಹಾ ಮಂಡಲಿಯು,–

(ಎ) ಕೇಂದ್ರ ಸರ್ಕಾರದ ಅಂಗವಿಕಲತೆ ವ್ಯವಹಾರಗಳ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ – ಪದನಿಮಿತ್ತ ಅಧ್ಯಕ್ಷರು;

(ಬಿ) ಕೇಂದ್ರ ಸರ್ಕಾರದ ಮಂತ್ರಾಲಯದಲ್ಲಿ ಅಂಗವಿಕಲತೆ ವ್ಯವಹಾರಗಳ ಇಲಾಖೆಯ ಪ್ರಭಾರದಲ್ಲಿರುವ ರಾಜ್ಯ ಮಂತ್ರಿ – ಪದನಿಮಿತ್ತ ಉಪಾಧ್ಯಕ್ಷರು;

(ಸಿ) ಸಂಸತ್ತಿನ ಮೂರು ಸದಸ್ಯರು, ಇವರಲ್ಲಿ ಲೋಕಸಭೆಯಿಂದ ಆಯ್ಕೆಯಾದ ಇಬ್ಬರು ಮತ್ತು ರಾಜ್ಯ ಸಭೆಯಿಂದ ಆಯ್ಕೆಯಾದ ಒಬ್ಬರು – ಪದನಿಮಿತ್ತ ಸದಸ್ಯರು;

(ಡಿ) ಎಲ್ಲ ರಾಜ್ಯಗಳಲ್ಲಿ ಅಂಗವಿಕಲತೆ ವ್ಯವಹಾರಗಳ ಪ್ರಭಾರದಲ್ಲಿರುವ ಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಾರರು ಅಥವಾ ಲೆಫ್ಟಿನೆಂಟ್ ಗವರ್ನರ್‌ಗಳು – ಪದನಿಮಿತ್ತ ಸದಸ್ಯರು;

(ಇ) ಭಾರತ ಸರ್ಕಾರದ ಅಂಗವಿಕಲತೆ ವ್ಯವಹಾರಗಳು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಶಾಲಾಶಿಕ್ಷಣ ಮತ್ತು ಸಾಕ್ಷರತೆ ಮತ್ತು ಉನ್ನತ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚಗಳು, ಸಿಬ್ಬಂದಿ ಮತ್ತು ತರಬೇತಿ, ಆಡಳಿತ ಸುಧಾರಣೆಗಳ ಮತ್ತು ಸಾರ್ವಜನಿಕ ಕುಂದುಕೊರತೆಗಳ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೈಗಾರಿಕಾ ಕಾರ್ಯನೀತಿ ಮತ್ತು ಪ್ರಚಾರ, ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ, ಕಾನೂನು ವ್ಯವಹಾರಗಳು, ಸಾರ್ವಜನಿಕ ಉದ್ದಿಮೆಗಳ, ಯುವಜನ ಸೇವಾ ವ್ಯವಹಾರಗಳು ಮತ್ತು ಕ್ರೀಡೆಗಳು, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಮತ್ತು ನಾಗರಿಕ ವಿಮಾನಯಾನ ಮಂತ್ರಾಲಯಗಳ ಪ್ರಭಾರದಲ್ಲಿರುವ ಅಥವಾ ಆಯಾಯ ಇಲಾಖೆಗಳ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯರುಗಳು;

(ಎಫ್) ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ (NITI) ಆಯೋಗದ ಕಾರ್ಯದರ್ಶಿ – ಪದನಿಮಿತ್ತ ಸದಸ್ಯರು;

(ಜಿ) ಭಾರತ ಪುನರ್ ವ್ಯವಸ್ಥೆ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಹೆಚ್) ಆಟಿಸಂ, ಮಿದುಳಿನ ಪಾರ್ಶ್ವವಾಯು, ಬುದ್ಧಿ ಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣ ಕುರಿತ ರಾಷ್ಟ್ರೀಯ ಟ್ರಸ್ಟ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಐ) ವಿಕಲತೆ ಕುರಿತ ರಾಷ್ಟ್ರೀಯ ಹಣಕಾಸು ಅಭಿವೃದ್ಧಿ ನಿಗಮದ ಅಧ್ಯಕ್ಷರು – ಹಾಗೂ – ವ್ಯವಸ್ಥಾಪಕ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಜೆ) ಕೃತಕ ಅವಯವ ತಯಾರಿಕಾ ನಿಗಮದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಕೆ) ರೈಲ್ವೆ ಮಂಡಳಿ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಎಲ್) ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದಲ್ಲಿನ ಉದ್ಯೋಗ ಮತ್ತು ತರಬೇತಿಯ ಮಹಾ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಎಂ) ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಷ್ಟ್ರೀಯ ಪರಿಷತ್‌ನ ನಿರ್ದೇಶಕರು – ಪದನಿಮಿತ್ತ ಸದಸ್ಯರು;

(ಎನ್) ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಒ) ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗದ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಪಿ) ಭಾರತದ ವೈದ್ಯಕೀಯ ಪರಿಷತ್‌ನ ಅಧ್ಯಕ್ಷರು – ಪದನಿಮಿತ್ತ ಸದಸ್ಯರು;

(ಕ್ಯೂ) ಈ ಕೆಳಕಂಡ ಸಂಸ್ಥೆಗಳ ನಿರ್ದೇಶಕರುಗಳು:–

(i) ದೃಷ್ಟಿ ಊನತೆ ಕುರಿತ ರಾಷ್ಟ್ರೀಯ ಸಂಸ್ಥೆ, ಡೆಹ್ರಾಡೂನ್;

(ii) ರಾಷ್ಟ್ರೀಯ ಮಾನಸಿಕ ವಿಕಲತೆ ಸಂಸ್ಥೆ, ಸಿಕಂದರಾಬಾದ್;

(iii) ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ದೈಹಿಕ ಅಂಗವಿಕಲತೆ ಸಂಸ್ಥೆ, ನವದೆಹಲಿ;

(iv) ಆಲಿ ಯವಾರ್ ಜಂಗ್ ರಾಷ್ಟ್ರೀಯ ಶ್ರವಣ ವಿಕಲತೆ ಸಂಸ್ಥೆ, ಮುಂಬಯಿ;

(v) ಅಸ್ಥಿ ವಿಕಲತೆ ಕುರಿತ ರಾಷ್ಟ್ರೀಯ ಸಂಸ್ಥೆ, ಕೊಲ್ಕತ್ತಾ;

(vi) ರಾಷ್ಟ್ರೀಯ ಪುನರ್ ವ್ಯವಸ್ಥೆ ತರಬೇತಿ ಮತ್ತು ಸಂಶೋಧನೆ ಸಂಸ್ಥೆ, ಕಟಕ್;

(vii) ರಾಷ್ಟ್ರೀಯ ಬಹುವಿಧ ಅಂಗವಿಕಲತೆ ವ್ಯಕ್ತಿಗಳ ಸಬಲೀಕರಣ ಸಂಸ್ಥೆ, ಚೆನ್ನೈ;

(viii) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ, ಬೆಂಗಳೂರು;

(ix) ಭಾರತೀಯ ಸಂಜ್ಞೆ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರ, ನವದೆಹಲಿ – ಪದನಿಮಿತ್ತ ಸದಸ್ಯರು;

(ಆರ್) ಕೇಂದ್ರ ಸರ್ಕಾರವು, ನಾಮನಿರ್ದೇಶನ ಮಾಡುವ ಸದಸ್ಯರು, ಎಂದರೆ–

(i) ಅಂಗವಿಕಲತೆ ಮತ್ತು ಪುನರ್‌ವ್ಯವಸ್ಥೆ ಕ್ಷೇತ್ರದಲ್ಲಿ ತಜ್ಞರಾಗಿರುವ ಐದು ಮಂದಿ ಸದಸ್ಯರು;

(ii) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಅಶಕ್ತ ವ್ಯಕ್ತಿಗಳ ಸಂಘಸಂಸ್ಥೆಗಳನ್ನು ಪ್ರತಿನಿಧಿಸುವ, ಅಂಗವಿಕಲ ವ್ಯಕ್ತಿಗಳು ಸಾಧ್ಯವಾದಷ್ಟು ಮಟ್ಟಿಗೆ ಹತ್ತು ಮಂದಿ ಸದಸ್ಯರು:

ಪರಂತು, ನಾಮನಿರ್ದೇಶನಗೊಂಡ ಹತ್ತು ಮಂದಿ ಸದಸ್ಯರ ಪೈಕಿ ಕನಿಷ್ಠಪಕ್ಷ, ಐದು ಮಂದಿ ಮಹಿಳೆಯರು ಇರತಕ್ಕದ್ದು ಮತ್ತು ಈ ಹತ್ತು ಮಂದಿಯಲ್ಲಿ ಕೊನೆ ಪಕ್ಷ ಒಬ್ಬರು ಸದಸ್ಯರು ಅನುಸೂಚಿತ ಜಾತಿಯವರು ಮತ್ತು ಒಬ್ಬರು ಸದಸ್ಯರು ಅನುಸೂಚಿತ ಪಂಗಡದವರು ಇರತಕ್ಕದ್ದು;

(iii) ರಾಷ್ಟ್ರೀಯ ಮಟ್ಟದ ವಾಣಿಜ್ಯ ಮತ್ತು ಕೈಗಾರಿಕಾ ಚೇಂಬರ್ಸ್‌ಗಳಿಂದ ಮೂರು ಮಂದಿ ಪ್ರತಿನಿಧಿಗಳು;

(ಎಸ್) ಅಂಗವಿಕಲತೆ ಕಾರ್ಯನೀತಿಯ ವಿಷಯವನ್ನು ವ್ಯವಹರಿಸುವ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ – ಪದನಿಮಿತ್ತ ಸದಸ್ಯ – ಕಾರ್ಯದರ್ಶಿ

– ಇವರುಗಳನ್ನು ಒಳಗೊಂಡಿರತಕ್ಕದ್ದು.

**61. ಸದಸ್ಯರುಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.**– (1) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, 60ನೇ ಪ್ರಕರಣದ (2)ನೇ ಉಪ ಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಕೇಂದ್ರ ಸಲಹಾ ಮಂಡಳಿಯ ಸದಸ್ಯನು, ಆತನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಆ ಹುದ್ದೆಯನ್ನು ಹೊಂದಿರತಕ್ಕದ್ದು:

ಪರಂತು, ಅಂಥ ಸದಸ್ಯ, ತಮ್ಮ ಪದಾವಧಿ ಮುಕ್ತಾಯವಾದಾಗ್ಯೂ, ಆ ಹುದ್ದೆಯ ಉತ್ತರಾಧಿಕಾರಿಯು ಅಂಥ ಹುದ್ದೆಯನ್ನು ವಹಿಸಿಕೊಳ್ಳುವವರೆಗೆ ಸದಸ್ಯನಾಗಿ ಮುಂದುವರೆಯತಕ್ಕದ್ದು.

(2) ಕೇಂದ್ರ ಸರ್ಕಾರವು, ಯುಕ್ತವೆಂದು ಪರಿಗಣಿಸಿದರೆ, 60ನೇ ಪ್ರಕರಣದ (2)ನೇ ಉಪ ಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾರೇ ಸದಸ್ಯನನ್ನು, ಆತನನ್ನು ಸ್ಥಾನದಿಂದ ತೆಗೆದುಹಾಕಬಾರದೆಂಬ ಬಗ್ಗೆ ಕಾರಣ ತೋರಿಸಲು, ಆತನ ಪದಾವಧಿ ಮುಕ್ತಾಯವಾಗುವ ಮುನ್ನ, ಯುಕ್ತ ಅವಕಾಶವನ್ನು ನೀಡಿದ ತರುವಾಯ ಆತನನ್ನು ಆ ಸ್ಥಾನದಿಂದ ತೆಗೆದು ಹಾಕಬಹುದು.

(3) ಪ್ರಕರಣ (60)ರ (2)ನೇ ಉಪ–ಪ್ರಕರಣದ (ಆರ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ಕೇಂದ್ರ ಸರ್ಕಾರಕ್ಕೆ, ಅವನು ಲಿಖಿತದಲ್ಲಿ ಸಹಿ ಮಾಡಿದ ಪತ್ರವನ್ನು ಕಳುಹಿಸುವ ಮೂಲಕ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಆ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(4) ಕೇಂದ್ರ ಸಲಹಾ ಮಂಡಳಿಯಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಖಾಲಿಸ್ಥಾನಕ್ಕೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಯಾವ ಸದಸ್ಯನ ಸ್ಥಾನಕ್ಕೆ ನಾಮನಿರ್ದೇಶನಗೊಂಡಿದ್ದಾನೆಯೋ ಅಂಥ ಸದಸ್ಯನ ಉಳಿದ ಪದಾವಧಿಗೆ ಮಾತ್ರವೇ ಆ ಹುದ್ದೆಯನ್ನು ಹೊಂದಿರತಕ್ಕದ್ದು.

(5) ಪ್ರಕರಣ (60)ರ (2)ನೇ ಉಪ–ಪ್ರಕರಣದ (ಆರ್) ಖಂಡದ (i)ನೇ ಉಪ–ಖಂಡ ಮತ್ತು (ii)ನೇ ಉಪ–ಖಂಡಗಳ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಮರುನಾಮಕರಣಕ್ಕೆ ಅರ್ಹನಾಗಿರತಕ್ಕದ್ದು.

(6) ಪ್ರಕರಣ (60)ರ (2)ನೇ ಉಪ–ಪ್ರಕರಣದ (ಆರ್) ಖಂಡದ (i)ನೇ ಉಪ–ಖಂಡ ಮತ್ತು (ii)ನೇ ಉಪ–ಖಂಡಗಳ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

**62. ಅನರ್ಹತೆಗಳು.–** (1) ಯಾರೇ ವ್ಯಕ್ತಿಯು,–

(ಎ) ದಿವಾಳಿಯಾಗಿರುವನೆಂದು ಅಥವಾ ದಿವಾಳಿಯೆಂದು ಯಾವುದೇ ಕಾಲದಲ್ಲಿ ನ್ಯಾಯನಿರ್ಣೀತನಾಗಿದ್ದರೆ ಅಥವಾ ಅವನ ಋಣಗಳ ನಿಮಿತ್ತ ಸಂದಾಯವನ್ನು ನಿಲ್ಲಿಸಿದ್ದರೆ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ನೈತಿಕ ಪತನವನ್ನೊಳಗೊಂಡ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಿರುವಂತಹ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ; ಅಥವಾ

(ಡಿ) ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ ಅಥವಾ ಹಾಗೆಂದು ಯಾವುದೇ ಕಾಲದಲ್ಲಿ ನಿರ್ಣೀತನಾಗಿದ್ದರೆ; ಅಥವಾ

(ಇ) ಸದಸ್ಯನಾಗಿ ಆತನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಆ ಸ್ಥಾನದಲ್ಲಿ ಆತನು ಮುಂದುವರಿದರೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುವಷ್ಟರ ಮಟ್ಟಿಗೆ ದುರುಪಯೋಗಪಡಿಸಿಕೊಂಡಿಸಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಷ್ಟರಲ್ಲಿ, ದುರುಪಯೋಗಪಡಿಸಿಕೊಂಡಿದ್ದರೆ

– ಆ ಯಾರೇ ವ್ಯಕ್ತಿಯು ಕೇಂದ್ರ ಸಲಹಾ ಮಂಡಳಿಯ ಸದಸ್ಯನಾಗಿರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ, ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಆ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

(3) ಪ್ರಕರಣ (61)ರ (1)ನೇ ಉಪ–ಪ್ರಕರಣದಲ್ಲಿ ಅಥವಾ (5)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**63. ಸದಸ್ಯರುಗಳಿಂದುಂಟಾದ ಖಾಲಿ ಸ್ಥಾನಗಳು.–** ಕೇಂದ್ರ ಸಲಹಾ ಮಂಡಲಿಯ ಸದಸ್ಯನು 62ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅನರ್ಹತೆಗಳಿಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**64. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಸಭೆಗಳು.–** ಕೇಂದ್ರ ಸಲಹಾ ಮಂಡಲಿಯು, ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**65. ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅಂಗವಿಕಲತೆ ಕುರಿತ ಕೇಂದ್ರ ಸಲಹಾ ಮಂಡಲಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಷ್ಟ್ರಮಟ್ಟದ ಸಮಾಲೋಚನಾ ಮತ್ತು ಸಲಹಾ ಮಂಡಲಿಯಾಗಿರತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಮತ್ತು ಅವರು ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಅನುಭವಿಸುವುದಕ್ಕಾಗಿ ಸಮಗ್ರ ಕಾರ್ಯನೀತಿಯು ನಿರಂತರವಾಗಿ ಮುಂದುವರೆಯುವುದಕ್ಕೆ ಅವಕಾಶಗಳನ್ನು ಕಲ್ಪಿಸತಕ್ಕದ್ದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸಲಹಾ ಮಂಡಲಿಯು, ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು;

(ಬಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸುವುದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ರಾಷ್ಟ್ರೀಯ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಕಾರ್ಯಯೋಜನೆಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದು;

(ಇ) ಅಂಗವಿಕಲ ವ್ಯಕ್ತಿಗಳಿಗೆ ಮಾಹಿತಿಯು, ಸೇವೆಗಳು ಸುಲಭವಾಗಿ ಲಭ್ಯವಾಗುವುದಕ್ಕೆ ಸಂಬಂಧಿಸಿದಂತೆ ಸಮಂಜಸ ಸೌಕರ್ಯ ಕಲ್ಪಿಸುವುದನ್ನು, ತಾರತಮ್ಯ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅನುಕೂಲವಾದಂಥ ವಾತಾವರಣ ಒದಗಿಸುವುದಕ್ಕೆ ಮತ್ತು ಸಾಮಾಜಿಕ ಜೀವನದಲ್ಲಿ ಅವರು ಭಾಗಿಯಾಗುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಶಿಫಾರಸ್ಸು ಮಾಡುವುದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಭಾಗವಹಿಸುವಂತಾಗುವುದಕ್ಕೆ ಸಂಬಂಧಿಸಿದಂತೆ ರೂಪಿಸಿದ ಕಾನೂನುಗಳ, ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯನಿರ್ಣಯ ಮಾಡುವುದು;

(ಜಿ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**66. ಅಂಗವಿಕಲತೆ ಕುರಿತ ರಾಜ್ಯ ಸಲಹಾ ಮಂಡಲಿ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಗೊತ್ತುಪಡಿಸಿದ ಪ್ರಕಾರ್ಯವನ್ನು ನೆರವೇರಿಸುವುದಕ್ಕೆ ಅಂಗವಿಕಲತೆ ಕುರಿತ ರಾಜ್ಯ ಸಲಹಾ ಮಂಡಲಿ ಎಂದು ಕರೆಯಲಾಗುವ ನಿಕಾಯವನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಸಲಹಾ ಮಂಡಲಿಯು,–

(ಎ) ಅಂಗವಿಕಲತೆ ವಿಷಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ ಇಲಾಖೆಯ ಪ್ರಭಾರದಲ್ಲಿರುವ ಸಚಿವರು – ಪದನಿಮಿತ್ತ ಅಧ್ಯಕ್ಷರು;

(ಬಿ) ಅಂಗವಿಕಲತೆ ವಿಷಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ ಇಲಾಖೆಯ ಪ್ರಭಾರದಲ್ಲಿರುವ ರಾಜ್ಯ ಮಂತ್ರಿ ಅಥವಾ ಉಪ–ಮಂತ್ರಿ – ಪದನಿಮಿತ್ತ ಉಪಾಧ್ಯಕ್ಷರು;

(ಸಿ) ರಾಜ್ಯ ಸರ್ಕಾರದ ಅಂಗವಿಕಲತೆ ವ್ಯವಹಾರಗಳ ಇಲಾಖೆ, ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಣಕಾಸು ಇಲಾಖೆ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೈಗಾರಿಕಾ ಕಾರ್ಯನೀತಿ ಮತ್ತು ಉತ್ತೇಜನ ಇಲಾಖೆ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ, ನಗಾರಾಭಿವೃದ್ಧಿ ಇಲಾಖೆ, ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಇಲಾಖೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಇಲಾಖೆ, ರಸ್ತೆ ಸಾರಿಗೆ ಇಲಾಖೆ ಹಾಗೂ ರಾಜ್ಯ ಸರ್ಕಾರವು ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಇತರ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯರು;

(ಡಿ) ರಾಜ್ಯ ವಿಧಾನಮಂಡಲದ ಮೂರು ಮಂದಿ ಸದಸ್ಯರು, ಈ ಪೈಕಿ ಇಬ್ಬರು ವಿಧಾನ ಸಭೆಯಿಂದ ಮತ್ತು ಒಬ್ಬರು ವಿಧಾನ ಪರಿಷತ್ತಿನಿಂದ ಆಯ್ಕೆಯಾಗಿರತಕ್ಕದ್ದು ಮತ್ತು ಆ ರಾಜ್ಯದಲ್ಲಿ ವಿಧಾನ ಪರಿಷತ್ತು ಇಲ್ಲದಿದ್ದರೆ, ವಿಧಾನ ಸಭೆಗೆ ಆಯ್ಕೆಯಾದ ಮೂರು ಮಂದಿ ಸದಸ್ಯರನ್ನು ಆಯ್ಕೆ ಮಾಡತಕ್ಕದ್ದು – ಇವರುಗಳು ಪದನಿಮಿತ್ತ ಸದಸ್ಯರು;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಸದಸ್ಯರು:–

(i) ಅಂಗವಿಕಲತೆ ಮತ್ತು ಅವರ ಪುನರ್‌ವ್ಯವಸ್ಥೆ ಕ್ಷೇತ್ರದಲ್ಲಿ ತಜ್ಞರಾಗಿರುವ ಐದು ಮಂದಿ ಸದಸ್ಯರು;

(ii) ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಸರದಿಯಂತೆ ಜಿಲ್ಲೆಗಳನ್ನು ಪ್ರತಿನಿಧಿಸುವ ಐವರು ಸದಸ್ಯರು:

ಪರಂತು, ಈ ಉಪ–ಖಂಡದ ಮೇರೆಗೆ ಮಾಡುವ ನಾಮಕರಣವನ್ನು ಸಂಬಂಧಪಟ್ಟ ಜಿಲ್ಲಾ ಆಡಳಿತದ ಶಿಫಾರಸ್ಸಿನ ಹೊರತು ಮಾಡತಕ್ಕದ್ದಲ್ಲ;

(iii) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸುವುದಕ್ಕಾಗಿ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಹತ್ತು ಜನ ಅಂಗವಿಕಲ ವ್ಯಕ್ತಿಗಳು:

ಪರಂತು, ಈ ಖಂಡದ ಮೇರೆಗೆ ನಾಮನಿರ್ದೇಶನ ಮಾಡಿದ ಹತ್ತು ವ್ಯಕ್ತಿಗಳ ಪೈಕಿ, ಕನಿಷ್ಠಪಕ್ಷ 5 ಜನ ಮಹಿಳೆಯರಾಗಿರತಕ್ಕದ್ದು ಮತ್ತು ಈ ಪೈಕಿ ಕನಿಷ್ಠಪಕ್ಷ ಒಬ್ಬರು ಅನುಸೂಚಿತ ಜಾತಿಗೆ ಮತ್ತು ಒಬ್ಬರು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು;

(iv) ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಮಂಡಲಿಯ ಮೂರಕ್ಕಿಂತ ಹೆಚ್ಚಿಲ್ಲದ ಪ್ರತಿನಿಧಿಗಳು;

(ಎಫ್) ರಾಜ್ಯ ಸರ್ಕಾರದಲ್ಲಿ ಅಂಗವಿಕಲತೆ ವಿಷಯಗಳನ್ನು ವ್ಯವಹರಿಸುವ ಇಲಾಖೆಯಲ್ಲಿನ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯಲ್ಲದ ದರ್ಜೆಯ ಅಧಿಕಾರಿ – ಪದನಿಮಿತ್ತ ಸದಸ್ಯ ಕಾರ್ಯದರ್ಶಿ;

– ಇವರುಗಳನ್ನು ಒಳಗೊಂಡಿರತಕ್ಕದ್ದು.

**67. ಸದಸ್ಯರ ಸೇವಾ ಅವಧಿ ಮತ್ತು ಷರತ್ತುಗಳು.–** (1) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, 66ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ರಾಜ್ಯ ಸಲಹಾ ಮಂಡಲಿ ಸದಸ್ಯನು ಆತನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ತನ್ನ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಅಂಥ ಸದಸ್ಯನ ಪದಾವಧಿಯು ಮುಕ್ತಾಯವಾಗಿದ್ದಾಗ್ಯೂ ಸಹ, ಆ ಸ್ಥಾನಕ್ಕೆ ಉತ್ತರಾಧಿಕಾರಿಯು ಬರುವವರೆಗೂ ಅವನು ಆ ಪದದಲ್ಲಿ ಮುಂದುವರೆಯತಕ್ಕದ್ದು.

(2) ರಾಜ್ಯ ಸರ್ಕಾರವು, 66ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾರೇ ಸದಸ್ಯನ ಪದಾವಧಿ ಮುಗಿಯುವುದಕ್ಕೆ ಮುಂಚೆ, ಆ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಯುಕ್ತವೆಂದು ಭಾವಿಸಿದರೆ ಆತನನ್ನು ತೆಗೆದುಹಾಕುವುದಕ್ಕೆ ಸಂಬಂಧಿಸಿದಂತೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡಿದ ನಂತರ ಆತನನ್ನು ಸದಸ್ಯ ಸ್ಥಾನದಿಂದ ತೆಗೆದುಹಾಕಬಹುದು.

(3) 66ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ತಾನು ಸಹಿ ಮಾಡಿದ ಲಿಖಿತ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(4) ರಾಜ್ಯ ಸಲಹಾ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನ ಮಾಡುವ ಮೂಲಕವೇ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಯಾವ ಸದಸ್ಯನ ಖಾಲಿಸ್ಥಾನಕ್ಕೆ ನೇಮಕಗೊಂಡಿರುವನೋ ಆ ಸ್ಥಾನದ ಉಳಿದ ಅವಧಿಯವರೆಗೆ ಮಾತ್ರ ಆ ಪದವನ್ನು ಹೊಂದಿರತಕ್ಕದ್ದು.

(5) 66ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದ (i)ನೇ ಉಪ–ಖಂಡದ ಅಥವಾ (iii)ನೇ ಉಪ–ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಮರು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(6) 66ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದ (i)ನೇ ಉಪ–ಖಂಡ ಮತ್ತು (ii)ನೇ ಉಪ–ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

**68. ಅನರ್ಹತೆಗಳು.–** (1)

(ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ; ಅಥವಾ

(ಸಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಒಂದು ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಇ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ರಾಜ್ಯ ಸಲಹಾ ಮಂಡಲಿಯಲ್ಲಿ ಆತನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ಆತನು ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿರುವ

– ಯಾರೇ ವ್ಯಕ್ತಿಯು ರಾಜ್ಯ ಸಲಹಾ ಮಂಡಲಿಯ ಸದಸ್ಯನಾಗಿರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಸಂಬಂಧಪಟ್ಟ ಸದಸ್ಯನಿಗೆ ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡದ ಹೊರತು ಹಾಗೆ ಮಾಡತಕ್ಕದ್ದಲ್ಲ.

(3) 67ನೇ ಪ್ರಕರಣದ (1)ನೇ ಉಪ–ಪ್ರಕರಣ ಅಥವಾ (5)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯತ್ವದಿಂದ ತೆಗೆದು ಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್‌ನಾಮಕರಣಕ್ಕೆ ಅರ್ಹನಾಗಿರತಕ್ಕದ್ದಲ್ಲ.

**69. ಸ್ಥಾನಗಳ ಖಾಲಿಯಾಗುವಿಕೆ.–** ರಾಜ್ಯ ಸಲಹಾ ಮಂಡಲಿಯ ಸದಸ್ಯನು 68ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**70. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಸಭೆಗಳು.–** ರಾಜ್ಯ ಸಲಹಾ ಮಂಡಲಿಯು ಪ್ರತಿ ಆರು ತಿಂಗಳಿಗೆ ಕನಿಷ್ಠಪಕ್ಷ ಒಂದು ಸಲ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಸಂಬಂಧದಲ್ಲಿ ರಾಜ್ಯ ಸರ್ಕಾರ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**71. ರಾಜ್ಯ ಅಂಗವಿಕಲ ಸಲಹಾ ಮಂಡಲಿಯ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಜ್ಯ ಸಲಹಾ ಮಂಡಲಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಮಟ್ಟದ ಸಮಾಲೋಚನಾ ಮತ್ತು ಸಲಹಾ ನಿಕಾಯವಾಗಿರತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಮತ್ತು ಅವರು ತಮ್ಮ ಹಕ್ಕುಗಳನ್ನು ಸಂಪೂರ್ಣವಾಗಿ ಉಪಭೋಗಿಸುವುದಕ್ಕಾಗಿ ಒಂದು ಸಮಗ್ರ ಕಾರ್ಯನೀತಿಯನ್ನು ನಿರಂತರವಾಗಿ ಮೌಲ್ಯ ನಿರ್ಣಯ ಮಾಡುವ ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ರಾಜ್ಯ ಅಂಗವಿಕಲ ಸಲಹಾ ಮಂಡಲಿಯು ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಜ್ಯ ಕಾರ್ಯನೀತಿಯನ್ನು ರೂಪಿಸುವುದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ರಾಜ್ಯ ಸರ್ಕಾರಿ ಇಲಾಖೆಗಳ ಮತ್ತು ಇತರ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಡಿ) ರಾಜ್ಯದ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಯೋಜನೆಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ಕಲ್ಪಿಸುವ ಉದ್ದೇಶದಿಂದ, ಸಂಬಂಧಪಟ್ಟ ಪ್ರಾಧಿಕಾರಿಗಳೊಂದಿಗೆ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಚರ್ಚಿಸುವುದು;

(ಇ) ಅಂಗವಿಕಲ ವ್ಯಕ್ತಿಗಳು ತಮ್ಮ ಸಾಮಾಜಿಕ ಜೀವನದಲ್ಲಿ ಇತರರೊಂದಿಗೆ ಸಮಾನವಾಗಿ ಪಾಲ್ಗೊಳ್ಳುವುದಕ್ಕೆ ಅವಶ್ಯಕವಾದ ಸೇವೆಗಳು ಮತ್ತು ಇದಕ್ಕೆ ತಕ್ಕ ವಾತಾವರಣವು ಸುಲಭವಾಗಿ ಲಭ್ಯವಾಗುವುದನ್ನು, ಯುಕ್ತ ಅವಕಾಶ ಕಲ್ಪಿಸುವುದನ್ನು, ತಾರತಮ್ಯ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮತ್ತು ಅಂತಹ ಪರಿಸರ ನಿರ್ಮಿಸುವುದಕ್ಕೆ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡುವುದು;

(ಎಫ್) ಅಂಗವಿಕಲ ವ್ಯಕ್ತಿಗಳು ಸಂಪೂರ್ಣವಾಗಿ ಭಾಗವಹಿಸುವುದಕ್ಕಾಗಿ ರೂಪಿಸಿದ ಕಾನೂನುಗಳ, ಕಾರ್ಯನೀತಿಗಳ ಮತ್ತು ಗೊತ್ತುಪಡಿಸಿದ ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಹಾಗೂ ಮೌಲ್ಯಮಾಪನ ಮಾಡುವುದು; ಮತ್ತು

(ಜಿ) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**72. ಜಿಲ್ಲಾ ಮಟ್ಟದ ಅಂಗವಿಕಲ ಸಮಿತಿ.–** ರಾಜ್ಯ ಸರ್ಕಾರವು ಅದು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಯನ್ನು ರಚಿಸತಕ್ಕದ್ದು.

**73. ಖಾಲಿ ಸ್ಥಾನಗಳು ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಅಂಗವಿಕಲರ ಕೇಂದ್ರ ಸಲಹಾ ಮಂಡಲಿಯ, ರಾಜ್ಯ ಸಲಹಾ ಮಂಡಲಿಯ ಅಥವಾ ಜಿಲ್ಲಾಮಟ್ಟದ ಸಮಿತಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಸಂದರ್ಭಾನುಸಾರ ಅಂಥ ಮಂಡಲಿಯಲ್ಲಿ ಅಥವಾ ಸಮಿತಿಗಳಲ್ಲಿ ಯಾವುದೇ ಖಾಲಿ ಸ್ಥಾನವಿರುವುದೆಂಬ ಅಥವಾ ಅವುಗಳ ರಚನೆಯಲ್ಲಿ ಯಾವುದೇ ದೋಷವಿದೆ ಎಂಬ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ XII

## ಅಂಗವಿಕಲ ವ್ಯಕ್ತಿಗಳ ಚೀಫ್ ಕಮಿಷನರ್ ಮತ್ತು ಸ್ಟೇಟ್ ಕಮಿಷನರ್

**74. ಚೀಫ್ ಕಮಿಷನರ್ ಮತ್ತು ಕಮಿಷನರ್‌ಗಳ ನೇಮಕ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಒಬ್ಬ ಚೀಫ್ ಕಮಿಷನರ್‌ನನ್ನು (ಇಲ್ಲಿ ಇನ್ನು ಮುಂದೆ "ಚೀಫ್ ಕಮಿಷನರ್" ಎಂದು ಉಲ್ಲೇಖಿಸಲಾದ) ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು, ಅಧಿಸೂಚನೆ ಮೂಲಕ ಚೀಫ್ ಕಮಿಷನರ್‌ನಿಗೆ ನೆರವಾಗಲು ಇಬ್ಬರು ಕಮಿಷನರ್‌ಗಳನ್ನು ನೇಮಕ ಮಾಡಬಹುದು, ಈ ಪೈಕಿ ಒಬ್ಬರು ಅಂಗವಿಕಲ ವ್ಯಕ್ತಿಯಾಗಿರತಕ್ಕದ್ದು.

(3) ಅಂಗವಿಕಲ ವ್ಯಕ್ತಿಗಳ ಪುನರ್ವಸತಿ ಕುರಿತ ವಿಷಯಗಳ ಸಂಬಂಧದಲ್ಲಿ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಹೊಂದಿರದ ಹೊರತು, ಆ ವ್ಯಕ್ತಿಯು ಚೀಫ್ ಕಮಿಷನರ್‌ನಾಗಿ ಅಥವಾ ಕಮಿಷನರ್‌ನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(4) ಚೀಫ್ ಕಮಿಷನರ್‌ನಿಗೆ ಮತ್ತು ಚೀಫ್ ಕಮಿಷನರ್‌ಗಳಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(5) ಚೀಫ್ ಕಮಿಷನರ್‌ನು ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಆತನಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದು ಯುಕ್ತವೆಂದು ಭಾವಿಸುವಂಥ ರೀತಿಯಲ್ಲಿ ಚೀಫ್ ಕಮಿಷನರ್‌ನಿಗೆ ಅಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(6) ಚೀಫ್ ಕಮಿಷನರ್‌ನಿಗೆ ಒದಗಿಸಿದ ಅಧಿಕಾರಿಗಳು ಮತ್ತು ನೌಕರರು ಚೀಫ್ ಕಮಿಷನರ್‌ನ ಸಾಮಾನ್ಯ ಮೇಲ್ವಿಚಾರಣೆ ಮೇರೆಗೆ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(7) ಚೀಫ್ ಕಮಿಷನರ್‌ಗೆ ಒದಗಿಸಿದ ಅಧಿಕಾರಿಗಳು ಮತ್ತು ನೌಕರರ ಸಂಬಳ ಹಾಗೂ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(8) ಚೀಫ್ ಕಮಿಷನರ್‌ರವರು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಿವಿಧ ಅಂಗವಿಕಲತೆ ವಿಷಯಗಳಲ್ಲಿ ತಜ್ಞರ ಪೈಕಿ ಮಾಡಿಕೊಂಡ ಹನ್ನೊಂದು ಸದಸ್ಯರುಗಳಿಗಿಂತ ಕಡಿಮೆಯಲ್ಲದ ತಜ್ಞರನ್ನು ಒಳಗೊಂಡ ಸಲಹಾ ಮಂಡಲಿಯ ಸಹಾಯವನ್ನು ಪಡೆಯತಕ್ಕದ್ದು.

**75. ಚೀಫ್ ಕಮಿಷನರ್‌ನ ಪ್ರಕಾರ್ಯಗಳು,–** (1) ಚೀಫ್ ಕಮಿಷನರ್‌ನು,–

(ಎ) ಈ ಅಧಿನಿಯಮಕ್ಕೆ ಅಸಂಗತವಾಗಿರುವ ಯಾವುದೇ ಕಾನೂನಿನ ಅಥವಾ ಕಾರ್ಯನೀತಿಯ, ಕಾರ್ಯಕ್ರಮಗಳ ಮತ್ತು ಕಾರ್ಯವಿಧಾನಗಳ ಉಪಬಂಧಗಳನ್ನು ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ಗುರುತಿಸತಕ್ಕದ್ದು ಮತ್ತು ಆ ಬಗ್ಗೆ ಸರಿಪಡಿಸುವ ಅವಶ್ಯಕ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಬಿ) ಅಂಗವಿಕಲತೆಯ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿರುವುದೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಅಂಗವಿಕಲರಿಗೆ ಇರುವ ಹಕ್ಕುಗಳಿಂದ ಮತ್ತು ರಕ್ಷಣೆಗಳಿಂದ ಅವರು ವಂಚಿತವಾಗಿದ್ದರೆ, ಆ ಬಗ್ಗೆ ತಾನಾಗಿಯೆ ಅಥವಾ ಅನ್ಯಥಾ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಹಾಗೂ ಆ ಬಗ್ಗೆ ಸರಿಯಾದ ಕ್ರಮಕೈಗೊಳ್ಳಲು ಸದರಿ ವಿಷಯವನ್ನು ಯುಕ್ತ ಪ್ರಾಧಿಕಾರಗಳಿಗೆ ವಹಿಸತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಸಂರಕ್ಷಣೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ರಕ್ಷಣಾ ಕ್ರಮಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಅನುಭವಿಸುವುದಕ್ಕೆ ಅಡ್ಡಿಯಾಗಿರುವಂತಹ ಅಂಶಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಈ ಬಗ್ಗೆ ಯುಕ್ತ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಬಗೆಗಿನ ಕೌಲುಗಳನ್ನು ಮತ್ತು ಇತರ ಅಂತರರಾಷ್ಟ್ರೀಯ ಲಿಖಿತ ಒಪ್ಪಂದಗಳನ್ನು ಅಧ್ಯಯನ ಮಾಡತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಪಡುವ ಸಂಶೋಧನೆಯನ್ನು ಕೈಗೊಳ್ಳತಕ್ಕದ್ದು ಮತ್ತು ಆ ಬಗ್ಗೆ ಉತ್ತೇಜನ ನೀಡತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮತ್ತು ಅವರ ರಕ್ಷಣೆಗಾಗಿ ಲಭ್ಯವಿರುವ ಸುರಕ್ಷಾ ಕ್ರಮಗಳ ಬಗ್ಗೆ ಅವರಿಗೆ ತಿಳಿವಳಿಕೆ ಮೂಡಿಸಲು ಉತ್ತೇಜನ ನೀಡತಕ್ಕದ್ದು;

(ಹೆಚ್) ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಇರುವ ಈ ಅಧಿನಿಯಮದ ಉಪಬಂಧಗಳ ಮತ್ತು ಯೋಜನೆಗಳ, ಕಾರ್ಯಕ್ರಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು;

(ಐ) ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಕೇಂದ್ರ ಸರ್ಕಾರವು ಹಂಚಿಕೆ ಮಾಡಿದ ನಿಧಿಗಳ ಬಳಕೆಯನ್ನು ಕುರಿತು ಮೆಲ್ವಿಚಾರಣೆ ಮಾಡತಕ್ಕದ್ದು;

(ಜೆ) ಕೇಂದ್ರ ಸರ್ಕಾರವು ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಚೀಫ್ ಕಮಿಷನರ್‌ರವರು ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಕಮಿಷನರುಗಳೊಂದಿಗೆ ಸಮಾಲೋಚಿಸತಕ್ಕದ್ದು.

**76. ಚೀಫ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಸಮುಚಿತ ಪ್ರಾಧಿಕಾರಗಳ ಕ್ರಮ.–** 75ನೇ ಪ್ರಕರಣದ (ಬಿ) ಖಂಡಕ್ಕೆ ಅನುಸಾರವಾಗಿ ಚೀಫ್ ಕಮಿಷನರ್‌ರವರು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದಾಗಲೆಲ್ಲಾ, ಆ ಪ್ರಾಧಿಕಾರವು ಅದರ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಶಿಫಾರಸ್ಸು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಚೀಫ್ ಕಮಿಷನರ್‌ರವರಿಗೆ ತಿಳಿಸತಕ್ಕದ್ದು:

ಪರಂತು, ಪ್ರಾಧಿಕಾರವು ಶಿಫಾರಸ್ಸನ್ನು ಅಂಗೀಕರಿಸದಿದ್ದರೆ, ಅದನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳನ್ನು ಮೂರು ತಿಂಗಳೊಳಗಾಗಿ ಚೀಫ್ ಕಮಿಷನರ್‌ರವರ ಗಮನಕ್ಕೆ ತರತಕ್ಕದ್ದು ಮತ್ತು ಆ ಬಗ್ಗೆ ಬಾಧಿತ ವ್ಯಕ್ತಿಗೂ ಸಹ ತಿಳಿಸತಕ್ಕದ್ದು.

**77. ಚೀಫ್ ಕಮಿಷನರ್‌ನ ಅಧಿಕಾರಗಳು.–** (1) ಚೀಫ್ ಕಮಿಷನರ್‌ರವರು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ದಾವೆಯನ್ನು ವಿಚಾರಣೆ ಮಾಡುವಾಗ, ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ:–

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರ ಹಾಜರಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(2) ಚೀಫ್ ಕಮಿಷನರ್‌ರವರ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು, ಭಾರತ ದಂಡ ಸಂಹಿತೆಯ 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ಚೀಫ್ ಕಮಿಷನರ್‌ರವರನ್ನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**78. ಚೀಫ್ ಕಮಿಷನರ್‌ನಿಂದ ವಾರ್ಷಿಕ ಮತ್ತು ವಿಶೇಷ ವರದಿಗಳು.–** (1) ಚೀಫ್ ಕಮಿಷನರ್‌ರವರು, ಕೇಂದ್ರ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಯಾವ ವಿಷಯವು ತುರ್ತಿನದೆಂದು ಅಥವಾ ಪ್ರಮುಖವಾದುದೆಂದು ಅವರು ಅಭಿಪ್ರಾಯಪಡುವರೋ ಮತ್ತು ಯಾವುದೇ ವಿಷಯದ ವಾರ್ಷಿಕ ವರದಿಯನ್ನು ಸಲ್ಲಿಸುವ ತನಕ ಮುಂದೂಡಲಾಗದೆಂದು ಆ ವಿಷಯದ ಬಗ್ಗೆ ಯಾವುದೇ ಸಮಯದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು, ಚೀಫ್ ಕಮಿಷನರ್‌ನ ವಾರ್ಷಿಕ ಹಾಗೂ ವಿಶೇಷ ವರದಿಗಳನ್ನೂ, ಅವರು ಮಾಡಿದ ಶಿಫಾರಸ್ಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸ್ಸುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ವಿವರಿಸಿರುವ ಜ್ಞಾಪನ ಪತ್ರದೊಂದಿಗೆ ಆ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡಿಸತಕ್ಕದ್ದು.

(3) ವಾರ್ಷಿಕ ಹಾಗೂ ವಿಶೇಷ ವರದಿಗಳನ್ನು, ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ಸಿದ್ಧಪಡಿಸತಕ್ಕದ್ದು.

**79. ರಾಜ್ಯಗಳಲ್ಲಿ ಸ್ಟೇಟ್ ಕಮಿಷನರ್ ನೇಮಕ.–** (1) ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಸ್ಟೇಟ್ ಕಮಿಷನರ್‌ರನ್ನು (ಇಲ್ಲಿ ಇನ್ನು ಮುಂದೆ "ಸ್ಟೇಟ್ ಕಮಿಷನರ್" ಎಂದು ಉಲ್ಲೇಖಿಸಲಾದ) ನೇಮಕ ಮಾಡಬಹುದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವಸತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳಿವಳಿಕೆ ಅಥವಾ ವ್ಯವಹಾರಿಕ ಅನುಭವ ಹೊಂದಿದ್ದ ಹೊರತು, ಅವನು ಸ್ಟೇಟ್ ಕಮಿಷನರ್‌ನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ಸ್ಟೇಟ್ ಕಮಿಷನರ್‌ನಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರೆ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ರಾಜ್ಯ ಸರ್ಕಾರವು, ಕಮಿಷನರ್‌ನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರ ನೌಕರರ ವರ್ಗ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕಮಿಷನರ್‌ನಿಗೆ ಅಂಥ ಅಧಿಕಾರಿಗಳು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(5) ಸ್ಟೇಟ್ ಕಮಿಷನರ್‌ನಿಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರು ಕಮಿಷನರ್‌ನ ಸಾಮಾನ್ಯ ಮೇಲ್ವಿಚಾರಣೆಯ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಕಮಿಷನರ್‌ನಿಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(7) ಸ್ಟೇಟ್ ಕಮಿಷನರ್‌ನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಗವಿಕಲ ಕ್ಷೇತ್ರದಲ್ಲಿ ತಜ್ಞರಾಗಿರುವವರ ಪೈಕಿಯಿಂದ ಆಯ್ಕೆಯಾದ ಐದಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಒಳಗೊಂಡ ಒಂದು ಸಲಹಾ ಸಮಿತಿಯಿಂದ ನೆರವನ್ನು ಪಡೆಯತಕ್ಕದ್ದು.

**80. ಸ್ಟೇಟ್ ಕಮಿಷನರ್‌ನ ಪ್ರಕಾರ್ಯಗಳು.–** ಸ್ಟೇಟ್ ಕಮಿಷನರ್‌ನು –

(ಎ) ಈ ಅಧಿನಿಯಮಕ್ಕೆ ಅಸಂಗತವಾಗಿರುವ ಆ ಯಾವುದೇ ಕಾನೂನಿನ ಅಥವಾ ಕಾರ್ಯನೀತಿಯ, ಕಾರ್ಯಕ್ರಮದ ಮತ್ತು ಕಾರ್ಯವಿಧಾನಗಳ ಉಪಬಂಧವನ್ನು ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ಗುರುತಿಸತಕ್ಕದ್ದು ಮತ್ತು ಈ ಬಗ್ಗೆ ಸರಿಯಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡತಕ್ಕದ್ದು;

(ಬಿ) ಅಂಗವಿಕಲರ ವಿಷಯಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅವರಿಗೆ ನೀಡಿರುವ ಹಕ್ಕುಗಳು ಮತ್ತು ರಕ್ಷಣೆಗಳು ಸಮುಚಿತ ಸರ್ಕಾರದಿಂದ ವಂಚಿತವಾಗಿದ್ದರೆ, ಆ ಬಗ್ಗೆ ತಾನಾಗಿಯೇ ಅಥವಾ ಅನ್ಯಥಾ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಹಾಗೂ ಈ ಬಗ್ಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳಲು ಸದರಿ ವಿಷಯವನ್ನು ಯುಕ್ತ ಪ್ರಾಧಿಕಾರಗಳಿಗೆ ವಹಿಸತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳ ಹಕ್ಕಗಳ ಸಂರಕ್ಷಣೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ರಕ್ಷಣಾ ಕ್ರಮಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಡಿ) ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳ ಉಪಭೋಗಿಸುವಿಕೆಯನ್ನು ಅಡ್ಡಿಪಡಿಸುವ ಅಂಶಗಳ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಈ ಬಗ್ಗೆ ಯುಕ್ತ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡತಕ್ಕದ್ದು;

(ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಸಂಬಂಧದಲ್ಲಿ ಸಂಶೋಧನೆಯನ್ನು ಕೈಗೊಳ್ಳತಕ್ಕದ್ದು ಮತ್ತು ಈ ಬಗ್ಗೆ ಪ್ರಚಾರ ನೀಡತಕ್ಕದ್ದು;

(ಎಫ್) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮತ್ತು ಅವರ ರಕ್ಷಣೆಗಾಗಿ ಲಭ್ಯವಿರುವ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡತಕ್ಕದ್ದು;

(ಜಿ) ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಇರುವ ಈ ಅಧಿನಿಯಮದ ಉಪಬಂಧಗಳ ಮತ್ತು ಕಾರ್ಯಯೋಜನೆಗಳ, ಕಾರ್ಯಕ್ರಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡತಕ್ಕದ್ದು;

(ಹೆಚ್) ರಾಜ್ಯ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಹಂಚಿಕೆ ಮಾಡಿದ ನಿಧಿಗಳ ಬಳಕೆಯನ್ನು ಕುರಿತು ಮೇಲ್ವಿಚಾರಣೆ ಮಾಡತಕ್ಕದ್ದು;

(ಐ) ರಾಜ್ಯ ಸರ್ಕಾರವು ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು;

**81. ಸ್ಟೇಟ್ ಕಮಿಷನರ್‌ನ ಶಿಫಾರಸ್ಸಿನ ಮೇಲೆ ಯುಕ್ತ ಪ್ರಾಧಿಕಾರಗಳ ಕ್ರಮ.–** ಸ್ಟೇಟ್ ಕಮಿಷನರ್‌ನು 80ನೇ ಪ್ರಕರಣದ (ಬಿ) ಖಂಡದ ಅನುಸರಣೆಯಲ್ಲಿ ಒಂದು ಪ್ರಾಧಿಕಾರಕ್ಕೆ ಶಿಫಾರಸ್ಸುಗಳನ್ನು ಮಾಡಿದಾಗಲೆಲ್ಲ, ಆ ಪ್ರಾಧಿಕಾರವು ಆ ಬಗ್ಗೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ಪ್ರಾಧಿಕಾರವು ಶಿಫಾರಸ್ಸು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸ್ಟೇಟ್ ಕಮಿಷನರ್‌ನಿಗೆ ತಿಳಿಸತಕ್ಕದ್ದು:

ಪರಂತು, ಆ ಪ್ರಾಧಿಕಾರವು ಸ್ಟೇಟ್ ಕಮಿಷನರ್‌ನ ಶಿಫಾರಸ್ಸನ್ನು ಅಂಗೀಕರಿಸದಿದ್ದಲ್ಲಿ, ಆ ಬಗೆಗಿನ ಕಾರಣಗಳನ್ನು ಮೂರು ತಿಂಗಳೊಳಗಾಗಿ ಸ್ಟೇಟ್ ಕಮಿಷನರ್‌ನಿಗೆ ತಿಳಿಸತಕ್ಕದ್ದು ಮತ್ತು ಈ ಬಗ್ಗೆ ಬಾಧಿತ ವ್ಯಕ್ತಿಗೂ ಸಹ ತಿಳಿಸತಕ್ಕದ್ದು.

**82. ಸ್ಟೇಟ್ ಕಮಿಷನರ್‌ನ ಅಧಿಕಾರಗಳು.–** (1) ಸ್ಟೇಟ್ ಕಮಿಷನರ್‌ನು, ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ದಾವೆಯನ್ನು ವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ:–

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಅವರ ಹಾಜರಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(2) ಸ್ಟೇಟ್ ಕಮಿಷನರ್‌ನ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು, ಭಾರತ ದಂಡ ಸಂಹಿತೆ, 1860 (1860ರ 45) ರ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಒಂದು ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ಸ್ಟೇಟ್ ಕಮಿಷನರ್‌ಗಳನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**83. ಸ್ಟೇಟ್ ಕಮಿಷನರ್‌ನ ವಾರ್ಷಿಕ ಮತ್ತು ವಿಶೇಷ ವರದಿಗಳು.–** (1) ಸ್ಟೇಟ್ ಕಮಿಷನರ್‌ನು, ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಆತನು ತುರ್ತು ಅಥವಾ ಪ್ರಮುಖವಾದುದು ಎಂದು ಅಭಿಪ್ರಾಯಪಡುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು. ಈ ರೀತಿ ಮಾಡುವುದನ್ನು ವಾರ್ಷಿಕ ವರದಿ ಸಲ್ಲಿಸುವವರೆಗೂ ಮುಂದೂಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಸ್ಟೇಟ್ ಕಮಿಷನರ್‌ನ ವಾರ್ಷಿಕ ಹಾಗೂ ವಿಶೇಷ ವರದಿಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಅವನು ಮಾಡಿದ ಶಿಫಾರಸ್ಸಿನ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸ್ಸುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಒಪ್ಪದಿರುವುದಕ್ಕೆ ಕಾರಣಗಳನ್ನು ವಿವರಿಸಿರುವ ಶಿಫಾರಸ್ಸುಗಳೊಂದಿಗೆ ಆ ವರದಿಯನ್ನು ರಾಜ್ಯವು ಉಭಯ ಸದನಗಳನ್ನು ಹೊಂದಿದ್ದರೆ, ಆ ಎರಡೂ ಸದನಗಳ ರಾಜ್ಯದ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯವು ಒಂದೇ ಸದನವನ್ನು ಹೊಂದಿದ್ದರೆ ಅಂಥ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

(3) ವಾರ್ಷಿಕ ಮತ್ತು ವಿಶೇಷ ವರದಿಗಳನ್ನು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ/ ಅಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ಸಿದ್ಧಪಡಿಸತಕ್ಕದ್ದು.

## ಅಧ್ಯಾಯ XIII

### ವಿಶೇಷ ನ್ಯಾಯಾಲಯ

**84. ವಿಶೇಷ ನ್ಯಾಯಾಲಯ.–** ತ್ವರಿತ ವಿಚಾರಣೆಯನ್ನು ಮಾಡಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಸಹಮತಿಯೊಂದಿಗೆ, ಅಧಿಸೂಚನೆ ಮೂಲಕ ಪ್ರತಿಯೊಂದು ಜಿಲ್ಲೆಗಾಗಿ,

ಈ ಅಧಿನಿಯಮದ ಮೇರೆಗಿನ ಅಪರಾಧಗಳ ವಿಚಾರಣೆಗಾಗಿ ಸೆಷನ್ಸ್ ನ್ಯಾಯಾಲಯವನ್ನೇ ಒಂದು ವಿಶೇಷ ನ್ಯಾಯಾಲಯವೆಂದು ನಿರ್ದಿಷ್ಟಪಡಿಸತಕ್ಕದ್ದು.

**85. ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್.–** (1) ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕಾಗಿ, ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಆ ನ್ಯಾಯಾಲಯದಲ್ಲಿನ ಮೊಕದ್ದಮೆಗಳ ನಿರ್ವಹಣೆ ಉದ್ದೇಶಕ್ಕಾಗಿ, ಒಬ್ಬರು ಪಬ್ಲಿಕ್ ಪ್ರಾಸಿಕ್ಯೂಟರನ್ನು ಗೊತ್ತುಪಡಿಸಬಹುದು ಅಥವಾ ಏಳು ವರ್ಷಗಳಿಗಿಂತ ಕಡಿಮೆ ಇರದಂತೆ ನ್ಯಾಯವಾದಿಯಾಗಿ ವೃತ್ತಿನಿರತರಾದ ಒಬ್ಬರು ನ್ಯಾಯವಾದಿಯನ್ನು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್‌ನಾಗಿ ನೇಮಕ ಮಾಡಬಹುದು.

(2) ಉಪ–ಪ್ರಕರಣ (1)ರ ಮೇರೆಗೆ ನೇಮಕಗೊಂಡ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್‌ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಶುಲ್ಕಗಳನ್ನು ಅಥವಾ ಸಂಭಾವನೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ XIV

## ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ

**86. ಅಂಗವಿಕಲ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನಿಧಿ.–** (1) ಅಂಗವಿಕಲ ವ್ಯಕ್ತಿಗಳಿಗಾಗಿ 'ರಾಷ್ಟ್ರೀಯ ನಿಧಿ' ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಅಧಿಸೂಚನೆ ಸಂಖ್ಯೆ. ಎಸ್.ಓ. 573(ಇ) ದಿನಾಂಕ 11ನೇ ಆಗಸ್ಟ್, 1983 ರ ಮೂಲಕ ಅಂಗವಿಕಲ ವ್ಯಕ್ತಿಗಳಿಗಾಗಿ ಸ್ಥಾಪಿತವಾದ ನಿಧಿಯಿಂದ ಮತ್ತು ಧರ್ಮಾರ್ಥ ದತ್ತಿ ಅಧಿನಿಯಮ, 1890 (1890ರ 6)ರ ಮೇರೆಗೆ ಅಧಿಸೂಚನೆ ಸಂಖ್ಯೆ. 30–03/2004– ಡಿಡಿ II, ದಿನಾಂಕ 21ನೇ ನವೆಂಬರ್, 2006ರ ಮೂಲಕ ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ ಸ್ಥಾಪಿತವಾದ ನ್ಯಾಸ ನಿಧಿಯಿಂದ ಲಭ್ಯವಾಗಬಹುದಾದ ಎಲ್ಲಾ ಒಟ್ಟು ಮೊತ್ತಗಳನ್ನು;

(ಬಿ) ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು 2000ರ ಸಿವಿಲ್ ಅಪೀಲು ಸಂಖ್ಯೆ. 4655 ಮತ್ತು 5218ರಲ್ಲಿ, ದಿನಾಂಕ: 16ನೇ ಏಪ್ರಿಲ್ 2004 ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ ಬ್ಯಾಂಕ್‌ಗಳು, ನಿಗಮಗಳು, ಹಣಕಾಸು ಸಂಸ್ಥೆಗಳು ಪಾವತಿ ಮಾಡಬಹುದಾದ ಎಲ್ಲಾ ಮೊತ್ತಗಳನ್ನು;

(ಸಿ) ಅನುದಾನಗಳ, ಕೊಡುಗೆಗಳ, ದೇಣಿಗೆಗಳ, ಉಪಕಾರ ಧನಗಳ, ಮರಣ ಶಾಸನದ ಅಥವಾ ವರ್ಗಾವಣೆಗಳ ರೂಪದಲ್ಲಿ ಸ್ವೀಕೃತವಾದ ಎಲ್ಲಾ ಮೊತ್ತಗಳನ್ನು;

(ಡಿ) ಸಹಾಯಾನುದಾನಗಳೂ ಒಳಗೊಂಡಂತೆ ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ಎಲ್ಲಾ ಮೊತ್ತಗಳನ್ನು;

(ಇ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರೆ ಮೂಲಗಳಿಂದ ಬರುವ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳ ನಿಧಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಬಳಕೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**87. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಆದಾಯ–ವೆಚ್ಚದ ಲೆಕ್ಕಪತ್ರಗಳೂ ಒಳಗೊಂಡಂತೆ ನಿಧಿಯ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕದ್ದು.

(2) ನಿಧಿಯ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ

ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾಲೆಕ್ಕಪರಿಶೋಧಕನಿಗೆ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ನಿಧಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ಮತ್ತು ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ನಿಧಿಯ ಲೆಕ್ಕದ ಪುಸ್ತಕಗಳನ್ನು, ಸಂಬಂಧಪಟ್ಟ ಓಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯ ಮಾಡುವ ಹಾಗೂ ಆ ಯಾವುದೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ–ಮತ್ತು– ಮಹಾ ಲೆಕ್ಕಪರಿಶೋಧಕನು ಅಥವಾ ಈ ಸಂಬಂಧ ಆತನಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ನಿಧಿಯ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರದ ಮೂಲಕ ಸಂಸತ್‌ನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ XV

### ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ

**88. ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿ.–** (1) ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ 'ರಾಜ್ಯ ನಿಧಿ' ಎಂದು ಕರೆಯಬಹುದಾದ ಒಂದು ನಿಧಿಯನ್ನು ರಾಜ್ಯ ಸರ್ಕಾರವು ಸ್ಥಾಪಿಸತಕ್ಕದ್ದು.

(2) ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಬಳಕೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ರಾಜ್ಯ ಸರ್ಕಾರವು, ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಆದಾಯ–ವೆಚ್ಚಗಳ ಲೆಕ್ಕಗಳನ್ನು ಒಳಗೊಂಡಂತೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಯುಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು.

(4) ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು, ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ವಹಿಸಲಾದ ಯಾವುದೇ ವೆಚ್ಚವನ್ನು ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕರಿಗೆ ರಾಜ್ಯ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(5) ಭಾರತದ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ಹಾಗೂ ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಆತನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಮತ್ತು ಅಧಿಕಾರವನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ನಿಧಿಯ ಲೆಕ್ಕಗಳ ಪುಸ್ತಕಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡುವ ಹಾಗೂ ರಾಜ್ಯ ನಿಧಿಯ ಯಾವುದೇ ಕಚೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು .

(6) ಭಾರತ ಲೆಕ್ಕನಿಯಂತ್ರಕ–ಮತ್ತು–ಮಹಾ ಲೆಕ್ಕಪರಿಶೋಧಕನು ಅಥವಾ ಆತನಿಂದ ಈ ಬಗ್ಗೆ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಅಂಗವಿಕಲ ವ್ಯಕ್ತಿಗಳ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು, ಅವುಗಳ

ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ, ರಾಜ್ಯ ವಿಧಾನಮಂಡಲವು ಉಭಯ ಸದನಗಳನ್ನು ಹೊಂದಿದ್ದರೆ ಅವುಗಳ ಮುಂದೆ ಅಥವಾ ರಾಜ್ಯವು ಒಂದೇ ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ XVI

## ಅಪರಾಧಗಳು ಮತ್ತು ದಂಡಗಳು

**89. ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲ ಬಾರಿಯ ಉಲ್ಲಂಘನೆಗಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದ ಉಲ್ಲಂಘನೆಗಾಗಿ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ, ಆದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**90. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಎಸಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದು ಹಾಗೂ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆದಿದೆಯೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಪ್ಪಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅವನನ್ನು ಈ ಉಪ–ಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಹೊಣೆಯಾಗಿಸತಕ್ಕದ್ದಲ್ಲ.

(2) ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಎಸಗಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಆತನ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಆತನ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಆತನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಗಳಿಗಾಗಿ,–

(ಎ) **"ಕಂಪನಿ"** ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ **"ನಿರ್ದೇಶಕ"** ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

**91. ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡಿದ್ದಕ್ಕಾಗಿ ದಂಡನೆ.–** ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಯಾರಾದರೂ ಮೋಸದಿಂದ ಬಳಸಿಕೊಂಡರೆ ಅಥವಾ ಬಳಸಿಕೊಳ್ಳಲು ಪ್ರಯತ್ನಿಸಿದರೆ, ಆತನು ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸ ಶಿಕ್ಷೆಯಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು.

**92. ದೌರ್ಜನ್ಯಗಳ ಅಪರಾಧಗಳಿಗಾಗಿ ದಂಡನೆ.–** ಯಾರಾದರೂ,–

(ಎ) ಸಾರ್ವಜನಿಕರ ಕಣ್ಣಿಗೆ ಕಾಣುವಂತಹ ಯಾವುದೇ ಸ್ಥಳದಲ್ಲಿ ಅಂಗವಿಕಲ ವ್ಯಕ್ತಿಯನ್ನು ಅವಮಾನ ಮಾಡುವ ಉದ್ದೇಶದಿಂದ, ಉದ್ದೇಶಪೂರ್ವಕವಾಗಿ ಅಪಮಾನ ಮಾಡಿದರೆ ಅಥವಾ ಬೆದರಿಸಿದರೆ;

(ಬಿ) ಅಂಗವಿಕಲತೆಯ ಯಾರೇ ವ್ಯಕ್ತಿಗೆ ಅಗೌರವವುಂಟು ಮಾಡುವ ಉದ್ದೇಶದಿಂದ ಅಥವಾ ಅಂಗವಿಕಲತೆ ಉಳ್ಳ ಮಹಿಳೆಯ ಘನತೆ–ಗೌರವಕ್ಕೆ ಕುಂದು ತರುವ ಉದ್ದೇಶದಿಂದ ಉದ್ದೇಶದಿಂದ ಆತನ/ಆಕೆಯ ಮೇಲೆ ಹಲ್ಲೆ ಮಾಡಿದರೆ ಅಥವಾ ಬಲ ಪ್ರಯೋಗ ಮಾಡಿದರೆ;

(ಸಿ) ಅಂಗವಿಕಲ ವ್ಯಕ್ತಿಯ ಮೇಲೆ ವಾಸ್ತವ ಸುಪರ್ದನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ತಾನಾಗಿಯೇ ಅಥವಾ ಗೊತ್ತಿದ್ದೂ ಅಂಗವಿಕಲ ವ್ಯಕ್ತಿಗೆ ಅಥವಾ ಅಂಗವಿಕಲ ಮಹಿಳೆಗೆ ಆಹಾರ ಅಥವಾ ದ್ರವ ಆಹಾರ ನೀಡುವುದನ್ನು ನಿರಾಕರಿಸಿದರೆ;

(ಡಿ) ಅಂಗವಿಕಲ ಮಗುವಿನ ಅಥವಾ ಅಂಥ ಮಹಿಳೆಯ ಆಸೆ ಆಕಾಂಕ್ಷೆ ಮೇಲೆ ಹತೋಟಿ ಉಳ್ಳ ಸ್ಥಾನದಲ್ಲಿದ್ದು ಆ ಸ್ಥಾನವನ್ನು ಆ ಸಲುವಾಗಿ ಬಳಸಿಕೊಂಡರೆ ಮಗುವನ್ನು ಅಥವಾ ಅಂಥ ಮಹಿಳೆಯನ್ನು ಲೈಂಗಿಕವಾಗಿ ಶೋಷಿಸುವ;

(ಇ) ಅಂಗವಿಕಲ ವ್ಯಕ್ತಿಯು ಬಳಸುವ ಯಾವುದೇ ಅವಯವವನ್ನು ಅಥವಾ ಇಂದ್ರಿಯವನ್ನು ಅಥವಾ ಯಾವುದೇ ಆಸರೆಯ ಸಾಧನವನ್ನು ತಾನಾಗಿಯೇ ಕ್ಷತಿ ಉಂಟು ಮಾಡಿಸಿದರೆ, ಅದಕ್ಕೆ ಹಾನಿಯುಂಟು ಮಾಡಿದರೆ ಅಥವಾ ಅದಕ್ಕೆ ಬಾಧೆ ಉಂಟು ಮಾಡಿದರೆ;

(ಎಫ್) ಗರ್ಭಿಣಿಯಾಗಿರುವ ಅಂಗವಿಕಲ ಮಹಿಳೆಗೆ, ತೀವ್ರ ಅಂಗವಿಕಲತೆ ಪ್ರಕರಣಗಳಲ್ಲಿ ವೈದ್ಯಕೀಯ ಗರ್ಭಪಾತಕ್ಕಾಗಿ ನೋಂದಾಯಿತ ವೈದ್ಯಕೀಯ ವೃತ್ತಿಗನ ಅಭಿಪ್ರಾಯ ಪಡೆದುಕೊಂಡು ಹಾಗೂ ಅಂಗವಿಕಲ ಮಹಿಳೆಯ ಪಾಲಕರ ಸಹಮತಿ ಕೊಟ್ಟಿದ್ದ ಹೊರತು ವೈದ್ಯಕೀಯ ಪ್ರಕ್ರಿಯೆಗಳ ರೀತಿಯಲ್ಲಿ ಗರ್ಭವನ್ನು ಸಮಾಪನಗೊಳಿಸಬೇಕಾದ ಸಂದರ್ಭಗಳಲ್ಲಿ ಹೊರತು ಆ ಮಹಿಳೆಯ ಸ್ಪಷ್ಟ ಸಹಮತಿ ಇಲ್ಲದೆಯೇ ಅಂಥ ಅಂಗವಿಕಲ ಮಹಿಳೆಯ ಗರ್ಭಪಾತ ಉಂಟು ಮಾಡುವಂತಹ ಅಥವಾ ಉಂಟು ಮಾಡುವ ಸಂಭವವಿರುವ ಆ ರೀತಿಯ ಯಾವುದೇ ವೈದ್ಯಕೀಯ ಪ್ರಕ್ರಿಯೆಯ ಕ್ರಿಯೆಗಳನ್ನು ಮಾಡಿದರೆ, ನಡೆಸಿದರೆ ಅಥವಾ ಅದಕ್ಕೆ ನಿರ್ದೇಶನಗಳನ್ನು ನೀಡಿದರೆ;

– ಆ ಯಾರೇ ವ್ಯಕ್ತಿಯು, ಆರು ತಿಂಗಳುಗಳಿಗಿಂತ ಕಡಿಮೆ ಇರದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಹಾಗೂ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**93. ಮಾಹಿತಿಯನ್ನು ಒದಗಿಸಲು ವಿಫಲವಾಗುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ಹೊರಡಿಸಿದ ಅಥವಾ ನೀಡಿದ ಯಾವುದೇ ಆದೇಶಕ್ಕೆ ಅಥವಾ ನಿರ್ದೇಶನಕ್ಕೆ ಅನುಸಾರವಾಗಿ ಯಾವುದೇ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಅಥವಾ ಒದಗಿಸುವುದಕ್ಕೆ ಅಥವಾ ಯಾವುದೇ ಪ್ರಶ್ನೆಗೆ ಉತ್ತರಿಸುವುದಕ್ಕೆ ಕರ್ತವ್ಯಬದ್ಧನಾಗಿದ್ದು, ಈ ಅಧಿನಿಯಮದ ಅಥವಾ ಇದರ ಮೇರೆಗೆ ಹೊರಡಿಸಿದ ಯಾವುದೇ ಆದೇಶದಂತೆ ಅಥವಾ ನಿರ್ದೇಶನದಂತೆ ಯಾವುದೇ ಪುಸ್ತಕವನ್ನು, ಲೆಕ್ಕಪತ್ರವನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ಯಾವುದೇ ಹೇಳಿಕೆಯನ್ನು, ಮಾಹಿತಿಯನ್ನು ಅಥವಾ ವಿವರಗಳನ್ನು ಒದಗಿಸಲು ವಿಫಲನಾಗಿರುವ ಯಾರೇ ವ್ಯಕ್ತಿಯು, ಪ್ರತಿಯೊಂದು ಅಪರಾಧಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ನಿರಂತರ ವಿಫಲತೆ ಅಥವಾ ನಿರಾಕರಣೆ ಸಂದರ್ಭದಲ್ಲಿ ಹಾಗೂ ಜುಲ್ಮಾನೆಯ ದಂಡನೆಯನ್ನು ವಿಧಿಸಿದ ಮೂಲ ಆದೇಶದ ದಿನಾಂಕದ ನಂತರದ ನಿರಂತರ ವಿಫಲತೆ ಅಥವಾ ನಿರಾಕರಣೆ ಸಂದರ್ಭದಲ್ಲಿ ಪ್ರತಿಯೊಂದು ದಿನಕ್ಕಾಗಿ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತಷ್ಟು ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**94. ಸಮುಚಿತ ಸರ್ಕಾರದ ಪೂರ್ವ ಮಂಜೂರಾತಿ.–** ಯಾವುದೇ ನ್ಯಾಯಾಲಯವು, ಸಮುಚಿತ ಸರ್ಕಾರದ ನೌಕರನು ಈ ಅಧ್ಯಾಯದ ಮೇರೆಗೆ ಆರೋಪಿಸಿರುವ ಅಪರಾಧವನ್ನು ಈ ಬಗ್ಗೆ ಸಮುಚಿತ ಸರ್ಕಾರದಿಂದ ಮುಂಚಿತವಾಗಿ

ಮಂಜೂರಾತಿ ಪಡೆದಿದ್ದ ಹೊರತು ಅಥವಾ ಈ ಸಂಬಂಧ ಅಧಿಕೃತನಾದ ಅಧಿಕಾರಿಯು ದೂರನ್ನು ದಾಖಲಿಸಿದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**95. ಪರ್ಯಾಯ ದಂಡನೆಗಳು.–** ಯಾವುದೇ ಕೃತ್ಯವು ಅಥವಾ ಲೋಪವು ಈ ಅಧಿನಿಯಮದ ಮತ್ತು ಯಾವುದೇ ಇತರ ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಮೇರೆಗಿನ ದಂಡನೀಯ ಅಪರಾಧವೆಂದಾದರೆ, ಆಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಅಪರಾಧದ ತಪ್ಪಿತಸ್ಥನೆಂದು ರುಜುವಾತಾಗಿರುವ ಅಪರಾಧಿಯು ಅಂಥ ಅಧಿನಿಯಮದಲ್ಲಿ ಹೇಳಿರುವ ಹೆಚ್ಚಿನ ಪ್ರಮಾಣದ ದಂಡನೆಗೆ ಉಪಬಂಧಿಸಿರುವಂತೆ ಆ ಅಧಿನಿಯಮದ ಪ್ರಕಾರ ಮಾತ್ರವೇ ದಂಡನೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ XVII

### ಸಂಕೀರ್ಣ

**96. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲ.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು, ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**97. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಅಥವಾ ಸಮುಚಿತ ಸರ್ಕಾರದ ವಿರುದ್ಧ ಅಥವಾ ಸಮುಚಿತ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಚೀಫ್ ಕಮಿಷನರ್‌ರ ಅಥವಾ ಸ್ಟೇಟ್ ಕಮಿಷನರ್‌ರ, ಈ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**98. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆಗಳು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ಸರಿಯೆಂದು ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

**99. ಅನುಸೂಚಿಯನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರ.–** (1) ಸಮುಚಿತ ಸರ್ಕಾರವು ಮಾಡಿದ ಶಿಫಾರಸ್ಸುಗಳ ಮೇಲೆ ಅಥವಾ ಅನ್ಯಥಾ, ಅನುಸೂಚಿಯನ್ನು ಮತ್ತು ಹೊರಡಿಸಲಿರುವ ಯಾವುದೇ ಅಧಿಸೂಚನೆಯನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು, ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದರೆ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಧಿಸೂಚನೆಯನ್ನು, ಹೊರಡಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

**100. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ.–** (1) ಕೇಂದ್ರ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 6ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲತೆಗೆ ಸಂಬಂಧಪಟ್ಟ ಸಂಶೋಧನೆಗಾಗಿ ಸಮಿತಿಯನ್ನು ರಚಿಸುವ ರೀತಿ;

(ಬಿ) 21ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸಮಾನ ಅವಕಾಶದ ಕಾರ್ಯನೀತಿಯನ್ನು ಅಧಿಸೂಚಿಸುವ ರೀತಿ;

(ಸಿ) 22ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಪ್ರತಿಯೊಂದು ಕಾರ್ಯಸಂಸ್ಥೆಯು ನಿರ್ವಹಿಸಬೇಕಾದ ದಾಖಲೆಗಳ ನಮೂನೆ ಮತ್ತು ರೀತಿ;

(ಡಿ) 23ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಕುಂದುಕೊರತೆ ನಿವಾರಣೆ ಅಧಿಕಾರಿಯು ದೂರಗಳ ವಹಿಯನ್ನು ನಿರ್ವಹಿಸುವ ರೀತಿ;

(ಇ) 36ನೇ ಪ್ರಕರಣದ ಮೇರೆಗೆ ವಿಶೇಷ ಉದ್ಯೋಗ ವಿನಿಮಯ ಕಚೇರಿಗೆ ಸಿಬ್ಬಂದಿಯ ಮಾಹಿತಿಯನ್ನು ಒದಗಿಸುವ ಮತ್ತು ವಾಪಸ್ ಪಡೆಯುವ ರೀತಿ;

(ಎಫ್) 38ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿರ್ಧರಣಾ ಮಂಡಳಿಯ ರಚನೆ ಮತ್ತು (3)ನೇ ಉಪ–ಪ್ರಕರಣದ ಮೇರೆಗೆ ಆ ನಿರ್ಧರಣಾ ಮಂಡಳಿಯು ಮಾಡಬೇಕಾದ ನಿರ್ಧರಣೆಯ ರೀತಿ;

(ಜಿ) 40ನೇ ಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಸುಲಭ ಲಭ್ಯತೆಯ ಮಾನದಂಡಗಳನ್ನು ತಿಳಿಸುವ ನಿಯಮಗಳು;

(ಹೆಚ್) 58ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲತೆಯ ಪ್ರಮಾಣಪತ್ರ ನೀಡುವುದಕ್ಕೆ ಅರ್ಜಿಯ ರೀತಿ ಮತ್ತು (2)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲತೆಯ ಪ್ರಮಾಣಪತ್ರದ ನಮೂನೆ;

(ಐ) 61ನೇ ಪ್ರಕರಣದ ಮೇರೆಗೆ (6)ನೇ ಉಪ–ಪ್ರಕರಣದ ಮೇರೆಗೆ ಕೇಂದ್ರ ಸಲಹಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಜೆ) 64ನೇ ಪ್ರಕರಣದ ಮೇರೆಗೆ ಕೇಂದ್ರ ಸಲಹಾ ಮಂಡಳಿಯ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಪ್ರಕ್ರಿಯಾ ನಿಯಮಗಳು;

(ಕೆ) 74ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಚೀಫ್ ಕಮಿಷನರ್‌ರ ಹಾಗೂ ಕಮಿಷನರ್‌ರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು;

(ಎಲ್) 74ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ಚೀಫ್ ಕಮಿಷನರ್‌ನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವಾ ಷರತ್ತುಗಳು;

(ಎಂ) 74ನೇ ಪ್ರಕರಣದ (8)ನೇ ಉಪ–ಪ್ರಕರಣದ ಮೇರೆಗೆ ಸಲಹಾ ಮಂಡಳಿಯ ರಚನೆ ಮತ್ತು ತಜ್ಞರ ನೇಮಕಾತಿಯ ರೀತಿ;

(ಎನ್) 78ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಚೀಫ್ ಕಮಿಷನರ್ ಸಿದ್ಧಪಡಿಸಬೇಕಾದ ಮತ್ತು ಸಲ್ಲಿಸಬೇಕಾದ ವಾರ್ಷಿಕ ವರದಿಯ ನಮೂನೆ, ರೀತಿ ಮತ್ತು ಒಳಾಂಶಗಳು;

(ಒ) 86ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿಸಿದ ನಿಧಿಯ ಬಳಕೆ ಮತ್ತು ಅದರ ನಿರ್ವಹಣೆಯ ಕಾರ್ಯವಿಧಾನ ಮತ್ತು ರೀತಿ;

(ಪಿ) 87ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿಸಿದ ನಿಧಿಯ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದಕ್ಕಾಗಿ ನಮೂನೆ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**101. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ, ಈ ಅಧಿನಿಯಮದ ಉಪಬಂಧಗಳ ಪಾಲನೆಗಾಗಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲತೆಗೆ ಸಂಬಂಧಪಟ್ಟ ಸಂಶೋಧನೆಗಾಗಿ ಸಮಿತಿಯನ್ನು ರಚಿಸುವ ರೀತಿ;

(ಬಿ) 14ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒಬ್ಬ ಸೀಮಿತ ಪಾಲಕನ ನೆರವನ್ನು ಒದಗಿಸುವ ರೀತಿ;

(ಸಿ) 51ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ;

(ಡಿ) 51ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂಸ್ಥೆಗಳು ಒದಗಿಸಬೇಕಾದ ಸೌಲಭ್ಯಗಳು ಮತ್ತು ಪೂರೈಸಬೇಕಾದ ಮಾನದಂಡಗಳು;

(ಇ) 51ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರದ ಸಿಂಧುತ್ವ, ಅದರ ನಮೂನೆ ಮತ್ತು ಅದರ ಷರತ್ತುಗಳು;

(ಎಫ್) 51ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ ಅರ್ಜಿಯ ವಿಲೆಯ ಕಾಲಾವಧಿ;

(ಜಿ) 53ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಪೀಲು ಮಾಡಬೇಕಾದ ಆ ಯಾವುದೇ ಕಾಲಾವಧಿ;

(ಹೆಚ್) 59ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಪ್ರಮಾಣೀಕರಿಸುವ ಪ್ರಾಧಿಕಾರಿಯ ಆದೇಶದ ವಿರುದ್ಧ ಮಾಡುವ ಅಪೀಲಿನ ಅವಧಿ ಮತ್ತು ರೀತಿ ಮತ್ತು (2)ನೇ ಉಪ–ಪ್ರಕರಣದ ಮೇರೆಗೆ ಅಂಥ ಅಪೀಲಿನ ವಿಲೆಯ ರೀತಿ;

(ಐ) 67ನೇ ಪ್ರಕರಣದ (6)ನೇ ಉಪ–ಪ್ರಕರಣದ ಮೇರೆಗೆ ರಾಜ್ಯ ಸಲಹಾ ಮಂಡಲಿಯ ನಾಮನಿರ್ದೇಶಿತ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಜೆ) 70ನೇ ಪ್ರಕರಣದ ಮೇರೆಗೆ ರಾಜ್ಯ ಸಲಹಾ ಮಂಡಳಿಯ ಸಭೆಗಳ ಕಾರ್ಯನಿರ್ವಹಣೆಯ ಪ್ರಕ್ರಿಯಾ ನಿಯಮಗಳು;

(ಕೆ) 72ನೇ ಪ್ರಕರಣದ ಮೇರೆಗೆ ಜಿಲ್ಲಾ ಮಟ್ಟದ ಸಮಿತಿಯ ರಚನೆ ಮತ್ತು ಅದರ ಪ್ರಕಾರ್ಯಗಳು;

(ಎಲ್) 79ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ರ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಎಂ) 79ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಎನ್) 79ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ಸಲಹಾ ಸಮಿತಿಯ ರಚನೆ ಮತ್ತು ಅದರಲ್ಲಿರಬೇಕಾದ ತಜ್ಞರ ನೇಮಕಾತಿಯ ರೀತಿ;

(ಒ) 83ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಸ್ಟೇಟ್ ಕಮಿಷನರ್‌ನು ಸಿದ್ಧಪಡಿಸಬೇಕಾದ ಮತ್ತು ಸಲ್ಲಿಸಬೇಕಾದ ವಾರ್ಷಿಕ ಹಾಗೂ ವಿಶೇಷ ವರದಿಗಳ ನಮೂನೆ, ರೀತಿ ಮತ್ತು ಒಳಾಂಶಗಳು;

(ಪಿ) 85ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ವಿಶೇಷ ಸರ್ಕಾರಿ ಅಭಿಯೋಜಕರಿಗೆ ಸಂದಾಯ ಮಾಡಬೇಕಾದ ಶುಲ್ಕ ಅಥವಾ ಪರಿಶ್ರಮಧನ;

(ಕ್ಯೂ) 88ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ಸ್ಥಾಪಿಸುವ ರೀತಿ ಮತ್ತು (2)ನೇ ಉಪ–ಪ್ರಕರಣದ ಮೇರೆಗೆ ಅದರ ಬಳಕೆ ಹಾಗೂ ನಿರ್ವಹಣೆಯ ವಿಧಾನ;

(ಆರ್) 88ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ರಾಜ್ಯ ನಿಧಿಯ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದಕ್ಕಾಗಿ ನಮೂನೆ.

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡೂ ಸದನಗಳನ್ನು ಹೊಂದಿದ್ದರೆ ಅಂಥ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ರಾಜ್ಯ ವಿಧಾನಮಂಡಲವು ಒಂದು ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

**102. ನಿರಸನ ಮತ್ತು ಉಳಿಸುವಿಕೆಗಳು.–** (1) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ) ಅಧಿನಿಯಮ, 1995 (1996ರ 1) ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಸದರಿ ಅಧಿನಿಯಮವು ನಿರಸನಗೊಂಡಿದ್ದಾಗ್ಯೂ, ಸದರಿ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ಅನುಸೂಚಿ**

(2ನೇ ಪ್ರಕರಣದ ಖಂಡ (ಝಡ್‌ಸಿ) ವನ್ನು ನೋಡಿ)

**ನಿರ್ದಿಷ್ಟಪಡಿಸಿದ ಅಂಗವಿಕಲತೆ**

1. **ದೈಹಿಕ ಅಂಗವಿಕಲತೆ .–**

ಎ. ಚಲನಶಕ್ತಿಯ ವಿಕಲತೆಯು (ಕೀಲುಗಳು ಅಥವಾ ಮಾಂಸಖಂಡಗಳ ನರವ್ಯೂಹದ ದೋಷದಿಂದಾಗಿ ಅಥವಾ ಇವೆರಡರ ವೇದನೆಯ ಪರಿಣಾಮದಿಂದಾಗಿ ವ್ಯಕ್ತಿಯು ಸ್ವತಃ ತಾನೇತಾನಾಗಿ ಚಲಿಸಲು ಮತ್ತು ವಸ್ತುಗಳ ಸಹಾಯದಿಂದ ಚಲಿಸಿ ವಿಭಿನ್ನ ರೀತಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಂತೆ ಅಶಕ್ತತೆಗೆ ಒಳಗಾಗಿರುವುದು) ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ, ಎಂದರೆ,–

(ಎ) "ಕುಷ್ಠರೋಗ ವಾಸಿಯಾಗಿರುವ ವ್ಯಕ್ತಿ" ಎಂದರೆ, ಕುಷ್ಠರೋಗವು ವಾಸಿಯಾಗಿರುವ, ಆದರೆ ಈ ಕೆಳಕಂಡವುಗಳಿಂದ ಬಳಲುತ್ತಿರುವ ಒಬ್ಬ ವ್ಯಕ್ತಿ;

(i) ಕೈಗಳು ಅಥವಾ ಕಾಲುಗಳಲ್ಲಿ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವ ಮತ್ತು ಕಣ್ಣು ಹಾಗೂ ಕಣ್ಣುರೆಪ್ಪೆಗಳಲ್ಲಿ ಸಹ ಸ್ನಾಯು ಲಕ್ವ ಉಂಟಾದ ಪರಿಣಾಮದಿಂದ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವ, ಆದರೆ ದೇಹದ ಅಂಗವು ದೃಷ್ಟಿಗೋಚರ ವಿಕಾರ ಇಲ್ಲದಿರುವುದು;

(ii) ಸ್ಪಷ್ಟವಾದ ಅಂಗವಿಕಾರ ಹಾಗೂ ಸ್ನಾಯು ಲಕ್ವ ಉಂಟಾಗಿದ್ದು, ಆದರೆ ಸಾಮಾನ್ಯ ಆರ್ಥಿಕ ಚಟುವಟಿಕೆಯಲ್ಲಿ ತೊಡಗಲು ಅವರಿಗೆ ಸಾಧ್ಯವಾಗುವಂತೆ ಅವರ ಕೈಗಳು ಮತ್ತು ಕಾಲುಗಳಲ್ಲಿ ಸಾಕಷ್ಟು ಚಲನ ಶಕ್ತಿಯನ್ನು ಹೊಂದಿರುವ;

(iii) ತೀವ್ರತರವಾದ ದೈಹಿಕ ಅಂಗವಿಕಾರತೆ ಉಂಟಾಗಿರುವುದು ಮತ್ತು ಹೆಚ್ಚಿನ ವಯಸ್ಸಾದಂತೆ ಆತನು/ಆಕೆಯು ಯಾವುದೇ ಲಾಭದಾಯಕ ಉದ್ಯೋಗ ಕೈಗೊಳ್ಳುವುದಕ್ಕೆ ಸಾಧ್ಯವಾಗದಿರುವುದು; ಮತ್ತು "ವಾಸಿಯಾಗಿರುವ ಕುಷ್ಠರೋಗ" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಬಿ) "ಮಿದುಳು ಪಾರ್ಶ್ವವಾಯು" ಎಂದರೆ, ಮಗುವಿನ ಜನನಕ್ಕೂ ಮುಂಚೆ ಅಥವಾ ಜನನದ ಕಾಲದಲ್ಲಿ ಅಥವಾ ಜನನದ ಸ್ವಲ್ಪ ಕಾಲದ ತರುವಾಯ ಮಗುವಿನ ಮಿದುಳಿನ ಒಂದು ಭಾಗಕ್ಕೆ ಅಥವಾ ಒಂದಕ್ಕಿಂತ ಹೆಚ್ಚಿನ ನಿರ್ದಿಷ್ಟ ಭಾಗಗಳಿಗೆ ಸಾಮಾನ್ಯವಾಗಿ ಉಂಟಾಗುವ ಹಾನಿಯ ಪರಿಣಾಮದಿಂದ ಆ ಮಗುವಿನ ದೈಹಿಕ ಚಲನೆಗಳಿಗೆ ಮತ್ತು ಸ್ನಾಯುಗಳ ಸಮನ್ವಯ ಕ್ರಿಯೆಗೆ ಅಡಚಣೆ ಉಂಟು ಮಾಡುವ ಆದರೆ ಮತ್ತಷ್ಟು ಬಲಿಯದ ಸ್ಥಿತಿಯ ನರಸಂಬಂಧಿ ಸಮೂಹ.

(ಸಿ) "ಕುಬ್ಜತೆ" ಎಂದರೆ ಒಬ್ಬ ವಯಸ್ಕನ ಎತ್ತರವು 4 ಅಡಿ 10 ಇಂಚುಗಳು (147 ಸೆಂ.ಮೀ.ಗಳು) ಇರುವುದರಿಂದಾದ ಅಥವಾ ಅದಕ್ಕಿಂತ ಕಡಿಮೆ ಇರುವುದರಿಂದಾದ ವೈದ್ಯಕೀಯ ಅಥವಾ ಆನುವಂಶಿಕ ಸ್ಥಿತಿ.

(ಡಿ) ಮಾನವ ದೇಹದ ಚಲನೆಯನ್ನು ಮತ್ತು ಬಹು ವಿಧ ಸ್ನಾಯು ಸವೆತದ ಯಾವುದೇ ರೋಗ ಉಳ್ಳ ವ್ಯಕ್ತಿಗಳ ವಂಶವಾಹಿಗಳಲ್ಲಿ ದೋಷಯುಕ್ತ ಮತ್ತು ಕಾಣೆಯಾಗಿರುವ ಸಂಕೇತಗಳಿರುವುದರ ಪರಿಣಾಮವಾಗಿ ಅವರುಗಳಲ್ಲಿ ಆರೋಗ್ಯಕರ ಸ್ನಾಯುಗಳಿಗೆ ಅಗತ್ಯವಾದ ಪ್ರೊಟೀನುಗಳು ಉತ್ಪತ್ತಿಯಾಗುವುದನ್ನು ತಡೆಯುವಂತಹ ರೋಗವಾಗಿದೆಯೋ ಆ ರೋಗವು ಅಂತಹ ವ್ಯಕ್ತಿಗಳ ಚಲನೆಗೆ ಅನುವು ಮಾಡಿಕೊಡುವ ಸ್ನಾಯುಗಳನ್ನು ದುರ್ಬಲಗೊಳಿಸುವುದೋ ಅಂತಹ ಆನುವಂಶಿಕ ಸ್ನಾಯು ಸವೆತ ರೋಗದ ಗುಚ್ಛ. ಅಸ್ಥಿ ಪಂಜರದ ಸ್ನಾಯುಗಳಲ್ಲಿ ಹೆಚ್ಚುತ್ತಿರುವ ದೌರ್ಬಲ್ಯ, ಸ್ನಾಯು ಪ್ರೊಟೀನುಗಳಲ್ಲಿನ ದೋಷಗಳು ಮತ್ತು ಸ್ನಾಯು ಕೋಶಗಳ ಮತ್ತು ಅಂಗಾಂಶಗಳ ಅವಸಾನ ಆ ರೋಗದ ಲಕ್ಷಣಗಳೆಂದು ಹೇಳಲಾಗುತ್ತದೆ.

(ಇ) "ಆಸಿಡ್ ದಾಳಿಗೆ ತುತ್ತಾದವರು" ಎಂದರೆ, ಆಸಿಡ್ ಅಥವಾ ಅಂಥದ್ದೇ ಸುಡುವ ನಾಶಕಾರಿ ರಾಸಾಯನಿಕ ವಸ್ತು ಎರಚುವುದರ ಮೂಲಕ ಹಿಂಸಾತ್ಮಕ ಹಲ್ಲೆಯಿಂದ ವಿರೂಪಗೊಂಡ ಒಬ್ಬ ವ್ಯಕ್ತಿ.

ಬಿ. ದೃಷ್ಟಿ ದೋಷ.–

(ಎ) "ಅಂಧತ್ವ" ಎಂದರೆ, ಕಣ್ಣಿನ ಉತ್ತಮ ದೃಷ್ಟಿ ಪರೀಕ್ಷೆಯ ನಂತರ, ಈ ಕೆಳಕಂಡ ಯಾವುದೇ ಸ್ಥಿತಿಗಳಲ್ಲಿ ಇರುವ ಒಬ್ಬ ವ್ಯಕ್ತಿಯ ಒಂದು ಸ್ಥಿತಿ,–

(i) ಸಂಪೂರ್ಣ ದೃಷ್ಟಿಹೀನತೆ; ಅಥವಾ

(ii) ಸಾಧ್ಯವಾದಷ್ಟು ಉತ್ತಮವಾಗಿಯೇ ಕಣ್ಣಿನ ದೃಷ್ಟಿ ಪರೀಕ್ಷೆ ಮಾಡಿಸಿ ಕೊಂಡ, ಕಣ್ಣಿನ ದೃಷ್ಟಿ ಶಕ್ತಿಯು 3/60 ರಷ್ಟಕ್ಕಿಂತ ಅಥವಾ 10/200 (ಸ್ನೆಲ್ಲೆನ್) ಕ್ಕಿಂತ ಕಡಿಮೆ ದೃಷ್ಟಿ ತೀಕ್ಷ್ಣತೆ ಇರುವುದು; ಅಥವಾ

(iii) ಕಣ್ಣಿನಿಂದ ಎಲ್ಲಿಯವರೆಗೆ ನೋಡಬಹುದೋ ಆ ದೂರದ ಮಿತಿ 10 ಡಿಗ್ರಿ ಕೋನದಷ್ಟು ಇರುವುದು/ ಅಸಮರ್ಥತೆ ಇರುವುದು.

(ಬಿ) "ಮಂದ ದೃಷ್ಟಿ" ಎಂದರೆ, ವ್ಯಕ್ತಿಯಲ್ಲಿ ಈ ಕೆಳಕಂಡವುಗಳಲ್ಲಿ ಯಾವುದಾದರೊಂದು ಸ್ಥಿತಿಗಳನ್ನು ಹೊಂದಿರುವ ಸ್ಥಿತಿ, ಎಂದರೆ:–

(i) ಸಾಧ್ಯವಾದಷ್ಟು ಮಟ್ಟಿಗೆ ಕಣ್ಣುಗಳ ಪರೀಕ್ಷೆ ಮಾಡಿಸಿಕೊಂಡಾಗ ಉತ್ತಮವಾದ ಕಣ್ಣಿನ ದೃಷ್ಟಿ 6/18 ರಷ್ಟು ಮೀರದಿರುವ ಅಥವಾ 20/60ರಷ್ಟಕ್ಕಿಂತ ಕಡಿಮೆ ಇರುವ, 3/60 ರವರೆಗೆ ಅಥವಾ 10/200 (ಸ್ನೆಲ್ಲೆನ್) ರವರೆಗೆ ಇರುವ; ಅಥವಾ

(ii) ಕಣ್ಣಿನಿಂದ ಎಲ್ಲಿಯವರೆಗೆ ನೋಡಬಹುದೋ ಆ ದೂರದ ಮಿತಿ 40 ಡಿಗ್ರಿಗಿಂತ ಕಡಿಮೆ ಕೋನದಷ್ಟು, 10 ಡಿಗ್ರಿಯವರೆಗಿನ ಕೋನದಷ್ಟು ಇರುವ;

– ಸ್ಥಿತಿ.

ಸಿ. ಶ್ರವಣ ದೋಷ.–

(ಎ) "ಕಿವುಡರು" ಎಂದರೆ, ಎರಡೂ ಕಿವಿಗಳಲ್ಲಿ ಮಾತಿನ ಧ್ವನಿತರಂಗಗಳನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವುದಕ್ಕೆ ಶೇ. 70 ಡೆಸಿಬಲ್‌ರಷ್ಟು ಶ್ರವಣಶಕ್ತಿ ನಷ್ಟವಾಗಿರುವ ವ್ಯಕ್ತಿಗಳು;

(ಬಿ) "ಕ್ಲಿಷ್ಟ ಶ್ರವಣ" ಎಂದರೆ, ಎರಡೂ ಕಿವಿಗಳಲ್ಲಿ ಮಾತಿನ ಧ್ವನಿ ತರಂಗಗಳನ್ನು ಗ್ರಹಿಸುವಾಗ ಶೇ. 60 ಡೆಸಿಬಲ್‌ರಿಂದ ಶೇ.70 ಡೆಸಿಬಲ್‌ರಷ್ಟು ಶ್ರವಣಶಕ್ತಿ ಕುಗ್ಗಿರುವ ವ್ಯಕ್ತಿ;

ಡಿ. "ಮಾತನಾಡಲು ಮತ್ತು ಸಂವಹನ ಅಸಮರ್ಥತೆ" ಎಂದರೆ, ಶಾರೀರಿಕ ಅಥವಾ ನರಸಂಬಂಧಿ ಸಮಸ್ಯೆಗಳಿಂದಾಗಿ ಶಸ್ತ್ರ ಚಿಕಿತ್ಸೆಯ ಕಾರಣಗಳಿಂದಾಗಿ ಮಾತು ಮತ್ತು ಭಾಷೆಯನ್ನು ವ್ಯಕ್ತಪಡಿಸುವ ಒಂದು ಅಥವಾ ಅದಕ್ಕಿಂತ ಹೆಚ್ಚು ಅಂಗಗಳಿಗೆ ತೊಂದರೆಯುಂಟಾಗಿ, ಈ ಕಾರಣದಿಂದ ಗಂಟಲಿನ ಧ್ವನಿಪೆಟ್ಟಿಗೆಯಲ್ಲಿ ಮಾತು ಹೊರಡದಂತಾಗುವ ಅಥವಾ (ವಾಕ್ ಸ್ಥಂಭನ) ಮಾತು ನಿಂತುಹೋಗುವಂಥ ಖಾಯಂ ಅಂಗವಿಕಲತೆ.

2. **ಬೌದ್ಧಿಕ ವಿಕಲತೆ.–** ಬೌದ್ಧಿಕ ವಿಕಲತೆ ಎಂದರೆ, ಬೌದ್ಧಿಕ ಕ್ರಿಯೆ (ಎಂದರೆ ಬುದ್ಧಿವಂತಿಕೆಯಿಂದ ಆಲೋಚಿಸುವುದು, ಕಲಿಯುವುದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು) ಹಾಗೂ ದೈನಂದಿನ, ಸಾಮಾಜಿಕ ಮತ್ತು

ವ್ಯವಹಾರಿಕ ಕುಶಲತೆಯನ್ನು ಅಳವಡಿಸಿಕೊಳ್ಳುವ ರೀತಿ ಈ ಎರಡರಲ್ಲಿ ಎದ್ದು ಕಾಣುವಂತಹ ದೌರ್ಬಲ್ಯದ ಲಕ್ಷಣಗಳು ಇರುವ ಸ್ಥಿತಿ, ಇದರಲ್ಲಿ ಈ ಕೆಳಕಂಡವುಗಳು ಸೇರುತ್ತವೆ, ಎಂದರೆ,–

(ಎ) "ನಿರ್ದಿಷ್ಟ ಕಲಿಕಾ ವಿಕಲತೆ" ಎಂದರೆ, ಯಾವ ಸ್ಥಿತಿಗಳಲ್ಲಿ ಭಾಷೆಯನ್ನು ಮಾತನಾಡುವ ಅಥವಾ ಬರೆಯುವ ಪ್ರಕ್ರಿಯೆಯಲ್ಲಿ ಅದನ್ನು ಗ್ರಹಿಸುವುದಕ್ಕೆ, ಮಾತನಾಡುವುದಕ್ಕೆ, ಓದುವುದಕ್ಕೆ, ಬರೆಯುವುದಕ್ಕೆ, ಅಕ್ಷರವನ್ನು ಕೂಡಿಸುವುದಕ್ಕೆ ಅಥವಾ ಗಣಿತದ ಲೆಕ್ಕಾಚಾರಗಳನ್ನು ಮಾಡಲು ಕಷ್ಟವುಂಟಾಗುವುದೋ ಅಂತರ ವಿಜಾತೀಯ ವಿಕಲತೆ ಸ್ಥಿತಿಗಳ ವರ್ಗ ಮತ್ತು ಇದರಲ್ಲಿ ನಿರಂತರ ವಿಕಲತೆಗಳು, ಮಾತು ಅರ್ಥವಾಗದಿರುವುದು, ಕಷ್ಟಪಟ್ಟು ಬರೆಯುವುದು, ಡಿಸ್‌ಕ್ಯಾಕ್ಯುಲಿಯ, ಸಮನ್ವಯ ಕ್ರಿಯೆಯಲ್ಲಿ ಕೊರತೆ ಮತ್ತು ಬೆಳವಣಿಗೆಯಾಗುವಂತಹ ಮೂಕತನದಂತಹ ಸ್ಥಿತಿಗಳೂ ಸೇರುತ್ತವೆ;

(ಬಿ) "ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್" ಎಂದರೆ, ಮಗುವಿನ ಮೊದಲ ಮೂರು ವರ್ಷಗಳ ಬೆಳವಣಿಗೆಯಲ್ಲಿ ವಿಶಿಷ್ಟವಾಗಿ ಕಾಣಿಸಿಕೊಳ್ಳುವ ಒಂದು ನರಸಂಬಂಧಿ ಬೆಳವಣಿಗೆಯ ಸ್ಥಿತಿಯಾಗಿದ್ದು, ಇದರ ಪರಿಣಾಮದಿಂದಾಗಿ ವ್ಯಕ್ತಿಯು ಪರಸ್ಪರ ಸಂವಹನ ಮಾಡಲು, ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಇತರರೊಂದಿಗೆ ತನಗಿರುವ ಸಂಬಂಧದ ಕಲ್ಪನೆ ಮಾಡಿಕೊಳ್ಳುವುದಕ್ಕೆ ಆತನಿಗಿರುವ ಸಾಮರ್ಥ್ಯದ ಮೇಲೆ ಗಮನಾರ್ಹ ಪರಿಣಾಮ ಉಂಟುಮಾಡುವ ಮತ್ತು ಅಸಹಜ ಅಥವಾ ಮಾಡಿದ್ದನ್ನೇ ಪದೇಪದೇ ಮಾಡುವ ಕ್ರಿಯೆ ಅಥವಾ ನಡವಳಿಕೆಯನ್ನುಳ್ಳ ಸ್ಥಿತಿ.

**3. ಮಾನಸಿಕ ವರ್ತನೆ.–**

"ಮಾನಸಿಕ ಅಸ್ವಸ್ಥತೆ" ಎಂದರೆ, ವ್ಯಕ್ತಿಯ ಆಲೋಚನೆ, ಚಿತ್ತಸ್ಥಿತಿ, ಗ್ರಹಿಕೆ, ಹೊಂದಾಣಿಕೆ ಅಥವಾ ನೆನಪು ಇವುಗಳಿಗೆ ಸಂಬಂಧಿಸಿದಂತೆ ಇರುವ ಯಾವ ಗಣನೀಯ ಅಸ್ತವ್ಯಸ್ತತೆಯಿಂದಾಗಿ ವಿವೇಚನೆ ಶಕ್ತಿಯು, ನಡವಳಿಕೆಯು, ವಾಸ್ತವವನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಅಥವಾ ಜೀವನದ ಸಾಧಾರಣ ಅವಶ್ಯಕ್ತೆಗಳನ್ನು ಪೂರೈಸಿಕೊಳ್ಳುವ ಶಕ್ತಿಯು ಒಟ್ಟಾರೆಯಾಗಿ ಕುಂಠಿತವಾಗಿರುವುದೋ ಅಂಥ ಗಣನೀಯ ಅಸ್ತವ್ಯಸ್ತತೆ. ಆದರೆ ಇದರಲ್ಲಿ, ವ್ಯಕ್ತಿಯ ಮಾನಸಿಕ ಬೆಳವಣಿಗೆ ನಿಂತುಹೋಗಿರುವ ಅಥವಾ ಅಪೂರ್ಣವಾಗಿರುವ ಅದರಲ್ಲೂ ಮುಖ್ಯವಾಗಿ ಬುದ್ಧಿಶಕ್ತಿಯು ಸಾಮಾನ್ಯ ಮಟ್ಟಕ್ಕಿಂತ ಕೆಳಮಟ್ಟದ್ದೆಂದು ಹೇಳಬಹುದಾದ ಸ್ಥಿತಿಯನ್ನು ಒಳಗೊಳ್ಳುವುದಿಲ್ಲ.

**4. ಈ ಕೆಳಕಂಡ ಕಾರಣಗಳಿಂದಾಗುವ ಅಂಗವಿಕಲತೆ.–**

(ಎ) ದೀರ್ಘಕಾಲದ ನರಸಂಬಂಧಿ ರೋಗದ ಸ್ಥಿತಿಗಳಿಂದ ಎಂದರೆ.–

(i) "ಮಲ್ಟಿಪಲ್ ಸ್ಕೈಲೊರೋಸಿಸ್" ಎಂದರೆ, ನರ ಮಂಡಲದ ಯಾವ ರೋಗದಿಂದಾಗಿ ನರಕೋಶಗಳ ನರತಂತುಗಳ ಸುತ್ತಲೂ ಇರುವ ನರ ಪೊರೆಗಳು ಹಾಳಾಗಿ ನರಪೊರೆ ಇಲ್ಲವಾಗುವುದಕ್ಕೆ ಮತ್ತು ಮಿದುಳು ಮತ್ತು ಬೆನ್ನುಹುರಿಯ ನರಕೋಶಗಳು ಒಂದನ್ನೊಂದು ಸಂಪರ್ಕಿಸುವ ಶಕ್ತಿಗೆ ಬಾಧಕ ಉಂಟು ಮಾಡುವುದಕ್ಕೆ ಅನುವು ಮಾಡಿಕೊಡುತ್ತವೋ ಆ ದೀರ್ಘಕಾಲದ ನರ ಸಂಬಂಧಿ ರೋಗ ಸ್ಥಿತಿಗಳು;

(ii) "ಪಾರ್ಕಿನ್‌ಸನ್ ರೋಗ" ಎಂದರೆ, ಮಿದುಳಿನ ಬುಡದಲ್ಲಿರುವ ನರಗಂಟಿನ ರಚನೆಯಲ್ಲಿ ವಿಕಾರದಿಂದಾಗಿ ಮತ್ತು ಅಥವಾ ಸ್ನಾಯು ಚೋದನೆ ರವಾನೆಗೆ ಸಾಧ್ಯತೆ ಮಾಡಿಕೊಡುವ ಡೋಪಮಿನ್ ಕೊರತೆಯಿಂದಾಗಿ ಬಹುಮುಖ್ಯವಾಗಿ ಮಧ್ಯವಯಸ್ಕರನ್ನೂ ಮತ್ತು ವೃದ್ಧರನ್ನೂ ಬಾಧಿಸುವ ನಡುಕ, ಸ್ನಾಯುಗಳ ಸೆಳೆತ ಮತ್ತು ನಿಧಾನಗತಿಯ, ನಿಖರವಲ್ಲದ ಚಲನವಲನವು ಸ್ಪಷ್ಟವಾಗಿ ಕಂಡುಬರುವ ನರವ್ಯೂಹದ ಹೆಚ್ಚುತ್ತಿರುವ ರೋಗ.

**(ಬಿ) ರಕ್ತ ವಿಕಾರದಿಂದ ಎಂದರೆ.–**

(i) "ರಕ್ತವು ಬೇಗನೆ ಹೆಪ್ಪುಗಟ್ಟುವಿಕೆ (ಹಿಮೋಫಿಲಿಯಾ)" ಎಂದರೆ, ರಕ್ತವು ಸಹಜವಾಗಿ ಹೆಪ್ಪುಗಟ್ಟುವ ಕ್ರಿಯೆಯ ಶಕ್ತಿಯು ನಿಂತು ಹೋಗಿರುವುದರಿಂದಾಗಿ ಅಥವಾ ಹಾಳಾಗಿರುವುದರಿಂದಾಗಿ ಒಂದು ಸಣ್ಣ ಗಾಯವಾದರೂ ಕೂಡ ಮಾರಣಾಂತಿಕ ರಕ್ತಸ್ರಾವಕ್ಕೆ ಕಾರಣವಾಗಬಹುದಾದ ಸಾಮಾನ್ಯವಾಗಿ ಪುರುಷರನ್ನು ಮಾತ್ರ ಬಾಧಿಸುವ ಆದರೆ ಗಂಡು ಮಕ್ಕಳಿಗೆ ಅವರ ತಾಯಿಯಿಂದ ಬರುವ ಆನುವಂಶಿಕ ರೋಗ;

(ii) "ಥಲಸ್ಸೇಮಿಯ" ಎಂದರೆ, ರಕ್ತದಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆಯಾಗಿರುವ ಅಥವಾ ಹಿಮೋಗ್ಲೋಬಿನ್ ಪ್ರಮಾಣ ಇಲ್ಲದಿರುವ ಲಕ್ಷಣವುಳ್ಳ, ಆನುವಂಶಿಕವಾಗಿ ಬರುವ ವಿಕಾರಗಳ ವರ್ಗ;

(iii) "ಸಿಕೆಲ್ ಸೆಲ್ ರೋಗ" ಎಂದರೆ, ದೀರ್ಘಾವಧಿ ರಕ್ತಹೀನತೆ, ನೋವಿನ ಸಂದರ್ಭಗಳಲ್ಲಿ ಆಗಿರುವ ಮತ್ತು ಅಂಗಾಂಶ ಮತ್ತು ಅಂಗಕ್ಕೆ ಆಗಿರುವ ಹಾನಿಯ ಪರಿಣಾಮವಾಗಿ ಉಂಟಾಗಿರುವ ಅನೇಕ ಜಟಿಲತೆಗಳ ಲಕ್ಷಣಗಳನ್ನುಳ್ಳ ರೋಗ.

**5.** (ಈ ಮೇಲೆ ನಿರ್ದಿಷ್ಟಪಡಿಸಿರುವ ಒಂದಕ್ಕಿಂತ ಹೆಚ್ಚಿನ) ಬಹುವಿಧದ ಅಂಗವಿಕಲತೆಗಳು, ಇವುಗಳಲ್ಲಿ ಕಿವುಡು, ಕುರುಡು ಸೇರುತ್ತವೆ. ಎಂದರೆ ತೀವ್ರತರ ಸಂವಹನ ಸಮಸ್ಯೆ, ಬೆಳವಣಿಗೆಗೆ ಸಂಬಂಧಿಸಿದ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಉಂಟು ಮಾಡುತ್ತಿರುವ ಶ್ರವಣ ಮತ್ತು ದೃಷ್ಟಿದೋಷ ಇವೆರಡೂ ವ್ಯಕ್ತಿಯಲ್ಲಿ ಇರುವ ಸ್ಥಿತಿ.

**6.** ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಇತರೆ ಯಾವುದೇ ವರ್ಗದ ಅಂಗವಿಕಲತೆ.

******

## ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985

**(1986ರ ಅಧಿನಿಯಮ ಸಂಖ್ಯೆ 2)**

[8ನೇ ಜನವರಿ, 1986.]

ಕೆಲವು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತನ್ನು ಅಭಿವೃದ್ಧಿಗೊಳಿಸಲು ಮತ್ತು ಆ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತಾರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I
### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು, ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಾಧಿಕಾರ" ಎಂದರೆ 4ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ;

(ಬಿ) "ಅಧ್ಯಕ್ಷ" ಎಂದರೆ ಪ್ರಾಧಿಕಾರದ ಅಧ್ಯಕ್ಷ;

(ಸಿ) "ರಫ್ತು" ಎಂದರೆ ಭೂ, ಜಲ ಅಥವಾ ವಾಯುಮಾರ್ಗದ ಮೂಲಕ ಭಾರತದಿಂದ ಹೊರಗೆ ಸಾಗಿಸುವುದು;

(ಡಿ) "ರಫ್ತುಗಾರ" ಎಂದರೆ 12ನೇ ಪ್ರಕರಣದ ಮೇರೆಗೆ ಅನುಸೂಚಿತ ಉತ್ಪನ್ನಗಳ ರಫ್ತುಗಾರ ಎಂದು ನೋಂದಾಯಿತನಾದ ವ್ಯಕ್ತಿ;

(ಇ) "ಸದಸ್ಯ" ಎಂದರೆ ಪ್ರಾಧಿಕಾರದ ಸದಸ್ಯ ಮತ್ತು ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಎಫ್) "ನಿಯಮಿಸಿದೆ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) ಅನುಸೂಚಿತ ಉತ್ಪನ್ನಗಳ ಅಥವಾ ಸಂದರ್ಭಾನುಸಾರ, ವಿಶೇಷ ಉತ್ಪನ್ನಗಳ ಸಂಬಂಧದಲ್ಲಿ, "ಸಂಸ್ಕರಣೆ" ಎಂಬುದರಲ್ಲಿ, ಅಂಥ ಉತ್ಪನ್ನಗಳನ್ನು ಡಬ್ಬಿಗಳಲ್ಲಿ ತುಂಬುವುದು, ಶೈತ್ಯೀಕರಿಸುವುದು, ಒಣಗಿಸುವುದು, ಉಪ್ಪಿನಲ್ಲಿ ಊರಿಡುವುದು, ಹೊಗೆಯಾಡಿಸುವುದು, ಸಿಪ್ಪೆ ತೆಗೆಯುವುದು ಅಥವಾ ಹೋಳು ಮಾಡುವುದು ಮೊದಲಾದಂತಹ ಸಂರಕ್ಷಣೆಯ ಕಾರ್ಯವಿಧಾನವು ಮತ್ತು ಪ್ರಾಧಿಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಸಂಸ್ಕರಣೆಯ ಇತರ ಯಾವುದೇ ವಿಧಾನವು ಒಳಗೊಳ್ಳುತ್ತದೆ;

(ಹೆಚ್) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳು;

(ಐ) "ಅನುಸೂಚಿತ ಉತ್ಪನ್ನ" ಎಂದರೆ ಮೊದಲನೆಯ ಅನುಸೂಚಿಯಲ್ಲಿ ಸೇರಿಸಿರುವ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನಗಳಲ್ಲಿ ಯಾವುದೇ ಉತ್ಪನ್ನ;

(ಜೆ) "ವಿಶೇಷ ಉತ್ಪನ್ನ" ಎಂದರೆ ಎರಡನೇ ಅನುಸೂಚಿಯಲ್ಲಿ ಸೇರಿಸಿರುವ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನಗಳಲ್ಲಿ ಯಾವುದೇ ಉತ್ಪನ್ನ.

3. **ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಮತ್ತು ಯಾವುದೇ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನವನ್ನು ಒಂದನೆಯ ಅನುಸೂಚಿಗೆ ಅಥವಾ ಎರಡನೆಯ ಅನುಸೂಚಿಗೆ ಸೇರಿಸುವುದು ಅಥವಾ ಸಂದರ್ಭಾನುಸಾರ ಒಂದನೆಯ ಅನುಸೂಚಿಯಿಂದ ಅಥವಾ ಎರಡನೆಯ ಅನುಸೂಚಿಯಿಂದ ಬಿಟ್ಟುಬಿಡುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಪರ್ಯಾಲೋಚಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಸೇರಿಸಬಹುದು ಅಥವಾ ಸಂದರ್ಭಾನುಸಾರ ಬಿಟ್ಟುಬಿಡಬಹುದು ಮತ್ತು ಆ ತರುವಾಯ ಅಂಥ ಉತ್ಪನ್ನವು ಅನುಸೂಚಿತ ಅಥವಾ ಸಂದರ್ಭಾನುಸಾರ ವಿಶೇಷ ಉತ್ಪನ್ನವಾಗತಕ್ಕದ್ದು ಅಥವಾ ಅಂಥ ಉತ್ಪನ್ನವಾಗಿರುವುದು ಕೊನೆಗೊಳ್ಳತಕ್ಕದ್ದು.

## ಅಧ್ಯಾಯ II

## ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ

4. **ಪ್ರಾಧಿಕಾರದ ಸ್ಥಾಪನೆ ಮತ್ತು ರಚನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು ಮೇಲೆ ಹೇಳಿದ ಹೆಸರುಳ್ಳ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಆ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರದ ಮುಖ್ಯ ಕಚೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಭಾರತದ ಒಳಗಿನ ಅಥವಾ ಹೊರಗಿನ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಮತ್ತು ಏಜೆನ್ಸಿಗಳನ್ನು ಸ್ಥಾಪಿಸಬಹುದು.

(4) ಪ್ರಾಧಿಕಾರದಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಎಂದರೆ:–

(ಎ) ಕೇಂದ್ರ ಸರ್ಕಾರದಿಂದ ನೇಮಕಗೊಳ್ಳುವ ಅಧ್ಯಕ್ಷ;

(ಬಿ) ಭಾರತ ಸರ್ಕಾರದ ಕೃಷಿ ಮಾರುಕಟ್ಟೆ ಸಲಹೆಗಾರ, ಪದನಿಮಿತ್ತ;

(ಸಿ) ಯೋಜನಾ ಆಯೋಗವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಸದಸ್ಯ;

(ಡಿ) ಸಂಸತ್ತಿನ ಮೂವರು ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯಿಂದ ಮತ್ತೊಬ್ಬರನ್ನು ರಾಜ್ಯ ಸಭೆಯಿಂದ ಆಯ್ಕೆ ಮಾಡತಕ್ಕದ್ದು;

(ಇ) ಅನುಕ್ರಮವಾಗಿ,–

(i) ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ;

(ii) ವಾಣಿಜ್ಯ;

(iii) ಹಣಕಾಸು;

(iv) ಕೈಗಾರಿಕೆ;

(v) ಆಹಾರ;

(vi) ನಾಗರಿಕ ಸರಬರಾಜು;

(vii) ನಾಗರಿಕ ವಿಮಾನಯಾನ;

(viii) ಹಡಗು ಸಾಗಣೆ ಮತ್ತು ಸಾರಿಗೆ;

– ಈ ಖಾತೆಗಳನ್ನು ನೋಡಿಕೊಳ್ಳುವ, ಕೇಂದ್ರ ಸರ್ಕಾರದ ಮಂತ್ರಾಲಯಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಎಂಟು ಮಂದಿ ಸದಸ್ಯರು,–

(ಎಫ್) ರಾಜ್ಯಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಅಕ್ಷರಾನುಕ್ರಮದಲ್ಲಿ ಸರದಿಯಂತೆ ಕೇಂದ್ರ ಸರ್ಕಾರವು ನೇಮಕಮಾಡುವಂಥ ಐವರು ಸದಸ್ಯರು:

ಪರಂತು, ಈ ಖಂಡದ ಮೇರೆಗೆ ಮಾಡುವ ನೇಮಕವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ, ಕೇಂದ್ರಾಡಳಿತ ಪ್ರದೇಶದ ಶಿಫಾರಸ್ಸಿನ ಮೇಲೆ ಮಾಡತಕ್ಕದ್ದು;

(ಜಿ) ಈ ಮುಂದಿನ ಸಂಸ್ಥೆಗಳನ್ನು ಎಂದರೆ:–

(i) ಭಾರತ ಕೃಷಿ ಸಂಶೋಧನಾ ಪರಿಷತ್ತು;

(ii) ರಾಷ್ಟ್ರೀಯ ತೋಟಗಾರಿಕಾ ಮಂಡಳಿ;

(iii) ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ;

(iv) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ;

(v) ಭಾರತ ಪ್ಯಾಕೇಜಿಂಗ್ ಸಂಸ್ಥೆ;

(vi) ಸಾಂಬಾರ ಪದಾರ್ಥಗಳ ರಫ್ತು ಸಂವರ್ಧನಾ ಪರಿಷತ್ತು; ಮತ್ತು

(vii) ಗೋಡಂಬಿ ರಫ್ತು ಸಂವರ್ಧನಾ ಪರಿಷತ್ತು

– ಈ ಸಂಸ್ಥೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಏಳು ಮಂದಿ ಸದಸ್ಯರು;

(ಹೆಚ್) ಈ ಮುಂದಿನ ಕೈಗಾರಿಕೆಗಳನ್ನು ಎಂದರೆ:–

(i) ಹಣ್ಣು ಮತ್ತು ತರಕಾರಿ ಉತ್ಪನ್ನಗಳ ಕೈಗಾರಿಕೆಗಳು;

(ii) ಮಾಂಸ, ಕೋಳಿ ಸಾಕಣೆ ಮತ್ತು ಹೈನು ಉತ್ಪನ್ನಗಳ ಕೈಗಾರಿಕೆಗಳು;

(iii) ಇತರ ಅನುಸೂಚಿತ ಉತ್ಪನ್ನಗಳ ಅಥವಾ ವಿಶೇಷ ಉತ್ಪನ್ನಗಳ ಕೈಗಾರಿಕೆಗಳು:

(iv) ಪ್ಯಾಕೇಜಿಂಗ್ ಕೈಗಾರಿಕೆ

– ಈ ಕೈಗಾರಿಕೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಹನ್ನೆರಡು ಮಂದಿ ಸದಸ್ಯರು:

ಪರಂತು, (i)ರಿಂದ (iii)ರವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಕೈಗಾರಿಕೆಗಳ ಸಮೂಹಗಳಲ್ಲಿ ಯಾವುದೇ ಸಮೂಹವನ್ನು ಅಥವಾ (iv)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿರುವ ಕೈಗಾರಿಕೆಯನ್ನು ಪ್ರತಿನಿಧಿಸಲು ನೇಮಕಗೊಂಡ ಸದಸ್ಯರ ಸಂಖ್ಯೆಯು ಯಾವುದೇ ಕಾರಣದಿಂದಲೂ ಎರಡಕ್ಕಿಂತ ಕಡಿಮೆ ಇರತಕ್ಕದ್ದಲ್ಲ;

(ಐ) ಕೃಷಿ, ಅರ್ಥಶಾಸ್ತ್ರ ಮತ್ತು ಅನುಸೂಚಿತ ಉತ್ಪನ್ನಗಳ ಕ್ರಯವಿಕ್ರಯ, ಕ್ಷೇತ್ರಗಳಲ್ಲಿನ ತಜ್ಞರು ಮತ್ತು ವಿಜ್ಞಾನಿಗಳ ಪೈಕಿಯಿಂದ ಕೇಂದ್ರ ಸರ್ಕಾರವು, ನೇಮಕ ಮಾಡುವಂಥ ಇಬ್ಬರು ಸದಸ್ಯರು.

(5) ಉಪಪ್ರಕರಣ (4)ರ (ಬಿ) ಖಂಡದಲ್ಲಿ ತಿಳಿಸಿರುವ ಸದಸ್ಯರನ್ನು ಹೊರತುಪಡಿಸಿ ಉಳಿದ ಸದಸ್ಯರ ಪದಾವಧಿಯು ಮತ್ತು ಸದಸ್ಯರ ಸ್ಥಾನಗಳಲ್ಲಿ ತೆರವಾಗುವ ಸ್ಥಾನಗಳನ್ನು ಭರ್ತಿಮಾಡುವ ರೀತಿಯು, ಮತ್ತು ಸದಸ್ಯರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಪ್ರಾಧಿಕಾರದ ಸದಸ್ಯನಾಗಿರದ, ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯನ್ನು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಪ್ರತಿನಿಯೋಜಿಸಿದಾಗ, ಆ ಅಧಿಕಾರಿಯು ಪ್ರಾಧಿಕಾರದ ಸಭೆಗಳಿಗೆ ಹಾಜರಾಗಲು ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(7) ಪ್ರಾಧಿಕಾರದ ಅಥವಾ 9ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಪ್ರಾಧಿಕಾರದಲ್ಲಿ ಅಥವಾ ಅಂಥ ಸಮಿತಿಯಲ್ಲಿ ಯಾವುದೇ ಸ್ಥಾನ ಖಾಲಿ ಇರುವ ಅಥವಾ ಪ್ರಾಧಿಕಾರದ ಅಥವಾ ಸಮಿತಿಯ ರಚನೆಯಲ್ಲಿ ಯಾವುದೇ ದೋಷ ಇರುವ; ಅಥವಾ

(ಬಿ) ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷ ಇರುವ; ಅಥವಾ

(ಸಿ) ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟು ಮಾಡದಂಥ ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(8) ಪ್ರಾಧಿಕಾರವು, ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅದರ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

**5. ಅಧ್ಯಕ್ಷನ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಮತ್ತು ಸದಸ್ಯರ ಭತ್ಯೆಗಳು.–** (1) ಅಧ್ಯಕ್ಷನು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು

ಮತ್ತು ರಜೆ, ನಿವೃತ್ತಿ ವೇತನ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಸೇವೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(2) ಪ್ರಾಧಿಕಾರದ ಇತರ ಸದಸ್ಯರು, ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(3) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಸದಸ್ಯನು ಕೇಂದ್ರ ಸರ್ಕಾರಕ್ಕೆ ಲಿಖಿತ ನೋಟೀಸನ್ನು ನೀಡಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅವನು ತನ್ನ ಪದವನ್ನು ತೆರವು ಮಾಡಿರುವನೆಂದು ಭಾವಿಸತಕ್ಕದ್ದು.

**6. ಅಧ್ಯಕ್ಷನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವುದು.–** ಅಧ್ಯಕ್ಷನು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**7. ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಇತರ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅವನು, ನಿಯಮಿಸಬಹುದಾದಂಥ ಅಥವಾ ಅಧ್ಯಕ್ಷನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಕಾರ್ಯದರ್ಶಿಯು, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಸೇವೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(3) ಪ್ರಾಧಿಕಾರವು ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ ಅವಶ್ಯಕವಾಗಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನಿಯಮಿಸಬಹುದಾದಂಥ ನಿಯಂತ್ರಣಕ್ಕೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ನೇಮಕ ಮಾಡಿಕೊಳ್ಳಬಹುದು ಮತ್ತು ಪ್ರಾಧಿಕಾರದ ಅಂಥ ಇತರ ಅಧಿಕಾರಿಗಳ ಮತ್ತು ನೌಕರರ ನೇಮಕದ ವಿಧಾನ, ವೇತನ ಶ್ರೇಣಿ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಪ್ರಾಧಿಕಾರವು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(4) ಪ್ರಾಧಿಕಾರದ ಅಧ್ಯಕ್ಷನು, ಕಾರ್ಯದರ್ಶಿಯು ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರು ಕೇಂದ್ರ ಸರ್ಕಾರದ ಅನುಮತಿ ಪಡೆದ ಹೊರತು, ಈ ಅಧಿನಿಯಮದ ಮೇರೆಗಿನ ತಮ್ಮ ಕರ್ತವ್ಯಗಳಿಗೆ ಸಂಬಂಧಿಸಿರದ ಯಾವುದೇ ಕಾರ್ಯವನ್ನು ಕೈಗೊಳ್ಳತಕ್ಕದ್ದಲ್ಲ.

**8. ಪ್ರಾಧಿಕಾರಕ್ಕೆ ನೌಕರರನ್ನು ವರ್ಗಾವಣೆ ಮಾಡುವುದಕ್ಕೆ ವಿಶೇಷ ಉಪಬಂಧ.–** (1) ಪ್ರಾಧಿಕಾರವನ್ನು ಸ್ಥಾಪಿಸಿದ ತರುವಾಯ, ಕೇಂದ್ರ ಸರ್ಕಾರವು, ಪ್ರಾಧಿಕಾರವನ್ನು ಸ್ಥಾಪಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಸಂಸ್ಕರಿತ ಆಹಾರಗಳ ರಫ್ತು ಸಂವರ್ಧನಾ ಪರಿಷತ್ತಿನಲ್ಲಿ (ಈ ಪ್ರಕರಣದಲ್ಲಿ ಇನ್ನು ಮುಂದೆ ಪರಿಷತ್ತು ಎಂಬುದಾಗಿ ಉಲ್ಲೇಖಿತವಾಗಿದೆ) ಅಧಿಕಾರಿಯಾಗಿ ಪದಧಾರಣ ಮಾಡಿದ್ದಂಥ ಯಾರೇ ಅಧಿಕಾರಿಯನ್ನು, ಅಥವಾ ನೌಕರನಾಗಿ ಪದಧಾರಣ ಮಾಡಿದಂಥ ಯಾರೇ ಇತರ ನೌಕರನನ್ನು ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಥವಾ ದಿನಾಂಕಗಳಿಂದ ಜಾರಿಗೆ ಬರುವಂತೆ ಅಂಥ ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ಪ್ರಾಧಿಕಾರಕ್ಕೆ ವರ್ಗಾಯಿಸುವುದು ಕಾನೂನುಬದ್ಧವಾದುದಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪ್ರಾಧಿಕಾರದಲ್ಲಿನ ಯಾವ ಹುದ್ದೆಗೆ ವರ್ಗಾಯಿಸಿಲಾಯಿತೋ ಆ ಹುದ್ದೆಯ ವೇತನ ಶ್ರೇಣಿಯು ಅಂಥ ವರ್ಗಾವಣೆಗೆ ನಿಕಟಪೂರ್ವದಲ್ಲಿ ಅವನು ಧಾರಣ ಮಾಡಿದಂಥ ಹುದ್ದೆಯ ವೇತನ ಶ್ರೇಣಿಗಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು ಅವನು ಯಾವ ಹುದ್ದೆಗೆ ವರ್ಗಾವಣೆ ಹೊಂದಿದನೋ ಆ ಹುದ್ದೆಯ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳು ಒಳಗೊಂಡಂತೆ) ಅಂಥ ವರ್ಗಾವಣೆಗೆ ನಿಕಟ ಪೂರ್ವದಲ್ಲಿ ಅವನು ಹೊಂದಿದ್ದ ಹುದ್ದೆಗೆ ಇದ್ದಂಥ ಸೇವೆಯ ನಿಬಂಧನೆಗಳಿಗಿಂತ ಮತ್ತು ಷರತ್ತುಗಳಿಗಿಂತ ಕಡಿಮೆ ಅನುಕೂಲಕರವಾದವುಗಳು ಆಗಿರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗಿನ ಆದೇಶವನ್ನು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವ ಹಾಗೆ ಮಾಡಬಹುದು.

(3) ಉಪಪ್ರಕರಣ (1)ರ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಪರಿಷತ್ತಿನ ಎಲ್ಲ ಅಧಿಕಾರಿಗಳಿಗೆ ಮತ್ತು ನೌಕರರಿಗೆ, ಪ್ರಾಧಿಕಾರದ ನೌಕರರಾಗುವುದಕ್ಕೆ ಅವರಿಗೆ ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಕೇಂದ್ರ ಸರ್ಕಾರವು ಆ ಬಗ್ಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಮತ್ತು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ತಿಳಿಸಲು ಅವಕಾಶವನ್ನು ನೀಡತಕ್ಕದ್ದು ಮತ್ತು ಅಂಥ ಆಯ್ಕೆಯ ಅವಕಾಶವನ್ನು ಒಮ್ಮೆ ಚಲಾಯಿಸಿದರೆ ಅದು ಅಂತಿಮವಾದುದಾಗಿರತಕ್ಕದ್ದು:

ಪರಂತು, ಪ್ರಾಧಿಕಾರದ ನೌಕರನಾಗಲು ತನಗೆ ಇಚ್ಛೆ ಇಲ್ಲ ಎಂಬುದನ್ನು ಆ ಬಗ್ಗೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಪರಿಷತ್ತಿನ ಯಾವ ಅಧಿಕಾರಿಯು ಅಥವಾ ನೌಕರನು ತಿಳಿಸುವನೋ ಆ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ಸಂಬಂಧದಲ್ಲಿ ಉಪಪ್ರಕರಣ (1)ರ ಮೇರೆಗಿನ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಪ್ರಾಧಿಕಾರದ ನೌಕರರಾಗುವುದಕ್ಕೆ ತಮಗೆ ಇಚ್ಛೆ ಇರುವುದನ್ನು ತಿಳಿಸಲು ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸದಿರುವಂಥ ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಬಗ್ಗೆ, ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಸಂಖ್ಯಾ ಬಲವನ್ನು ಕಡಿತಗೊಳಿಸುವ ಸಂದರ್ಭದಲ್ಲಿ ಪರಿಷತ್ತಿನ ನೌಕರರಿಗೆ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅನ್ವಯಿಸುತ್ತಿದ್ದಂಥ ರೀತಿಯಲ್ಲಿಯೇ ಮತ್ತು ಅನ್ವಯಿಸುತ್ತಿದ್ದಂಥವೇ ಕಾನೂನುಗಳಿಗೆ ಮತ್ತು ಸ್ಥಾಯೀ ಆದೇಶಗಳಿಗನುಸಾರವಾಗಿಯೇ ಕ್ರಮಜರುಗಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ಮಾಡಿದ ಆದೇಶದ ಮೂಲಕ ವರ್ಗಾವಣೆಯಾದ ಆಧಿಕಾರಿಯು ಅಥವಾ ಇತರ ನೌಕರನು, ವರ್ಗಾವಣೆಯ ದಿನಾಂಕದಂದು ಮತ್ತು ದಿನಾಂಕದಿಂದ, ಪರಿಷತ್ತಿನ ನೌಕರನಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅವನು ಪ್ರಾಧಿಕಾರದಲ್ಲಿ, ಪ್ರಾಧಿಕಾರವು ನಿರ್ಧರಿಸಬಹುದಾದಂಥ ಪದನಾಮದ ಅಧಿಕಾರಿ ಅಥವಾ ನೌಕರನಾಗಿರತಕ್ಕದ್ದು ಮತ್ತು (1)ನೇ ಉಪಪ್ರಕರಣದ ಪರಂತುಕದ ಉಪಬಂಧಗಳಿಗೊಳಪಟ್ಟು, ವೇತನದ ಮತ್ತು ಸೇವೆಯ ಇತರ ಷರತ್ತುಗಳ (ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಸೇರಿದಂತೆ) ಸಂಬಂಧದಲ್ಲಿ ಅವನಿಗೆ ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮಗಳು ಅನ್ವಯಿಸತಕ್ಕದ್ದು ಮತ್ತು ಪ್ರಾಧಿಕಾರವು ಅವನ ನೇಮಕವನ್ನು ಕ್ರಮಬದ್ಧವಾಗಿ ಕೊನೆಗೊಳಿಸಿದ ಹೊರತು ಮತ್ತು ಕೊನೆಗೊಳಿಸುವವರೆಗೆ ಅವನು ಪ್ರಾಧಿಕಾರದ ಅಧಿಕಾರಿಯಾಗಿರುವುದು ಅಥವಾ ನೌಕರನಾಗಿರುವುದು ಮುಂದುವರಿಯತಕ್ಕದ್ದು:

ಪರಂತು, ಮೇಲೆ ಹೇಳಿದಂತೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸೇವೆಯ ಷರತ್ತುಗಳಿಗೆ ಅನ್ವಯಿಸುವಂಥ ವಿನಿಯಮಗಳನ್ನು, ಪ್ರಾಧಿಕಾರವು ರಚಿಸುವ ಕಾಲದವರೆಗೆ, ಪರಿಷತ್ತಿನ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗುವಂಥ ಸಂಬಂಧಪಟ್ಟ ಕಾನೂನುಗಳು ಮತ್ತು ಸ್ಥಾಯೀ ಆದೇಶಗಳು ಅವರಿಗೆ ಅನ್ವಯವಾಗುವುದು ಮುಂದುವರೆಯತಕ್ಕದ್ದು.

(5) ವೇತನ, ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಸೇರಿದಂತೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು ರಚಿಸಿದ ವಿನಿಯಮಗಳಲ್ಲಿ ನಿಯಮಿಸಿರುವಂಥ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡುವುದಕ್ಕೆ ನಿಕಟ ಪೂರ್ವದಲ್ಲಿ ಅವನು ಧಾರಣ ಮಾಡಿದ್ದಂಥ ಹುದ್ದೆಗೆ ಅನ್ವಯಿಸುತ್ತಿದ್ದಂಥ ನಿಬಂಧನೆಗಳಿಗಿಂತ ಮತ್ತು ಷರತ್ತುಗಳಿಗಿಂತ ಕಡಿಮೆ ಅನುಕೂಲಕರವಾದವುಗಳಾಗಿವೆಯೇ ಹೇಗೆ ಎಂಬ ಪ್ರಶ್ನೆ ಉದ್ಭವಿಸಿದರೆ, ಈ ವಿಷಯದಲ್ಲಿ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

9. **ಪ್ರಾಧಿಕಾರದ ಸಮಿತಿಗಳು.–** (1) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಅವಶ್ಯವೆನಿಸಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು.

(2) ಪ್ರಾಧಿಕಾರವು, ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ ಪ್ರಾಧಿಕಾರದ ಸದಸ್ಯರಲ್ಲದ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಿದ ಯಾವುದೇ ಸಮಿತಿಯ ಸಹ ಸದಸ್ಯರನ್ನಾಗಿ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಹಾಗೇ ಸಹ ಸದಸ್ಯರಾಗಿ ಆಯ್ಕೆಯಾದ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಸಮಿತಿಯ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(3) ಉಪ ಪ್ರಕರಣ (2)ರ ಮೇರೆಗೆ ಸಮಿತಿಯ ಸಹ ಸದಸ್ಯರಾಗಿ ಆಯ್ಕೆಗೊಂಡ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾದುದಕ್ಕಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**10. ಪ್ರಾಧಿಕಾರದ ಪ್ರಕಾರ್ಯಗಳು.–** (1) ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ, ಅನುಸೂಚಿತ ಉತ್ಪನ್ನಗಳ ರಫ್ತನ್ನು ಅಭಿವೃದ್ಧಿಗೊಳಿಸಲು ಮತ್ತು ಆ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲು ಸೂಕ್ತವೆಂದು ತಾನು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅದರಲ್ಲಿ ತಿಳಿಸಿರುವ ಕ್ರಮಗಳು,–

(ಎ) ಸಮೀಕ್ಷೆಗಳನ್ನು ಮತ್ತು ಕಾರ್ಯಸಾಧ್ಯತಾ ಅಧ್ಯಯನಗಳನ್ನು ಕೈಗೊಳ್ಳುವುದಕ್ಕಾಗಿ, ಜಂಟಿ ಉದ್ಯಮಗಳ ಮೂಲಕ ಈಕ್ವಿಟಿ ಬಂಡವಾಳದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಹಣಕಾಸು ನೆರವನ್ನು ಅಥವಾ ಇತರ ಬಗೆಯ ನೆರವನ್ನು ಒದಗಿಸುವ ಮೂಲಕ ಮತ್ತು ಇತರ ಪರಿಹಾರಗಳನ್ನು ಮತ್ತು ಸಬ್ಸಿಡಿ ಯೋಜನೆಗಳನ್ನು ಒದಗಿಸುವ ಮೂಲಕ, ರಫ್ತು ಮಾಡುವಂಥ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಕೈಗಾರಿಕೆಗಳ ಅಭಿವೃದ್ಧಿಗಾಗಿ;

(ಬಿ) ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಅನುಸೂಚಿತ ಉತ್ಪನ್ನಗಳ ರಫ್ತುದಾರರನ್ನಾಗಿ ವ್ಯಕ್ತಿಗಳನ್ನು ನೋಂದಾಯಿಸುವುದಕ್ಕಾಗಿ;

(ಸಿ) ರಫ್ತುಮಾಡುವ ಉದ್ದೇಶಗಳಿಗಾಗಿ ಅನುಸೂಚಿತ ಉತ್ಪನ್ನಗಳ ಗುಣಮಟ್ಟಗಳನ್ನು ಮತ್ತು ವಿಶಿಷ್ಟ ವಿವರಣೆಗಳನ್ನು ನಿಗದಿಪಡಿಸುವುದಕ್ಕಾಗಿ;

(ಡಿ) ಮಾಂಸವನ್ನು ಮತ್ತು ಮಾಂಸದ ಉತ್ಪನ್ನಗಳನ್ನು ಯಾವುದೇ ಕಸಾಯಿಖಾನೆಯಲ್ಲಿ, ಸಂಸ್ಕರಣಾ ಸ್ಥಾವರದಲ್ಲಿ, ದಾಸ್ತಾನು ಸ್ಥಳಗಳಲ್ಲಿ, ಸಾಗಣೆ ವಾಹನಗಳಲ್ಲಿ ಅಥವಾ ಯಾವ ಸ್ಥಳಗಳಲ್ಲಿ ಅಂಥ ಉತ್ಪನ್ನಗಳನ್ನು ಇಡಲಾಗಿದೆಯೋ ಅಥವಾ ಅಂಥ ಉತ್ಪನ್ನಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅವುಗಳ ಬಗ್ಗೆ ನಿಗಾ ಇಡಲಾಗಿದೆಯೋ ಆ ಇತರ ಸ್ಥಳಗಳಲ್ಲಿ ತಪಾಸಣೆ ಮಾಡುವುದಕ್ಕಾಗಿ;

(ಇ) ಅನುಸೂಚಿತ ಉತ್ಪನ್ನಗಳ ಪ್ಯಾಕೇಜಿಂಗ್‌ನ್ನು ಉತ್ತಮಪಡಿಸುವುದಕ್ಕಾಗಿ;

(ಎಫ್) ಭಾರತದ ಹೊರಗೆ ಅನುಸೂಚಿತ ಉತ್ಪನ್ನಗಳ ಮಾರುಕಟ್ಟೆಯನ್ನು ಸುಧಾರಣೆ ಮಾಡುವುದಕ್ಕಾಗಿ;

(ಜಿ) ರಫ್ತು ಆಧಾರಿತ ಉತ್ಪಾದನೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಅನುಸೂಚಿತ ಉತ್ಪನ್ನಗಳನ್ನು ವೃದ್ಧಿಸುವುದಕ್ಕಾಗಿ;

(ಹೆಚ್) ಅನುಸೂಚಿತ ಉತ್ಪನ್ನಗಳ ಉತ್ಪಾದನೆಯಲ್ಲಿ, ಸಂಸ್ಕರಣೆಯಲ್ಲಿ, ಪ್ಯಾಕೇಜಿಂಗ್‌ನಲ್ಲಿ, ಕ್ರಯವಿಕ್ರಯದಲ್ಲಿ ಅಥವಾ ರಫ್ತು ಮಾಡುವುದರಲ್ಲಿ ತೊಡಗಿರುವ ಕಾರ್ಖಾನೆಗಳ ಅಥವಾ ಕಾರ್ಯಸಂಸ್ಥೆಗಳ ಮಾಲೀಕರಿಂದ ಅಥವಾ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ

ನಿಯಮಿಸಬಹುದಾದಂಥ ಇತರ ವ್ಯಕ್ತಿಗಳಿಂದ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕಾಗಿ; ಮತ್ತು ಹಾಗೆ ಸಂಗ್ರಹಿಸಿದ ಅಂಕಿ ಅಂಶಗಳನ್ನು, ಅಥವಾ ಅವುಗಳ ಯಾವುದೇ ಭಾಗಗಳನ್ನು ಅಥವಾ ಅವುಗಳಿಂದ ತೆಗೆದುಕೊಂಡ ಉಧೃತ ಭಾಗಗಳನ್ನು ಪ್ರಕಟಿಸುವುದಕ್ಕಾಗಿ;

(ಐ) ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ವಿವಿಧ ಅಂಶಗಳ ಬಗ್ಗೆ ತರಬೇತಿ ನೀಡುವುದಕ್ಕಾಗಿ;

(ಜೆ) ನಿಯಮಿಸಬಹುದಾದಂಥ ಇತರ ವಿಷಯಗಳಿಗಾಗಿ

–ಅವಕಾಶ ಕಲ್ಪಿಸಬಹುದು.

**10ಎ. ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿದ ಪ್ರಕಾರ್ಯಗಳು, ಇತ್ಯಾದಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಬಾಧಕವಾಗದಂತೆ, ಭಾರತದಲ್ಲಿ ಅಥವಾ ಭಾರತದ ಹೊರಗೆ, ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಬೌದ್ಧಿಕ ಸ್ವತ್ತಿನ ಹಕ್ಕುಗಳ ನೋಂದಣಿಗಾಗಿ ಮತ್ತು ರಕ್ಷಣೆಗಾಗಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಕ್ರಮಗಳನ್ನು ಕೈಗೊಳ್ಳುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, "ಬೌದ್ಧಿಕ ಸ್ವತ್ತು" ಎಂದರೆ, ಅಮೂರ್ತ ಸ್ವತ್ತಿಗೆ ಎಂದರೆ, ವ್ಯಾಪಾರ ಚಿಹ್ನೆಗಳಿಗೆ, ವಿನ್ಯಾಸಗಳಿಗೆ, ಪೇಟೆಂಟುಗಳಿಗೆ, ಭೌಗೋಳಿಕ ಸಂಕೇತಗಳಿಗೆ ಅಥವಾ ಅದೇ ರೀತಿಯ ಯಾವುದೇ ಇತರ ಅಮೂರ್ತ ಸ್ವತ್ತಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಇರುವ ಹಕ್ಕು.

**11. ಪ್ರಾಧಿಕಾರವನ್ನು ರದ್ದುಪಡಿಸಲು ಅಧಿಕಾರ.–** (1) ಪ್ರಾಧಿಕಾರವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ, ತನಗೆ ವಹಿಸಿರುವ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥವಾಗಿದೆ ಎಂದು ಅಥವಾ ಆ ಕರ್ತವ್ಯದ ನಿರ್ವಹಣೆಯಲ್ಲಿ ಪದೇ ಪದೇ ತಪ್ಪು ಮಾಡಿದೆ ಎಂದು ಅಥವಾ ತನ್ನ ಅಧಿಕಾರಗಳನ್ನು ಮೀರಿ ನಡೆದುಕೊಂಡಿದೆ ಎಂದು ಅಥವಾ ಆ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡಿದೆ ಎಂದು ಅಥವಾ 20ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ಅಥವಾ ಸಾಕಷ್ಟು ಕಾರಣವಿಲ್ಲದೆ ತಪ್ಪಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಪಡಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಪ್ರಾಧಿಕಾರವನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಪ್ರಾಧಿಕಾರಕ್ಕೆ ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಯಾವುದಾದರೂ ವಿವರಣೆಯನ್ನು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಪ್ರಾಧಿಕಾರವನ್ನು ರದ್ದುಪಡಿಸಿ ಉಪಪ್ರಕರಣ (1)ರ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,–

(ಎ) ಪ್ರಾಧಿಕಾರದ ಎಲ್ಲ ಸದಸ್ಯರು, ಅವರ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಪ್ರಾಧಿಕಾರವನ್ನು ರದ್ದುಪಡಿಸಿದ ದಿನಾಂಕದಿಂದ ಅವರ ಸದಸ್ಯ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು, ಮತ್ತು ನಿರ್ವಹಿಸಬಹುದಾದಂಥ ಎಲ್ಲಾ ಕರ್ತವ್ಯಗಳನ್ನು, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತುಗಳು, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವಂಥ, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯು ಮುಕ್ತಾಯವಾದ ತರುವಾಯ, ಕೇಂದ್ರ ಸರ್ಕಾರವು,–

(ಎ) ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯನ್ನು ಮತ್ತಷ್ಟು ಅವಧಿಯವರೆಗೆ ವಿಸ್ತರಿಸುವುದು ಅವಶ್ಯವೆಂದು ಭಾವಿಸಿದರೆ ಕೇಂದ್ರ ಸರ್ಕಾರವು ಹಾಗೆ ಮಾಡಬಹುದು; ಅಥವಾ

(ಬಿ) 4ನೇ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಪ್ರಾಧಿಕಾರವನ್ನು ಪುನರ್ ರಚಿಸಬಹುದು.

## ಅಧ್ಯಾಯ III

### ನೋಂದಣಿ

**12. ರಫ್ತುಗಾರರ ನೋಂದಣಿ.–** (1) ಯಾವುದಾದರೂ ಒಂದು ಅಥವಾ ಹೆಚ್ಚು ಅನುಸೂಚಿತ ಉತ್ಪನ್ನಗಳನ್ನು ರಫ್ತು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ರಫ್ತು ಮಾಡುವುದನ್ನು ಅವನು ಪ್ರಾರಂಭಿಸುವ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವುದಕ್ಕೆ ಮೊದಲು ಅಥವಾ ಈ ಪ್ರಕರಣವು ಜಾರಿಗೆ ಬರುವ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾಗುವುದಕ್ಕೆ ಮೊದಲು, ಇವೆರಡರಲ್ಲಿ ಯಾವುದು ನಂತರವೋ ಆ ಕಾಲದೊಳಗೆ ಅನುಸೂಚಿತ ಉತ್ಪನ್ನದ ಅಥವಾ ಅನುಸೂಚಿತ ಉತ್ಪನ್ನಗಳ ರಫ್ತುಗಾರನೆಂಬುದಾಗಿ ನೋಂದಾಯಿಸಿಕೊಳ್ಳಲು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು :

ಪರಂತು, ಪ್ರಾಧಿಕಾರವು ಸಾಕಷ್ಟು ಕಾರಣಕ್ಕಾಗಿ ನೋಂದಣಿಗಾಗಿಯ ಕಾಲಮಿತಿಯನ್ನು ಅದು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ವಿಸ್ತರಿಸಬಹುದು.

(2) ಒಮ್ಮೆ ಮಾಡಿದ ನೋಂದಣಿಯು ಪ್ರಾಧಿಕಾರವು ಅದನ್ನು ರದ್ದುಪಡಿಸುವವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**13. ನೋಂದಣಿಗಾಗಿ, ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಅರ್ಜಿ, ಸಂದಾಯ ಮಾಡಬೇಕಾದ ಫೀಜು ಮತ್ತು ನೋಂದಣಿಗೆ ಸಂಬಂಧಿಸಿದ ಇತರ ವಿಷಯಗಳು.–** 12ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ಮತ್ತು ಅಂಥ ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ, ಅಂಥ ಅರ್ಜಿಗಳೊಂದಿಗೆ ಸಂದಾಯ ಮಾಡಬೇಕಾದ ಫೀಜು, ಅಂಥ ಅರ್ಜಿಗಳಲ್ಲಿ ಒಳಗೊಂಡಿರಬೇಕಾದ ವಿವರಗಳು, ನೋಂದಣಿಯನ್ನು ಮಂಜೂರು ಮಾಡುವಾಗ ಮತ್ತು ರದ್ದು ಮಾಡುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಪ್ರಾಧಿಕಾರವು ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**14. ರಫ್ತುಗಾರರು ಸಲ್ಲಿಸಬೇಕಾದ ವಿವರ ಪಟ್ಟಿಕೆಗಳು.–** (1) ಪ್ರಕರಣ 12ರ (1)ನೇ ಉಪ ಪ್ರಕರಣದಲ್ಲಿ ತಿಳಿಸಿರುವ ಪ್ರತಿಯೊಬ್ಬ ರಫ್ತುಗಾರನು, ನಿಯಮಿಸಬಹುದಾದಂಥ ವಿವರ ಪಟ್ಟಿಕೆಗಳನ್ನು, ನಿಯಮಿಸಿದ ಕಾಲದಲ್ಲಿ ಮತ್ತು ನಿಯಮಿಸಿದ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ರಫ್ತುಗಾರರು ಸಲ್ಲಿಸಿದ ಯಾವುದೇ ವಿವರಪಟ್ಟಿಕೆಗಳ ನಿಖರತೆಯನ್ನು ಪರಿಶೀಲಿಸಲು ಯಾವುದೇ ಕಾಲದಲ್ಲಿ ರಫ್ತುಗಾರನ ಯಾವುದೇ ಸಂಸ್ಕರಣಾ ಸ್ಥಾವರವನ್ನು ಅಥವಾ ಯಾವುದೇ ಇತರ ಕಾರ್ಯಸಂಸ್ಥೆಯನ್ನು ತಪಾಸಣೆ ಮಾಡುವ ಸಲುವಾಗಿ ಒಬ್ಬ ಸದಸ್ಯನಿಗೆ ಅಥವಾ ಅದರ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

## ಅಧ್ಯಾಯ IV

### ಹಣಕಾಸು, ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ

**15. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.–** ಕೇಂದ್ರ ಸರ್ಕಾರವು, ಈ ಸಂಬಂಧವಾಗಿ, ಸಂಸತ್ತು ಕಾನೂನಿನ ಮೂಲಕ ಕ್ರಮಬದ್ಧವಾಗಿ ಹಣವನ್ನು ಹಂಚಿಕೆ ಮಾಡಿದ ನಂತರ, ಈ ಅಧಿನಿಯಮದ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಹಣದ ಮೊತ್ತವನ್ನು ಅನುದಾನಗಳ ಅಥವಾ ಸಾಲಗಳ ರೂಪದಲ್ಲಿ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**16. ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿಯ ಸ್ಥಾಪನೆ.–** (1) ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಆ ನಿಧಿಗೆ,–

(ಎ) ಈ ಸಂಬಂಧವಾಗಿ ಸಂಸತ್ತು ಕಾನೂನಿನ ಮೂಲಕ ಕ್ರಮಬದ್ಧವಾಗಿ ಹಣವನ್ನು ಹಂಚಿಕೆ ಮಾಡಿದ ನಂತರ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಉಪಕರ ಅಧಿನಿಯಮ, 1985ರ 4ನೇ ಪ್ರಕರಣದ ಮೇರೆಗೆ ಜಮೆಯಾದ ಉಪಕರದ ಉತ್ಪತ್ತಿಯಿಂದ, ಆ ಉಪಕರದ ಸಂಗ್ರಹಣೆಗೆ ಆದ ವೆಚ್ಚಗಳನ್ನು ಮತ್ತು ಯಾವುದಾದರೂ ಹಣವನ್ನು ಮರುಸಂದಾಯ ಮಾಡಿದ್ದರೆ ಆ ಹಣವನ್ನು ಕಳೆದ ನಂತರ, ಕೇಂದ್ರ ಸರ್ಕಾರವು ನೀಡಬಹುದಾದ ಯಾವುದೇ ಹಣದ ಮೊತ್ತವನ್ನು;

(ಬಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನೋಂದಣಿಯ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ವಿಧಿಸಿದ ಮತ್ತು ಸಂಗ್ರಹಿಸಿದ ಎಲ್ಲಾ ಫೀಜುಗಳನ್ನು;

(ಸಿ) ಈ ಅಧಿನಿಯಮದ ಉದ್ದೇಶಗಳಿಗಾಗಿ 15ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೀಡಬಹುದಾದ ಯಾವುದೇ ಅನುದಾನಗಳನ್ನು ಅಥವಾ ಸಾಲಗಳ ಹಣವನ್ನು; ಮತ್ತು

(ಡಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ರಾಜ್ಯ ಸರ್ಕಾರವು, ಸ್ವಯಂ ಸೇವಾ ಸಂಸ್ಥೆಯು ಅಥವಾ ಇತರ ಸಂಸ್ಥೆಯು ನೀಡಬಹುದಾದ ಯಾವುದೇ ಅನುದಾನಗಳನ್ನು ಅಥವಾ ಸಾಲಗಳ ಹಣವನ್ನು

– ಜಮೆ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದ ಹೊರತು ಯಾವುದೇ ಅಂಥ ಅನುದಾನವನ್ನು, ಸಾಲಗಳ ಹಣವನ್ನು ಅಥವಾ ದೇಣಿಗೆಯನ್ನು ನಿಧಿಗೆ ಜಮೆ ಮಾಡತಕ್ಕದ್ದಲ್ಲ.

(2) ನಿಧಿಯನ್ನು,–

(ಎ) 10ನೇ ಪ್ರಕರಣದಲ್ಲಿ ತಿಳಿಸಿದ ಕ್ರಮಗಳಿಗೆ ಆದ ವೆಚ್ಚಗಳನ್ನು ಭರಿಸಲು;

(ಬಿ) ಪ್ರಾಧಿಕಾರದ, ಸಂದರ್ಭಾನುಸಾರ, ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳನ್ನು, ಭತ್ಯೆಗಳನ್ನು ಮತ್ತು ಇತರ ಸಂಭಾವನೆಗಳನ್ನು ಸಂದಾಯ ಮಾಡಲು;

(ಸಿ) ಪ್ರಾಧಿಕಾರದ ಇತರ ಆಡಳಿತ ವೆಚ್ಚಗಳನ್ನು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಇತರ ವೆಚ್ಚಗಳನ್ನು ಭರಿಸಲು; ಮತ್ತು

(ಡಿ) ಯಾವುದೇ ಸಾಲವನ್ನು ಮರುಸಂದಾಯ ಮಾಡಲು

– ಬಳಸಿಕೊಳ್ಳತಕ್ಕದ್ದು.

**17. ಸಾಲ ಪಡೆಯಲು ಪ್ರಾಧಿಕಾರಕ್ಕೆ ಇರುವ ಅಧಿಕಾರ.–** ಪ್ರಾಧಿಕಾರವು, ಈ ಸಂಬಂಧವಾಗಿ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿಯನ್ನು ಅಥವಾ ಯಾವುದೇ ಇತರ ಆಸ್ತಿಯನ್ನು ಭದ್ರತೆಯಾಗಿ ನೀಡಿ ಸಾಲ ಪಡೆಯಲು ಅಧಿಕಾರ ಹೊಂದಿರತಕ್ಕದ್ದು.

**18. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಪ್ರಾಧಿಕಾರವು ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಮಾಡಿದ ಯಾವುದೇ ವೆಚ್ಚವನ್ನು ಲೆಕ್ಕ ನಿಯಂತ್ರಕನಿಗೆ–ಹಾಗೂ–ಮಹಾಲೆಕ್ಕ ಪರಿಶೋಧಕನಿಗೆ ಪ್ರಾಧಿಕಾರವು ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡುವ ಸಂಬಂಧದಲ್ಲಿ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು, ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಸಾಮಾನ್ಯವಾಗಿ ಹೊಂದಿರುವಂಥವೇ ಹಕ್ಕುಗಳನ್ನು, ವಿಶೇಷ ಅಧಿಕಾರಗಳನ್ನು ಮತ್ತು ಅಧಿಕಾರಗಳನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಲೆಕ್ಕ ಪುಸ್ತಕಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೋರುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇರಿಸತಕ್ಕದ್ದು.

## ಅಧ್ಯಾಯ V

## ಕೇಂದ್ರ ಸರ್ಕಾರದಿಂದ ನಿಯಂತ್ರಣ

**19. ಅನುಸೂಚಿತ ಉತ್ಪನ್ನಗಳ ಆಮದನ್ನು ಮತ್ತು ರಫ್ತನ್ನು ನಿಷೇಧಿಸಲು ಅಥವಾ ನಿಯಂತ್ರಿಸಲು ಅಧಿಕಾರ.–** (1) ಕೇಂದ್ರ ಸಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅನುಸೂಚಿತ ಉತ್ಪನ್ನಗಳ ಆಮದನ್ನು ಅಥವಾ ರಫ್ತನ್ನು, ಸಾಮಾನ್ಯವಾಗಿ ಅಥವಾ ನಿರ್ದಿಷ್ಟಪಡಿಸಿದ ಪ್ರಕರಣಗಳ ವರ್ಗಗಳಿಗೆ ಸಂಬಂಧಿಸಿದಂತೆ, ನಿಷೇಧಿಸುವುದಕ್ಕಾಗಿ, ನಿರ್ಬಂಧಿಸುವುದಕ್ಕಾಗಿ ಅಥವಾ ಬೇರೆ ರೀತಿಯಲ್ಲಿ ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಆದೇಶವು ಯಾವ ಅನುಸೂಚಿತ ಉತ್ಪನ್ನಗಳಿಗೆ ಅನ್ವಯಿಸುವುದೋ ಆ ಎಲ್ಲ ಅನುಸೂಚಿತ ಉತ್ಪನ್ನಗಳನ್ನು ಸೀಮಾ ಸುಂಕ ಅಧಿನಿಯಮ, 1962ರ (1962ರ 52) 11ನೇ ಪ್ರಕರಣದ ಮೇರೆಗೆ ಯಾವ ಸರಕುಗಳ ರಫ್ತನ್ನು ನಿಷೇಧಿಸಲಾಗಿದೆಯೋ ಆ ಸರಕುಗಳೆಂದು ಭಾವಿಸತಕ್ಕದ್ದು, ಮತ್ತು ಆ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಪರಿಣಾಮ ಹೊಂದಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ ಅವನು, (2)ನೇ ಉಪಪ್ರಕರಣದ ಮೂಲಕ ಅನ್ವಯಿಸಲಾಗಿರುವಂತೆ, ಸೀಮಾ ಸುಂಕ ಅಧಿನಿಯಮ, 1962ರ (1962ರ 52) ಉಪಬಂಧಗಳ ಮೇರೆಗೆ ಅವನು ಯಾವ ಜಪ್ತಿಗೆ ಅಥವಾ ದಂಡನೆಗೆ ಬದ್ಧನಾಗುವನೋ ಆ ಯಾವುದೇ ಜಪ್ತಿಗೆ ಅಥವಾ ದಂಡನೆಗೆ ಬಾಧಕವಾಗದಂತೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**20. ಕೇಂದ್ರ ಸರ್ಕಾರದಿಂದ ನಿರ್ದೇಶನಗಳು.–** ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ನೀಡಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರವು ಪಾಲಿಸತಕ್ಕದ್ದು.

**21. ವಿವರ ಪಟ್ಟಿಕೆಗಳು ಮತ್ತು ವರದಿಗಳು.–** (1) ಪ್ರಾಧಿಕಾರವು, ಅನುಸೂಚಿತ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ರಫ್ತಿನ ಅಭಿವೃದ್ಧಿಗಾಗಿ ಉದ್ದೇಶಿಸಿರುವ ಅಥವಾ ಹಾಲಿ ಇರುವ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ, ವಿವರಪಟ್ಟಿಕೆಗಳನ್ನು ಮತ್ತು ವಿವರಣಾ ಪತ್ರಗಳನ್ನು ಮತ್ತು ವಿವರಣೆಗಳನ್ನು ನಿಯಮಿಸಬಹುದಾದಂಥ ಅಥವಾ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ, ಸಾಧ್ಯವಾದಷ್ಟು ಬೇಗನೆ, ಹಿಂದಿನ ಹಣಕಾಸು ವರ್ಷದಲ್ಲಿನ ಅದರ ಕಾರ್ಯ ಚಟುವಟಿಕೆಗಳ,

ಕಾರ್ಯನೀತಿಯ ಮತ್ತು ಕಾರ್ಯಕ್ರಮಗಳ ವಾಸ್ತವಿಕ ಮತ್ತು ಪೂರ್ಣ ವಿವರವನ್ನು ನೀಡುವ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ಸ್ವೀಕರಿಸಿದ ವರದಿಯ ಪ್ರತಿಯನ್ನು ಅದನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**22. ಸುಳ್ಳು ವರದಿಗಳನ್ನು ಸಲ್ಲಿಸಿದ್ದಕ್ಕೆ ದಂಡ.–** ಯಾವುದೇ ವಿವರ ಪಟ್ಟಿಕೆಯನ್ನು ಸಲ್ಲಿಸುವಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ವ್ಯಕ್ತಿಯನ್ನು, ಅಗತ್ಯಪಡಿಸಲಾಗಿದೆಯೋ, ಆ ಯಾರೇ ವ್ಯಕ್ತಿಯು, ಅಂಥ ವಿವರಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದರೆ ಅಥವಾ ಸುಳ್ಳಾಗಿರುವ ಮತ್ತು ಸುಳ್ಳು ಎಂದು ತನಗೆ ತಿಳಿದಿರುವ ಅಥವಾ ನಿಜವಾದುದೆಂದು ನಂಬಲಾಗದಂಥ ಯಾವುದೇ ವಿವರವನ್ನು ಒಳಗೊಂಡಿರುವ ವಿವರಪಟ್ಟಿಕೆಯನ್ನು ಸಲ್ಲಿಸಿದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

**23. ಪ್ರಾಧಿಕಾರದ ಸದಸ್ಯನು ಅಥವಾ ಅಧಿಕಾರಿಯು, ಕರ್ತವ್ಯ ನಿರ್ವಹಿಸುತ್ತಿರುವಾಗ ಅವನಿಗೆ ಅಡ್ಡಿಪಡಿಸಿದುದಕ್ಕಾಗಿ ಮತ್ತು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಲು ತಪ್ಪಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು,–

(ಎ) ಅಧ್ಯಕ್ಷನು ಲಿಖಿತದಲ್ಲಿ ಅಧಿಕೃತಗೊಳಿಸಿರುವ ಯಾರೇ ಸದಸ್ಯನು ಅಥವಾ ಕೇಂದ್ರ ಸರ್ಕಾರವು ಅಥವಾ ಪ್ರಾಧಿಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿರುವ ಪ್ರಾಧಿಕಾರದ ಯಾರೇ ಅಧಿಕಾರಿಯು ಅಥವಾ ಇತರ ನೌಕರನು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ, ಅಥವಾ ಅವನಿಗೆ ವಹಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವಾಗ ಅವನಿಗೆ ಅಡ್ಡಿ ಪಡಿಸಿದರೆ; ಅಥವಾ

(ಬಿ) ಯಾವುದೇ ಲೆಕ್ಕ ಪುಸ್ತಕದ ಅಥವಾ ಇತರ ದಾಖಲೆಯ ನಿಯಂತ್ರಣವನ್ನು ಅಥವಾ ಅಭಿರಕ್ಷೆಯನ್ನು ಹೊಂದಿದ್ದು, ಅಂಥ ಪುಸ್ತಕವನ್ನು ಅಥವಾ ದಾಖಲೆಯನ್ನು ಹಾಜರುಪಡಿಸುವಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದಾಗ, ಹಾಗೆ ಹಾಜರುಪಡಿಸಲು ತಪ್ಪಿದರೆ,

– ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**24. ಇತರ ದಂಡನೆಗಳು.–** ಯಾವ ಉಪಬಂಧಗಳ ಉಲ್ಲಂಘನೆಗಾಗಿ 19ನೇ, 22ನೇ ಮತ್ತು 23ನೇ ಪ್ರಕರಣಗಳಲ್ಲಿ ಶಿಕ್ಷೆಯನ್ನು ಗೊತ್ತುಪಡಿಸಲಾಗಿದೆಯೋ ಆ ಉಪಬಂಧಗಳನ್ನು ಹೊರತುಪಡಿಸಿ, ಈ ಅಧಿನಿಯಮದ, ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ಪ್ರಯತ್ನಿಸಿದರೆ ಅಥವಾ ಉಲ್ಲಂಘನೆಗೆ ದುಷ್ಪ್ರೇರಣೆ ನೀಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಅಂಥ ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆಯು ಯಾವ ಅವಧಿಯಲ್ಲಿ ಮುಂದುವರಿಯುತ್ತದೋ ಆ ಅವಧಿಯಲ್ಲಿ, ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

**25. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸಲು ಮತ್ತು ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಅವನು/ಅದು ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) “ಕಂಪನಿ” ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ “ನಿರ್ದೇಶಕ” ಎಂದರೆ ಫರ್ಮಿನ ಪಾಲುದಾರ.

**26. ನ್ಯಾಯಾಲಯದ ಅಧಿಕಾರ ವ್ಯಾಪ್ತಿ.–** ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**27. ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿ.–** ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಬಗ್ಗೆ ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಯಾವ ಪ್ರಾಸಿಕ್ಯೂಷನ್ನನ್ನು ಹೂಡತಕ್ಕದ್ದಲ್ಲ.

**28. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಪ್ರಾಧಿಕಾರದ ಅಥವಾ ಅದರಿಂದ ನೇಮಕಗೊಂಡ ಯಾವುದೇ ಸಮಿತಿಯ ಅಥವಾ ಆ ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಯಾರೇ ಸದಸ್ಯನ ಅಥವಾ ಕೇಂದ್ರ ಸರ್ಕಾರದ ಅಥವಾ ಆ ಪ್ರಾಧಿಕಾರದ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಪ್ರಾಧಿಕಾರದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**29. ಅಧಿಕಾರದ ಪ್ರತ್ಯಾಯೋಜನೆ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳ ಸಂಬಂಧದಲ್ಲಿ ಮತ್ತು ಯಾವುವಾದರು ಷರತ್ತುಗಳನ್ನು ನಿರ್ದಿಷ್ಟಪಡಿಸಿದ್ದರೆ ಆ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು (32ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವನ್ನು ಹೊರತುಪಡಿಸಿ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**30. ಈ ಅಧಿನಿಯಮದ ಜಾರಿಯನ್ನು ಅಮಾನತ್ತಿನಲ್ಲಿಡುವುದು.–** ಈ ಅಧಿನಿಯಮದ ಮೂಲಕ ವಿಧಿಸಿದ ನಿರ್ಬಂಧಗಳಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸುವುದನ್ನು ನಿಲ್ಲಿಸುವ ಅವಶ್ಯಕತೆಯನ್ನುಂಟು ಮಾಡಿರುವ ಸಂದರ್ಭ ಸನ್ನಿವೇಶಗಳು ಉಂಟಾಗಿವೆಯೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳ ಜಾರಿಯನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಅನಿರ್ದಿಷ್ಟ ಕಾಲದವರೆಗೆ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ,

ಅಮಾನತ್ತಿನಲ್ಲಿಡುವುದು ಅಥವಾ ಸಡಿಲಗೊಳಿಸುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರವು ಪರಿಗಣಿಸಿದರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ಈ ಅಧಿನಿಯಮದ ಯಾವುದೇ ಉಪಬಂಧಗಳ ಜಾರಿಯನ್ನು ಅನಿರ್ದಿಷ್ಟ ಕಾಲದವರೆಗೆ ಅಮಾನತ್ತಿನಲ್ಲಿಟ್ಟಿದ್ದರೆ ಅಥವಾ ಸಡಿಲಗೊಳಿಸಿದ್ದರೆ, ಹಾಗೆ ಅಮಾನತ್ತಿನಲ್ಲಿಟ್ಟಿರುವುದನ್ನು ಅಥವಾ ಸಡಿಲಗೊಳಿಸಿರುವುದನ್ನು, ಈ ಅಧಿನಿಯಮವು ಜಾರಿಯಲ್ಲಿರುವ ಯಾವುದೇ ಕಾಲದಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರದ್ದುಪಡಿಸಬಹುದು.

**31. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲದಿರುವುದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**32. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (5)ನೇ ಉಪಪ್ರಕಣದ ಮೇರೆಗೆ, (4)ನೇ ಪ್ರಕರಣದ (4)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಹೇಳಿರುವ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ ಪದಾವಧಿ, ಸದಸ್ಯರ ಸ್ಥಾನಗಳಲ್ಲಿ ತೆರವಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ, ಮತ್ತು ಸದಸ್ಯರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) 6ನೇ ಪ್ರಕರಣದ ಮೇರೆಗೆ ಅಧ್ಯಕ್ಷನು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಯಾವ ಅಧಿಕಾರಗಳನ್ನು ಚಲಾಯಿಸಬೇಕೋ ಮತ್ತು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಅಧಿಕಾರಿಗಳು ಮತ್ತು ಕರ್ತವ್ಯಗಳು;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕಣದ ಮೇರೆಗೆ ಪ್ರಾಧಿಕಾರದ ಕಾರ್ಯದರ್ಶಿಯು ಯಾವ ಅಧಿಕಾರಗಳನ್ನು ಚಲಾಯಿಸಬೇಕೋ ಮತ್ತು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಅಧಿಕಾರಗಳು ಮತ್ತು ಕರ್ತವ್ಯಗಳು;

(ಡಿ) ಯಾವ ನಿಯಂತ್ರಣಕ್ಕೆ ಮತ್ತು ನಿರ್ಬಂಧಗಳಿಗೊಳಪಟ್ಟು, 7ನೇ ಪ್ರಕರಣದ (3)ನೇ ಉಪಪ್ರಕಣದ ಮೇರೆಗೆ ಪ್ರಾಧಿಕಾರವು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬೇಕೋ ಅ ನಿಯಂತ್ರಣ ಮತ್ತು ನಿರ್ಬಂಧಗಳು;

(ಇ) ಸಂಸ್ಕರಿತ ಆಹಾರಗಳ ರಫ್ತು ಸಂವರ್ಧನಾ ಪರಿಷತ್ತಿನ ಅಧಿಕಾರಿಗಳು ಮತ್ತು ನೌಕರರು 8ನೇ ಪ್ರಕರಣದ (3)ನೇ ಉಪಪ್ರಕಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೋ ಆ ನಮೂನೆ ಮತ್ತು ಆ ಕಾಲ;

(ಎಫ್) 10ನೇ ಪ್ರಕರಣದ (2)ನೇ ಉಪಪ್ರಕಣದ (ಬಿ) ಖಂಡದ ಮೇರೆಗೆ ಅನುಸೂಚಿತ ಉತ್ಪನ್ನಗಳ ರಫ್ತುಗಾರರ ನೋಂದಣಿಗಾಗಿ ಫೀಜಿನ ಸಂದಾಯ;

(ಜಿ) 10ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅಂಕಿ ಅಂಶಗಳನ್ನು ಮಾಲೀಕರುಗಳಲ್ಲದ ಯಾವ ವ್ಯಕ್ತಿಗಳಿಂದ ಸಂಗ್ರಹಿಸಬೇಕೋ ಆ ವ್ಯಕ್ತಿಗಳು;

(ಹೆಚ್) 10ನೇ ಪ್ರಕರಣದ (2)ನೇ ಉಪಪ್ರಕರಣದ (ಜೆ) ಖಂಡದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಯಾವ ಹೆಚ್ಚುವರಿ ವಿಷಯಗಳ ಸಂಬಂಧದಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೋ ಆ ಹೆಚ್ಚುವರಿ ವಿಷಯಗಳು;

(ಎಚ್ಎ) 10ಎ ಪ್ರಕರಣದ ಮೇರೆಗೆ ಬೌದ್ಧಿಕ ಸ್ವತ್ತಿನ ಹಕ್ಕುಗಳ ನೋಂದಣಿಗೆ ಮತ್ತು ರಕ್ಷಣೆಗೆ ಕ್ರಮಗಳು;

(ಐ) 13ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಮತ್ತು ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಸಲ್ಲಿಸುವ ಅರ್ಜಿಯ ನಮೂನೆ ಮತ್ತು ಸಲ್ಲಿಸುವ ರೀತಿ, ಅಂಥ ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ನೋಂದಣಿಯ ಮಂಜೂರಾತಿಗೆ ಮತ್ತು ರದ್ದುಪಡಿಸುವುದಕ್ಕೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅಂಥ ನೋಂದಣಿಗೆ ಅನ್ವಯವಾಗುವ ಷರತ್ತುಗಳು;

(ಜೆ) ಯಾವ ಕಾಲದಲ್ಲಿ ಮತ್ತು ಯಾವ ರೀತಿಯಲ್ಲಿ ರಫ್ತುಗಾರನು 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿವರಪಟ್ಟಿಕೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕೋ ಆ ಕಾಲ ಮತ್ತು ಆ ರೀತಿ;

(ಕೆ) ಯಾವ ನಮೂನೆಯಲ್ಲಿ ಪ್ರಾಧಿಕಾರದ ಲೆಕ್ಕಪತ್ರಗಳನ್ನು 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಇಡಬೇಕೋ ಆ ನಮೂನೆ;

(ಎಲ್) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಕಾಲದಲ್ಲಿ ಪ್ರಾಧಿಕಾರವು ವಿವರಪಟ್ಟಿಕೆಗಳನ್ನು ಮತ್ತು ವಿವರಣಾ ಪಟ್ಟಿಗಳನ್ನು ಕೇಂದ್ರ ಸರ್ಕಾರಕ್ಕೆ 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಆ ಕಾಲ;

(ಎಂ) ಯಾವ ನಮೂನೆಯಲ್ಲಿ ಮತ್ತು ಯಾವ ದಿನಾಂಕಕ್ಕೆ ಮುಂಚೆ ಪ್ರಾಧಿಕಾರವು ತನ್ನ ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ವರದಿಯನ್ನು 21ನೇ ಪ್ರಕರಣದ (2)ನೇ ಉಪಪಪ್ರಕಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ನಮೂನೆ ಮತ್ತು ಆ ದಿನಾಂಕ;

(ಎನ್) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

**33. ವಿನಿಯಮಗಳನ್ನು ರಚಿಸಲು ಅಧಿಕಾರ.–** (1) ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಯಾವ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೋ ಮತ್ತು ವಿಹಿತವೋ ಆ ಎಲ್ಲ ವಿಷಯಗಳಿಗೆ ಉಪಬಂಧ ಕಲ್ಪಿಸಲು ಈ ಅಧಿನಿಯದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿರದಂಥ ವಿನಿಯಮಗಳನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲಕವಾಗದಂತೆ ಅಂಥ ವಿನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಎಂದರೆ:–

(ಎ) 4ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ, ಯಾವ ಕಾಲಗಳಲ್ಲಿ ಮತ್ತು ಯಾವ ಸ್ಥಳಗಳಲ್ಲಿ ಪ್ರಾಧಿಕಾರದ ಅಥವಾ ಅದರ ಯಾವುದೇ ಸಮಿತಿಯ ಸಭೆಗಳು ನಡೆಯಬೇಕೋ ಆ ಕಾಲದ ಬಗ್ಗೆ ಮತ್ತು ಆ ಸ್ಥಳಗಳ ಬಗ್ಗೆ ಮತ್ತು ಆ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ಮತ್ತು ಸಭೆಯ ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆಯ ಬಗ್ಗೆ;

(ಬಿ) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಯಾರೇ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕದ ವಿಧಾನ, ಸೇವೆಯ ಷರತ್ತುಗಳು ಮತ್ತು ವೇತನ ಶ್ರೇಣಿಗಳ ಮತ್ತು ಭತ್ಯೆಗಳ ಬಗ್ಗೆ;

(ಸಿ) ಸಾಮಾನ್ಯವಾಗಿ ಪ್ರಾಧಿಕಾರದ ವ್ಯವಹಾರಗಳ ದಕ್ಷ ನಿರ್ವಹಣೆಯ ಬಗ್ಗೆ

–ಉಪಬಂಧ ಕಲ್ಪಿಸಬಹುದು.

(3) ಕೇಂದ್ರ ಸರ್ಕಾರವು, ತಾನು ಮಂಜೂರಾತಿ ನೀಡಿದ ಯಾವುದೇ ವಿನಿಯಮವನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮಾರ್ಪಾಟುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಹಾಗೆ ಮಾರ್ಪಾಟು ಮಾಡಿದ ಅಥವಾ ರದ್ದುಮಾಡಿದ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಮಾಡಿರುವುದು ಅಥವಾ ರದ್ದು ಮಾಡಿರುವುದು, ಅದನ್ನು ಮಾರ್ಪಾಟು ಮಾಡುವುದಕ್ಕೂ ಅಥವಾ ರದ್ದುಪಡಿಸಿಕೊಳ್ಳುವುದಕ್ಕೂ ಮೊದಲೇ ಆ ವಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**34. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಸಂದರ್ಭಾನುಸಾರ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಸಂದರ್ಭಾನುಸಾರ ಆ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆ ವಿನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ಆ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**35. ಸಿಂಧುತ್ವ.–** 2008ರ ಅಕ್ಟೋಬರ್ ಹದಿಮೂರನೆಯ ದಿನದಂದು ಅಥವಾ ಆ ತರುವಾಯ ಪ್ರಾರಂಭವಾಗುವ ಮತ್ತು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭದ ದಿನಾಂಕಕ್ಕೆ ನಿಕಟ ಪೂರ್ವದ ದಿನಾಂಕದಂದು ಕೊನೆಗೊಳ್ಳುವ ಅವಧಿಯಲ್ಲಿ ಮಾಡಿದ ಅಥವಾ ಮಾಡದೇ ಬಿಟ್ಟುಬಿಟ್ಟಿರುವ ಎಲ್ಲಾ ಕಾರ್ಯಗಳನ್ನು ಮತ್ತು ಕೈಗೊಂಡ ಅಥವಾ ಕೈಗೊಂಡಿರದ ಎಲ್ಲಾ ಕೆಲಸಗಳನ್ನು ಅಥವಾ ಕ್ರಮಗಳನ್ನು ಅಂಥ ಅವಧಿಯಲ್ಲಿ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳು ಜಾರಿಯಲ್ಲಿದ್ದಿದ್ದರೆ, ಹೇಗೆ ಆ ಕಾರ್ಯವನ್ನು ಮಾಡಿದ ಅಥವಾ ಮಾಡದೆ ಬಿಟ್ಟುಬಿಟ್ಟ ಕಾರ್ಯವೆಂಬುದಾಗಿ ಅಥವಾ ಅಂಥ ಕೆಲಸಗಳನ್ನು ಅಥವಾ ಕ್ರಮಗಳನ್ನು ಕೈಗೊಂಡಿದ್ದ ಅಥವಾ ಕೈಗೊಂಡಿರದಿದ್ದ ಕೆಲಸಗಳೆಂಬುದಾಗಿ ಅಥವಾ ಕ್ರಮಗಳೆಂಬುದಾಗಿ ಭಾವಿಸಲಾಗುತ್ತಿತ್ತೋ ಹಾಗೆಯೇ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮದ, 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳಿಗೆ ಅಂಥ ಕಾರ್ಯಗಳು, ಕೆಲಸಗಳು ಅಥವಾ ಕ್ರಮಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಅಥವಾ ಮಾಡದೇ ಬಿಟ್ಟುಬಿಟ್ಟ ಕಾರ್ಯಗಳೆಂದು ಮತ್ತು ಕೈಗೊಂಡಿದ್ದ ಅಥವಾ ಕೈಗೊಂಡಿರದಿದ್ದ ಕೆಲಸಗಳೆಂದು ಅಥವಾ ಕ್ರಮಗಳೆಂದು ಭಾವಿಸತಕ್ಕದ್ದು.

## ಮೊದಲನೆ ಅನುಸೂಚಿ

**(2 (ಐ) ಪ್ರಕರಣವನ್ನು ನೋಡಿ)**

1. ಹಣ್ಣುಗಳು, ತರಕಾರಿಗಳು ಮತ್ತು ಅವುಗಳ ಉತ್ಪನ್ನಗಳು.
2. ಮಾಂಸ ಮತ್ತು ಮಾಂಸದ ಉತ್ಪನ್ನಗಳು.

3. ಕೋಳಿ ಸಾಕಣೆ ಮತ್ತು ಕೋಳಿ ಸಾಕಣೆಯ ಉತ್ಪನ್ನಗಳು.
4. ಹೈನು ಉತ್ಪನ್ನಗಳು.
5. ಮಿಠಾಯಿಗಳು, ಬಿಸ್ಕಿತ್ತುಗಳು ಮತ್ತು ಬೇಕರಿ ಉತ್ಪನ್ನಗಳು.
6. ಜೇನುತುಪ್ಪ, ಬೆಲ್ಲ ಮತ್ತು ಸಕ್ಕರೆ ಉತ್ಪನ್ನಗಳು.
7. ಕೋಕೋ ಮತ್ತು ಅದರ ಉತ್ಪನ್ನಗಳು, ಎಲ್ಲಾ ಬಗೆಯ ಚಾಕಲೇಟ್‌ಗಳು.
8. ಆಲ್ಕೋಹಾಲ್ ಪಾನೀಯಗಳು ಮತ್ತು ಆಲ್ಕೋಹಾಲ್ ರಹಿತ ಪಾನೀಯಗಳು.
9. ಧಾನ್ಯಗಳ ಉತ್ಪನ್ನಗಳು.
10. ಗೋಡಂಬಿ, ಕಡಲೆಕಾಯಿ, ಕಡಲೆ ಬೀಜ ಮತ್ತು ವಾಲ್‌ನಟ್‌ಗಳು.
11. ಉಪ್ಪಿನ ಕಾಯಿಗಳು, ಚಟ್ನಿಗಳು ಮತ್ತು ಹಪ್ಪಳಗಳು.
12. ಗೋರ್ ಗಂ.
13. ಪುಷ್ಪಕೃಷಿ ಮತ್ತು ಪುಷ್ಪಕೃಷಿಯ ಉತ್ಪನ್ನಗಳು.
14. ಮೂಲಿಕೆಗಳು ಮತ್ತು ಔಷಧೀಯ ಸಸ್ಯಗಳು.

**ಎರಡನೆಯ ಅನುಸೂಚಿ**

**(2 (ಜೆ) ಪ್ರಕರಣವನ್ನು ನೋಡಿ)**

ಬಾಸ್ಮತಿ ಅಕ್ಕಿ.

*******

## ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986

## (1986 ರ ಅಧಿನಿಯಮ ಸಂಖ್ಯೆ 61)

[23ನೇ ಡಿಸೆಂಬರ್, 1986.]

ಎಲ್ಲ ತರಹದ ವೃತ್ತಿಗಳಲ್ಲಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದನ್ನು ನಿಷೇಧಿಸುವ ಮತ್ತು ಅಪಾಯಕಾರಿ ವೃತ್ತಿಗಳಲ್ಲಿ ಹಾಗೂ ಅಂಥ ಪ್ರಕ್ರಿಯೆಗಳಲ್ಲಿ ತರುಣರನ್ನು ದುಡಿಮೆಗೆ ತೊಡಗಿಸುವುದನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಭಾಗ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಭಾಗ III ನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಭಾಗ III– ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಮತ್ತು ಬೇರೆ ಬೇರೆ ವರ್ಗಗಳ ಕಾರ್ಯಸಂಸ್ಥೆಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(i) "ತರುಣ" ಎಂದರೆ, ಹದಿನಾಲ್ಕು ವರ್ಷ ವಯಸ್ಸು ತುಂಬಿರುವ ಆದರೆ ಹದಿನೆಂಟು ವರ್ಷ ತುಂಬಿರದ ಒಬ್ಬ ವ್ಯಕ್ತಿ;

(iಎ) ಕೇಂದ್ರ ಸರ್ಕಾರ ಅಥವಾ ರೈಲ್ವೆ ಆಡಳಿತ ಅಥವಾ ದೊಡ್ಡ ಬಂದರು ಅಥವಾ ಗಣಿ ಅಥವಾ ತೈಲ ಕ್ಷೇತ್ರದ ನಿಯಂತ್ರಣದಲ್ಲಿರುವ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ "ಸಮುಚಿತ ಸರ್ಕಾರ" ಎಂದರೆ, ಕೇಂದ್ರ ಸರ್ಕಾರ ಮತ್ತು ಇತರ ಎಲ್ಲಾ ಸಂದರ್ಭಗಳಲ್ಲಿ ರಾಜ್ಯ ಸರ್ಕಾರ;

(ii) "ಮಕ್ಕಳು" ಎಂದರೆ, ಹದಿನಾಲ್ಕು ವರ್ಷ ವಯಸ್ಸು ತುಂಬಿಲ್ಲದಿರುವ ಅಥವಾ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 (2009 ರ 35)ರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಯಸ್ಸಿನ, –ಇವುಗಳಲ್ಲಿ ಯಾವುದು ಹೆಚ್ಚೋ ಆ ವಯಸ್ಸಿನ ವ್ಯಕ್ತಿ;

(iii) "ದಿವಸ" ಎಂದರೆ, ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿ;

(iv) "ಕಾರ್ಯಸಂಸ್ಥೆ" ಎಂಬುದು ಅಂಗಡಿ, ವಾಣಿಜ್ಯ ಕಾರ್ಯಸಂಸ್ಥೆ, ಕಾರ್ಯಾಗಾರ, ಫಾರಂ, ವಸತಿಯ ಹೋಟೆಲ್, ಉಪಹಾರ ಗೃಹ, ಖಾನಾವಳಿ, ರಂಗಮಂಟಪ ಅಥವಾ ಸಾರ್ವಜನಿಕ ವಿನೋದದ ಅಥವಾ ಮನೋರಂಜನೆಯ ಇತರ ಸ್ಥಳವನ್ನು ಒಳಗೊಳ್ಳುತ್ತದೆ;

(v) ಅಧಿಭೋಗದಾರನಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ, ಒಬ್ಬ ವ್ಯಕ್ತಿ, ಸಂದರ್ಭಾನುಸಾರ ಅಂಥ ವ್ಯಕ್ತಿಯ ಹೆಂಡತಿ ಅಥವಾ ಗಂಡ ಮತ್ತು ಅವರ ಮಕ್ಕಳು ಹಾಗೂ ಅಂಥ ವ್ಯಕ್ತಿಯ ಸಹೋದರ ಅಥವಾ ಸಹೋದರಿ;

(vi) ಒಂದು ಕಾರ್ಯಸಂಸ್ಥೆ ಅಥವಾ ಕಾರ್ಯಾಗಾರಕ್ಕೆ ಸಂಬಂಧಪಟ್ಟಂತೆ "ಅಧಿಭೋಗದಾರ" ಎಂದರೆ, ಆ ಕಾರ್ಯಸಂಸ್ಥೆ ಅಥವಾ ಕಾರ್ಯಾಗಾರದ ವ್ಯವಹಾರಗಳ ಮೇಲೆ ಅಚಿತಿಮ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿ;

(vii) "ಬಂದರು ಪ್ರಾಧಿಕಾರ" ಎಂದರೆ, ಬಂದರಿನ ಆಡಳಿತ ನಡೆಸುವ ಯಾವುದೇ ಪ್ರಾಧಿಕಾರ;

(viii) "ನಿಯಮಿಸಲಾದುದು" ಎಂದರೆ, 18ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ix) "ವಾರ" ಎಂದರೆ, ಶನಿವಾರದ ರಾತ್ರಿಯಂದು ಅಥವಾ ಪರಿಶೀಲಕನು ಒಂದು ನಿರ್ದಿಷ್ಟ ಪ್ರದೇಶಕ್ಕಾಗಿ ಬರಹದಲ್ಲಿ ಅನುಮೋದಿಸಬಹುದಾದಂಥ ಇತರ ರಾತ್ರಿಯಂದು ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಏಳು ದಿವಸಗಳ ಅವಧಿ;

(x) "ಕಾರ್ಯಾಗಾರ" ಎಂದರೆ, ಯಾವ ಆವರಣದಲ್ಲಿ ಯಾವುದೇ ಕೈಗಾರಿಕಾ ಸಂಸ್ಕರಣ ಕಾರ್ಯವನ್ನು ನಡೆಸಲಾಗುತ್ತಿದೆಯೋ ಆ ಯಾವುದೇ ಆವರಣ (ಅದರ ಎಲ್ಲೆ ಕಟ್ಟುಗಳನ್ನು ಒಳಗೊಂಡು), ಆದರೆ ಅದು ಯಾವ ಆವರಣಕ್ಕೆ ತತ್ಕಾಲದಲ್ಲಿ ಕಾರ್ಖಾನೆಗಳ ಅಧಿನಿಯಮ, 1948 (1948 ರ 63)ರ 67ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವುದೋ ಆ ಯಾವುದೇ ಆವರಣವನ್ನು ಒಳಗೊಳ್ಳುವುದಿಲ್ಲ.

## ಭಾಗ II

## ಕೆಲವು ವೃತ್ತಿಗಳು ಮತ್ತು ಸಂಸ್ಕರಣ ಕಾರ್ಯಗಳಲ್ಲಿ ಮಕ್ಕಳ ನಿಯೋಜನೆಯ ನಿಷೇಧ

**3. ಯಾವುದೇ ವೃತ್ತಿಯಲ್ಲಿ ಮತ್ತು ಪ್ರಕ್ರಿಯೆಯಲ್ಲಿ ಮಕ್ಕಳ ನಿಯೋಜನೆಯ ನಿಷೇಧ.**– (1) ಯಾರೇ ಮಕ್ಕಳನ್ನು ಯಾವುದೇ ವೃತ್ತಿಯಲ್ಲಿ ಅಥವಾ ಪ್ರಕ್ರಿಯೆಯಲ್ಲಿ ನಿಯೋಜಿಸತಕ್ಕದ್ದಲ್ಲ ಅಥವಾ ಅಂಥ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ.

(2) ಯಾರೇ ಮಕ್ಕಳು,–

(ಎ) ತಮ್ಮ ಶಾಲಾವಧಿಯ ನಂತರ ಅಥವಾ ರಜಾಕಾಲದಲ್ಲಿ ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಿರುವ ಯಾವುವೇ ಅಪಾಯಕಾರಿ ವೃತ್ತಿಗಳನ್ನು ಅಥವಾ ಅಂಥ ಪ್ರಕ್ರಿಯೆಗಳನ್ನು ಹೊರತುಪಡಿಸಿ, ತಮ್ಮ ಕುಟುಂಬದ ಕೆಲಸಕ್ಕೆ ಅಥವಾ ಕುಟುಂಬದ ಉದ್ದಿಮೆಗೆ ನೆರವು ನೀಡಿದರೆ;

(ಬಿ) ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಸುರಕ್ಷಾ ಕ್ರಮಗಳಿಗೆ ಒಳಪಟ್ಟು, ಸರ್ಕಸ್‌ನ್ನು ಹೊರತುಪಡಿಸಿ, ಜಾಹೀರಾತು, ಚಲನಚಿತ್ರಗಳು, ದೂರದರ್ಶನ ಧಾರಾವಾಹಿಗಳು ಅಥವಾ ಅಂಥ ಇತರ ಯಾವುದೇ ಮನರಂಜನೆ ಅಥವಾ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡಂತೆ, ಶ್ರವ್ಯ–ದೃಶ್ಯ ಮನರಂಜನಾ ಉದ್ಯಮ ಕ್ಷೇತ್ರದಲ್ಲಿ ಕಲಾವಿದನಾ(ಳಾ)ಗಿ ಕೆಲಸ ನಿರ್ವಹಿಸಿದರೆ

– ಅಂಥ ಮಕ್ಕಳಿಗೆ ಉಪ–ಪ್ರಕರಣ (1)ರಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ:

ಪರಂತು, ಈ ಖಂಡದ ಮೇರೆಗಿನ ಅಂಥ ಯಾವುದೇ ಕೆಲಸವು, ಮಕ್ಕಳ ಶಾಲಾ ಶಿಕ್ಷಣದ ಕಲಿಕೆಯ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಮಕ್ಕಳಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ, ಮಕ್ಕಳ ತಾಯಿ, ತಂದೆ, ಸಹೋದರ, ಸಹೋದರಿ ಮತ್ತು ತಂದೆಯ ಸಹೋದರಿ ಹಾಗೂ ಸಹೋದರ ಮತ್ತು ತಾಯಿಯ ಸಹೋದರಿ ಹಾಗೂ ಸಹೋದರ;

(ಬಿ) "ಕುಟುಂಬದ ಉದ್ದಿಮೆ" ಎಂದರೆ, ಕುಟುಂಬದ ಸದಸ್ಯರು ಇತರ ವ್ಯಕ್ತಿಗಳನ್ನು ತೊಡಗಿಸಿಕೊಂಡು ನಿರ್ವಹಿಸುವ ಆ ಯಾವುದೇ ಕೆಲಸ, ವೃತ್ತಿ, ತಯಾರಿಕೆ ಅಥವಾ ವ್ಯವಹಾರ;

(ಸಿ) "ಕಲಾವಿದ" ಎಂದರೆ, ನಟನಾಗಿ, ಹಾಡುಗಾರನಾಗಿ, ಕ್ರೀಡಾಪಟುವಾಗಿ ಅಥವಾ 2ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಿಸಲಾದ, ಮನರಂಜನೆ ಅಥವಾ ಕ್ರೀಡೆಯಂಥ ಇತರ ಚಟುವಟಿಕೆಗಳನ್ನು ಹವ್ಯಾಸವಾಗಿ ಅಥವಾ ವೃತ್ತಿಯಾಗಿ ತನ್ನನ್ನು ನೇರವಾಗಿ ತೊಡಗಿಸಿಕೊಂಡು, ಪ್ರಸ್ತುತಪಡಿಸುವ ಅಥವಾ ಅಭ್ಯಾಸ ಮಾಡುವ ಮಕ್ಕಳು.

**3ಎ. ಕೆಲವು ಅಪಾಯಕಾರಿ ವೃತ್ತಿಗಳಲ್ಲಿ ಮತ್ತು ಅಂಥ ಪ್ರಕ್ರಿಯೆಗಳಲ್ಲಿ ತರುಣರ ನಿಯೋಜನೆಗೆ ನಿಷೇಧ.–** ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಿರುವ ಯಾವುವೇ ಅಪಾಯಕಾರಿ ವೃತ್ತಿಗಳಲ್ಲಿ ಅಥವಾ ಅಂಥ ಪ್ರಕ್ರಿಯೆಗಳಲ್ಲಿ ಯಾರೇ ತರುಣರನ್ನು ನಿಯೋಜಿಸತಕ್ಕದ್ದಲ್ಲ ಅಥವಾ ಅಂಥ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ತರುಣರು ಅಪಾಯಕಾರಿಯಲ್ಲದ ಯಾವ ಸ್ವರೂಪದ ಕೆಲಸವನ್ನು ಮಾಡಲು ಅನುಮತಿಸಬಹುದಾಗಿದೆಯೋ ಆ ಕೆಲಸದ ಸ್ವರೂಪವನ್ನು ನಿರ್ದಿಷ್ಟಪಡಿಸಬಹುದು.

**4. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯನ್ನು ತಿದ್ದುಪಡಿ ಮಾಡುವ ಉದ್ದೇಶದ ಬಗ್ಗೆ ಮೂರು ತಿಂಗಳುಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ತರುವಾಯ ಅಂಥದೇ ಅಧಿಸೂಚನೆಯ ಮೂಲಕ ಯಾವುದೇ ಅಪಾಯಕಾರಿ ವೃತ್ತಿಯನ್ನು ಅಥವಾ ಅಂಥ ಪ್ರಕ್ರಿಯೆಯನ್ನು ಅನುಸೂಚಿಗೆ ಸೇರಿಸಬಹುದು ಅಥವಾ ಅದನ್ನು ಅದರಿಂದ ಬಿಟ್ಟುಬಿಡಬಹುದು ಮತ್ತು ಆ ತರುವಾಯ ಆ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**5. ತಾಂತ್ರಿಕ ಸಲಹಾ ಸಮಿತಿ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಗೆ ವೃತ್ತಿಗಳು ಮತ್ತು ಸಂಸ್ಕರಣ ಕಾರ್ಯಗಳನ್ನು ಸೇರಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಲು ತಾಂತ್ರಿಕ ಸಲಹಾ ಸಮಿತಿ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸಮಿತಿ ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ಸಲಹಾ ಸಮಿತಿಯನ್ನು ರಚಿಸಬಹುದು.

(2) ಸಮಿತಿಯು, ಅಧ್ಯಕ್ಷನನ್ನು ಮತ್ತು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಂಥ ಹತ್ತಕ್ಕಿಂತ ಹೆಚ್ಚಿಲ್ಲದಷ್ಟು ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಸಮಿತಿಯು, ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ ಆಗಿಂದಾಗ್ಗೆ ಸಭೆ ಸೇರಿಸತಕ್ಕದ್ದು ಮತ್ತು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಸಮಿತಿಯು ಉಪಸಮಿತಿಗಳನ್ನು ರಚಿಸುವುದು ಅವಶ್ಯವೆಂದು ಭಾವಿಸಿದರೆ, ಒಂದು ಅಥವಾ ಅದಕ್ಕಿಂತ ಹೆಚ್ಚಿನ ಉಪಸಮಿತಿಗಳನ್ನು ಅದು ರಚಿಸಬಹುದು ಮತ್ತು ಸಾಮಾನ್ಯವಾಗಿಯೇ ಆಗಲಿ ಅಥವಾ ಯಾವುದೇ ನಿರ್ದಿಷ್ಟ ವಿಷಯದ ಪರ್ಯಾಲೋಚನೆಗಾಗಿಯೇ ಆಗಲಿ ಯಾವುದೇ ಅಂಥ ಉಪಸಮಿತಿಗೆ ಸಮಿತಿಯ ಸದಸ್ಯನಲ್ಲದೆ ಇರುವ ಯಾವುದೇ ವ್ಯಕ್ತಿಯನ್ನು ನೇಮಕ ಮಾಡಬಹುದು.

(5) ಸಮಿತಿಯ ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ, ಅವರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಯಾವುವಾದರೂ ಇದ್ದರೆ, ಅವುಗಳು ಮತ್ತು ಯಾವ ಷರತ್ತುಗಳಿಗೊಳಪಟ್ಟು ಆ ಸಮಿತಿಯು ಯಾವುದೇ ಅದರ ಉಪಸಮಿತಿಯ ಸದಸ್ಯನೆಂದು ಸಮಿತಿಯ ಸದಸ್ಯನಾಗಿಲ್ಲದಿರುವ ಯಾರೇ ವ್ಯಕ್ತಿಯನ್ನು ಆ ಸಮಿತಿಯು ನೇಮಕ ಮಾಡಬಹುದೋ ಆ ಷರತ್ತುಗಳು ಮತ್ತು ಪರಿಬಂಧಗಳು.

## ಭಾಗ III

### ತರುಣರ ಕೆಲಸದ ಷರತ್ತುಗಳ ವಿನಿಯಮನ

**6. ಈ ಭಾಗದ ಅನ್ವಯ.–** ಈ ಭಾಗದ ಉಪಬಂಧಗಳು, ಯಾವ ಕಾರ್ಯಸಂಸ್ಥೆಯಲ್ಲಿ 3ಎ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ವೃತ್ತಿಗಳು ಅಥವಾ ಸಂಸ್ಕರಣ ಕಾರ್ಯಗಳನ್ನು ನಡೆಸುತ್ತಿಲ್ಲವೋ ಆ ಕಾರ್ಯಸಂಸ್ಥೆ ಅಥವಾ ಸಂಸ್ಕರಣ ಕಾರ್ಯಗಳನ್ನು ನಡೆಸುತ್ತಿಲ್ಲವೋ ಆ ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕೆ ಅನ್ವಯವಾಗತಕ್ಕದ್ದು.

**7. ಕೆಲಸದ ವೇಳೆಗಳು ಮತ್ತು ಅವಧಿ.–** (1) ಯಾರೇ ತರುಣನನ್ನು, ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕಾಗಿ ನಿಯಮಿಸಬಹುದಾದಂಥ ಗಂಟೆಗಳನ್ನು ಮೀರಿ, ಯಾವುದೇ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

(2) ಪ್ರತಿಯೊಂದು ದಿವಸದ ಕೆಲಸದ ಅವಧಿಯನ್ನು, ಯಾವುದೇ ಅವಧಿಯು ಮೂರು ಗಂಟೆಗಳನ್ನು ಮೀರದ ಹಾಗೆ ನಿಗದಿಪಡಿಸತಕ್ಕದ್ದು ಮತ್ತು ಯಾರೇ ತರುಣನು ಕನಿಷ್ಠ ಪಕ್ಷ ಒಂದು ಗಂಟೆಯವರೆಗೆ ವಿಶ್ರಾಂತಿಗಾಗಿ ಬಿಡುವು ಹೊಂದಿದ್ದ ಹೊರತು ಮೂರು ಗಂಟೆಗಳಿಗಿಂತ ಹೆಚ್ಚಿಗೆಯಾಗಿ ಕೆಲಸ ಮಾಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ತರುಣನ ವಿಶ್ರಾಂತಿಗಾಗಿ ಬಿಡುವು ಒಳಗೊಂಡು, ಯಾವುದೇ ದಿವಸದಂದು ಆ ತರುಣನು ಕೆಲಸಕ್ಕಾಗಿ ಕಾಯುವಲ್ಲಿ ಕಳೆದ ಕಾಲವನ್ನು ಒಳಗೊಂಡು ತರುಣನ ಕೆಲಸದ ಅವಧಿಯು ಆರು ಗಂಟೆಗಳಿಗಿಂತ ಹೆಚ್ಚಿಗೆಯಾಗದ ಹಾಗೆ ಅದನ್ನು ವ್ಯವಸ್ಥೆ ಮಾಡತಕ್ಕದ್ದು.

(4) ಯಾರೇ ತರುಣನನ್ನು ಸಾಯಂಕಾಲ 7 ಗಂಟೆಯಿಂದ ಬೆಳಿಗ್ಗೆ 8 ಗಂಟೆಯ ನಡುವೆ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

(5) ಓವರ್ ಟೈಂ ಕೆಲಸ ಮಾಡಲು ಯಾರೇ ತರುಣನನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿ ನೀಡತಕ್ಕದ್ದಲ್ಲ.

(6) ಯಾರೇ ತರುಣನನ್ನು, ಯಾವ ದಿವಸದಂದು ಅವನು ಈಗಾಗಲೇ ಒಂದು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವನೋ ಆ ಯಾವುದೇ ದಿವಸದಂದು ಯಾವುದೇ ಇನ್ನೊಂದು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿಸತಕ್ಕದ್ದಲ್ಲ.

**8. ವಾರದ ರಜಾ ದಿವಸಗಳು.–** ಒಂದು ಕಾರ್ಯಸಂಸ್ಥೆಯಲ್ಲಿ ನಿಯೋಜಿತವಾಗಿರುವ ಪ್ರತಿಯೊಬ್ಬ ತರುಣನಿಗೆ ಪ್ರತಿಯೊಂದು ವಾರದಲ್ಲಿ ಒಂದು ಇಡೀ ದಿವಸದ ರಜೆಯನ್ನು ಕೊಡತಕ್ಕದ್ದು; ಆ ದಿವಸವನ್ನು, ಅಧಿಭೋಗದಾರನು ಆ ಕಾರ್ಯಸಂಸ್ಥೆಯಲ್ಲಿ ಎದ್ದುಕಾಣುವ ಸ್ಥಳದಲ್ಲಿ, ಖಾಯಂ ಆಗಿ ಪ್ರದರ್ಶಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ದಿವಸವನ್ನು ಅಧಿಭೋಗದಾರನು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚಿಗೆಯಾಗಿ ಬದಲಾಯಿಸತಕ್ಕದ್ದಲ್ಲ.

**9. ಪರಿಶೀಲಕನಿಗೆ ನೋಟೀಸು.–** (1) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವ ಕಾರ್ಯಸಂಸ್ಥೆಯಲ್ಲಿ ಆ ತರುಣನನ್ನು ನಿಯೋಜಿಸಕೊಳ್ಳಲಾಗಿತ್ತೋ ಅಥವಾ ಕೆಲಸ ಮಾಡಲು ಅನುಮತಿಸಲಾಗಿತ್ತೋ ಆ ಕಾರ್ಯಸಂಸ್ಥೆಗೆ ಸಂಬಂಧಪಟ್ಟ ಪ್ರತಿಯೊಬ್ಬ ಅಧಿಭೋಗದಾರನು, ಅಂಥ ಪ್ರಾರಂಭದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಆ ಕಾರ್ಯಸಂಸ್ಥೆಯು ಇರುವ ಸ್ಥಳೀಯ ಪರಿಮಿತಿಗಳೊಳಗಿನ ಪರಿಶೀಲಕನಿಗೆ ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಕೆಳಕಂಡ ವಿವರಗಳನ್ನೊಳಗೊಂಡ ಬರಹದಲ್ಲಿನ ನೋಟೀಸನ್ನು ಕಳುಹಿಸತಕ್ಕದ್ದು, ಎಂದರೆ:–

(ಎ) ಆ ಕಾರ್ಯಸಂಸ್ಥೆಯ ಹೆಸರು ಮತ್ತು ಅದು ಇರುವ ಸ್ಥಳ;

(ಬಿ) ಆ ಕಾರ್ಯಸಂಸ್ಥೆಯ ವಾಸ್ತವ ವ್ಯವಸ್ಥಾಪನೆಯನ್ನು ಹೊಂದಿರುವ ವ್ಯಕ್ತಿಯ ಹೆಸರು;

(ಸಿ) ಆ ಕಾರ್ಯಸಂಸ್ಥೆಗೆ ಸಂಬಂಧಪಟ್ಟ ಪತ್ರ ವ್ಯವಹಾರಗಳನ್ನು ಕಳುಹಿಸಬೇಕಾಗಿರುವಂಥ ವಿಳಾಸ; ಮತ್ತು

(ಡಿ) ಆ ಕಾರ್ಯಸಂಸ್ಥೆಯಲ್ಲಿ ನಡೆಸಲಾಗುತ್ತಿರುವ ವೃತ್ತಿ ಅಥವಾ ಸಂಸ್ಕರಣ ಕಾರ್ಯದ ಸ್ವರೂಪ.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ ಯಾರೇ ತರುಣನನ್ನು ನಿಯೋಜಿಸಿಕೊಳ್ಳುವ ಅಥವಾ ಕೆಲಸ ಮಾಡಲು ಅನುಮತಿಸುವ ಪ್ರತಿಯೊಬ್ಬ ಅಧಿಭೋಗದಾರನು ಅಂಥ ನಿಯೋಜನೆಯ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಯಾರ ಸ್ಥಳೀಯ ಪರಿಮಿತಿಗಳೊಳಗೆ ಆ ಕಾರ್ಯಸಂಸ್ಥೆಯು ಇರುವುದೋ ಆ ಸ್ಥಳೀಯ ಪರಿಮಿತಿಗಳೊಳಗೆ ಪರಿಶೀಲಕನಿಗೆ ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ, (1)ನೇ ಉಪಪ್ರಕರಣದಲ್ಲಿ ನಮೂದಿಸಲಾಗಿರುವ ವಿವರಗಳನ್ನೊಳಗೊಂಡಿರುವ ಬರಹದಲ್ಲಿನ ನೋಟೀಸನ್ನು ಕಳುಹಿಸತಕ್ಕದ್ದು.

**ವಿವರಣೆ.–** ಉಪಪ್ರಕರಣ (1) ಮತ್ತು (2)ರ ಉದ್ದೇಶಗಳಿಗಾಗಿ, ಒಂದು ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಪ್ರಾರಂಭದ ದಿನಾಂಕ ಎಂದರೆ, ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಅಧಿನಿಯಮವನ್ನು ಜಾರಿಗೆ ತರುವ ದಿನಾಂಕ.

(3) ಪ್ರಕರಣ 7, 8 ಮತ್ತು 9ರಲ್ಲಿ ಇರುವುದು ಯಾವುದೂ, ಯಾವ ಕಾರ್ಯಸಂಸ್ಥೆಯಲ್ಲಿ ಅಧಿಭೋಗದಾರನು ತನ್ನ ಕುಟುಂಬದ ನೆರವಿನೊಂದಿಗೆ ಯಾವುದೇ ಸಂಸ್ಕರಣ ಕಾರ್ಯವನ್ನು ನಡೆಸುತ್ತಿರುವನೋ ಆ ಯಾವುದೇ ಕಾರ್ಯಸಂಸ್ಥೆಗೆ ಅಥವಾ ಸರ್ಕಾರವು ಸ್ಥಾಪಿಸಿದ ಅಥವಾ ಅದರಿಂದ ನೆರವನ್ನು ಪಡೆಯುತ್ತಿರುವ ಅಥವಾ ಮನ್ನಣೆಯನ್ನು ಪಡೆದಿರುವ ಯಾವುದೇ ಕಾರ್ಯಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

**10. ವಯಸ್ಸಿನ ಬಗ್ಗೆ ವಿವಾದಗಳು.–** ಒಂದು ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರುವ ಅಥವಾ ಕೆಲಸ ಮಾಡಲು ಅನುಮತಿಸಲಾಗಿರುವ ಯಾರೇ ತರುಣನ ವಯಸ್ಸಿನ ಬಗ್ಗೆ ಪರಿಶೀಲಕ ಮತ್ತು ಅಧಿಭೋಗದಾರನ ನಡುವೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ತರುಣನ ವಯಸ್ಸಿನ ಬಗ್ಗೆ ನಿಯಮಿಸಿದ ವೈದ್ಯಾಧಿಕಾರಿಯು ಕೊಟ್ಟ ಪ್ರಮಾಣಪತ್ರವು ಇಲ್ಲದೆ ಇರುವಲ್ಲಿ ಪರಿಶೀಲಕನು ಆ ಪ್ರಶ್ನೆಯನ್ನು ನಿಯಮಿಸಿದ ವೈದ್ಯಾಧಿಕಾರಿಗೆ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು.

**11. ರಿಜಿಸ್ಟರನ್ನು ಇಟ್ಟುಕೊಂಡು ಬರುವುದು.–** ಪ್ರತಿಯೊಬ್ಬ ಅಧಿಭೋಗದಾರನು, ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಅಥವಾ ಕೆಲಸ ಮಾಡಲು ಅನುಮತಿಸಲಾದ ತರುಣನಿಗೆ ಸಂಬಂಧಿಸಿದಂತೆ ಕೆಲಸದ ವೇಳೆಗಳಲ್ಲಿ ಅಥವಾ ಯಾವುದೇ ಅಂಥ ಕಾರ್ಯಸಂಸ್ಥೆಯಲ್ಲಿ ಕೆಲಸವು ನಡೆಯುತ್ತಿರುವ ಎಲ್ಲಾ ಕಾಲಗಳಲ್ಲಿ ಪರಿಶೀಲಕನಿಂದ ಪರಿಶೀಲನೆಗಾಗಿ–

(ಎ) ಹಾಗೆ ನಿಯೋಜನೆಗೊಂಡ ಅಥವಾ ಕೆಲಸ ಮಾಡಲು ಅನುಮತಿಸಲಾದ ಪ್ರತಿಯೊಬ್ಬ ತರುಣನ ಹೆಸರು ಮತ್ತು ಜನ್ಮ ದಿನಾಂಕ;

(ಬಿ) ಯಾವುದೇ ಅಂಥ ತರುಣನ ಕೆಲಸದ ವೇಳೆಗಳು ಮತ್ತು ಅವಧಿಗಳು ಮತ್ತು ಅವನು ಹಕ್ಕುಳ್ಳವನಾಗಿರುವಂಥ ವಿಶ್ರಾಂತಿಯ ಮಧ್ಯಂತರಗಳು;

(ಸಿ) ಯಾವುದೇ ಅಂಥ ತರುಣನ ಕೆಲಸದ ಸ್ವರೂಪ; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು

–ಇವುಗಳನ್ನು ತೋರಿಸುವ, ಲಭ್ಯವಾಗಿರಬೇಕಾದ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು.

**12. 3ಎ ಮತ್ತು 14ನೇ ಪ್ರಕರಣದ ಸಾರಾಂಶವನ್ನೊಳಗೊಂಡ ನೋಟೀಸನ್ನು ಪ್ರದರ್ಶಿಸುವುದು.–** ಪ್ರತಿಯೊಂದು ರೈಲ್ವೆ ಆಡಳಿತ, ಪ್ರತಿಯೊಂದು ಬಂದರು ಪ್ರಾಧಿಕಾರ ಮತ್ತು ಪ್ರತಿಯೊಬ್ಬ ಅಧಿಭೋಗದಾರನು 3ಎ ಮತ್ತು 14ನೇ ಪ್ರಕರಣಗಳ ಸಾರಾಂಶವನ್ನೊಳಗೊಂಡ ಸ್ಥಳೀಯ ಭಾಷೆಯ ಮತ್ತು ಇಂಗ್ಲೀಷ್ ಭಾಷೆಯಲ್ಲಿನ ನೋಟೀಸನ್ನು ಪ್ರದರ್ಶಿಸುವಂತೆ ಮಾಡತಕ್ಕದ್ದು.

**13. ಆರೋಗ್ಯ ಮತ್ತು ಸುರಕ್ಷೆ.–** (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗದಲ್ಲಿ ನಿಯೋಜಿತರಾದ ಅಥವಾ ಕೆಲಸ ಮಾಡಲು ಅನುಮತಿಸಲಾದ ತರುಣನ ಆರೋಗ್ಯ ಮತ್ತು ಸುರಕ್ಷೆಗಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸದರಿ ನಿಯಮಗಳು ಈ ಕೆಳಕಂಡ ಎಲ್ಲಾ ವಿಷಯಗಳ ಬಗ್ಗೆ ಅಥವಾ ಯಾವುದೇ ವಿಷಯ ಬಗ್ಗೆ ಉಪಬಂಧಿಸಬಹುದು;

(ಎ) ಕೆಲಸದ ಸ್ಥಳದಲ್ಲಿನ ಸ್ವಚ್ಛತೆ ಮತ್ತು ಉಪದ್ರವದಿಂದ ಅದು ಮುಕ್ತವಾಗಿರುವುದು;

(ಬಿ) ನಿರುಪಯುಕ್ತ ಪದಾರ್ಥಗಳ ಮತ್ತು ಹೊರ ಹರಿಯುವಿಕೆಗಳನ್ನು ವಿಲೆ ಮಾಡುವುದು;

(ಸಿ) ವಾಯು ಸಂಚಾರ ಮತ್ತು ಉಷ್ಣಾಂಶ;

(ಡಿ) ಧೂಳು ಮತ್ತು ಹೊಗೆ;

(ಇ) ಕೃತಕ ಆರ್ದ್ರೀಕರಣ;

(ಎಫ್) ದೀಪದ ವ್ಯವಸ್ಥೆ;

(ಜಿ) ಕುಡಿಯುವ ವ್ಯವಸ್ಥೆ;

(ಹೆಚ್) ಕಕ್ಕಸು ಮತ್ತು ಮೂತ್ರಿಗಳು;

(ಐ) ಪೀಕದಾನಿ;

(ಜೆ) ಯಂತ್ರ ಸಾಮಗ್ರಿಗೆ ಕಟಕಟೆ ಹಾಕುವುದು;

(ಕೆ) ಚಾಲನೆಯಲ್ಲಿರುವ ಯಂತ್ರ ಸಾಮಗ್ರಿಯಲ್ಲಿ ಅಥವಾ ಅದರ ಹತ್ತಿರದ ಕೆಲಸ;

(ಎಲ್) ಅಪಾಯಕಾರಿ ಯಂತ್ರ ಸಾಮಗ್ರಿಗಳ ಬಳಿ ತರುಣರ ನಿಯೋಜನೆ;

(ಎಮ್) ಅಪಾಯಕಾರಿ ಯಂತ್ರ ಸಾಮಗ್ರಿಗಳ ಬಳಿ ತರುಣರ ನಿಯೋಜನೆಗೆ ಸಂಬಂಧಪಟ್ಟಂತೆ ಅನುದೇಶಗಳು, ತರಬೇತಿ ಮತ್ತು ಮೇಲ್ವಿಚಾರಣೆ;

(ಎನ್) ವಿದ್ಯುತ್ತನ್ನು ನಿಲ್ಲಿಸುವುದಕ್ಕಾಗಿ ಸಾಧನ;

(ಒ) ಸ್ವಯಂಚಾಲಿತ ಯಂತ್ರ ಸಾಮಗ್ರಿಗಳು;

(ಪಿ) ಹೊಸ ಯಂತ್ರ ಸಾಮಗ್ರಿಗಳ ಸರಿಪಡಿಸುವಿಕೆ;

(ಕ್ಯೂ) ಮಹಡಿ, ಮೆಟ್ಟಿಲುಗಳು ಮತ್ತು ಪ್ರವೇಶಾವಕಾಶ ಸಾಧನಗಳು;

(ಆರ್) ಗುಂಡಿಗಳು, ಸಂಪುಗಳು, ನೆಲಗಟ್ಟುಗಳಲ್ಲಿ ಕಿಂಡಿಗಳು, ಇತ್ಯಾದಿ;

(ಎಸ್) ಮಿತಿಮೀರಿದ ತೂಕಗಳು;

(ಟಿ) ಕಣ್ಣುಗಳ ಸಂರಕ್ಷಣೆ;

(ಯು) ಸ್ಫೋಟಕ ಅಥವಾ ದಹ್ಯ ಧೂಳು, ಅನಿಲ ಇತ್ಯಾದಿ;

(ವಿ) ಬೆಂಕಿಯ ಸಂದರ್ಭದಲ್ಲಿ ಮುನ್ನೆಚ್ಚರಿಕೆ;

(ಡಬ್ಲ್ಯೂ) ಕಟ್ಟಡಗಳ ನಿರ್ವಹಣೆ; ಮತ್ತು

(ಎಕ್ಸ್) ಕಟ್ಟಡಗಳ ಮತ್ತು ಯಂತ್ರ ಸಾಮಗ್ರಿಯ ಸುರಕ್ಷೆ.

## ಭಾಗ IV

### ಸಂಕೀರ್ಣ

**14. ದಂಡಗಳು.–** (1) ಪ್ರಕರಣ 3ರ ಉಪಬಂಧಗಳನ್ನು ಉಲ್ಲಂಘಿಸಿ, ಯಾರೇ ಮಕ್ಕಳನ್ನು ಯಾವುದೇ ಕೆಲಸಕ್ಕೆ ನಿಯೋಜಿಸುವ ಅಥವಾ ಕೆಲಸ ಮಾಡಲು ಯಾರೇ ಮಕ್ಕಳಿಗೆ ಅನುಮತಿಸುವ ಯಾರೇ ಆಗಲಿ, ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂಥ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ ದಂಡನೀಯರಾಗತಕ್ಕದ್ದು:

ಪರಂತು, ಅಂಥ ಮಕ್ಕಳ ತಂದೆ–ತಾಯಿಗಳು ಅಥವಾ ಪಾಲಕರು, 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ವಾಣಿಜ್ಯ ಉದ್ದೇಶಗಳಿಗಾಗಿ, ಅವರು ಅಂಥ ಮಕ್ಕಳಿಗೆ ಕೆಲಸ ಮಾಡಲು ಅನುಮತಿ ನೀಡಿದ ಹೊರತು ದಂಡನೀಯನಾಗತಕ್ಕದ್ದಲ್ಲ.

(1ಎ) 3ಎ ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸಿ, ಕೆಲಸ ಮಾಡಲು ಯಾರೇ ತರುಣರನ್ನು ನಿಯೋಜಿಸುವ ಅಥವಾ ಅಂಥ ಕೆಲಸಕ್ಕೆ ಯಾರೇ ತರುಣರಿಗೆ ಅನುಮತಿ ನೀಡುವ ಯಾರೇ ಆಗಲಿ, ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂಥ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವರೆಡರದಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಅಂಥ ತರುಣರ ತಂದೆ–ತಾಯಿಗಳು ಅಥವಾ ಪಾಲಕರು, 3ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಅಂಥ ತರುಣರಿಗೆ ಕೆಲಸ ಮಾಡಲು ಅನುಮತಿ ನೀಡಿದ್ದ ಹೊರತು ದಂಡನೀಯರಾಗತಕ್ಕದ್ದಲ್ಲ.

(1ಬಿ) ಉಪ–ಪ್ರಕರಣ(1) ಮತ್ತು (1ಎ)ಗಳಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣ ಅಥವಾ 3ಎ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾರೇ ಮಕ್ಕಳ ಅಥವಾ ಯಾರೇ ತರುಣರ ತಂದೆ–ತಾಯಿಗಳು ಅಥವಾ ಪಾಲಕರು ಮಾಡುವ ಮೊದಲ ಸಲದ ಅಪರಾಧದ ಸಂದರ್ಭದಲ್ಲಿ ದಂಡನೆಗೆ ಗುರಿಯಾಗತಕ್ಕದ್ದಲ್ಲ.

(2) ಪ್ರಕರಣ 3 ಅಥವಾ ಪ್ರಕರಣ 3ಎ ಮೇರೆಗೆ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ಆಗಲಿ, ತದನಂತರವೂ ಅಂಥದೇ ಅಪರಾಧವನ್ನು ಮಾಡಿದರೆ, ಒಂದು ವರ್ಷಕ್ಕೆ ಕಡಿಮೆಯಿಲ್ಲದಂಥ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

(2ಎ) ಉಪಪ್ರಕರಣ 2ರಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣದ ಅಥವಾ 3ಎ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣೀತನಾಗಿರುವ ತಂದೆ–ತಾಯಿ ಅಥವಾ ಪಾಲಕನು, ತದನಂತರವೂ ಅಂಥದೇ ಅಪರಾಧವನ್ನು ಮಾಡಿದರೆ, ಅವನು(ಳು) ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ****** (ಬಿಟ್ಟುಬಿಡಲಾಗಿದೆ)

(ಡಿ) ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲು ತಪ್ಪುವ ಅಥವಾ ಅವುಗಳನ್ನು ಉಲ್ಲಂಘಿಸುವ

–ಯಾರೇ ಆಗಲಿ ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**14ಎ. ಅಪರಾಧಗಳು ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥವಾಗಿರತಕ್ಕದ್ದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಏನೇ ಒಳಗೊಂಡಿದ್ದರೂ, ನಿಯೋಜಕನು ಎಸಗಿದ ಮತ್ತು 3ನೇ ಪ್ರಕರಣದ ಅಥವಾ 3ಎ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧವು ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥದ್ದಾಗಿರತಕ್ಕದ್ದು.

**14ಬಿ. ಮಕ್ಕಳು ಮತ್ತು ತರುಣರ ದುಡಿಮೆ ಪುನರ್ವಸತಿ ನಿಧಿ.–** (1) ಸಮುಚಿತ ಸರ್ಕಾರವು, ಪ್ರತಿಯೊಂದು ಜಿಲ್ಲೆಯಲ್ಲಿ ಅಥವಾ ಎರಡು ಅಥವಾ ಹೆಚ್ಚು ಜಿಲ್ಲೆಗಳಿಗೆ ಮಕ್ಕಳು ಮತ್ತು ತರುಣರ ದುಡಿಮೆ ಪುನರ್ ವ್ಯವಸ್ಥೆ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು. ಆ ನಿಧಿಗೆ ಅಂತಹ ಜಿಲ್ಲೆಯ ಅಥವಾ ಜಿಲ್ಲೆಗಳ ಅಧಿಕಾರವ್ಯಾಪ್ತಿಯಲ್ಲಿ ಬರುವ ಮಕ್ಕಳ ಮತ್ತು ತರುಣರ ನಿಯೋಜಕನಿಂದ ವಸೂಲು ಮಾಡಿದ ಜುಲ್ಮಾನೆಯ ಮೊಬಲಗನ್ನು ಜಮೆ ಮಾಡತಕ್ಕದ್ದು.

(2) ಸಮುಚಿತ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಯಾವ ಮಕ್ಕಳು ಅಥವಾ ತರುಣರಿಗಾಗಿ ಖಾತೆಗೆ ಜುಲ್ಮಾನೆ ಮೊಬಲಗನ್ನು ಜಮೆ ಮಾಡಲಾಯಿತೋ, ಆ ಪ್ರತಿಯೊಬ್ಬರಿಗಾಗಿ ನಿಧಿಗೆ ಹದಿನೈದು ಸಾವಿರ ರೂಪಾಯಿಗಳ ಮೊಬಲಗನ್ನು ಜಮೆ ಮಾಡತಕ್ಕದ್ದು.

(3) ಉಪಪ್ರಕರಣಗಳು (1) ಮತ್ತು (2)ರ ಮೇರೆಗೆ ನಿಧಿಗೆ ಜಮೆ ಮಾಡಲಾದ ಮೊಬಲಗನ್ನು, ಸಮುಚಿತ ಸರ್ಕಾರವು, ನಿರ್ಧರಿಸಬಹುದಾದಂಥ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು ಅಥವಾ ಅದನ್ನು ಅಂಥ ರೀತಿಯಲ್ಲಿ ಹೂಡತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ, ಠೇವಣಿ ಇಡಲಾದ ಅಥವಾ ಸಂದರ್ಭಾನುಸಾರ ತೊಡಗಿಸಲಾದ ಹಣದ ಮೇಲೆ ಪ್ರಾಪ್ತವಾಗುವ ಬಡ್ಡಿ ಮೊಬಲಗನ್ನು, ಅಂಥ ಮೊಬಲಗು ಯಾವ ಹೆಸರಿನಲ್ಲಿ ಜಮೆಯಾಗಿದೆಯೋ ಆ ಮಕ್ಕಳಿಗೆ ಅಥವಾ ತರುಣರಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

**ವಿವರಣೆ.–** ಸಮುಚಿತ ಸರ್ಕಾರದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರ ಎಂಬುದರಲ್ಲಿ, ಸಂವಿಧಾನದ ಅನುಚ್ಛೇದ 239ಎ ಮೇರೆಗೆ, ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಲೆಫ್ಟಿನೆಂಟ್ ಗವರ್ನರ್ ಒಳಗೊಂಡಿರತಕ್ಕದ್ದು.

**14ಸಿ. ರಕ್ಷಿಸಿದ ಮಕ್ಕಳಿಗೆ ಅಥವಾ ತರುಣರಿಗೆ ಪುನರ್ ವ್ಯವಸ್ಥೆ.–** ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಕೆಲಸಕ್ಕೆ ನಿಯೋಜನೆಗೊಂಡಿದ್ದ ಮತ್ತು ಅಂಥ ಕೆಲಸದಿಂದ ರಕ್ಷಿಸಿದ ಮಕ್ಕಳಿಗೆ ಅಥವಾ ತರುಣರಿಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗೆ ಅನುಸಾರವಾಗಿ ಪುನರ್ ವ್ಯವಸ್ಥೆ ಕಲ್ಪಿಸತಕ್ಕದ್ದು.

**14ಡಿ. ಅಪರಾಧಗಳ ರಾಜಿ ಮೇಲೆ ವಿಲೆ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಜಿಲ್ಲಾ ಮ್ಯಾಜಿಸ್ಟ್ರೇಟನು, ಆಪಾದಿತ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ, ಆತನು ಮೊದಲ ಬಾರಿಗೆ ಎಸಗಿದ ಯಾವುದೇ ಅಪರಾಧವನ್ನು ಅಥವಾ ತಂದೆ–ತಾಯಿಯು ಅಥವಾ ಪಾಲಕನಾಗಿರುವ ಆಪಾದಿತ ವ್ಯಕ್ತಿಯು ಎಸಗಿದ ಯಾವುದೇ ಅಪರಾಧವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಮೊಬಲಗನ್ನು ಸಮುಚಿತ ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ, 14ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜಿಯ ಮೇಲೆ ವಿಲೆ ಮಾಡಬಹುದು.

(2) ಆಪಾದಿತನು ಅಪರಾಧದ ರಾಜಿಗಾಗಿ ಅಂಥ ಮೊಬಲಗನ್ನು ಸಂದಾಯ ಮಾಡಲು ವಿಫಲನಾದರೆ, ಆಗ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಂಥ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದು.

(3) ಯಾವುದೇ ಪ್ರಾಸಿಕ್ಯೂಷನ್ ಹೂಡುವ ಮುನ್ನ, ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಿದ್ದರೆ, ಅಂಥ ಅಪರಾಧಕ್ಕೆ ಸಂಬಂಧಪಟ್ಟಂತೆ ಆ ಅಪರಾಧಿಯ ವಿರುದ್ಧ ಅಂಥ ಅಪರಾಧದ ಬಗ್ಗೆ ಯಾವುದೇ ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

(4) ಯಾವುದೇ ಪ್ರಾಸಿಕ್ಯೂಷನ್ ಹೂಡಿದ ತರುವಾಯ, ಯಾವುದೇ ಅಪರಾಧ ರಾಜಿಯಲ್ಲಿ ಕೊನೆಗೊಂಡಿದ್ದರೆ, ಅಂಥ ರಾಜಿಯನ್ನು, ಪ್ರಾಸಿಕ್ಯೂಷನ್ ವ್ಯವಹರಣೆಯು ಇತ್ಯರ್ಥದಲ್ಲಿರುವ ನ್ಯಾಯಾಲಯದ ಗಮನಕ್ಕೆ ಲಿಖಿತದಲ್ಲಿ ತರತಕ್ಕದ್ದು ಮತ್ತು ನ್ಯಾಯಾಲಯವು ರಾಜಿಗೆ ಅನುಮತಿಕೊಟ್ಟ ಮೇಲೆ, ಯಾವ ಅಪರಾಧಿಯು ರಾಜಿ ಮಾಡಿಕೊಂಡಿರುವನೋ ಆ ವ್ಯಕ್ತಿಯನ್ನು ವಿಮೋಚನೆಗೊಳಿಸತಕ್ಕದ್ದು.

**15. ದಂಡಗಳಿಗೆ ಸಂಬಂಧಪಟ್ಟಂತೆ ಮಾರ್ಪಾಟು ಮಾಡಿದ ಕೆಲವು ಕಾನೂನುಗಳ ಅನ್ವಯ.–** (1) 2ನೇ ಉಪಪ್ರಕರಣದಲ್ಲಿ ನಮೂದಿಸಲಾದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನೆಂದು ಮತ್ತು ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ 14ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಉಪಬಂಧಿಸಿರುವ ದಂಡಗಳಿಗೆ ಗುರಿಯಾಗತಕ್ಕದ್ದೇ ವಿನಃ ಮತ್ತು ಆ ಉಪಬಂಧಗಳು ಅಡಕವಾಗಿರುವ ಯಾವುವೇ ಅಧಿನಿಯಮಗಳ ಮೇರೆಗೆ ಅಲ್ಲ.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ಉಪಬಂಧಗಳು, ಕೆಳಗೆ ನಮೂದು ಮಾಡಿರುವ ಉಪಬಂಧಗಳಾಗಿವೆ–

(ಎ) ಕಾರ್ಖಾನೆಗಳ ಅಧಿನಿಯಮ, 1948 (1948 ರ 63)ರ 67ನೇ ಪ್ರಕರಣ;

(ಬಿ) ಗಣಿಗಳ ಅಧಿನಿಯಮ, 1952 (1952 ರ 35)ರ 40ನೇ ಪ್ರಕರಣ;

(ಸಿ) ವ್ಯಾಪಾರಿ ಹಡಗು ಅಧಿನಿಯಮ, 1958 (1958 ರ 44)ರ 109ನೇ ಪ್ರಕರಣ; ಮತ್ತು

(ಡಿ) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, 1961 (1961 ರ 27)ರ 21ನೇ ಪ್ರಕರಣ.

**16. ಅಪರಾಧಗಳಿಗೆ ಸಂಬಂಧಪಟ್ಟ ಕಾರ್ಯವಿಧಾನ.–** (1) ಈ ಅಧಿನಿಯಮದ ಮೇರೆಗೆ ಅಪರಾಧವು ನಡೆದಿರುವ ಬಗ್ಗೆ ಯಾವನೇ ವ್ಯಕ್ತಿ, ಪೊಲೀಸ್ ಅಧಿಕಾರಿ ಅಥವಾ ಪರಿಶೀಲಕನು ಫಿರ್ಯಾದನ್ನು ಸಕ್ಷಮ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾವುದೇ ನ್ಯಾಯಾಲಯದಲ್ಲಿ ದಾಖಲು ಮಾಡಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಿದ ವೈದ್ಯಕೀಯ ಪ್ರಾಧಿಕಾರಿಯು ಮಗುವಿನ ವಯಸ್ಸಿನ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(3) ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**17. ಪರಿಶೀಲಕರ ನೇಮಕ.–** ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಗಳಿಗಾಗಿ ಪರಿಶೀಲಕನನ್ನು ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಯಾವನೇ ಪರಿಶೀಲಕನು ಭಾರತ ದಂಡ ಸಂಹಿತೆ (1860 ರ 45) ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**17ಎ. ಜಿಲ್ಲಾ ಮ್ಯಾಜಿಸ್ಟ್ರೇಟ್‌ನು ಉಪಬಂಧಗಳನ್ನು ಅನುಷ್ಠಾನಗೊಳಿಸಬೇಕು.–** ಈ ಅಧಿನಿಯಮದ ಉಪಬಂಧಗಳು ಸಮರ್ಪಕವಾಗಿ ಕಾರ್ಯಗತವಾಗುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು, ಸಮುಚಿತ ಸರ್ಕಾರವು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅವಶ್ಯವಿರಬಹುದಾದಂಥ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು ಅಂಥ ಕರ್ತವ್ಯಗಳನ್ನು ವಿಧಿಸಬಹುದು ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟನು, ತನಗೆ ಹಾಗೆ ಪ್ರದತ್ತವಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ತನಗೆ ಅಧೀನನಾದ ಒಬ್ಬ ಅಧಿಕಾರಿಯನ್ನು ನಿರ್ದಿಷ್ಟಪಡಿಸಬಹುದು ಮತ್ತು ಹಾಗೆ ನಿಯಮಿಸಬಹುದಾದ ಅಧಿಕಾರಿಯು ಸ್ಥಳೀಯ ಪರಿಮಿತಿಗಳ ವ್ಯಾಪ್ತಿಯೊಳಗೆ ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**17ಬಿ. ತಪಾಸಣೆ ಮತ್ತು ಮೇಲ್ವಿಚಾರಣೆ.–** ಸಮುಚಿತ ಸರ್ಕಾರವು, ಮಕ್ಕಳ ನಿಯೋಜನೆಯನ್ನು ನಿಷೇಧಿಸಿರುವ ಮತ್ತು ಅಪಾಯಕಾರಿ ವೃತ್ತಿಗಳನ್ನು ಅಥವಾ ಅಂಥ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ನಿಯತಕಾಲಿಕವಾಗಿ ತಪಾಸಣೆಯನ್ನು ಮಾಡತಕ್ಕದ್ದು ಅಥವಾ ನಿಯತಕಾಲಿಕವಾಗಿ ತಪಾಸಣೆಯನ್ನು ಮಾಡಿಸತಕ್ಕದ್ದು ಮತ್ತು ಸೂಕ್ತವೆಂದು ತಾನು ಭಾವಿಸುವಂಥ ಅವಧಿಯ ಅಂತರಗಳಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

**18. ನಿಯಮ ರಚನಾಧಿಕಾರ.–** (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಉಪಪ್ರಕರಣ (2)ರ (ಬಿ) ಖಂಡದ ಮೇರೆಗೆ ಷರತ್ತುಗಳು ಹಾಗೂ ಸುರಕ್ಷತಾ ಕ್ರಮಗಳು ಮತ್ತು ಪ್ರಕರಣ 3ರ (2)ನೇ ಉಪಪ್ರಕರಣದ ವಿವರಣೆಗೆ (ಬಿ) ಖಂಡದ ಮೇರೆಗೆ ಇತರೆ ಚಟುವಟಿಕೆಗಳು;

(ಬಿ) ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ, ಆ ಪದಗಳಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಮತ್ತು 5ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಉಪಸಮಿತಿಗೆ ಸದಸ್ಯನಲ್ಲದವನನ್ನು ಯಾವ ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು ನೇಮಕ ಮಾಡಬಹುದೋ ಆ ಷರತ್ತುಗಳು ಮತ್ತು ಪರಿಬಂಧಗಳು;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ವೇಳೆಗಳಲ್ಲಿ ತರುಣನನ್ನು ಕೆಲಸ ಮಾಡಲು ಅಗತ್ಯಪಡಿಸಬಹುದೋ ಅಥವಾ ಅನುಮತಿಸಬಹುದೋ ಆ ವೇಳೆಗಳ ಸಂಖ್ಯೆ;

(ಡಿ) ಉದ್ಯೋಗದಲ್ಲಿರುವ ಅಥವಾ ಉದ್ಯೋಗವನ್ನು ಬಯಸುವ ಯುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ವಯಸ್ಸಿನ ಪ್ರಮಾಣಪತ್ರವನ್ನು ಕೊಡುವುದು; ಅಂಥ ಪ್ರಮಾಣಪತ್ರವನ್ನು ಕೊಡಬಹುದಾದಂಥ ವೈದ್ಯಕೀಯ ಪ್ರಾಧಿಕಾರಗಳು; ಅಂಥ ಪ್ರಮಾಣಪತ್ರದ ನಮೂನೆ ಮತ್ತು ಅದಕ್ಕಾಗಿ ವಿಧಿಸಬಹುದಾದಂಥ ಚಾರ್ಜುಗಳು ಮತ್ತು ಅಂಥ ಪ್ರಮಾಣಪತ್ರವನ್ನು ಕೊಡಬಹುದಾದಂಥ ರೀತಿ:

ಪರಂತು, ಅರ್ಜಿಯ ಜೊತೆ ಸಂಬಂಧಪಟ್ಟ ಅಧಿಕಾರಿಗೆ ವಯಸ್ಸಿನ ಬಗ್ಗೆ ಮನದಟ್ಟಾಗುವಂತೆ ಸಾಕ್ಷ್ಯವಿದ್ದರೆ, ಯಾವುದೇ ಅಂಥ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ, ಯಾವುದೇ ಚಾರ್ಜನ್ನು ವಿಧಿಸತಕ್ಕದ್ದಲ್ಲ.

(ಇ) 11ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ರಿಜಿಸ್ಟರು ಒಳಗೊಳ್ಳಬೇಕಾದಂಥ ಇತರ ವಿವರಗಳು.

(ಎಫ್) 14(ಬಿ) ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ, ಮಕ್ಕಳಿಗೆ ಅಥವಾ ತರುಣರಿಗೆ ಮೊಬಲಗನ್ನು ಸಂದಾಯ ಮಾಡುವ ರೀತಿ;

(ಜಿ) 14(ಡಿ) ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಳ್ಳುವ ಮತ್ತು ಸಮುಚಿತ ಸರ್ಕಾರಕ್ಕೆ ಮೊಬಲಗನ್ನು ಸಂದಾಯ ಮಾಡುವ ರೀತಿ;

(ಹೆಚ್) 17(ಎ) ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅಧಿಕಾರಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಯಾವ ಸ್ಥಳೀಯ ಪರಿಮಿತಿಗಳ ಒಳಗೆ ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಸ್ಥಳೀಯ ಪರಿಮಿತಿಗಳು.

**19. ನಿಯಮಗಳು ಮತ್ತು ಅಧಿಸೂಚನೆಗಳನ್ನು ಸಂಸತ್ತು ಅಥವಾ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 4ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದಂತೆ ಹಾಗೆ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದಂತೆ ಹಾಗೆ ಇರಿಸಲಾದ ಅಧಿವೇಶನ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಅಥವಾ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಅಧಿಸೂಚನೆಯು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ಆ ರಾಜ್ಯದ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**20. ಕಾನೂನಿನ ಕೆಲವು ಇತರ ಉಪಬಂಧಗಳು ಪ್ರತಿಷೇಧಿತವಾಗಿಲ್ಲ.–** 15ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಕಾರ್ಖಾನೆಗಳ ಅಧಿನಿಯಮ, 1948 (1948 ರ 63); ನೆಡುತೋಪು ಕಾರ್ಮಿಕರ ಅಧಿನಿಯಮ, 1951 (1951 ರ 69); ಮತ್ತು ಗಣಿಗಳ ಅಧಿನಿಯಮ, 1952 (1952 ರ 35) – ಇವುಗಳ ಉಪಬಂಧಗಳ ಜೊತೆಗೆ ಇರತಕ್ಕದೇ ಹೊರತು ಅವುಗಳನ್ನು ಅಲ್ಪೀಕರಿಸಿ ಅಲ್ಲ.

**21. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವಾಗಿರುವುದಾಗಿ ಅದಕ್ಕೆ ಕಂಡುಬರಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದೆ ಇರುವಂಥ ಉಪಬಂಧಗಳನ್ನು ಮಾಡಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು, ಈ ಅಧಿನಿಯಮವು ರಾಷ್ಟ್ರಪತಿಯ ಅನುಮತಿಯನ್ನು ಸ್ವೀಕರಿಸಿದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಸದನಗಳ ಮುಂದೆ ಇಡತಕ್ಕದ್ದು.

**22. ನಿರಸನ ಮತ್ತು ಉಳಿಸುವಿಕೆಗಳು.–** (1) ಮಕ್ಕಳ ನಿಯೋಜನೆಯ ಅಧಿನಿಯಮ, 1938 (1938 ರ 26) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸನಗೊಳಿಸಿದ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಲಾಗಿರುವುದಾಗಿ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು ಅಥವಾ ಕ್ರಮವನ್ನು ಅದು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವ ಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

ಪ್ರಕರಣಗಳು 23 ರಿಂದ 26.– 2001ನೇ ಇಸವಿಯ 30ನೇ ಸಂಖ್ಯೆಯ ಅಧಿನಿಯಮದ ಮೂಲಕ ಬಿಟ್ಟುಬಿಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**ಅನುಸೂಚಿ**

(3ಎ ಪ್ರಕರಣವನ್ನು ನೋಡಿ)

(1) ಗಣಿಗಳು

(2) ಬಹುಬೇಗನೆ ಬೆಂಕಿ ಹತ್ತಿಕೊಳ್ಳುವ ವಸ್ತುಗಳು ಅಥವಾ ಸ್ಫೋಟಕಗಳು

(3) ಅಪಾಯಕಾರಿ ಪ್ರಕ್ರಿಯೆ

**ವಿವರಣೆ.–** ಈ ಅನುಸೂಚಿಯ ಉದ್ದೇಶಗಳಿಗಾಗಿ, "ಅಪಾಯಕಾರಿ ಪ್ರಕ್ರಿಯೆ" ಎಂಬುದಕ್ಕೆ ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರ (ಸಿಬಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಇಲ್ಲಿಯೂ ಇರತಕ್ಕದ್ದು.

ಡಾ. ರೀಟಾ ವಸಿಷ್ಠ
ಭಾರತ ಸರ್ಕಾರದ ಕಾರ್ಯದರ್ಶಿ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

VIJAY N M Digitally signed by VIJAY N M Date: 2021.11.12 18:11:58 +05'30'